ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಾಳೆ ಶುಭಾಂಶು ಗಗನಯಾನ

ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸುವ ಬಹು ನಿರೀಕ್ಷಿತ ಆಕ್ಸಿಯಮ್-4 ಮಿಷನ್ ಉಡಾವಣೆಯನ್ನು ಇದೀಗ ಒಂದು ದಿನ ಮುಂದೂಡಲಾಗಿದೆ. ಉಡಾವಣಾ ಪ್ರದೇಶದಲ್ಲಿ ಹವಾಮಾನ ವೈಪರೀತ್ಯ ದಿಂದಾಗಿ ಉಡಾವಣೆಯನ್ನು ಬುಧವಾರಕ್ಕೆ ಮುಂದೂಡಲಾಗಿದೆ ಎಂದು ಇಸ್ರೋ ಸೋಮವಾರ ತಿಳಿಸಿದೆ. ಈ ಕುರಿತು ಸ್ಪೇಸ್ ಎಕ್ಸ್ ಕೂಡ ಮಾಹಿತಿಯನ್ನು ಹಂಚಿಕೊಂಡಿದೆ. ಜೂನ್ 10 ರಂದು ಯೋಜಿಸಲಾಗಿದ್ದ ಈ ಮಿಷನ್ ಈಗ ಜೂನ್ 11ರಂದು ಭಾರತೀಯ ಕಾಲಮಾನ ಸಂಜೆ 5:30 ಕ್ಕೆ ಉಡಾವಣೆಯಾಗಲಿದೆ.

ಸೊಂಪಾದ ಪುಟಗಳು

ಅತಿಯಾದ್ರೆ ಕಪ್ ಕೂಡ ಕಪ್ಪಾಗುತ್ತೆ

ಅಶ್ವತ್ಥಕಟ್ಟೆ – ರಂಜಿತ್ ಎಚ್. ಅಶ್ವತ್ಥ 6

ಕಿತ್ತಾಡದೆ ನಾವು ಬದುಕಬಲ್ಲೆವೇ?

ವಿಶ್ವರಂಗ – ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಹೂವು ತನ್ನ ಪಕ್ಕದಲ್ಲಿರುವ ಹೂವಿನ ಜತೆ ಪೈಪೋಟಿಗೆ ಇಳಿಯುವುದಿಲ್ಲ. ಅದು ಏನೇ ಆಗಲಿ ತಾನು ಅರಳಿ, ಸುವಾಸನೆ ಬೀರಬೇಕು ಎಂದು ಬಯಸುತ್ತದೆ. ನೀವು ಸಹ ಜೀವನದಲ್ಲಿ ನಿಮ್ಮ ಪಾಡಿಗೆ ಮೇಲೆ ಬರುವುದು ಹೇಗೆ ಎಂದು ಯೋಚಿಸ ಬೇಕು, ಬೇರೆಯವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು.

ವಕ್ರತುಂಡೋಕ್ತಿ

ಯಾವ ಹೊಸ ಐಡಿಯಾಗಳು ಇಲ್ಲದಿದ್ದರೂ, ಅದನ್ನು ಪರಿಣಾಮ ಕಾರಿಯಾಗಿ ವ್ಯಕ್ತಪಡಿಸುವವನಿಗೆ ಪತ್ರಕರ್ತ ಎನ್ನಬಹುದು.

ಬಹುದೊಡ್ಡ ಅವಕಾಶ ಕಳೆದುಕೊಂಡ ಕಮಲ ಪಡೆ

ನಾಯಕರ ಒಳಾಟಗಳಿಗೆ ಕಾರ್ಯಕರ್ತರ ಬೇಸರ

ಕಾಲ್ತುಳಿತಕ್ಕೆ ಬಸವಳಿದ ಬಿಜೆಪಿ

ಧ್ಯಾನ್ ಪೂಣಚ್ಚ ಬೆಂಗಳೂರು

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಪಡೆದ ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣವನ್ನು ಪ್ರತಿಪಕ್ಷವಾದ ಬಿಜೆಪಿ ಜನಾಭಿಪ್ರಾಯ ಮೂಡಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ ಪಕ್ಷದ ಪ್ರಭಾವ ಹೆಚ್ಚಿಸಿಕೊಳ್ಳುವಲ್ಲಿದ್ದ ಅವಕಾಶ ಸಂಪೂರ್ಣ ಕೈಚೆಲ್ಲಿ ವಿಫಲವಾಗಿದ್ದು, ಈಗ ಆ ಪಕ್ಷದ ನಾಯಕರೇ ಬಸವಳಿದು ಹೋಗಿದ್ದಾರೆ.

ನಿರೀಕ್ಷೆಗೂ ಮೀರಿ ಬಂದ ಅಭಿಮಾನಿಗಳ ಮಹಾಪೂರ ದಿಂದಾಗಿ ಆದ ಅವಘಡದಿಂದಾಗಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಉಂಟಾಗಿ ಸಿಎಂ ರಾಜಕೀಯ ಕಾರ್ಯದರ್ಶಿ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳೂ ತಮ್ಮ ಸ್ಥಾನ ಕಳೆದುಕೊಂಡರು. ಇದೇ ವೇಳೆ ಕಾಂಗ್ರೆಸ್ ಸರಕಾರದ ಕ್ರಮ ಹಾಗೂ ಅಂದು ನಡೆದ ಭದ್ರತಾ ವೈಫಲ್ಯದ ಬಗ್ಗೆ ಬಿಜೆಪಿ ನಾಯಕರು ಹೇಳಿಕೆಯಲ್ಲೇ ಕಾಲ ಕಳೆದರಲ್ಲದೆ ಒಂದೂ ಹೋರಾಟವನ್ನು ಯಶಸ್ವಿಯಾಗಿ ರೂಪಿಸುವಲ್ಲಿ ಸೋತಿರುವುದು ಕೂಡ ಕೇಸರಿ ನಾಯಕರ ವಿರುದ್ಧ ಆ ಪಕ್ಷದ ನೈಜ ಕಾರ್ಯಕರ್ತರಲ್ಲೇ ಅಸಮಾಧಾನದ ಭುಗಿಲೆದ್ದಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಮ್ಮ ಸಹೋದರನ ಪುತ್ರನ ಮದುವೆ ಕಾರ್ಯಕ್ರಮದ ಒತ್ತಡದಲ್ಲಿದ್ದರೂ ಘಟನೆ ಸಂಬಂಧ ದೊಡ್ಡಮಟ್ಟದ ಹೋರಾಟ ರೂಪಿಸುವಲ್ಲಿ ವಿಫಲರಾಗಿದ್ದಾರೆ. → 4

- ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಸೋತ ಪ್ರತಿಪಕ್ಷ
- ಸರಕಾರದ ಗೌಪ್ಯ ದಾಖಲೆಗಳನ್ನು ಹೊರತರುವಲ್ಲಿ ವಿಫಲ
- ಕಾರ್ಯಕರ್ತರಿಂದ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ
- ಈವರೆಗೂ ಮೃತ ಮನೆಗೆ ತೆರಳಿ ಸಾಂತ್ವನವನ್ನೂ ಹೇಳಿಲ್ಲ

ಟೀಕಿಸಿ ಟ್ವೀಟಿಸಿದ್ದೇ ಮುಳುವಾಯ್ತು

ಆರ್‌ಸಿಬಿ ಗೆಲ್ಲುವುದಕ್ಕಿಂತ ಮೊದಲು ಸಂಭ್ರಮಾಚರಣೆ ಸಂಬಂಧ ಅವಕಾಶ ನೀಡದ ಸಂಬಂಧ ಗೃಹ ಸಚಿವರು ಆಡಿದ್ದ ಮಾತಿಗೆ ಬಿಜೆಪಿಯ ಸಾಮಾಜಿಕ ಜಾಲತಾಣದ ಮೂಲಕ ಟೀಕಿಸಿ ಉತ್ತರ ನೀಡಿತ್ತು. ಇದರಲ್ಲಿ ಕನ್ನಡಿಗರಿಗೆ ಅವಮಾನವಾಗಿದೆ ಎಂದು ಹೇಳಿಕೊಂಡಿತ್ತು. ಅಲ್ಲದೆ ಸರಕಾರ ಹಾಗೂ ಸಿಎಂ ಅವರನ್ನೂ ಬಿಜೆಪಿ ಟೀಕಿಸಿತ್ತು. ಇದಾಗಿ ಸಂಭ್ರಮಾಚರಣೆ ವೇಳೆ ಆದ ಅವಘಡದಿಂದಾಗಿ ಬಿಜೆಪಿ ಟೀಕಿಸಿದ್ದ ವಸ್ತುವೇ ಕಾಂಗ್ರೆಸ್ ಜಾಲತಾಣದ ಮೂಲಕವೇ ದಾಖಲೆ ಸಹಿತ ತಿರುಗೇಟು ನೀಡಿ ಬಿಜೆಪಿಯ ದ್ವಂದ್ವನ್ನು ಕಟ್ಟುವಾಗಿ ಖಂಡಿಸಿದ್ದೂ ಬಿಜೆಪಿ ನಾಯಕರ ಒಳಾಟವನ್ನು ಬಯಲಿಗೆಳೆದಿರುವುದು ಕೂಡ ಕಾರ್ಯಕರ್ತರ ಅಸಮಾಧಾನಕ್ಕೆ ಕಾರಣವಾಗಿದೆ.

ಮುದುಡಿದ ತಾವರೆ ಕಾರ್ಯಕರ್ತರು

ಕಾಲ್ತುಳಿತ ಪ್ರಕರಣ ಕೆಸರಾಟದ ನಡುವೆಯೇ ಸಂಸದ ಬಿ.ವೈ.ರಾಘವೇಂದ್ರ ಅವರ ಪುತ್ರನ ವಿವಾಹಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿಯಾಗಿದ್ದರು. ರಾಜಕೀಯ ಏನೇ ಇರಲಿ ಇದು ವೈಯುಕ್ತಿಕ ಸ್ನೇಹದ ವಿಚಾರ ಎಂದು ಭಾವಿಸಿದರೂ, ಈ ರೀತಿ ದುರ್ಘಟನೆಯ ಸಂದರ್ಭದಲ್ಲೇ ವಿವಾಹ ಕಾರ್ಯಕ್ರಮದಲ್ಲಿ ಆಡಳಿತ ಪಕ್ಷ, ಪ್ರತಿಪಕ್ಷದ ನಾಯಕರು ಕಾಣಿಸಿಕೊಂಡಿದ್ದು ಕೂಡ ಬಿಜೆಪಿಯ ಕಾರ್ಯಕರ್ತರಲ್ಲಿ ಅಸಮಾಧಾನ ವ್ಯಕ್ತವಾಗಿದೆ. 'ನಾವು ಇಲ್ಲಿ ಪಕ್ಷಕ್ಕಾಗಿ ದುಡಿಯುತ್ತಿದ್ದರೆ, ನಮ್ಮ ನಾಯಕರು ಮಾತ್ರ ಆರಾಮಾಗಿ ರಾಜಕೀಯ ದ್ವೇಷ ಮರೆತು ಹಾಯಾಗಿರುತ್ತಾರೆ' ಎಂಬ ಅಭಿಪ್ರಾಯವೂ ಕಾರ್ಯಕರ್ತರಲ್ಲಿ ಮನೆ ಮಾಡಿದೆ.

ಸಂಪುಟ ಪುನಾರಚನೆ ಕುತೂಹಲ

ಕಾಲ್ತುಳಿತ ಬಗ್ಗೆ ಹೈ ಚರ್ಚೆ

ದೆಹಲಿಗೆ ಇಂದು ಸಿಎಂ, ಡಿಸಿಎಂ



ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರಮಟ್ಟದಲ್ಲಿ ಬೆಂಗಳೂರು ಕಾಲ್ತುಳಿತ ಪ್ರಕರಣ ಸದ್ದಾಗುತ್ತಿದ್ದಂತೆ ದೆಹಲಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೆರಳಿ ವಿವರಣೆ ನೀಡಿದ್ದು, ಇದರ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮಂಗಳವಾರ ದೆಹಲಿಯತ್ತ ಪ್ರಯಾಣಿಸುತ್ತಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಮೃತಪಟ್ಟ ಘಟನೆ ತೀವ್ರ ವಿವಾದಕ್ಕೆ ಕಾರಣವಾಗಿದ್ದು, ಸ್ವತಃ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸರಕಾರದ ವಿರುದ್ಧ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು. ಇದೀಗ ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಪಕ್ಷದ ವರಿಷ್ಠರಿಗೆ ವಿವರಣೆ ನೀಡಿದ್ದು, ಬಳಿಕ ಇದೀಗ ಸಿಎಂ ದೆಹಲಿಗೆ ತೆರಳಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ. → 4

ಗೃಹ ಖಾತೆ ಒಲ್ಲೆ ಎಂದರೇ ಪರಂ?

ಸರಣಿ ವೈಫಲ್ಯದಿಂದಾಗಿ ಬೇಸರಗೊಂಡಿರುವ ಗೃಹ ಸಚಿವ ಪರಮೇಶ್ವರ, ಗೃಹ ಇಲಾಖೆಯ ಸಹವಾಸವೇ ಬೇಡ ಎನ್ನುವ ಮಾತು ಗಳನ್ನು ಆಪ್ತರ ಬಳಿ ಆಡಿದ್ದಾರೆ ಎನ್ನಲಾಗಿದೆ. ಇದು ಇದೇ ವಿಷಯ ಸಚಿವ ಸಂಪುಟದಲ್ಲಿಯೂ ಚರ್ಚಿಸಿದ್ದಾರೆ ಎನ್ನುವ ವಿಷಯ ತೀವ್ರ ವಿವಾದಕ್ಕೆ ಕಾರಣವಾಗುತ್ತಿದ್ದಂತೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಪರಮೇ ಶ್ವರ, ತಾವು ಇಲಾಖೆ ಬೇಡವೆಂದು ಹೇಳಿಲ್ಲ. ಇಂತಹ ಸಮಯದಲ್ಲಿ ಹೆದರಿ ಓಡಿ ಹೋಗುವ ಹೇಡಿಯಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

600 ಮರಗಳಿಗೆ ಕತ್ತರಿ ಪ್ರಸ್ತಾಪ

ಬೆಂಗಳೂರು: ದೇವನಹಳ್ಳಿಯಲ್ಲಿ ಹೊಸ ವಸತಿ ರಹಿತ ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕಾಗಿ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮವು 626 ಮರಗಳನ್ನು ಕಡಿಯಲು ಅರಣ್ಯ ಇಲಾಖೆಯಿಂದ ಅನುಮತಿ ಕೋರಿದೆ. 600 ಕೈದಿಗಳಿಗೆ ಸ್ಥಳಾವಕಾಶ ಕಲ್ಪಿಸಲು ವಿನ್ಯಾಸಗೊಳಿಸಲಾದ ಪ್ರಸ್ತಾವಿತ ಕೇಂದ್ರ ಜೈಲು ಸಂಕೀರ್ಣದ ಭಾಗವಾಗಿದೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ವಿಧಾನಸೌಧ- ರಾಜಭವನದ ನಡುವೆ ಮತ್ತೊಮ್ಮೆ ಸಂಘರ್ಷ

ಮೇಲ್ಮನೆ ನಾಮಕರಣ ಗವರ್ನರ್ ಕೊಕ್ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನ ಪರಿಷತ್‌ಗೆ ಸರಕಾರ ನಾಮಕರಣ ಮಾಡಿರುವ ಶಿಫಾರಸಿಗೆ ಸಹಿ ಹಾಕಲು ರಾಜ್ಯಪಾಲರು ಕಾನೂನಿನ ಮೊರೆ ಹೋಗಿದ್ದು, ಮತ್ತೊಮ್ಮೆ ಸಂಘರ್ಷ ಏರ್ಪಡುವ ಸಾಧ್ಯತೆ ಇದೆ. ಇನ್ನು ಇದೇ ವಿಚಾರವಾಗಿ ಹೈಕಮಾಂಡ್ ಜತೆ ಚರ್ಚಿಸಲು ಸಿಎಂ ಹಾಗೂ ಡಿಸಿಎಂ ದೆಹಲಿಗೆ ತೆರಳಿದ್ದಾರೆ. ರಾಜಕೀಯ ಹಿನ್ನೆಲೆ ಉಳ್ಳವರನ್ನು ಮೇಲ್ಮನೆಗೆ ನಾಮಕರಣ ಮಾಡಿರುವ ರಾಜ್ಯ ಸರಕಾರದ ಕ್ರಮಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ಪರೋಕ್ಷವಾಗಿ ಅಸಮಾಧಾನ ಹೊರ ಹಾಕಿದ್ದು, ಕಾನೂನು ತಜ್ಞರ ಒಪ್ಪಿಗೆ ಇಲ್ಲದೆ ಶಿಫಾರಸಿಗೆ ಸಹಿ ಹಾಕಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ ಎನ್ನಲಾಗಿದೆ. → 4

ಭವಿಷ್ಯ ಮಂಕು

ಇದೀಗ ಕಾನೂನು ತಜ್ಞರು ನೀಡುವ ಅಭಿಪ್ರಾಯದ ನಂತರವೇ ಸರಕಾರದ ಶಿಫಾರಸಿಗೆ ಅಂಕಿತ ಬೀಳಬಹುದು ಇಲ್ಲವೇ ಬೀಳದೇ ಇರಬಹುದು. ನಾಮಕರಣ ಗೊಂಡಿರುವವ ಬಗ್ಗೆ ವಿರೋಧ ಪಕ್ಷಗಳು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಅಲ್ಲದೆ ಖುದ್ದು ರಾಜ್ಯಪಾಲರೇ ಶಿಫಾರಸಿಗೆ ವಿರೋಧ ವ್ಯಕ್ತಪಡಿಸಿರುವುದರಿಂದ ನಾಮಕರಣಗೊಂಡಿರುವರ ಭವಿಷ್ಯ ಮಂಕಾಗಿದ್ದು, ಇದೇ ವೇಳೆ ಹೈಕಮಾಂಡ್‌ನಿಂದ ಹೊಸಪಟ್ಟಿ ಬರುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ರೈಲಿನಿಂದ ಬಿದ್ದು 6 ಮಂದಿ ಸಾವು

ಮುಂಬೈ: ಮುಂಬ್ರಾ ಮತ್ತು ದಿವಾ ನಿಲ್ದಾಣಗಳ ನಡುವೆ ಚಲಿಸುತ್ತಿದ್ದ ಲೋಕಲ್ ರೈಲಿನಿಂದ ಬಿದ್ದು ಆರು ಜನ ಪ್ರಯಾಣಿಕರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಕಡೆಗೆ ರೈಲು ಪ್ರಯಾಣ ಸಾಗಿತ್ತು. ಬೆಳಗ್ಗೆ 9.30ರ ಸುಮಾರಿಗೆ ದಿವಾ ಮತ್ತು ಕೋಪರ್ ರೈಲು ನಿಲ್ದಾಣಗಳ ಕಾಸರ ಕಡೆಗೆ ಹೋಗುತ್ತಿದ್ದ ರೈಲಿನಲ್ಲಿ ಕಾಲಿಡಲೂ ಜಾಗವಿರಲಿಲ್ಲ. ಜನರು ಬಾಗಿಲಲ್ಲಿ ನಿಂತಿದ್ದರು. ಹೀಗಾಗಿ ರೈಲು ಚಲಿಸುತ್ತಿದ್ದಾಗ ನೂಕಾಟ ಶುರುವಾಗಿ, ಹತ್ತು ಜನರು ಕೆಳಗೆ ಬಿದ್ದಿದ್ದಾರೆ. ಅವರಲ್ಲಿ ಆರು ಜನರು ಸಾವನ್ನಪ್ಪಿದ್ದಾರೆ. ಉಳಿದವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.



ಸುಪ್ರೀಂನಲ್ಲೂ ಕಮಲ್‌ಗೆ ಮುಖಭಂಗ

ದೆಹಲಿ: ಕನ್ನಡ ಭಾಷೆ ವಿರೋಧಿ ಹೇಳಿಕೆ ಹಿನ್ನೆಲೆ ಯಲ್ಲಿ ತಮಿಳು ನಟ ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಚಿತ್ರವು ಕರ್ನಾಟಕ ದಲ್ಲಿ ಬಿಡುಗಡೆಯಾಗಲಿಲ್ಲ. ಆದರೂ ಚಿತ್ರದ ಬಿಡುಗಡೆಗೆ ಪ್ರಯತ್ನಿಸಿದಾಗ ಚಿತ್ರಮಂದಿರಗಳ ಮಾಲೀಕರಿಗೆ ಅನೇಕ ಬೆದರಿಕೆಗಳು ಬಂದವು. ಈ ಕಾರಣದಿಂದಾಗಿ ಚಿತ್ರಮಂದಿರಗಳಿಗೆ ಭದ್ರತೆ ಒದಗಿಸುವಂತೆ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಸೋಮವಾರ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ತಕ್ಷಣ ವಿಚಾರಣೆಗೆ ತೆಗೆದು ಕೊಳ್ಳಲು ನಿರಾಕರಿಸಿದೆ. ಕರ್ನಾಟಕ ಥಿಯೇಟರ್ ಅಸೋಸಿಯೇಷನ್ ಮತ್ತು ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸುವಂತೆ ಹೇಳಿದೆ.

ದೇಗುಲಗಳಲ್ಲಿ ಪ್ಲಾಸ್ಟಿಕ್ ನಿಷೇಧ

ಬೆಂಗಳೂರು: ಇನ್ನು ಮುಂದೆ ರಾಜ್ಯದಲ್ಲಿರುವ ದೇವಸ್ಥಾನಗಳಲ್ಲಿ ನೀರಿನ ಬಾಟಲ್, ಪ್ಲಾಸ್ಟಿಕ್ ಬಳಸದಂತೆ ಕ್ರಮ ಕೈಗೊಳ್ಳಲು ಮುಜರಾಯಿ ಇಲಾಖೆ ನಿರ್ಧರಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಆಗಸ್ಟ್ 15ರಿಂದ ಮುಜರಾಯಿ ಇಲಾಖೆ ವ್ಯಾಪ್ತಿಯ ಎಲ್ಲ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲ ಬಗೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲಾಗು ವುದು. ಈ ಆದೇಶ ಜಾರಿಗೆ ಎರಡು ತಿಂಗಳು ಸಮಯ ಕೊಡಲಾಗಿದ್ದು, ಈಗಾಗಲೇ ಪ್ಲಾಸ್ಟಿಕ್ ಪದಾರ್ಥಗಳು ತೆಗೆದುಕೊಂಡಿದ್ದರೆ, ಅದನ್ನು ಬಳಕೆ ಮಾಡಬಹುದು. ಆಗಸ್ಟ್15ರಿಂದ ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಅವಕಾಶ ಇರಲ್ಲ ಎಂದರು.

ಕಾಲ್ತುಳಿತ: 45 ಗಾಯಾಳುಗಳಿಗೆ ಸಮನ್ಸ್

ಬೆಂಗಳೂರು: ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣದ ಕುರಿತು ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ನಡೆಯು ತ್ತಿರುವ ಮ್ಯಾಜಿಸ್ಟ್ರೇಟ್ ತನಿಖೆಯನ್ನು ಚುರುಕುಗೊಳಿಸಲಾಗಿದೆ. ದುರಂತ ನಡೆದಿರುವ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದಿರುವ ಜಿಲ್ಲಾಧಿಕಾರಿ, ಘಟನೆಯಲ್ಲಿ ಗಾಯಗೊಂಡವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಆರ್‌ಸಿಬಿ ವಿಜಯೋತ್ಸವದ ಅಭಿನಂದನಾ ಸಮಾ ರಂಭದ ವೇಳೆ ಚಿನ್ನಸ್ವಾಮಿ ಮೈದಾನದ ಬಳಿ ಕಾಲ್ತುಳಿತಕ್ಕೆ ಒಳಗಾಗಿ 11 ಮಂದಿ ಮೃತಪಟ್ಟಿದ್ದರು. ದುರಂತದಲ್ಲಿ 45 ಮಂದಿ ಗಾಯಗೊಂಡಿದ್ದರು. ಪ್ರಕರಣವನ್ನು ಮ್ಯಾಜಿ ಸ್ಟ್ರೇಟ್ ತನಿಖೆಗೆ ಸರಕಾರ ಆದೇಶ ಮಾಡಿತ್ತು. 15 ದಿನ ದೊಳಗೆ ವರದಿ ಸಲ್ಲಿಸಲು ಸರಕಾರದ ಸೂಚನೆ ಕೊಟ್ಟಿರುವ ಕಾರಣ ಪ್ರಕರಣದ ತನಿಖೆಗೆ ಜಿಲ್ಲಾಧಿಕಾರಿ ಜಗದೀಶ್ ವೇಗ ನೀಡಿದ್ದು, ಜೂನ್ 11ರಂದು ಹಾಜರಾಗಿ ಹೇಳಿಕೆ ನೀಡುವಂತೆ ಗಾಯಾಳು ಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಬೆಳಗ್ಗೆ 11 ರಿಂದ 1:30ರೊಳಗೆ ಬಂದು ಹೇಳಿಕೆ ನೀಡುವಂತೆ ನೋಟಿಸ್ ನಲ್ಲಿ ಉಲ್ಲೇಖ ಮಾಡಿದ್ದಾರೆ. → 4

- ಜೂನ್ 11ರಂದು ತನಿಖೆಗೆ ಹಾಜರಾಗುವಂತೆ 45 ಮಂದಿಗೆ ಸೂಚನೆ
- ಪ್ರಕರಣದ ತನಿಖೆಗೆ ಡಿಸಿ ಜಗದೀಶ್ ವೇಗ
- 1 ತಿಂಗಳೊಳಗೆ ಸರಕಾರಕ್ಕೆ ವರದಿ ಸಲ್ಲಿಸಲಿ ಸಿದ್ಧತೆ
- 13ರಂದು ಪ್ರತ್ಯಕ್ಷದರ್ಶಿಗಳ ಹೇಳಿಕೆ ದಾಖಲು

ಫನ್‌ತರಂಗ

- ರಘುಪತಿ ಶೃಂಗೇರಿ -

ಕಾಲ್ತುಳಿತ ಘಟನೆ ಬಗ್ಗೆ ಸ್ವಯಂ ಪ್ರೇರಿತ ಸಾರ್ವಜನಿಕ ಅರ್ಜಿ (ಪಿಐಎಲ್) ದಾಖಲಿಸಿಕೊಂಡ ಹೈಕೋರ್ಟ್ – ಸುದ್ದಿ



ಹನಿಮೂನ್ ಹತ್ಯೆ ಪ್ರಕರಣಕ್ಕೆ ಮಹತ್ವದ ತಿರುವು | ಸುಪಾರಿ ಕೊಟ್ಟು ಕೊಲ್ಲಿಸಿದ ಪತ್ನಿ

ಬಾ ನಲ್ಲ, ಯಮಲೋಕಕ್ಕೆ

ಮೇಘಾಲಯ: 1993ರಲ್ಲಿ ಬಿಡುಗಡೆಯಾಗಿದ್ದ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಬಾ ನಲ್ಲೆ ಮಧುಚಂದ್ರಕೆ' ಸಿನಿಮಾವನ್ನೇ ಹೋಲುವ ಅಪರಾಧ ಕೃತ್ಯವೊಂದು ಮೇಘಾಲಯದಲ್ಲಿ ನಡೆದಿದೆ. ಆದರೆ ಇದು ಸ್ವಲ್ಪ ಭಿನ್ನವಾಗಿದೆ. ಸಿನಿಮಾದಲ್ಲಿ ಆಗತಾನೇ ಹೊಸದಾಗಿ ಮದುವೆಯಾದ ಪತ್ನಿಯನ್ನು ಪತಿ ಆಳವಾದ ಕಮರಿಗೆ ತಳ್ಳಿ ಕೊಲೆ ಮಾಡಿದ್ದರೆ, ಇಲ್ಲಿ ಪತಿಯನ್ನು ಕಮರಿಗೆ ತಳ್ಳಿ ಹತ್ಯೆ ಮಾಡಿ ಬಳಿಕ ನಾಪತ್ತೆಯಾಗಿದ್ದ ಪತ್ನಿ ಕೊನೆಗೂ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾಳೆ.

ಕೊಲೆ ನಡೆದ 7 ದಿನಗಳಲ್ಲಿ ರಾಜಾ ಕೊಲೆ ಪ್ರಕರಣವನ್ನು ಮೇಘಾಲಯ ಪೊಲೀಸರು ಭೇದಿಸಿದ್ದಾರೆ. ಮಧ್ಯಪ್ರದೇಶದ ಮೂವರನ್ನು ಬಂಧಿಸಿದ್ದಾರೆ. ಒಬ್ಬ ಮಹಿಳೆ ಶರಣಾಗಿದ್ದಾಳೆ. ಮೇಘಾಲಯ ಪೊಲೀಸರು ಉತ್ತಮ ಕಾರ್ಯ ಮಾಡಿದ್ದಾರೆ.

ಕಾನ್ರಾಡ್ ಸಂಗ್ಮಾ, ಮೇಘಾಲಯ ಮುಖ್ಯಮಂತ್ರಿ

ಏನಿದು ಪ್ರಕರಣ?

ಮೇ 11ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದ ಮಧ್ಯಪ್ರದೇಶದ ಇಂಧೋರ್‌ನ ರಾಜ ರಘುವಂಶಿ ಮತ್ತು ಸೋನಮ್ ದಂಪತಿ ಮೇ 20ರಂದು ಮೇಘಾಲಯಕ್ಕೆ ಹನಿಮೂನ್‌ಗೆ ತೆರಳಿದ್ದರು. ಅವರು ಮೇ 22 ರಂದು ಬಾಡಿಗೆ ಸ್ಕೂಟರ್‌ನಲ್ಲಿ ಮೌಲಾಖಿಯಾತ್ ಗ್ರಾಮಕ್ಕೆ ಬಂದಿದ್ದರು. ಮೇ 23ರಂದು ದಂಪತಿಗಳು ನಾಪತ್ತೆಯಾಗಿದ್ದು, ಜೂನ್ 2 ರಂದು ರಾಜ ರಘುವಂಶಿ ಅವರ ಶವ ಚಿರಾಪುಂಜಿ ಸಮೀಪದ ಆಳವಾದ ಕಂದಕದಲ್ಲಿ ಪತ್ತೆಯಾಗಿತ್ತು. ಸೋನಂಗಾಗಿ ಪೊಲೀಸರು ಹುಡುಕಾಟ ಮುಂದುವರಿಸಿದ್ದರು. ಈ ನಡುವೆ ರಘುವಂಶಿ ಮೃತದೇಹದಿಂದ ಚಿನ್ನದ ಉಂಗುರ ಹಾಗೂ ಕತ್ತಿನ ಸರ ನಾಪತ್ತೆಯಾಗಿತ್ತು. ಹೀಗಾಗಿ ಪೊಲೀಸರಿಗೆ ಕೊಲೆ ಶಂಕೆ ವ್ಯಕ್ತವಾಗಿತ್ತು. ಅಷ್ಟರಲ್ಲೇ ಘಟನೆ ನಡೆದ ಒಂದು ದಿನದ ನಂತರ ರಘುವಂಶಿ ಮೃತದೇಹ ಪತ್ತೆಯಾದ ಸ್ಥಳದಲ್ಲಿ ರಕ್ತದ ಕಲೆಯುಳ್ಳ ಮಚ್ಚು ಪೊಲೀಸರಿಗೆ ಸಿಕ್ಕಿತ್ತು. ಪ್ರಕರಣದ ತನಿಖೆಗಾಗಿ ಎಸ್ಪಿ ನೇತೃತ್ವದಲ್ಲಿ ವಿಶೇಷ ತಂಡವೊಂದನ್ನು ರಚಿಸಲಾ ಗಿತ್ತು. ಪೊಲೀಸರು ತನಿಖೆ ಚುರುಕುಗೊಳಿಸಿ, ಶಂಕಿತ ಮೂವರನ್ನು ಬಂಧಿಸಿ ವಿಚಾರಣೆ ಗೊಳಪ ಡಿಸಿದ್ದರು. ವಿಚಾರಣೆ ವೇಳೆ ರಘುವಂಶಿ ಪತ್ನಿ ಸೋನಮ್ ಕೊಲೆಗೆ ಸುಪಾರಿ ನೀಡಿದ್ದಳು ಎಂದು ಬಾಯ್ಬಿಟ್ಟಿದ್ದರು. ಇದಾದ ಒಂದೇ ದಿನದಲ್ಲಿ ಸೋನಮ್ ಉತ್ತರ ಪ್ರದೇಶದ ಗಾಜಿಪುರದ ನಂದ ಗಂಜ್ ಪೊಲೀಸರ ಮುಂದೆ ಶರಣಾಗಿದ್ದಾಳೆ. → 4

IN THE COURT OF THE 1ST ADDL CHIEF JUDCIAL MAGISTRATE RURAL AT BENGALURU
CRIMINAL MISC NO: 808 OF 2025

BETWEEN:-1. MR. JAYARAMAIYA.V., S/o. late. K R Veerappa Aged about 74 years,
2. MS. LAKSHMAMMA., D/o. late. K R Veerappa Aged about 68 years,
3. MS. GOWRAMMA., D/o. late. K R Veerappa, W/o. Rudrappa, Aged about 64 years, Residing at Hinnaki Village, Hennagra Hobli, Anekal taluk, Bengaluru-06
4. MR. LAKSHMANA GOWDA. V., S/o. late. K R Veerappa Aged about 62 years,
5. MR. PILLAPPA. V., S/o. late. K R Veerappa Aged about 60 years,
6. MRS. KRISHNAVENI, D/o. late. K R Veerappa, W/o. Erappa, Aged about 57 years, Residing at Kondrahalli village, Bailnarasapura Hobli, Hosakote taluk, Bengaluru rural district-562122.
7. MR. KRISHNAPPA. V., S/o. late. K R Veerappa Aged about 62 years, The petitioners 1,2,4,5 and 7 are Residing at Jothipura Village. Virgonagar post, Bengaluru East, Bengaluru-560049

.....**PETITIONERS**

V/S

AND: THE TAHSILDAR THE REGISTRAR OF BIRTHS & DEATHS Bengaluru East, K.R. PURAM. Bengaluru 560036 .....**RESPONDENT**

PUBLIC NOTICE

We, the above named petitioners have filed a Petition under Section 13 (3) Of Births and Deaths Registration Act-1969, on file of this Hon'ble court seeking grant of death certificate of the petitioner's mother "Arasamma W/O late K.R. Veerappa" as 04/03/1982. Any person/s is/are having any objection with regard to grant of death certificate may appear alongwith their advocate and able to answer all the material question relating to the same at **11.00 am on 14/07/2025.**

Given under my hand and seal of this Hon'ble court, the **5th day June 2025.**

By Order of the Court, Sheristhedar Chief Judcial Magistrate Rural At Bengaluru

Sri. Nagaraj. H, Associates, Advocates,
Office at, #1012/3, 1ST "A" cross, BEML Main road, New Thippasandra, Bengaluru - 560 075.

ಡಿಸಿಇಟಿ: 13ರವರೆಗೆ ದಾಖಲೆ ಪರಿಶೀಲನೆ

ಬೆಂಗಳೂರು: ಜೂ.10ರಿಂದ 13ರ ವರೆಗೆ ಸರಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಡಿಸಿಇಟಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತದೆ ಎಂದು ಕೆಇಎ ತಿಳಿಸಿದೆ. 3ನೇ ಸೆಮಿಸ್ಟರ್ ಅಥವಾ ಎರಡನೇ ವರ್ಷದ ಎಂಜಿನಿಯರಿಂಗ್ ಕೋರ್ಸುಗಳ ನೇರ ಪ್ರವೇಶಾತಿಗೆ ಹಾಗೂ ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ ಅರ್ಹತೆಯನ್ನು ಪಡೆಯುವುದಕ್ಕಾಗಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತದೆ. ದಾಖಲಾತಿ ಪರಿಶೀಲನೆ ನಡೆಯುವ 37 ಕಾಲೇಜುಗಳ ಪಟ್ಟಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಸಲಾಗಿದೆ. ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕ ನಿಗದಿ ಮಾಡಿಕೊಂಡು ತಮಗೆ ಹತ್ತಿರವಾಗುವ ಯಾವುದಾದರೊಂದು ಕಾಲೇಜಿಗೆ ಖುದ್ದು ಹೋಗಬೇಕು ಎಂದು ತಿಳಿಸಿದ್ದಾರೆ.

ಕಟ್ಟಡ ನಕ್ಷೆ ಮಂಜೂರಾತಿಗೆ ಜು.1ರಿಂದ ಇ-ಖಾತಾ ಕಡ್ಡಾಯ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಇಒಡಿಬಿ-ಒಬಿಪಿಎಸ್ ತಂತ್ರಾಂಶದ ಮೂಲಕ ಕಟ್ಟಡ ನಕ್ಷೆ ಮಂಜೂರಾತಿಯನ್ನು ಆನ್‌ಲೈನ್‌ನಲ್ಲಿ ನೀಡಲಾಗುತ್ತಿದ್ದು, ಜುಲೈ 1ರಿಂದ ಇ ಖಾತಾ ಕಡ್ಡಾಯವಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಪಾಲಿಕೆಯ ಕಂದಾಯ ವಿಭಾಗದಿಂದ ಇ-ಆಸ್ತಿ ತಂತ್ರಾಂಶವನ್ನು ಜಾರಿ ಮಾಡಲಾಗಿದ್ದು, ಪಾಲಿಕೆ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಈಗಾಗಲೇ ಇ-ಖಾತಾ ನೀಡಲಾಗುತ್ತಿರುತ್ತದೆ. ಇಂತಹ ಸ್ವತ್ತುಗಳ ದತ್ತಾಂಶವು ಇ-ಆಸ್ತಿ ತಂತ್ರಾಂಶದಲ್ಲಿ ಲಭ್ಯವಿರುತ್ತದೆ. ಪಾಲಿಕೆಯ ನಗರ ಯೋಜನಾ ವಿಭಾಗದಿಂದ ನಕ್ಷೆ ಮಂಜೂರಾತಿ ನೀಡುತ್ತಿರುವ ಇಒಡಿಬಿ-ಒಬಿಪಿಎಸ್ ಆನ್ ಲೈನ್ ತಂತ್ರಾಂಶವನ್ನು ಪಾಲಿಕೆಯ ಕಂದಾಯ ವಿಭಾಗದಿಂದ ಇ-ಖಾತಾ ನೀಡುತ್ತಿರುವ ಇ-ಆಸ್ತಿ ತಂತ್ರಾಂಶದೊಂದಿಗೆ ಏಕೀಕರಣಗೊಳಿಸಲು ಕ್ರಮ ಜರುಗಿಸಲಾಗಿದೆ. ಸ್ವತ್ತಿನ ಇ-ಖಾತಾ/ಇಪಿಐಡಿ ಸಂಖ್ಯೆಯನ್ನು ಆನ್ಲೈನ್ ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಇ-ಖಾತಾ ಸಲ್ಲಿಸುವುದು ಅವಶ್ಯವಿರುತ್ತದೆ ಎಂದರು. ಪಾಲಿಕೆಯ ಕಂದಾಯ ವಿಭಾಗಕ್ಕೆ ಸ್ವತ್ತಿನ ದಾಖಲಾತಿಗಳ ಪರಿಶೀಲನೆಗಾಗಿ ಸಲ್ಲಿಸುವ ಕ್ರಮವನ್ನು ಹೊರತುಪಡಿಸಿರುವುದರಿಂದ ಪಾಲಿಕೆಯು ನೀಡುವ ಸೇವೆಗಳನ್ನು ಸರಳೀಕರಣಗೊಳಿಸಲು ಹಾಗೂ ಕಾಲಮಿತಿಯಲ್ಲಿ ನಕ್ಷೆ ಮಂಜೂರಾತಿ ನೀಡಲು ಸಹಕಾರಿಯಾಗಲಿದೆ. ಜುಲೈ1 ರಿಂದ ಕಟ್ಟಡ ನಕ್ಷೆಗಳ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳ ಸ್ವತ್ತಿನ ದಾಖಲಾತಿಗಳನ್ನು ಪರಿಶೀಲನೆಗೆ ಪಾಲಿಕೆಯ ಕಂದಾಯ ವಿಭಾಗಕ್ಕೆ ಕಳುಹಿಸುವ ಕ್ರಮವನ್ನು ರದ್ದುಪಡಿಸಿ ಆದೇಶಿಸಿದೆ. ನಂಬಿಕೆಯೊಂದಿಗೆ ಪರಿಶೀಲಿಸುವ ವಿಧಾನದಡಿ ಸೃಜನೆಗೊಳ್ಳುವ ತಾತ್ಕಾಲಿಕ ನಕ್ಷೆ ಮಂಜೂರಾತಿಗಳನ್ನು ಸಂಬಂಧಪಟ್ಟ ಸಹಾಯಕ ನಿರ್ದೇಶಕರು ಕಾಲಮಿತಿಯೊಳಗೆ ದೃಢೀಕರಿಸುವುದು ಅಥವಾ ಸಕಾರಣಗಳೊಂದಿಗೆ ನಿರಾಕರಿಸದೆ ಇದ್ದಲ್ಲಿ, ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಸ್ವಯಂ ಅನುಮೋದನೆ ನೀಡಲಾಗುವುದು. ಇಂತಹ ಸ್ವಯಂ ಅನುಮೋದನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮಕ್ಕೆ ಸಂಬಂಧಪಟ್ಟ ವಲಯ ಕಚೇರಿಗಳ ಜಂಟಿ ನಿರ್ದೇಶಕರು ವಲಯ ಆಯುಕ್ತರಿಗೆ ವರದಿ ಸಲ್ಲಿಸಲು ಆದೇಶಿಸಿದೆ.

ವಿವಾಹಿತೆ ಹಿಂದೆ ಬಿದ್ದಿದ್ದ ಪಾಗಲ್‌ಪ್ರೇಮಿ | ಪ್ರೇಯಸಿ ಕೈತಪ್ಪುವ ಆತಂಕದಲ್ಲಿ ಕೊಲೆ

17 ಬಾರಿ ಚಾಕುಚುಚ್ಚಿ ಆಂಟಿಯ ಹತ್ಯೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅನೈತಿಕ ಸಂಬಂಧಕ್ಕೆ ಬಿದ್ದು ವಿವಾಹಿತ ಮಹಿಳೆಯೊಬ್ಬಳು ಭೀಕರ ಹತ್ಯೆಗೀಡಾಗಿರುವ ಘಟನೆ ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕೊಲೆ ಆರೋಪಿ ಸಹ ಬಂಧನವಾಗಿದ್ದು, ಪೊಲೀಸ್ ತನಿಖೆ ವೇಳೆ ಆರೋಪಿಯ ವಿಕೃತಿ, ಕ್ರೌರ್ಯ ಬಯಲಾಗಿದೆ. ಹರಿಣಿ (36) ಕೊಲೆಯಾದ ಪ್ರಿಯತಮೆ. ಟೆಕ್ಕಿ ಯಶಸ್ (25) ಕೊಲೆ ಆರೋಪಿ. ಬಹಳ ದಿನಗಳಿಂದ ಪ್ರಿಯತಮೆಯನ್ನು ಭೇಟಿ ಮಾಡದೇ ತಲೆ ಕೆಡಿಸಿಕೊಂಡಿದ್ದ ಟೆಕ್ಕಿ ಆಕೆ ಸಿಗುತ್ತಿದ್ದಂತೆ ಮುಗಿಸಿಬಿಡಬೇಕೆಂದು ಪ್ಲ್ಯಾನ್ ಮಾಡಿಕೊಂಡಿದ್ದ. ಅದರಂತೆ ಪೂರ್ಣ ಪ್ರಜ್ಞಾ ಲೇಔಟ್‌ನಲ್ಲಿ ಓಯೋ ರೂಮಿಗೆ ಕರೆದೊಯ್ದು, ಹರಿಣಿಗೆ ಬರೋಬ್ಬರಿ 17 ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಆಕೆಯ ದೇಹವನ್ನು ಬೆತ್ತಲೆಗೊಳಿಸಿ ಹರಿಣಿಯ ಕತ್ತು, ಎದೆ ಭಾಗ, ಹೊಟ್ಟೆ ಸೇರಿ ದೇಹದ ಹಲವು ಭಾಗಗಳಿಗೆ ಇರಿದಿದ್ದಾನೆ.

ತಾನೂ ಆತ್ಮಹತ್ಯೆಗೆ ಯತ್ನ: ಹರಿಣಿಯನ್ನು ಬೆತ್ತಲೆಗೊಳಿಸಿ ಭೀಕರವಾಗಿ ಹತ್ಯೆಗೈದಿದ್ದ ಆರೋಪಿ ಯಶಸ್ ಕೊಲೆ ಮಾಡಿದ ಬಳಿಕ ಮನೆಗೆ ತೆರಳಿ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದ. ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ. ಬಳಿಕ ತಾನೇ ಕೆಂಗೇರಿ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ. ಆದರೆ ಕೆಂಗೇರಿ ಪೊಲೀಸರು ನಮ್ಮ ಠಾಣೆ ವ್ಯಾಪ್ತಿಗೆ ಬರಲ್ಲ ಎಂದು ಹೇಳಿ, ಆರೋಪಿಯನ್ನು ಕರೆತಂದು ಸುಬ್ರಮಣ್ಯಪುರ ಪೊಲೀಸರಿಗೆ ಒಪ್ಪಿಸಿದ್ದಾರೆ.

- ಚಾಕುವಿನಿಂದ ಇರಿದು ಟೆಕ್ಕಿ ಯಶಸ್, ಹರಿಣಿಯ ಕೊಲೆ
- ಜಾತ್ರೆಯಲ್ಲಿ ಇಬ್ಬರಿಗೂ ಪರಿಚಯ, ಅನೈತಿಕ ಸಂಬಂಧ
- ಗಂಡನಿಗೆ ಗೊತ್ತಾಗಿದ್ದ ಹೆಂಡತಿಯ ಅನೈತಿಕ ಸಂಬಂಧ
- ಪ್ರಿಯಕರ ಯಶಸ್ ನಿಂದ ಅಂತರ ಕಾಯ್ದುಕೊಂಡಿದ್ದ ಹರಿಣಿ

ಪ್ರೀತಿಯ ಕಥೆ ಕೊಲೆಯಲ್ಲಿ ಅಂತ್ಯ: ಕೆಂಗೇರಿ ಮೂಲದ ಹರಿಣಿ, ದಾಸೇಗೌಡ ಎಂಬವರ ಪತ್ನಿ. ಕೆಲ ತಿಂಗಳ ಹಿಂದೆ ಏರಿಯಾದಲ್ಲಿ ಜಾತ್ರೆ ಇತ್ತು. ಗೃಹಿಣಿ ಹರಿಣಿ ಇದ್ದ ಏರಿಯಾಗೆ ಜಾತ್ರೆಗೆ ಹೋಗಿದ್ದ ಟೆಕ್ಕಿ ಯಶಸ್, ಅಲ್ಲದೇ ಆಕೆಯನ್ನು ಪರಿಚಯ ಮಾಡಿಕೊಂಡಿದ್ದ. ಕೊನೆಗೆ ಇಬ್ಬರು ಫೋನ್ ನಂಬರ್ ಕೂಡ ಪರಸ್ಪರ ಪಡೆದುಕೊಂಡಿದ್ದರು. ಬಳಿಕ ಇಬ್ಬರ ನಡುವೆ ಸ್ನೇಹ ಬೆಳೆದು ಚಾಟಿಂಗ್, ಡೇಟಿಂಗ್ ಶುರು ಮಾಡಿಕೊಂಡಿದ್ದರು. ಹೀಗಾಗಿ ಇಬ್ಬರ ನಡುವೆ ಅನೈತಿಕ ಸಂಬಂಧ ಇತ್ತು. ಕ್ರಮೇಣ ಹರಿಣಿ ಗಂಡ ದಾಸೇಗೌಡನಿಗೆ ಪತ್ನಿಯ ಅನೈತಿಕ ಸಂಬಂಧ ಗೊತ್ತಾಗಿತ್ತು.

ನಂತರ ಹೆಂಡತಿಯ ಫೋನ್ ಕಸಿದುಕೊಂಡು ಮನೆಯಲ್ಲೇ ಕೂಡಿ ಹಾಕಿದ್ದ. ಕೆಲ ತಿಂಗಳ ಬಳಿಕ ಮತ್ತೆ ಹೊರ ಬಂದಿದ್ದ ಹರಿಣಿ, ತನ್ನ ಪ್ರಿಯತಮ ಯಶಸ್‌ನ ಸಂಪರ್ಕಿಸದಲ್ಲಿದ್ದಳು. ಇತ್ತ ಹರಿಣಿ ಸಂಪರ್ಕಕ್ಕೆ ಸಿಗದೇ ಹುಚ್ಚನಂತೆ ಆಗಿದ್ದ ಯಶಸ್, ಸಿಕ್ಕ ಕೂಡಲೇ ಮುಗಿಸಿಬಿಡಬೇಕೆಂದು ನಿರ್ಧಾರ ಮಾಡಿಕೊಂಡಿದ್ದ. ಹೀಗಾಗಿ ಚಾಕು ಕೂಡ ಖರೀದಿಸಿ ಇಟ್ಟಿದ್ದ. ಮತ್ತೆ ಹರಿಣಿಯನ್ನು ಭೇಟಿ ಮಾಡಿ ಮಾತುಕತೆ ಮಾಡಿಕೊಂಡು ಓಯೋ ರೂಮ್‌ಗೆ ಕರೆದೊಯ್ದ ಯಶಸ್, ಅವಳು ಬೇರೆ ಯಾರಿಗೂ ಸಿಗಬಾರದು ಎಂದು ಇರಿದು ಕೊಂಡಿದ್ದಾನೆ. ಯಶಸ್ ಶುಕ್ರವಾರ ಕೊಲೆ ಮಾಡಿ ಪರಾರಿಯಾಗಿದ್ದ.

ನಂತರ ಸುಬ್ರಹ್ಮಣ್ಯಪುರ ಇನ್ಸ್‌ಪೆಕ್ಟರ್ ರಾಜು ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲಿಸಿತ್ತು. ಬಳಿಕ ಎಫ್‌ಎಸ್‌ಎಲ್ ತಂಡ ಕರೆಸಿ ಎಲ್ಲಾ ಸಾಕ್ಷ್ಯ ಸಂಗ್ರಹಿಸಿದ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ.

ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ನನಗೂ ಆಕೆಗೂ ಅನೈತಿಕ ಸಂಬಂಧ ಇತ್ತು. ನನ್ನನ್ನು ದೂರು ಮಾಡುತ್ತಿದ್ದಳು. ಹೀಗಾಗಿ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜವಾಹರ ನವೋದಯ ಶಾಲೆಗೆ ಅರ್ಜಿ ಆಹ್ವಾನ

ಬೆಂಗಳೂರು: ಜವಾಹರ ನವೋದಯ ವಿದ್ಯಾಲಯಗಳಲ್ಲಿ 2026-27ನೇ ಸಾಲಿಗೆ ಆಯ್ಕೆ ಪರೀಕ್ಷೆಯ ಮೂಲಕ 6ನೇ ತರಗತಿಗೆ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 2025ನೇ ಜುಲೈ 29 ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಸ ಬಯಸುವ ವಿದ್ಯಾರ್ಥಿಗಳು ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಜವಾಹರ ನವೋದಯ ವಿದ್ಯಾಲಯಗಳ ಆಯಾ ಜಿಲ್ಲೆಯ ನಿವಾಸಿಗಳು ಆಗಿರಬೇಕು ಮತ್ತು 2025-26 ನೇ ಶೈಕ್ಷಣಿಕ ವರ್ಷದಲ್ಲಿ ಅದೇ ಜಿಲ್ಲೆಯ ಸರಕಾರಿ/ ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು. ವಿದ್ಯಾರ್ಥಿಯು 3 ಮತ್ತು 4 ನೇ ತರಗತಿಯ ಪೂರ್ಣ ಶೈಕ್ಷಣಿಕ ವರ್ಷವನ್ನು ಸರಕಾರಿ/ ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಪೂರ್ಣಾವಧಿ ಶಾಲಾ ಶಿಕ್ಷಣ ಪಡೆದು ತೇರ್ಗಡೆ ಹೊಂದಿರಬೇಕು. ದಿನಾಂಕ:01-05-2014 ರಿಂದ ದಿನಾಂಕ: 31-07-2016 ಮಧ್ಯೆ ಜನಿಸಿದವರಾಗಿರಬೇಕು. ಜಿಲ್ಲೆಯಲ್ಲಿ ಕನಿಷ್ಠ ಶೇ.75ರಷ್ಟು ಸ್ಥಾನಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಂದ ತುಂಬಲಾಗುವುದು. ಸರಕಾರದ ನಿಯಮದನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮತ್ತು ದಿವ್ಯಾಂಗ ವಿದ್ಯಾರ್ಥಿಗಳಿಗೆ ಮೀಸಲಾತಿ ಇದೆ. ಕನಿಷ್ಠ 1/3 ರಷ್ಟು ಸ್ಥಾನಗಳು ಬಾಲಕಿಯರಿಗೆ ಮೀಸಲಾಗಿರುತ್ತವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನಮಾಹಿತಿಗಾಗಿ https://navodava.gov.in ನ್ನು ಭೇಟಿ ನೀಡಬಹುದು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **23.01.2025** ರಂದು ಕರೆದು ಸಾಲಗಾರ **ಅನುಜಾ ಸ್ವಾಮಿ (ಸಹ-ಸಾಲಗಾರನ ಪತ್ನಿ ಹಾಗೂ ದಿವಂಗತ ಮಹೇಶ್ ಅಂಗಡಿಪುರಂ ವೆಂಕಟಾಚಲಂ ಅಲಿಯಾಸ್ ಮಹೇಶ್ ಎ. ವಿ ಅವರ ಕಾನೂನುಬದ್ಧ ಉತ್ತರಾಧಿಕಾರಿ), ಅಲತ್ತೂರ್ ರಾಮ್ಯೈಯರ್ ವೆಂಕಟಾಚಲಂ (ದಿವಂಗತ ಮಹೇಶ್ ಅಂಗಡಿಪುರಂ ವೆಂಕಟಾಚಲಂ ಅಲಿಯಾಸ್ ಮಹೇಶ್ ಎ. ವಿ ಅವರ ತಂದೆ ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ) ಮತ್ತು ದರ್ಶನ್ (ದಿವಂಗತ ಮಹೇಶ್ ಅಂಗಡಿಪುರಂ ವೆಂಕಟಾಚಲಂ ಅಲಿಯಾಸ್ ಮಹೇಶ್ ಎ. ವಿ ಅವರ ಮಗ ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 58,29,086.47 (ಐವತ್ತೆಂಟು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಎಂಬತ್ತಾರು ರೂಪಾಯಿಗಳು ಮತ್ತು ನಲವತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00435582** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **01.01.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **04.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 58,29,086.47 (ಐವತ್ತೆಂಟು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಎಂಬತ್ತಾರು ರೂಪಾಯಿಗಳು ಮತ್ತು ನಲವತ್ತೇಳು ಪೈಸೆ ಮಾತ್ರ) 01.01.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ. ಎಸ್-1, 2ನೇ ಮಹಡಿಯಲ್ಲಿ, 1038 ಚದರ ಅಡಿಗಳ ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿರುವ, ''ವಿಮಲ್ ಕ್ಲಾಸಿಕ್ ಅಪಾರ್ಟ್‌ಮೆಂಟ್'' ಎಂದು ಕರೆಯಲ್ಪಡುವ ಭೂ ಬೇರಿಂಗ್ ಸೈಟ್ ಸಂ. 156/8ಅ ನಲ್ಲಿ ನಿರ್ಮಿಸಲಾಗಿದೆ, ಸಂ. 88/4 ರಲ್ಲಿ ರಚಿಸಲಾಗಿದೆ, ಸಾಮಾನ್ಯ ಪ್ರದೇಶದಲ್ಲಿ ಕಾರು ಪಾರ್ಕಿಂಗ್ ಸ್ಥಳದೊಂದಿಗೆ ಅನುಪಾತದಲ್ಲಿ ಅವಿಭಜಿತ 10.61% ಹಂಚಿಕೆ ಹಕ್ಕು, ಶೀರ್ಷಿಕೆ ಮತ್ತು ಬಡ್ಡಿಯೊಂದಿಗೆ (329 ಚದರ ಅಡಿಗಳಿಗೆ ಸಮ.) ಬಿಬಿಎಂಪಿ ಖಾತಾ ಸಂ. 606/603/615/ ಎಸ್ -1, ಹುಳಿಮಾವು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ಗ್ರಾಮಾಂತರ 560076 ನಲ್ಲಿದೆ.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 04.06.2025
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.01.2025** ರಂದು ಕರೆದು ಸಾಲಗಾರ **ಸರಸ್ವತಿ ಆರ್. ನಾಯಕ್ (ಸಹ-ಸಾಲಗಾರ, ಹಾಗೆಯೇ ದಿವಂಗತ ಶ್ರೀನಿವಾಸ ಕೆ ಆರ್ ಅಲಿಯಾಸ್ ಕೆ. ಆರ್ ಶ್ರೀನಿವಾಸ ಮತ್ತು ರಂಗಪ್ಪನಾಯಕ್ ಅಪ್ಪಣ್ಣ ಅಲಿಯಾಸ್ ಎ ರಂಗಪ್ಪನಾಯಕ್ ಅವರ ಕಾನೂನುಬದ್ಧ ಉತ್ತರಾಧಿಕಾರಿ) ಮಂಜುಳಾ ಕೆ ಎಸ್ (ದಿವಂಗತ ಶ್ರೀನಿವಾಸ ಕೆ ಆರ್ ಅಲಿಯಾಸ್ ಕೆ. ಆರ್ ಶ್ರೀನಿವಾಸ ಅವರ ಪತ್ನಿ ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ) ಹಾಸಿನಿ ಎಸ್ (ನೈಸರ್ಗಿಕ ರಕ್ಷಕನ ಮೂಲಕ ದಿವಂಗತ ಶ್ರೀನಿವಾಸ ಕೆ ಆರ್ ಅಲಿಯಾಸ್ ಕೆ. ಆರ್ ಶ್ರೀನಿವಾಸ ಅವರ ಅಪ್ರಾಪ್ತ ಮಗಳು ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ) ಹಾರಿಕಾ ಎಸ್ (ನೈಸರ್ಗಿಕ ರಕ್ಷಕನ ಮೂಲಕ ದಿವಂಗತ ಶ್ರೀನಿವಾಸ ಕೆ ಆರ್ ಅಲಿಯಾಸ್ ಕೆ. ಆರ್ ಶ್ರೀನಿವಾಸ ಅವರ ಅಪ್ರಾಪ್ತ ಮಗಳು ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ) ಮತ್ತು ಕೆ. ಆರ್ ಲತಾ (ಮಗಳು ಹಾಗೂ ಮಗಳು ದಿವಂಗತ ರಂಗಪ್ಪ ನಾಯಕ್ ಅಪ್ಪಣ್ಣ ಅಲಿಯಾಸ್ ಎ ರಂಗಪ್ಪ ನಾಯ್ಕ್ ಅವರ ಕಾನೂನು ಉತ್ತರಾಧಿಕಾರಿಯಾಗಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 87,42,837.51 (ಎಂಬತ್ತೇಳು ಲಕ್ಷ ನಲವತ್ತೆರಡು ಸಾವಿರದ ಎಂಟುನೂರಾ ಮೂವತ್ತೇಳು ರೂಪಾಯಿಗಳು ಮತ್ತು ಐವತ್ತೊಂದು ಪೈಸೆ ಮಾತ್ರ)** ಸಾಲ ಖಾತೆ ನಂ. **HLAPBEC00351936** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **28.01.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **05.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 87,42,837.51 (ಎಂಬತ್ತೇಳು ಲಕ್ಷ ನಲವತ್ತೆರಡು ಸಾವಿರದ ಎಂಟುನೂರಾ ಮೂವತ್ತೇಳು ರೂಪಾಯಿಗಳು ಮತ್ತು ಐವತ್ತೊಂದು ಪೈಸೆ ಮಾತ್ರ) 28.01.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ವಾಸಸ್ಥಳದ ಆವರಣದ ಆ ಎಲ್ಲಾ ಭಾಗ ಮತ್ತು ಪಾರ್ಸೆಲ್ ಸಂ 41, ಕಥಾ ಸಂ 9/41, ಈಗ ಬ್ಯಾಟರಾಯನಪುರ ಸಿಎಂಸಿ ಎಂದು ನಿಯೋಜಿಸಲಾಗಿದೆ. ಕಥಾ ಸಂ 195/24/41 ರಾಮಚಂದ್ರಪುರ ಗ್ರಾಮ ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಪೂರ್ವದಿಂದ ಪಶ್ಚಿಮಕ್ಕೆ 65 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ಪೂರ್ವಕ್ಕೆ 30 ಅಡಿ ಅಳತೆ, ಪಶ್ಚಿಮ ಭಾಗದಲ್ಲಿ 39 ನೇ ಅಡಿ, ಒಟ್ಟು ಅಳತೆ 2242.5 ಚದರ ಅಡಿ, ಮತ್ತು ಬದ್ಧವಾಗಿದೆ:

ಪೂರ್ವದಲ್ಲಿ : ರಸ್ತೆ	ಪಶ್ಚಿಮದಲ್ಲಿ : ಸೈಟ್ ಬೇರಿಂಗ್ ಸಂ 44
ಉತ್ತರದಲ್ಲಿ : ಅದೇ ಸೈಟ್ ಬೇರಿಂಗ್ ಸಂ 41 ರ ಉಳಿದ ಭಾಗ	ದಕ್ಷಿಣದಲ್ಲಿ : ರಸ್ತೆ

ಅಲ್ಲಿ ನಿರ್ಮಿಸಲಾದ ಮನೆಯ ಜೊತೆಗೆ, ಇಟ್ಟಿಗೆ ಮತ್ತು ಸಿಮೆಂಟ್ನಿಂದ ನಿರ್ಮಿಸಲಾದ 20 ಚದರ ಕಟ್ಟಡಗಳು, ಮೊಸಾಯಿಕ್ ನೆಲಹಾಸು, ಆರ್‌ಸಿಸಿ ಛಾವಣಿ, ಮರದ ಬಾಗಿಲುಗಳು ಇತ್ಯಾದಿಗಳನ್ನು ಒಳಗೊಂಡಿದ್ದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 05.06.2025
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.12.2024** ರಂದು ಕರೆದು ಸಾಲಗಾರ **ಸಹಾವರ್ ಉರುಫ್ ಶಾವರ್ ಅಬ್ದುಲ್ (ಸಹ-ಸಾಲಗಾರರು, ಪತ್ನಿ ಹಾಗೂ ಸ್ವರ್ಗೀಯ ಅಬ್ದುಲ್ ಖಾದರ್‌ರವರ ಕಾನೂನುಬದ್ಧ ಉತ್ತರಾಧಿಕಾರಿ) ಮತ್ತು ಸಲ್ಮಾನ್ ಉರುಫ್ ಅಬ್ದುಲ್ ಸಲ್ಮಾನ್, (ಸಹ-ಸಾಲಗಾರರು, ಮಗ ಹಾಗೂ ಸ್ವರ್ಗೀಯ ಅಬ್ದುಲ್ ಖಾದರ್‌ರವರ ಕಾನೂನುಬದ್ಧ ಉತ್ತರಾಧಿಕಾರಿ) ಅಬ್ದುಲ್ ಜಾಕೀರ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ) ಅಬ್ದುಲ್ ಶೈದ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ) ಅಬ್ದುಲ್ ಸಮೀರ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ)ಅಮ್ರೀನ್ ಅಬ್ದುಲ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ)ಝುಬಿಯಾ ಅಬ್ದುಲ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ) ಮತ್ತು ಸಮರೀನ್ ಅಬ್ದುಲ್ (ಮಗ ಹಾಗೂ ದಿವಂಗತ ಅಬ್ದುಲ್ ಖಾದರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 84,17,176.10 (ಎಂಬತ್ನಾಲ್ಕು ಲಕ್ಷದ ಹದಿನೇಳು ಸಾವಿರದ ನೂರ ಎಪ್ಪತ್ತಾರು ರೂಪಾಯಿಗಳು ಮತ್ತು ಹತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBNE00359844** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **28.12.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **04.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 84,17,176.10 (ಎಂಬತ್ನಾಲ್ಕು ಲಕ್ಷದ ಹದಿನೇಳು ಸಾವಿರದ ನೂರ ಎಪ್ಪತ್ತಾರು ರೂಪಾಯಿಗಳು ಮತ್ತು ಹತ್ತು ಪೈಸೆ ಮಾತ್ರ) 28.12.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಈ ಮುಂದಿನ ಸಂಪೂರ್ಣ ಪ್ರಾಪರ್ಟಿ: ಮೂರು ಬೆಡ್‌ರೂಂ ನಿವಾಸಿ ಅಪಾರ್ಟ್‌ಮೆಂಟ್/ಫ್ಲ್ಯಾಟ್ ನಂ. 301, 3ನೇ ಮಹಡಿ; ಇದರ ಸೂಪರ್ ಬಿಲ್ಟ್-ಅಪ್ ಏರಿಯ 1735 ಚದರ ಅಡಿ, ಜೊತೆಗೆ 'ಸ್ಪ್ರಿಂಗ್ ಫೀಲ್ಡ್ ಎಲಿಟ್ ' ಎಂಬ ಹೆಸರಿನ ಈ ನಿವಾಸೀ ಬಿಲ್ಡಿಂಗ್‌ನ ಅಡಿಯ ಜಾಗದಲ್ಲಿ 463 ಚ.ಅಡಿಯ ಅವಿಭಾಜಿತ ಶೇರ್. ಮುನಿಸಿಪಲ್ / ಬಿಬಿಎಮ್‌ಪಿ ಖಾತೆ ನಂ. 400/385/373/119/2, ಸರ್ವೇ ನಂ. 119/2 (ಹಳೆಯ ಸರ್ವೇ ನಂ. 119/1); ಇರುವ ಸ್ಥಳ: ಸಿಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಮಣಿಪಾಲ್ ಕೌಂಟಿ ರಸ್ತೆ, ವಾರ್ಡ್ ನಂ. 191, ಬೇಗೂರು ಹೋಬಳಿ, ಬೆಂಗಳೂರು ರೂರಲ್, ಬೆಂಗಳೂರು - 560068, ಕರ್ನಾಟಕ ಮತ್ತು ಸ್ಟಿಲ್ಟ್ /ಬೇಸ್‌ಮೆಂಟ್ ಅಂತಸ್ತಿನಲ್ಲಿ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಏರಿಯ - ನಂ. 301, ಮತ್ತು ಎಲ್ಲರ ಬಳಕೆಯ ಸೌಲಭ್ಯಗಳು ಹಾಗೂ ಪ್ಯಾಸೇಜ್‌ಗಳನ್ನು ಬಳಸುವ ಹಕ್ಕುಗಳು.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 04.06.2025
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **03.02.2025** ರಂದು ಕರೆದು ಸಾಲಗಾರ **ಕೆ ಜಿ ನಾಗವೇಣಿ ಮತ್ತು ಗೌರಮ್ಮ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. ರೂ. 33,82,621.02 (ಮೂವತ್ತಮೂರು ಲಕ್ಷ ಎಂಬತ್ತೆರಡು ಸಾವಿರದ ಆರುನೂರ ಇಪ್ಪತ್ತೊಂದು ರೂಪಾಯಿಗಳು ಮತ್ತು ಎರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00519048** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **03.02.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **04.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 33,82,621.02 (ಮೂವತ್ತಮೂರು ಲಕ್ಷ ಎಂಬತ್ತೆರಡು ಸಾವಿರದ ಆರುನೂರ ಇಪ್ಪತ್ತೊಂದು ರೂಪಾಯಿಗಳು ಮತ್ತು ಎರಡು ಪೈಸೆ ಮಾತ್ರ) 03.02.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಗ್ರಾಮಥನ ಖಾನೇಶ್ಯುಮರಿ ಸಂ 403 ಹೊಂದಿರುವ ಸೈಟ್ ಸಂ 33 ರ ಪಶ್ಚಿಮ ಭಾಗದ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಪ್ರಸ್ತುತ ಬಿಬಿಎಂಪಿ ವಾರ್ಡ್ ಸಂ 69 ರ ವ್ಯಾಪ್ತಿಗೆ ಬರುತ್ತದೆ, ಇದು ಲಗ್ಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು - 560058, ಉತ್ತರ ತಾಲ್ಲೂಕು, ಕೆಂಪೇಗೌಡ, ಕರ್ನಾಟಕ ಬಡಾವಣೆಯಲ್ಲಿದ್ದು, ಮನೆ ಆಸ್ತಿಯನ್ನು ಹೊಂದಿರುವ ಗಡಿಗಳನ್ನು ಈ ಕೆಳಗಿನಂತೆ ಒಳಗೊಂಡಿದೆ:

ಪೂರ್ವದಲ್ಲಿ : ಸೈಟ್ ನಂ. 33 ರ ಉಳಿದ ಪೂರ್ವ ಭಾಗ	ಪಶ್ಚಿಮದಲ್ಲಿ : 30 ಅಡಿ ರಸ್ತೆ
ಉತ್ತರದಲ್ಲಿ : 30 ಅಡಿ ರಸ್ತೆ	ದಕ್ಷಿಣದಲ್ಲಿ : ಸೈಟ್ ನಂ.40

ಪೂರ್ವದಿಂದ ಪಶ್ಚಿಮಕ್ಕೆ 15 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಅಳತೆಯಲ್ಲಿ ಒಟ್ಟು 600 ಚದರ ಅಡಿ ಸ್ಥಳ ಮತ್ತು ಕಟ್ಟಡವು 5 ಚದರ ಅಡಿಗಳಷ್ಟು ನೆಲಮಹಡಿ ನಿರ್ಮಿತ ಪ್ರದೇಶ ಮತ್ತು 10 ಚದರ ಅಡಿಗಳಷ್ಟು ಮೊದಲ ಮಹಡಿಯಲ್ಲಿ ಆರ್‌ಸಿಸಿ ಮೇಲ್ಛಾವಣಿ ಮತ್ತು ಶುದ್ಧೀಕರಿಸಿದ ಟೈಲ್‌ಗಳ ಮಹಡಿಗಳನ್ನು ಒಳಗೊಂಡಿದೆ, ನೀರು ಮತ್ತು ವಿದ್ಯುತ್ ಸೌಲಭ್ಯಗಳ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 04.06.2025
ಸ್ಥಳ : ಬೆಂಗಳೂರು

IN THE COURT OF ASSISTANT COMMISSIONER, RAMANAGARA SUB-DEVISION, KANAKAPURA TALUK, KANAKAPURA.
R.A(LKP)-564/2024-25.

Appellants: Smt Lingamma and Others.

V/s

Respondents: Sri Raju.D and Others Notice to Respondents: 3, 4(b), 4(c) and 6 :- R-3. Sri Narasimhaiah, S/o late Doddaputtegowda, Aged about-73 years, R/at:2059 and 2060 SLN Complex, 2nd floor, MIG 3rd stage, 13th 'B' main road, 16th 'B' Cross Road, Yalahanka New Town, Opp. to Udupi Garden, Dairy Circle, BENGALURU-560 064. MOB:9008334069/9448032909. R-4(b). Sri Krishnappa,S/o late Veerabantegowda, Major, R/at: Narayanapura Village, Kodahalli Hobli, Kanakapura Taluk, RAMANAGARA DISTRICT. R-4(c). Sri Rajendra, S/o late Veerabantegowda, Major, R/at: Narayanapura Village, Kodahalli Hobli, Kanakapura Taluk, RAMANAGARA DISTRICT. R-6. Smt Leelamma, D/o. late Doddaputtegowda, W/o. Varadaiah, Aged about:71 years, R/at; Channasandra, Uttarahalli Road, BENGALURU-560 061.

NOTICE

Whereas the above said appellants have instituted this appeal for cancellation of khata and mutation in respect of the schedule properties stood in the name of 1st respondent Raju.D, therefore the appellants have sought relief as prayed in the prayer of the appeal. Therefore if you are interested to contest the matter on merits, you are hereby summoned to appear before this Hon'ble Court in person or through pleader on: 17/06/2025 at 11:00 am at Kanakapura Taluk Office, to answer the same, failing which, the appeal will be disposed of placing you all as an exparte.

Given under my hand and seal of the court, this the June 09 day of 2025

By ordere of the court.
COURT OF ASSISTANT COMMISSIONER, RAMANAGARA SUB-DEVISION, KANAKAPURA TALUK, KANAKAPURA.

Advocate for Appellants:-
K.G.Venkatesh, Advocate,
Office at:No.1347, Lakshmidevamma Building, Beside PLD Bank,
Ramanagara Town, Ramanagara-562 159.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 305/2025

ಅರ್ಜಿದಾರರು: ಶ್ರೀ.ನಾಗರಾಜು ಬಿನ್. ಲೇಟ್. ಮಂಚೇಗೌಡ ಮತ್ತು ಇತರರು, ಉದಾರಹಳ್ಳಿ ಗ್ರಾಮ, ಹೆಚ್.ಕೊತ್ತನೂರು ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ-562117

ವಿರುದ್ಧ

ಎದುರುದಾರರು: 1, ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2, ಗ್ರಾಮ ಲೇಕ್ಕಾಧಿಕಾರಿ, ಮುರುಕಣಿ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 6ನೇ ಅರ್ಜಿದಾರರ ತಾಯಿ "ಲೇಟ್.ಗೌರಮ್ಮ ಕೋಂ. ಲೇಟ್.ಮಂಚೇಗೌಡ" ಉದಾರಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ, ದಿನಾಂಕ:29-10-2006ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ:17-07-2025ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

09/06/2025ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು.
ಕನಕಪುರ ಟೌನ್
ದಿನಾಂಕ :
ಸ್ಥಳ: ಕನಕಪುರ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **31.12.2024** ರಂದು ಕರೆದು ಸಾಲಗಾರ **ಶಿವನಂಜಯ್ಯ, ಗುರುಪ್ರಸಾದ್ ಎಸ್, ಮಂಜುಳಾ ಎಸ್ ಮತ್ತು ಎಸ್ ಲಕ್ಷ್ಮೀ ನಾರಾಯಣ (ಗ್ಯಾರೆಂಟರ್)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 35,12,476.58 (ಮೂವತ್ತೈದು ಲಕ್ಷ ಹನ್ನೆರಡು ಸಾವಿರದ ನಾಲ್ಕು ನೂರ ಎಪ್ಪತ್ತಾರು ರೂಪಾಯಿಗಳು ಮತ್ತು ಐವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HLAPTUM00408092** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **26.12.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **05.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 35,12,476.58 (ಮೂವತ್ತೈದು ಲಕ್ಷ ಹನ್ನೆರಡು ಸಾವಿರದ ನಾಲ್ಕು ನೂರ ಎಪ್ಪತ್ತಾರು ರೂಪಾಯಿಗಳು ಮತ್ತು ಐವತ್ತೆಂಟು ಪೈಸೆ ಮಾತ್ರ) 26.12.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆಸ್ತಿಯ ಆ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಸಂ 7, ಪಿಐಡಿ ಸಂ 21255, ಹಳೆಯ ಸೈ ಸಂ 312, ಹೊಸ ಮೌಲ್ಯಮಾಪನ ಸಂ 2778 ತುಮಕೂರು ಮಹಾನಗರ ಪಾಲಿಕಾ ವಾರ್ಡ್ ಸಂ 21 ವಿದ್ಯಾನಗರ, ತುಮಕೂರು, ಪೂರ್ವದಿಂದ ಪಶ್ಚಿಮಕ್ಕೆ 49 ಅಡಿ ಅಳತೆ ಮತ್ತು ದಕ್ಷಿಣಕ್ಕೆ 30 ಅಡಿ ಅಳತೆಯ ಮಿತಿಯಲ್ಲಿ, ಒಟ್ಟು 1470 ಚದರ ಅಡಿ ಅಳತೆ, ನಜುಂಡೇಶ್ವರ ಕೃಪಾ, 4 ನೇ ಅಡ್ಡರಸ್ತೆ, ನೇತಾಜಿ ರಸ್ತೆ, ವಿದ್ಯಾನಗರ, ತುಮಕೂರು -572106, ಕರ್ನಾಟಕ. ಇದು ಕೆಳಗೆ ಇದೆ;

ಪೂರ್ವದಲ್ಲಿ : ಸೈಟ್ ಸಂ. 4	ಪಶ್ಚಿಮದಲ್ಲಿ : 30 ಅಡಿ ರಸ್ತೆ
ಉತ್ತರದಲ್ಲಿ : ಸೈಟ್ ಸಂ. 8	ದಕ್ಷಿಣದಲ್ಲಿ : ಸೈಟ್ ಸಂ. 6

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 05.06.2025
ಸ್ಥಳ : ತುಮಕೂರು

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

PUBLIC NOTICE

NOTICE IS HEREBY GIVEN THAT, Sri. Abhubakar S.M. @ Abubakar Syed Mohamed S/o Syed Iqbal Hussain, Residing at Plot No.7 A, SJR Eastwood, 1st Cross, Haralur Road, Opposite Shell Petrol Bunk, Sy.No.55, Kasavanahalli, HSR Layout Bengaluru 560102. **It is brought to the notice of the general public that**, our client has negotiated and decided to purchase the Schedule Property from the above said owner/attorney. All persons having any claim against or to the Schedule Property or any part thereof by way of inheritance, mortgage, sale, conveyance, MOU, Agreement to Sell, G.P.A, transfer, lease deed, tenancy, license, lien, charge, trust, maintenance, easement, gift, exchange, possession, adverse possession or otherwise howsoever are hereby required to submit the same in writing along with documentary proof to the undersigned at their office **within 10 days from the date of publication hereof**, failing which our client shall proceed without any reference to such claim and the same, if any, will be considered as waived.

SCHEDULE PROPERTY

All the piece and parcel of the Property bearing Present Khatha No.1315/1246/7/1, Plot No.7A, Old Khatha No.101/55/7 and later Old Khatha No.1246/7, having New PID No.5584378638, carved out of Converted Land bearing Sy No.55, measuring Eastern side 80.12 feet, Western side 80.12 feet, Northern side 49.05 feet, Southern side 49.25 feet, totally measuring 3937 Sq.ft., situated at SJR Eastwood, Kasavanahalli Village, Varthur Hobli, Bangalore East Taluk (Erstwhile Bangalore South Taluk) Bangalore District and bounded on: **East By:** Plot No.8, **West By:** Western Portion of Plot No.7, **North By:** Layout Road, **South By:** Plot No. 12, The Schedule property comprising of Residential building- Ground Floor measuring 2000 Sq.fts for car parking and three upper floors totally measuring 8037 Sq.ft.- constructed wall with Solid-Cement blocks with cement, RCC roofing, Marble flooring, Teakwood doors and windows

Sri. CHENNAKESHAVA B.S. ADVOCATE
H & C Law Chambers,
64/1, 5th Floor,No.39/2, A.S.V.N.V. BHAVAN, K.G.Road, Bangalore - 560009.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ. ರಾಜಕುಮಾರ್ ಸಂತ್ರ**, ವಯಸ್ಸು ಸುಮಾರು 46 ವರ್ಷ, ಬಿನ್ ಶ್ರೀ.ಲಲಿತ್ ಮೋಹನ್ ಸ್ಯಾಂತ್ರ, ಶ್ರೀಮತಿ. ನಮಿತಾ ಸ್ಯಾಂತ್ರ, ವಯಸ್ಸು ಸುಮಾರು 41 ವರ್ಷ, ಕೋಂ ರಾಜ್‌ಕುಮಾರ್ ಸ್ಯಾಂತ್ರ, ನಂ. 1, ಮತ್ತು 2, ಇಬ್ಬರೂ ವಾಸ: ನಂ.6/ 1, 3ನೇ ಮಹಡಿ, 13ನೇ ಕ್ರಾಸ್, ಕಬ್ಬನ್‌ಪೇಟೆ, ಬೆಂಗಳೂರು-560002 ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನು ಶ್ರೀಮತಿ. ಪೂನಂ ಎ ಬನ್ಸಾಲಿ ಅಲಿಯಾಸ್ ಪೂನಂ ಅಭಿನವ್ ಸೋಲಂಕಿ, ಸುಮಾರು 39 ವರ್ಷ. ಕೋಂ ಅಭಿನವ್ ಸೋಲಂಕಿ, ವಿಳಾಸ: ನಂ.ಜೇ. ಕೇ. ಸೊಸೈಟಿ, 322/17, ಶಂಕರ್ ಶೇಠ್ ರಸ್ತೆ, ಪುಣೆ, ಮಹಾರಾಷ್ಟ್ರ 411042, ಇವರಿಂದ ಷೆಡ್ಯೂಲ್ ಸ್ವತ್ತನು ಖರೀದಿಸಲು ವ್ಯವಹರಿಸುತ್ತಿದ್ದಾರೆ.

ಈ ಸ್ವತ್ತಿಗೆ ಸಂಭಂದಿಸಿದಂತೆ ಯಾವುದೇ ವ್ಯಕ್ತಿ/ಗಳು, ಬ್ಯಾಂಕ್/ಸಮಾಜ/ಸಂಸ್ಥೆ ಅಥವಾ ಮಾರಾಟ, ವಿನಿಮಯ, ಅಡಮಾನ, ಮರಣ ಶಾಸನ ಪತ್ರ, ಉಡುಗೊರೆ, ಬಿಡುಗಡೆ, ಟ್ರಸ್ಟ್, ಉತ್ತರಾಧಿಕಾರ, ಔತಣಕೂಟಗಳು, ಸ್ವಾಧೀನ, ಗುತ್ತಿಗೆ, ಸುಲಭೀಕರಣ ಅಥವಾ ಇತರ ರೀತಿಯಲ್ಲಿ ಷೆಡ್ಯೂಲ್ ಸ್ವತ್ತಿನ ಅಥವಾ ಅದರ ಯಾವುದೇ ಭಾಗದ ಮೇಲೆ ಯಾವುದೇ ಹಕ್ಕುಗಳು, ಶೀರ್ಷಿಕೆ, ಆಸಕ್ತಿ ಅಥವಾ ಹಕ್ಕುಗಳನ್ನು ಹೊಂದಿರುವ ಯಾರಾದರೂ, ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ **15 (ಹದಿನೈದು) ದಿನಗಳಲ್ಲಿ** ದಾಖಲೆ ಪುರಾವೆಗಳೊಂದಿಗೆ ತಮ್ಮ ಆಕ್ಷೇಪಣೆಯನ್ನು/ಗಳನ್ನು ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದು, ವಿಫಲವಾದರೆ ಮಾರಾಟ ವಹಿವಾಟನ್ನು ಪೂರ್ಣಗೊಳಿಸಲು ಯಾವುದೇ ಅಡಚಣೆಯಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಅದನ್ನು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗೆ ಮನ್ನಾ ಮಾಡಲಾಗಿದೆ ಎಂದು ಪರಿಗಣಿಸಲಾಗುತ್ತದೆ, ನನ್ನ ಕಕ್ಷಿದಾರರು ಯಾವುದೇ ಆಕ್ಷೇಪಣೆಗಳು, ಹಕ್ಕು, ಕ್ಲೇಮ್ ಅಥವಾ ಆಸಕ್ತಿ ಯಾವುದೇ ರೀತಿಯಲ್ಲಿ ಇಲ್ಲ ಎಂಬ ಆಧಾರದ ಮೇಲೆ ಖರೀದಿ ವ್ಯವಹಾರವನ್ನು ಮುಂದುವರೆಸುತ್ತಾರೆ.

ಷೆಡ್ಯೂಲ್

ಬೆಂಗಳೂರು-560027, ಅಕ್ಕಿತಿಮ್ಮನಹಳ್ಳಿ, (ಶಾಂತಿನಗರ), ಉತ್ತರೇಗೌಡ ಬೀದಿ, ಹಳೆಯ ವಾರ್ಡ್ ಸಂಖ್ಯೆ.70 ಹೊಸ ವಾರ್ಡ್ ಸಂಖ್ಯೆ.117, ಪ್ರಸ್ತುತ ಬಿಬಿಎಂಪಿ ಆಡಳಿತ ವ್ಯಾಪ್ತಿಗೆ ಬರುವ ಸ್ಥಿರಾಸ್ತಿ ಸ್ವತ್ತಿನ ಪುರಸಭೆ ಸಂಖ್ಯೆ.17/1 (ಜೊತೆಯಾಗಿರುವ ಆಸ್ತಿ ಸಂಖ್ಯೆ.17 ರ ಪಶ್ಚಿಮ ಭಾಗ) ಹೊಸ ಇ ಪಿಐಡಿ ಸಂಖ್ಯೆ.5915206805,ರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 14 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 27 ಅಡಿ, ಒಟ್ಟು 378 ಚದರ ಅಡಿ, ಜೊತೆಗೆ ವಸತಿ ಕಟ್ಟಡ ಹೊಂದಿದ್ದು ಮತ್ತು ಅದರ ಮೇಲೆ ರೆಡ್ ಆಕ್ಸೈಡ್ ನೆಲಹಾಸುಗಳಿಂದ ನಿರ್ಮಿಸಲಾದ ನೆಲ ಮತ್ತು ಮೇಲಿನ ಮಹಡಿಗಳನ್ನು ಒಳಗೊಂಡಿರುವ ಆರ್‌ಸಿಸಿ ಛಾವಣಿಯ ವಸತಿ ಕಟ್ಟಡ ಮತ್ತು ಬಾಗಿಲುಗಳು ಮತ್ತು ಕಿಟಕಿಗಳಿಗೆ ಬಳಸುವ ಮರಗಳು ಕಾಡಿನ ಮರದಿಂದ ಕೂಡಿದೆ, ಪ್ರತಿ ಮಹಡಿಯ ಒಟ್ಟು ನಿರ್ಮಿತ ವಿಸ್ತೀರ್ಣವು ತಲಾ 250 ಚದರ ಅಡಿ ಒಟ್ಟು 1000 ಚದರ ಅಡಿ ನೀರು, ವಿದ್ಯುತ್ ಮತ್ತು ಇತರ ನಾಗರಿಕ ಸೌಲಭ್ಯಗಳೊಂದಿಗೆ ಇರುವ ಈ ಸ್ವತ್ತಿಗೆ ಚಕ್ಕುಬಂದಿ:- **ಪೂರ್ವಕ್ಕೆ**: ಶ್ರೀ.ಶೇಖರ್ ಅವರಿಗೆ ಸೇರಿದೆ ಸ್ವತ್ತು, **ಪಶ್ಚಿಮಕ್ಕೆ**: ಖಾಸಗಿ ಸ್ವತ್ತು, **ಉತ್ತರಕ್ಕೆ**: ರಸ್ತೆ, **ದಕ್ಷಿಣಕ್ಕೆ**: ಶ್ರೀ.ಕೃಷ್ಣಪ್ಪ ಅವರಿಗೆ ಸೇರಿದ ಸ್ವತ್ತು.

ಮೋಹನ್ ಕುಮಾರ್. ಎನ್. ಬಿ.ಎ. ಎಲ್.ಎಲ್.ಬಿ.,
ವಕೀಲರು ಮತ್ತು ಕಾನೂನು ಸಲಹೆಗಾರರು
ನಂ.8, 6ನೇ ಕ್ರಾಸ್, 1ನೇ ಮುಖ್ಯರಸ್ತೆ, ಎಸ್.ಆರ್. ನಗರ, ಬೆಂಗಳೂರು-560027,
ದೂ.98443 51849.

ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ರಂಗಭೂಮಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ರಂಗಭೂಮಿಯ ಆಕರ ಗ್ರಂಥಗಳಿಗೆ ಬಹುಮಾನ ನೀಡಲು ತೀರ್ಮಾನಿಸಿದೆ. ಕನ್ನಡ ರಂಗಭೂಮಿಯ ಬೆಳವಣಿಗೆ, ವೈವಿಧ್ಯತೆ ಹಾಗೂ ರಂಗಭೂಮಿಯ ಇತಿಹಾಸವನ್ನು ತಿಳಿಸುವಂತಹ ವಿಮರ್ಶಾತ್ಮಕ ಕೃತಿಗಳಿಗೆ 2024-25ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಲಾಗಿದೆ.

ಪ್ರತಿ ಸಾಲಿಗೆ ತಲಾ ಒಂದು ಪುಸ್ತಕ ಬಹುಮಾನವನ್ನು ನೀಡಲಾಗುವುದು. ಬಹುಮಾನದ ಮೊತ್ತ 25,000 ರು.ಗಳಾಗಿರುತ್ತದೆ. ಕೃತಿಗಳನ್ನು ಲೇಖಕರೇ ನೇರವಾಗಿ ಅಕಾಡೆಮಿಗೆ ಕಳುಹಿಸಿಕೊಡುವುದು. ಕೃತಿಗಳು ಜನವರಿ 2024ರಿಂದ ಡಿಸೆಂಬರ್ 2024ರೊಳಗೆ ಮುದ್ರಣವಾಗಿ ಪ್ರಕಟಣೆಯಾಗಿರಬೇಕು. ಅನುವಾದಿತ ಕೃತಿಗಳಿಗೆ ಅವಕಾಶವಿರುವುದಿಲ್ಲ. ಪುಸ್ತಕಗಳು ಯಾವುದೇ ಪದವಿಗಾಗಿ, ಪಿಎಚ್.ಡಿ. ಮತ್ತು ಪಠ್ಯ ಪುಸ್ತಕಕ್ಕೆ ಸಿದ್ಧಪಡಿಸಲಾದ ವಿಷಯವಾಗಿರಬಾರದು. ಬಹುಮಾನಕ್ಕಾಗಿ ಕಳುಹಿಸಲ್ಪಡುವ ಕೃತಿಗಳು ನಾಟಕವಾಗಿರಬಾರದು, ರಂಗಸಂಬಂಧಿ ವಸ್ತುವುಳ್ಳದ್ದಾಗಿರಬೇಕು. ಕೃತಿಯ ತಾಂತ್ರಿಕ ಪುಟದಲ್ಲಿ ಮುದ್ರಣ ವರ್ಷವನ್ನು ನಮೂದಿಸಿರಬೇಕು. ಮರು ಮುದ್ರಣ ಪುಸ್ತಕವಾಗಿರಬಾರದು. ಅಕಾಡೆಮಿಯ ಸದಸ್ಯರು ರಚಿಸಿರುವ ಕೃತಿಗಳಾಗಿರಬಾರದು ಹಾಗೂ ಸಂಪಾದಿತ ಕೃತಿಗಳು ಸಹ ಆಗಿರಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆಸಕ್ತ ಲೇಖಕರು, ಹೆಸರು, ವಿಳಾಸ, ಪ್ರಕಟಣೆ ವರ್ಷದೊಂದಿಗೆ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ನೆಲಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002, ದೂರವಾಣಿ ಸಂ. 080-22244176 ಇಲ್ಲಿಗೆ 2025ನೇ ಜೂನ್ 25 ರೊಳಗಾಗಿ ಸಲ್ಲಿಸುವಂತೆ ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕರೋನಾ ಹೆಚ್ಚಳ: 265 ಮಂದಿಗೆ ಸೋಂಕು



ಬೆಂಗಳೂರು: ರಾಜ್ಯದಲ್ಲಿ ಕರೋನಾ ಮತ್ತೆ ದಿಢೀರ್ ಹೆಚ್ಚಳವಾಗಿದ್ದು, ಕಳೆದ 24 ಗಂಟೆಯಲ್ಲಿ ಬರೋಬ್ಬರಿ 265 ಮಂದಿಗೆ ಕರೋನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 1220ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಸೋಮವಾರ ಮಹಾಮಾರಿ ಕ'ೂರ'ೋನಾದಿಂದ' ಯಾವುದೇ ಸಾವು ವರದಿಯಾಗಿಲ್ಲ, ರಾಜ್ಯದಲ್ಲಿ ಒಂದೇ ದಿನ ಒಟ್ಟು 650 ಜನರನ್ನು ಕರೋನಾ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆ ಪೈಕಿ 265 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಪಾಸಿಟಿವ್ ಪ್ರಮಾಣ ಶೇ.40ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಒಟ್ಟು 559 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 552 ಮಂದಿ ಮನೆ ಆರೈಕೆಯಲ್ಲಿದ್ದಾರೆ ಮತ್ತು 7 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಜವಾಹರ ನವೋದಯ ವಿದ್ಯಾಲಯಗಳಲ್ಲಿ 2026-27ನೇ ಸಾಲಿಗೆ ಆಯ್ಕೆ ಪರೀಕ್ಷೆಯ ಮೂಲಕ 6ನೇ ತರಗತಿಗೆ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 2025ನೇ ಜುಲೈ 29 ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಸ ಬಯಸುವ ವಿದ್ಯಾರ್ಥಿಗಳು ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಜವಾಹರ ನವೋದಯ ವಿದ್ಯಾಲಯಗಳ ಆಯಾ ಜಿಲ್ಲೆಯ ನಿವಾಸಿಗಳು ಆಗಿರಬೇಕು ಮತ್ತು 2025-26 ನೇ ಶೈಕ್ಷಣಿಕ ವರ್ಷದಲ್ಲಿ ಅದೇ ಜಿಲ್ಲೆಯ ಸರಕಾರಿ/ ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು. ವಿದ್ಯಾರ್ಥಿಯು 3 ಮತ್ತು 4 ನೇ ತರಗತಿಯ ಪೂರ್ಣ ಶೈಕ್ಷಣಿಕ ವರ್ಷವನ್ನು ಸರಕಾರಿ/ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಪೂರ್ಣಾವಧಿ ಶಾಲಾ ಶಿಕ್ಷಣ ಪಡೆದು ತೇರ್ಗಡೆ ಹೊಂದಿರಬೇಕು. ದಿನಾಂಕ: 01.05.2014 ರಿಂದ ದಿನಾಂಕ: 31-07-2016 ಮಧ್ಯೆ ಜನಿಸಿದವರಾಗಿರಬೇಕು. ಜಿಲ್ಲೆಯಲ್ಲಿ ಕನಿಷ್ಠ ಶೇ.75 ರಷ್ಟು ಸ್ಥಾನಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಂದ ತುಂಬಲಾಗುವುದು. ಸರಕಾರದ ನಿಯಮದನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮತ್ತು ದಿವ್ಯಾಂಗ ವಿದ್ಯಾರ್ಥಿಗಳಿಗೆ ಮೀಸಲಾತಿ ಇದೆ. ಕನಿಷ್ಠ 1/3 ರಷ್ಟು ಸ್ಥಾನಗಳು ಬಾಲಕಿಯರಿಗೆ ಮೀಸಲಾಗಿರುತ್ತವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನಮಾಹಿತಿಗಾಗಿ https://navodava.gov.in ನ್ನು ಭೇಟಿ ನೀಡಬಹುದು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಗೌರಿಬಿದನೂರಿನಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಕುಸುಮ್-ಸಿ ಯೋಜನೆ ಉದ್ಘಾಟನೆ ನಾಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲಿನ ವೇಳೆಯೇ ಸಮರ್ಪಕ ವಿದ್ಯುತ್ ಪೂರೈಸುವ ಕುಸುಮ್-ಸಿ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಜೂನ್ 11 ರಂದು ಅಧಿಕೃತವಾಗಿ ಉದ್ಘಾಟಿಸಲಿದ್ದಾರೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 11, ಬುಧವಾರ ಬೆಳಗ್ಗೆ 10.30 ಗಂಟೆಗೆ ಗೌರಿಬಿದನೂರಿನ ನೇತಾಜಿ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿಯವರು ಯೋಜನೆಗೆ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಪಡಿತರ ವಿತರಣೆ ಸಚಿವರಾದ ಪ್ರಲ್ಹಾದ್ ಜೋಶಿ, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ್ ಯೆಸ್ಸೋ ನಾಯಕ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಕೃಷ್ಣ ಬೈರೇಗೌಡ, ಡಾ.ಎಂ.ಸಿ.ಸುಧಾಕರ್ ಭಾಗವಹಿಸಲಿದ್ದಾರೆ.

ರೈತರಿಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ಪೂರೈಸುವ ಉದ್ದೇಶದಿಂದ ಕುಸುಮ್-ಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನೀರಾವರಿಗೆ ವಿದ್ಯುತ್ ಪೂರೈಸುವ ಫೀಡರ್‌ಗಳ ಬಳಿ ಸೋಲಾರ್ ಘಟಕಗಳನ್ನು ಸ್ಥಾಪಿಸಿ, ವಿದ್ಯುತ್ ಉತ್ಪಾದಿಸಲಾಗುವುದು. ಬಳಿಕ ಅಲ್ಲಿಂದ ಫೀಡರ್‌ಗಳ ಮೂಲಕ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಒದಗಿಸಲಾಗುವುದು. ಸ್ಥಳೀಯವಾಗಿಯೇ



ವಿದ್ಯುತ್ ಉತ್ಪಾದಿಸಿ ಪೂರೈಸುವುದರಿಂದ ಗುಣಮಟ್ಟದ ವಿದ್ಯುತ್ ಲಭ್ಯವಾಗುತ್ತದೆ. ಟ್ರಾನ್ಸ್‌ಫಾರ್ಮರ್‌ಗಳ ಮೇಲಿನ ಹೊರೆಯೂ ಇದರಿಂದ ತಗ್ಗುತ್ತದೆ ಎಂದು ಹೇಳಿದರು.

ಗೌರಿಬಿದನೂರು ತಾಲೂಕಿನ ತೊಂಡೇಬಾವಿ ಹೋಬಳಿ ಹನುಮೇನಹಳ್ಳಿ ಮತ್ತು ಚರಕಮಟ್ಟೇನಹಳ್ಳಿ ಗ್ರಾಮದ ಸುಮಾರು 60 ಎಕರೆ ಪ್ರದೇಶದಲ್ಲಿ 20 ಮೆ.ವ್ಯಾ. ಸಾಮರ್ಥ್ಯದಲ್ಲಿ ಸೋಲಾರ್ ಘಟಕ ಸ್ಥಾಪಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಕುಸುಮ್- ಸಿ ಯೋಜನೆಯಡಿ ಸ್ಥಾಪಿಸಲಾಗಿರುವ ಅತಿ ದೊಡ್ಡ ಘಟಕವಿದು. ಹೀಗಾಗಿ ಗೌರಿಬಿದನೂರಿನಲ್ಲಿ ಯೋಜನೆಯನ್ನು ಉದ್ಘಾಟಿಸಲು ನಿರ್ಧರಿಸಲಾಗಿದೆ. ಇಲ್ಲಿ ಖಾಸಗಿ ಜಮೀನನ್ನು 25 ವರ್ಷಕ್ಕೆ ಭೋಗ್ಯಕ್ಕೆ ಪಡೆಯಲಾಗಿದೆ ಎಂದು ವಿವರಿಸಿದರು.

ನಮ್ಮ ಸರಕಾರ ಬಂದ ಮೇಲೆ ಕುಸುಮ್-ಸಿ ಜಾರಿ: ಕುಸುಮ್ - ಸಿ ಯೋಜನೆ ನಾಲ್ಕೈದು ವರ್ಷ ಹಿಂದೆ ಜಾರಿಯಾಗಿತ್ತಾದರೂ ರಾಜ್ಯದಲ್ಲಿ ಮಾತ್ರ ಅದನ್ನು ಶಿಥಲಗೃಹದಲ್ಲಿಟ್ಟಿದ್ದರು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಯೋಜನೆ ಜಾರಿಗೊಳಿಸಲು ನಿರ್ಧರಿಸಿ, ಟೆಂಡರ್ ಕರೆಯಲಾಯಿತು. ಒಂದು ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ 3.5 ಕೋಟಿ ರು.ನಿಂದ 4 ಕೋಟಿ ರು. ವರೆಗೆ ವೆಚ್ಚ ಆಗುತ್ತದೆ. ಈ ಪೈಕಿ 1 ಕೋಟಿ ರು ಕೇಂದ್ರ ಸರಕಾರದಿಂದ ಸಬ್ಸಿಡಿ ಬರುತ್ತದೆ. ಈ ಎಲ್ಲಾ ಅಂಶಗಳನ್ನು ಆಧರಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಪ್ರತಿ ಯುನಿಟ್ ವಿದ್ಯುತ್‌ಗೆ ಗರಿಷ್ಠ 3.17 ರು. ನಿಗದಿಪಡಿಸಿದೆ ಎಂದು ಮಾಹಿತಿ ನೀಡಿದರು.

ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ 4 ಎಕರೆ ಭೂಮಿ ಅಗತ್ಯವಿದೆ. ಸರಕಾರಿ ಭೂಮಿ ಲಭ್ಯವಿದ್ದರೆ ಅದನ್ನು ಉಚಿತವಾಗಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶಿಸಿದ್ದಾರೆ. ಆದರೆ, ಆ ಭೂಮಿಗೆ ಪ್ರತಿ ಎಕರೆಗೆ 25 ಸಾವಿರ ರು.ನ್ನು ಖಾಸಗಿ ವಿದ್ಯುತ್ ಉತ್ಪಾದಕರು ಪಾವತಿಸಬೇಕು. ಆ ಮೊತ್ತವನ್ನು ಜಿಲ್ಲಾಧಿಕಾರಿಗಳ ಬಳಿ ಇಟ್ಟು ಉಪ ಕೇಂದ್ರ ಇರುವ ಗ್ರಾಮದ ಸರಕಾರಿ ಶಾಲೆ, ಅಂಗನವಾಡಿಗಳ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಖಾಸಗಿ ಭೂಮಿಯಾಗಿದ್ದರೆ, ವಿದ್ಯುತ್ ಉತ್ಪಾದನೆ ಗುತ್ತಿಗೆ ಪಡೆದ ಡೆವಲಪರ್‌ಗಳು ಗುತ್ತಿಗೆಗೆ ತೆಗೆದುಕೊಂಡು, ಭೂಮಾಲೀಕರಿಗೆ ಎಕರೆಗೆ ಕನಿಷ್ಠ 25,000 ರು. ಪರಿಹಾರ ನೀಡುತ್ತಾರೆ ಎಂದು ಹೇಳಿದರು.

ಇಂಧನ ಇಲಾಖೆ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್. ಶಿವಶಂಕರ್ ,ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಬೆಸ್ಕಾಂ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಇದ್ದರು.

ಡಿ. ವೇಳೆಗೆ 2,400 ಮೆ.ವ್ಯಾ. ಸೌರ ಘಟಕಗಳ ಸ್ಥಾಪನೆ ಗುರಿ

ಕುಸುಮ್-ಸಿ ಮೊದಲ ಹಂತದಲ್ಲಿ ಕೃಷಿ ಫೀಡರ್‌ಗಳ ಸೋಲರೈಸೇಷನ್ ಮೂಲಕ 2,400 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆ ಗುರಿ ಹಾಕಿಕೊಂಡಿದ್ದು ಸುಮಾರು 6,19,000 (6 ಲಕ್ಷ 19 ಸಾವಿರ) ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಕೆಲಸ ಪ್ರಗತಿಯಲ್ಲಿದೆ. ಈಗಾಗಲೇ ಸುಮಾರು 200 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಘಟಕಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಇನ್ನು ಕೆಲವೇ ತಿಂಗಳುಗಳಲ್ಲಿ 93 ಸ್ಥಳಗಳಲ್ಲಿ 545 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಘಟಕಗಳು ಚಾಲನೆಗೊಳ್ಳಲಿವೆ. ಡಿಸೆಂಬರ್-2025ರ ವೇಳೆಗೆ 2,400 ಮೆ.ವ್ಯಾ. ಸಾಮರ್ಥ್ಯದ ಸೌರ ಘಟಕಗಳ ಸ್ಥಾಪನೆಯ ಗುರಿಯನ್ನು ಸಾಧಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಮಾಹಿತಿ ನೀಡಿದರು.

> ತಾಂತ್ರಿಕ ಸಾಧ್ಯತೆಯಿರುವ ವಿದ್ಯುತ್ ಉಪ ಕೇಂದ್ರಗಳ ಬಳಿ ಸೌರ ಘಟಕಗಳ ಸ್ಥಾಪನೆಗೆ ನಿರ್ಧರಿಸಲಾಗಿದೆ. ಖಾಸಗಿಯವರು ಸೌರ ಘಟಕಗಳನ್ನು ಸ್ಥಾಪಿಸಿ, ವಿದ್ಯುತ್ ಉತ್ಪಾದಿಸುತ್ತಾರೆ. ಸರಕಾರ ಅದನ್ನು ಖರೀದಿಸಿ ಆಯಾ ಫೀಡರ್‌ಗಳ ವ್ಯಾಪ್ತಿಯ ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುತ್ತದೆ. ಹಗಲು ವೇಳೆ ಸೌರ ವಿದ್ಯುತ್ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದರಿಂದ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ಸಮರ್ಪಕ ವಿದ್ಯುತ್ ಲಭ್ಯವಾಗಲಿದೆ.
>
> - ಕೆ.ಜೆ.ಜಾರ್ಜ್, ಇಂಧನ ಸಚಿವ

ಸಂತೋಷ್ ಲಾಡ್ ಫೌಂಡೇಶನ್ ಸಹಯೋಗದಲ್ಲಿ ಶ್ವಾಸ ಯೋಗ ಕೇಂದ್ರ, ಕೊಡಮಾಡುವ, 2025ನೇ ಸಾಲಿನ ಯೋಗ ರತ್ನ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಆಹ್ವಾನಿಸಿದರು.

ಸ್ಮಾರ್ಟ್ ಮೀಟರ್‌ಗಳಲ್ಲಿ ಪ್ರೀಪೇಯ್ಡ್ ಆರಂಭ

ಬೆಂಗಳೂರು: ರಾಜ್ಯದ ಎಲ್ಲ ವಿದ್ಯುತ್ ಮೀಟರ್‌ಗಳನ್ನು ಸ್ಮಾರ್ಟ್ ಮೀಟರ್ ಮಾಡಲಾಗುವುದು ಎಂದು ಇಂಧನ ಸಚಿವ ಕೆಜೆ ಜಾರ್ಜ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸದ್ಯ ಕೆಲ ಮೀಟರ್‌ಗಳನ್ನು ಮಾತ್ರ ಸ್ಮಾರ್ಟ್ ಮೀಟರ್ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲ ಮೀಟರ್‌ಗಳನ್ನು ಸ್ಮಾರ್ಟ್ ಮೀಟರ್ ಮಾಡಲಾಗುವುದು. ಸ್ಮಾರ್ಟ್ ಮೀಟರ್ ಅಳವಡಿಕೆಯಿಂದ ಹೆಚ್ಚು ಅನುಕೂಲವಾಗಲಿದೆ. ಮೊಬೈಲ್ ರೀಚಾರ್ಜ್ ರೀತಿ ಮೀಟರ್ ರೀಚಾರ್ಜ್ ಮಾಡಬಹುದು. ಪರಿಷ್ಕೃತ ವಿತರಣಾ ವಲಯ ಯೋಜನೆಗೆ ಕೇಂದ್ರ ಸರಕಾರ ಒಪ್ಪಿದೆ. ನಮ್ಮ ಸಂಪುಟವೂ ಒಪ್ಪಿದರೆ ಆರ್‌ಡಿಎಸ್‌ಎಸ್ ಸ್ಕೀಮ್ ಜಾರಿ ಮಾಡುತ್ತೇವೆ. ಹೊಸ ಸ್ಮಾರ್ಟ್ ಮೀಟರ್‌ಗೆ ಸಿಮ್ ರೀತಿ ಅಳವಡಿಸಲಾಗಿದೆ. ಒಂದು ಸ್ಮಾರ್ಟ್ ಮೀಟರ್‌ಗೆ ಐದು ಸಾವಿರ ರುಪಾಯಿ ಇದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕೇಂದ್ರ ಇಲಾಖೆ ಸೂಚನೆಯಂತೆ ಪಡೆಯಬೇಕಿದೆ. ಹಳೇ ಮೀಟರ್

ಹಿಂಪಡೆಯುವುದಿಲ್ಲ ಎಂದು ತಿಳಿಸಿದರು.

ಎಇ, ಜೆಇ ನೇಮಕಾತಿ ಹುದ್ದೆಗೆ ಮರು ಪರೀಕ್ಷೆ ನಡೆಸುವ ವಿಚಾರವಾಗಿ ಮಾತನಾಡಿದ ಅವರು, ಕೋರ್ಟ್ ಮರು ಪರೀಕ್ಷೆಗೆ ಸೂಚಿಸಿದೆ. ಕೆಇಎಯವರು ನೆಗೆಟಿವ್ ಮಾರ್ಕ್ಸ್ ಹಾಕಿದ್ದಾರೆ. ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ನೆಗೆಟಿವ್ ಮಾರ್ಕ್ಸ್ ಬಗ್ಗೆ ಮೊದಲೇ ಹೇಳಬೇಕಿತ್ತು ಎಂದು ವಿರೋಧ ವ್ಯಕ್ತವಾಗಿತ್ತು. ಮರುಪರೀಕ್ಷೆ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ಸ್ಮಾರ್ಟ್ ವಿದ್ಯುತ್ ಮೀಟರ್ ವ್ಯವಸ್ಥೆಯಲ್ಲಿ ಮೊಬೈಲ್ ಫೋನ್‌ಗಳ ಮಾದರಿಯಲ್ಲೆ ವಿದ್ಯುತ್ ಬಳಕೆಗೂ ಪ್ರಿಪೇಯ್ಡ್ ರೀಚಾರ್ಜ್ ಕಾರ್ಡ್ ಪರಿಚಯಿಸಲಾಗುತ್ತಿದೆ. ಗ್ರಾಹಕರು, ಪ್ರಿಪೇಯ್ಡ್ ಮೊಬೈಲ್ ಸಿಮ್ ಮಾದರಿಯಲ್ಲಿ ಮೊದಲೇ ಹಣ ಕಟ್ಟಿ ವಿದ್ಯುತ್ ಸಂಪರ್ಕ ಪಡೆಯಬೇಕಾಗುತ್ತದೆ. ಪ್ರಿಪೇಯ್ಡ್ ಸಿಮ್ ಕಾರ್ಡ್‌ಗಳ ರೀತಿಯಲ್ಲೆ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್‌ಗಳೂ ಕಾರ್ಯ ನಿರ್ವಹಿಸುತ್ತವೆ. ಪ್ರಿಪೇಯ್ಡ್ ಸಿಮ್ ಕಾಡ್‌ಗಳನ್ನು ರೀಚಾರ್ಜ್ ಮಾಡಿಸಿ ತಮಗೆ ಬೇಕಾದಷ್ಟು ಟಾಕ್ ಟೈಮ್ ಹಾಗೂ ಇಂಟರ್‌ನೆಟ್ ಡೇಟಾ ಪಡೆಯಬಹುದು. ಹಾಗೆಯೇ, ಗ್ರಾಹಕರು ಪ್ರಿಪೇಯ್ಡ್ ವಿದ್ಯುತ್ ಮೀಟರ್‌ಗಳನ್ನು ಆನ್‌ಲೈನ್ ಮೂಲಕ ಅಥವಾ ಸಮೀಪದ ವಿದ್ಯುತ್ ವಿತರಣಾ ಕಚೇರಿಗಳಲ್ಲಿ ರೀಚಾರ್ಜ್ ಮಾಡಿಸಿ ತಮಗೆ ಬೇಕಾದಷ್ಟು ಯುನಿಟ್‌ಗಳನ್ನು ಪಡೆಯಬಹುದಾಗಿದೆ ಎಂದಿದ್ದಾರೆ.

ನಾಳೆ ಲಂಡನ್‌ನಲ್ಲಿ ನಡೆಯಲಿರುವ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಆಶ್ಡೆನ್ಸ್ ಪ್ರಶಸ್ತಿ; ಸೆಲ್ಕೊ ಅಂತಿಮ ಸ್ಪರ್ಧಿಯಾಗಿ ಆಯ್ಕೆ

ಬೆಂಗಳೂರು: ಆಶ್ಡೆನ್ಸ್ ಅತ್ಯುತ್ತಮ ಸಾಧನೆ ಪ್ರಶಸ್ತಿಗೆ ಸೆಲ್ಕೊ ಸೋಲಾರ್ ಲೈಟ್ ಪ್ರೈ.ಲಿ ಸಂಸ್ಥೆ ಅಂತಿಮ 5 ಸ್ಪರ್ಧಿಗಳ ಪಟ್ಟಿಗೆ ಆಯ್ಕೆಯಾಗಿದೆ. ಭಾರತೀಯ ಸಾಮಾಜಿಕ ಉದ್ಯಮವಾದ ಸೆಲ್ಕೊ ಸೋಲಾರ್ ಪ್ರೈ.ಲಿ ಗ್ರೀನ್ ಆಸ್ಕರ್ ಎಂದು ಕರೆಯಲಾಗುವ 25 ನೇ ಆಶ್ಡೆನ್ಸ್ ಪ್ರಶಸ್ತಿಗೆ ಅಂತಿಮ ಸ್ಪರ್ಧಿಯಾಗಿ ಆಯ್ಕೆಯಾಗಿದೆ. ಶುದ್ಧ, ಕೈಗೆಟುಕುವ ಇಂಧನಕ್ಕೆ ಪ್ರವೇಶವನ್ನು ಗಮನಾರ್ಹವಾಗಿ ಹೆಚ್ಚಿಸಿದ, ನೈಸರ್ಗಿಕ ಪರಿಸರ ವ್ಯವಸ್ಥೆಗಳ ಮೇಲ್ವಿಚಾರಕರಾಗಿ ಸ್ಥಳೀಯ ಮತ್ತು ಸ್ಥಳೀಯ ಸಮುದಾಯಗಳನ್ನು ಸಬಲೀಕರಣಗೊಳಿಸಿದ ಮತ್ತು ಎಸ್‌ಎಂಇಗಳು ಮತ್ತು ತಳಮಟ್ಟದ ಪಾಲುದಾರರಿಗೆ ಹಣಕಾಸು ಹೆಚ್ಚು ಪ್ರವೇಶಿಸುವಂತೆ ಮಾಡಿದ ಸಂಸ್ಥೆಗಳನ್ನು ಗೌರವಿಸುವ ಸಲುವಾಗಿ ಆಶ್ಡೆನ್ಸ್ ಅಂತಾರಾಷ್ಟ್ರೀಯ ಅತ್ಯುತ್ತಮ ಸಾಧನೆ ಪ್ರಶಸ್ತಿ ನೀಡಲಾಗುತ್ತದೆ.

ಪ್ರಶಸ್ತಿ ಪ್ರದಾನ ಸಮಾರಂಭ ಜೂನ್ 11 ರಂದು ಲಂಡನ್‌ನ ರಾಯಲ್ ಜಿಯಾಗ್ರಫಿಕಲ್ ಸೊಸೈಟಿಯಲ್ಲಿ ನಡೆಯಲಿದೆ. ಉದ್ಯಮಿಗಳು, ಹೂಡಿಕೆದಾರರು, ಶಿಕ್ಷಣ ತಜ್ಞರು, ನಾಗರಿಕ ಸಮಾಜದ ಮುಖಂಡರು, ಪತ್ರಕರ್ತರು ಮತ್ತು ಪ್ರಚಾರಕರನ್ನು ಒಳಗೊಂಡ ಸ್ವತಂತ್ರ ನ್ಯಾಯಾಧೀಶರ ಸಮಿತಿ ವಿಜೇತರನ್ನು ಆಯ್ಕೆ ಮಾಡುತ್ತದೆ. ಈ ಪ್ರಶಸ್ತಿಯನ್ನು ಸೆಲ್ಕೊ 2005 ಮತ್ತು 2007 ರಲ್ಲಿ ಪಡೆದಿತ್ತು. ಈ ಬಾರಿ ಗೆದ್ದರೆ ಇದು ಮೂರನೆ ಬಾರಿಗೆ ಪ್ರಶಸ್ತಿ ಪಡೆದಂತಾಗುತ್ತದೆ.

ಸೆಲ್ಕೊದ ಅತ್ಯುತ್ತಮ ಸಾಧನೆ

1995 ರಲ್ಲಿ ಡಾ.ಹರೀಶ್ ಹಂಡೆ ಮತ್ತು ನೆವಿಲ್ಲೆ ವಿಲಿಯಮ್ಸ್ ಸ್ಥಾಪಿಸಿದ ಸೆಲ್ಕೊ, ಕರ್ನಾಟಕದ ಮನೆಗಳಿಗೆ ಕೈಗೆಟುಕುವ ಸೌರ ಮನೆ ಬೆಳಕನ್ನು ತರುವ ಮೂಲಕ ಪ್ರಾರಂಭಿಸಿತು. ಮೂರು ದಶಕಗಳ ನಂತರ, ಸಂಸ್ಥೆಯು ಏಳು ಭಾರತೀಯ ರಾಜ್ಯಗಳಲ್ಲಿ ಎರಡು ಮಿಲಿಯನ್‌ಗಿಂತ ಹೆಚ್ಚು ಜನರಿಗೆ ಮೂಲಭೂತ ಇಂಧನ ಪ್ರವೇಶ ನೀಡಿದೆ. ಸೆಲ್ಕೊದ ಸಮಗ್ರ ಪರಿಸರ ವ್ಯವಸ್ಥೆ ವಿಧಾನವು ಸೌರ ತಂತ್ರಜ್ಞಾನಗಳನ್ನು ನವೀನ ಹಣಕಾಸು ಮತ್ತು ನೀತಿ ಸಹಯೋಗದೊಂದಿಗೆ ಸಂಯೋಜಿಸುತ್ತದೆ. ಇದು ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆಯಲ್ಲಿ ಮಹಿಳೆಯರು ನಡೆಸುವ ಸೂಕ್ಷ್ಮ ಉದ್ಯಮಗಳಿಗಾಗಿ 24,000 ಕ್ಕೂ ಹೆಚ್ಚು ವಿಕೇಂದ್ರೀಕೃತ ಸೌರ ವ್ಯವಸ್ಥೆಗಳನ್ನು ಸ್ಥಾಪಿಸಿದೆ. ಅರ್ಧ ಮಿಲಿಯನ್‌ಗಿಂತ ಹೆಚ್ಚು ಗ್ರಾಮೀಣ ವಿದ್ಯಾರ್ಥಿಗಳಿಗೆ ವಿದ್ಯುತ್ ಚಾಲಿತ ಡಿಜಿಟಲ್ ತರಗತಿ ಕೊಠಡಿಗಳನ್ನು ನೀಡಿದೆ. ಮತ್ತು ಆರು ಮಿಲಿಯನ್‌ಗಿಂತ ಹೆಚ್ಚು ರೋಗಿಗಳಿಗೆ ಕೊನೆಯ ಹಂತದ ಆರೋಗ್ಯ ಸೇವೆಯನ್ನು ಬಲಪಡಿಸಿದೆ.

600 ಕೈದಿಗಳಿಗೆ ಸ್ಥಳಾವಕಾಶ ಕಲ್ಪಿಸಲು ದೇವನಹಳ್ಳಿಯಲ್ಲಿ ಹೊಸ ಜೈಲು ಕಟ್ಟಡ

ಜೈಲು ನಿರ್ಮಾಣಕ್ಕೆ ಮರ ಕಡಿಯಲು ಪ್ರಸ್ತಾವ

ಬೆಂಗಳೂರು: ದೇವನಹಳ್ಳಿಯಲ್ಲಿ ಹೊಸ ವಸತಿ ರಹಿತ ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮವು 626 ಮರಗಳನ್ನು ಕಡಿಯಲು ರಾಜ್ಯ ಅರಣ್ಯ ಇಲಾಖೆಯಿಂದ ಅನುಮತಿಯನ್ನು ಕೋರಿದೆ.

600 ಕೈದಿಗಳಿಗೆ ಸ್ಥಳಾವಕಾಶ ಕಲ್ಪಿಸಲು ವಿನ್ಯಾಸಗೊಳಿಸಲಾದ ಪ್ರಸ್ತಾವಿತ ಕೇಂದ್ರ ಜೈಲು ಸಂಕೀರ್ಣದ ಭಾಗವಾಗಿದೆ. ರೈಲ್ವೆ ಸಚಿವಾಲಯದ ಅಡಿಯಲ್ಲಿ ಬರುವ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರವು 368 ಮರಗಳನ್ನು ಕಡಿಯಲು ಪ್ರಸ್ತಾಪಿಸಿರುವ ಮತ್ತೊಂದು ವಿವಾದಾತ್ಮಕ ಯೋಜನೆಗೆ ಸಾರ್ವಜನಿಕ ವಿರೋಧ ಹೆಚ್ಚುತ್ತಿರುವ ಹಿನ್ನೆಲೆ ಈ ವಿನಂತಿ ಬಂದಿದೆ, ಇದು ನಾಗರಿಕರಿಂದ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಏಪ್ರಿಲ್ 2025ರಲ್ಲಿ, ಬಿಬಿಎಂಪಿ ಜೈಲು ಯೋಜನೆಯ ಕುರಿತು ಸಾರ್ವಜನಿಕ ಪ್ರತಿಕ್ರಿಯೆ ಆಹ್ವಾನಿಸಿತು. ಈಗ, ಕರ್ನಾಟಕ ಮರ ಸಂರಕ್ಷಣಾ ಕಾಯಿದೆ , 1976 ರ ಪ್ರಕಾರ, ಅರಣ್ಯ ಇಲಾಖೆಯು ಮೇ 31, 2025 ರಂದು ಸಾರ್ವಜನಿಕ ಸೂಚನೆಯನ್ನು ಹೊರಡಿಸಿದ್ದು, ಪ್ರಸ್ತಾವಿತ ಮರ ಕಡಿಯುವಿಕೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ನಾಗರಿಕರಿಗೆ ಹತ್ತು ದಿನಗಳ ಕಾಲಾವಕಾಶ ನೀಡಿದೆ. ಮರಗಳನ್ನು ಸ್ಥಳಾಂತರಿಸುವ ಆಯ್ಕೆ ಬಗ್ಗೆ ನಾವು ಜೈಲು ಅಧಿಕಾರಿಗಳನ್ನು ಕೇಳಿದ್ದೇವೆ ಎಂದು ಹಿರಿಯ ಅರಣ್ಯ

ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಯಲಹಂಕದ ಮಾದಪನಹಳ್ಳಿಯಲ್ಲಿ 153 ಎಕರೆ ವಿಸ್ತೀರ್ಣದ ಹೊಸ ಮರಗಳ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಅಲ್ಲಿ ಈಗಾಗಲೇ ಇರುವ ನೀಲಗಿರಿ ತೋಟವನ್ನು ತೆರವುಗೊಳಿಸಲಾಗುತ್ತಿದೆ. ನಮಗೆ ಅಲ್ಲಿ ಸಾಕಷ್ಟು ಸ್ಥಳವಿದೆ. ಮರ ಕಡಿಯುವ ಬದಲು ಅಲ್ಲಿರುವ ಜಾಗದಲ್ಲಿ ಜೈಲು ನಿರ್ಮಾಣ ಮಾಡುವ ಆದ್ಯತೆ ಪರಿಗಣಿಸುವಂತೆ ತಿಳಿಸಿದ್ದೇವೆ. ಮರ ಕತ್ತರಿಸುವುದು ಸುಲಭ, ಆದರೆ ಸಂರಕ್ಷಣೆ ಈಗ ಕಡ್ಡಾಯವಾಗಿದೆ ಎಂದಿದ್ದಾರೆ.

ಪ್ರಸ್ತುತ ಕೈದಿಗಳು ಮತ್ತು ಸಿಬ್ಬಂದಿಗಳು ಬಾಳೆ, ಮಾವು ಮತ್ತು ಕಬ್ಬು ಮತ್ತು ಇತರ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಭೂಮಿ ಬಳಸುತ್ತಿದ್ದಾರೆ. ಈ ಆವರಣದಲ್ಲಿ ಜಾನುವಾರು ಮತ್ತು ಕೋಳಿ ಸಾಕಣೆಯೂ ಇದೆ. ಪ್ರಸ್ತುತ ಸುಮಾರು 15 ಕೈದಿಗಳು ಇಲ್ಲಿ ವಾಸಿಸುತ್ತಿದ್ದಾರೆ. ವಿವರವಾದ ಭೂ ವರದಿಯನ್ನು ಸಿದ್ಧಪಡಿಸಲಾಗಿದೆ, ಆದರೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗಿಲ್ಲ ಎಂದು ಹೇಳಿದರು.

ಅರಣ್ಯ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ದೇವನಹಳ್ಳಿ ತೆರೆದ ಜೈಲು 100 ಎಕರೆಗಳಿಗಿಂತ ಹೆಚ್ಚು ವಿಸ್ತಾರವಾಗಲಿದೆ. ಕಾರಾಗೃಹ ಮತ್ತು ತಿದ್ದುಪಡಿ ಸೇವೆಗಳ ಇಲಾಖೆಯು ಸುಮಾರು ನಾಲ್ಕು ತಿಂಗಳ ಹಿಂದೆ ಮರ ಕಡಿಯಲು ಅನುಮತಿಗಾಗಿ ತನ್ನ ಮನವಿ ಸಲ್ಲಿಸಿತ್ತು. ಸಾರ್ವಜನಿಕ ಸೂಚನೆ ನೀಡುವ ಮೊದಲು ಅರಣ್ಯ ಅಧಿಕಾರಿಗಳ ತಂಡವು ಎರಡು ವಾರಗಳ ಹಿಂದೆ ಸ್ಥಳವನ್ನು ಪರಿಶೀಲಿಸಿತು. ಆವರಣದಲ್ಲಿರುವ ಹೆಚ್ಚಿನ ಮರಗಳು ಮೆಲಿಯಾ ದುಬಿಯಾ , ಇವು ಕ್ಯಾನ್ಸರ್ ಚಿಕಿತ್ಸೆ ಸೇರಿದಂತೆ ಔಷಧೀಯ ಗುಣಗಳಿಗೆ ಹೆಚ್ಚು ಉಪಯುಕ್ತವಾಗಿದೆ. 2014 ರಲ್ಲಿ ನೆಡಲಾದ ಈ ಮರಗಳು ಈಗ ಸುಮಾರು 20 ಸೆಂ.ಮೀ ಸುತ್ತಳತೆಯನ್ನು ತಲುಪಿವೆ. ಸ್ಥಳದಲ್ಲಿ ತೇಗದ ತೋಟವೂ ಇದೆ, ಇದಕ್ಕಾಗಿ ಕಡಿಯಲು ಅನುಮತಿ ನಿರಾಕರಿಸಲಾಗಿದೆ ಎಂದು ಅರಣ್ಯ ಸಂರಕ್ಷಣಾಧಿಕಾರಿ ಹೇಳಿದರು.

ಬಿಜೆಪಿ, ಜೆಡಿಎಸ್‌ಗೆ ಯೂಟರ್ನ್ ಹೊಸದಲ್ಲ

ಬೆಂಗಳೂರು: ಆರ್‌ಸಿಬಿ ಗೆದ್ದ ನಂತರ ಬಿಜೆಪಿ ಹಾಗೂ ದಳದ ನಾಯಕರು ತಂಡದ ಮೆರವಣಿಗೆಗೆ ಅವಕಾಶ ನೀಡಬೇಕು ಆಗ್ರಹಿಸಿದ್ದವರು ಇಂದು ವರಸೆ ಬದಲಾಯಿಸಿದ್ದಾರೆ. ಬಿಜೆಪಿ ಯೂ ಟರ್ನ್ ಮಾಡುವುದು ಹೊಸದೇನಲ್ಲ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಹೇಳಿದರು.

ಸದಾಶಿವನಗರದ ನಿವಾಸದಲ್ಲಿ ಮಾತನಾಡಿದ ಅವರು, ಎರಡೂ ಪಕ್ಷಗಳು ಮೆರವಣಿಗೆಗೆ ಒತ್ತಾಯ ಮಾಡಿದ್ದರು. ಕ್ರೀಡಾ ಅಭಿಮಾನಿಗಳಿಗೆ ಅವಮಾನ ಮಾಡುತ್ತಿದ್ದೀರಿ. ನಿಮಗೆ ಮೆರವಣಿಗೆ ನಡೆಸಲು ಆಗುವುದಿಲ್ಲವೇ ಎಂದು ಕೇಳಿದ್ದರು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಬಿಜೆಪಿಯವರು ಇದೇ ಪ್ರವೃತ್ತಿ ಹೊಂದಿದ್ದಾರೆ. ಜನ ಅವರಿಗೆ ಬಹುಮತ ನೀಡಿಲ್ಲ. ಬಿಜೆಪಿ ಆಡಳಿತದಲ್ಲಿ ಇರುವ ರಾಜ್ಯಗಳಲ್ಲಿ ಆಗಿರುವ ಘೋರ ದುರಂತಗಳ ಪಟ್ಟಿ ನೀಡುತ್ತೇವೆ. ಬಿಜೆಪಿ ನಾಯುಕರಿಗೆ ನೈತಿಕತೆ ಇದ್ದರೆ ಅವರು ಮೊದಲು ರಾಜೀನಾಮೆ ನೀಡಲಿ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಪ್ರತ್ಯೇಕ ಅಪಘಾತ: ಏಳು ಮಂದಿ ಸಾವು

ಚಿಕ್ಕಬಳ್ಳಾಪುರ/ಕೋಲಾರ: ಮೂರು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ 7 ಮಂದಿ ಮೃತಪಟ್ಟಿದ್ದಾರೆ. ಹಲವರಿಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಖಾಸಗಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸಾವನ್ನಪ್ಪಿರುವ ಘಟನೆ ಚಿಂತಾಮಣಿ ತಾಲೂಕಿನ ಕಾಗತಿ ಗ್ರಾಮದಲ್ಲಿ ನಡೆದಿದೆ. ಘಟನೆಯಲ್ಲಿ ಮೃತಪಟ್ಟ ವ್ಯಕ್ತಿಗಳನ್ನು ಶಿಡ್ಲಘಟ್ಟ ತಾಲೂಕಿನ ಚನ್ನಹಳ್ಳಿ ಗ್ರಾಮದ ಚಂದ್ರಪ್ಪ (52), ಪತ್ನಿ ಬೇಬಿಮ್ಮ (45) ಎಂದು ಗುರುತಿಸಲಾಗಿದೆ.

ಡಿವೈ ಡರ್‌ಗೆ ಕಾರು ಡಿಕ್ಕಿ ಮೂವರು ಸಾವು: ಕಾರು ಅಪಘಾತದಲ್ಲಿ ರಜೆ ಮೇಲೆ ಊರಿಗೆ ಬಂದಿದ್ದ ಯೋಧ ಸೇರಿ ಮೂವರು ಮೃತಪಟ್ಟ ಘಟನೆ ಕೋಲಾರ ಜಿಲ್ಲೆಯ ಬೇಮತಂಗಲದ ಬಳಿ ನಡೆದಿದೆ. ಅತಿ ವೇಗವಾಗಿ ಚಲಿಸಿದ ಕಾರು ನಿಯಂತ್ರಣ ತಪ್ಪಿ ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ವೇನ ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಕೊನೆಯುಸಿರೆಳೆದರೆ, ಚಿಕಿತ್ಸೆ ಫಲಿಸದೇ ಒಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಯೋಧ ಆಕಾಶ್, ಜಾನ್ ಜಾಕಬ್, ನಾಗರಾಜ್ ಮೃತರು. ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಮತ್ತೊಂದು ಭೀಕರ ಅಪಘಾತ ನಡೆದಿದ್ದು, ಡಿವೈಡರ್‌ಗೆ ಕಾರು ಡಿಕ್ಕಿಯಗಿ ಕಾರ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಎಡಗಿನಬೆಲೆ ಟೋಲ್ ಗೇಟ್ ಬಳಿ ನಡೆದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ನಜ್ಜು ಗುಜ್ಜಾಗಿದೆ. ರಾಜಸ್ತಾನ ಮೂಲದ ಅಶೋಕ್ (28), ಮೋಹನ್ ಲಾಲ್ (32) ಮೃತರು. ಸ್ಥಳಕ್ಕೆ ಮಾಲೂರು ಪೊಲೀಸರ ಭೇಟಿ ಪರಿಶೀಲನೆ ನಡೆಸಿದರು.

ದೆಹಲಿಗೆ ಇಂದು ಸಿಎಂ, ಡಿಸಿಎಂ

← ಮೊದಲಪುಟದಿಂದ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ದೆಹಲಿಗೆ ತೆರಳಿ, ದೆಹಲಿ ಮುನಿಸಿಪಾಲಿಟಿಯ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದರು. ಬಳಿಕ ಸಂಜೆಯೇ ಬೆಂಗಳೂರಿಗೆ ವಾಪಸಾದರು. ಆದರೆ ಮುಖ್ಯಮಂತ್ರಿಗಳು ದೆಹಲಿಗೆ ತೆರಳುತ್ತಿರುವುದರಿಂದ ಡಿಕೆಶಿ ಅವರೂ ಮಂಗಳವಾರ ಬೆಳಗ್ಗೆ ದೆಹಲಿಗೆ ಪುನಃ ತೆರಳಲಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಸಿದ್ದರಾಮಯ್ಯ ಅವರು ದೆಹಲಿಗೆ ತೆರಳುತ್ತಿರುವುದು ಮೇಲ್ನೋಟಕ್ಕೆ ವಿಧಾನ ಪರಿಷತ್ ನಾಮನಿರ್ದೇಶನ ಸ್ಥಾನಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ಜತೆ ಚರ್ಚಿಸಲು ಎನ್ನುವುದಿದ್ದರೂ, ಭೇಟಿಯ ವೇಳೆ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲಿದ್ದಾರೆ. ಬೆಂಗಳೂರಿನ ಕಾಲ್ತುಳಿತ ಪ್ರಕರಣ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ಗೆ ತೀವ್ರ ಮುಜುಗರಕ್ಕೆ ಕಾರಣವಾಗಿರುವುದರಿಂದ ಘಟನೆಗೆ ಕಾರಣ ಹಾಗೂ ಯಾರೆಲ್ಲರ ವಿರುದ್ಧ ಕ್ರಮವಹಿಸಲಾಗಿದೆ ಎನ್ನುವ ಬಗ್ಗೆ ಸಿದ್ದರಾಮಯ್ಯ ಅವರು ಮಾಹಿತಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಹೈಕಮಾಂಡ್:

ಕಾಲ್ತುಳಿತ ಸಂಭವಿಸಿದ ದಿನವೇ ರಾಹುಲ್ ಗಾಂಧಿ ಅವರು 'ಜನರನ್ನು ರಕ್ಷಿಸುವುದು ಸರಕಾರಗಳ ಕೆಲಸ'ವೆಂದು ಹೇಳಿದ್ದರು. ರಾಗಾ ಟ್ವಿಟ್ ಬೆನ್ನಲ್ಲೇ, ರಾಜ್ಯ ಸರಕಾರ ತೀವ್ರ ಇಕ್ಕಟ್ಟಿಗೆ ಸಿಲುಕಿತ್ತು. ಇದೀಗ ಪಕ್ಷದ ಹೈಕಮಾಂಡ್‌ಗೆ ಇಡೀ ಪ್ರಕರಣದ ಬಗ್ಗೆ ವಿವರಣೆ ನೀಡಲು ಸಿಎಂ ಹಾಗೂ ಡಿಸಿಎಂ ಇಬ್ಬರೂ ದೆಹಲಿಗೆ ತೆರಳಲಿದ್ದಾರೆ. ಇತ್ತೀಚೆಗಷ್ಟೇ ಎರಡು ವರ್ಷ ಪೂರೈಸಿರುವ ರಾಜ್ಯ ಸರಕಾರ ಗ್ಯಾರಂಟಿಯ ಹೆಸರಲ್ಲಿ ದೇಶದ ಇತರ ರಾಜ್ಯಗಳಿಗೆ ಮಾದರಿಯಾಗಿದೆ. ಆದರೀಗ ಈ ಅಗತ್ಯವಿಲ್ಲದ ವಿಷಯದಿಂದ ತೀವ್ರ ಸಮಸ್ಯೆಯಾಗಿದೆ ಎನ್ನುವುದು ಪಕ್ಷದ ಹೈಕಮಾಂಡ್ ಅಭಿಪ್ರಾಯವಾಗಿದೆ.

ಸಂಪುಟ ಚರ್ಚೆ ಸದ್ಯಕ್ಕಿಲ್ಲ

ಹೈಕಮಾಂಡ್ ಭೇಟಿಯ ವೇಳೆ ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚೆಯಾಗುವ ಸಾಧ್ಯತೆ ಯಿದೆ ಎಂದು ಅನೇಕರು ಹೇಳುತ್ತಿದ್ದಾರೆ. ಆದರೆ ಖಚಿತ ಮೂಲಗಳ ಪ್ರಕಾರ, ಮಂಗಳವಾರದ ಭೇಟಿಯಲ್ಲಿ ಸಂಪುಟಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆಗಳು ಬರುವುದಿಲ್ಲ. ಈ ಭೇಟಿ ಕೇವಲ ಕಾಲ್ತುಳಿತ ಹಾಗೂ ವಿಧಾನ ಪರಿಷತ್ ನಾಮನಿರ್ದೇಶನಕ್ಕೆ ಸಂಬಂಧಿಸಿದಂತಾಗಿದೆ ಎನ್ನಲಾಗಿದೆ.

ಕಾಲ್ತುಳಿತಕ್ಕೆ ಬಸವಳಿದ ಬಿಜೆಪಿ

← ಮೊದಲಪುಟದಿಂದ

ಘಟನೆ ಸಂಬಂಧ ಹೋರಾಟದಿಂದ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದಾಗಿತ್ತಾದರೂ ರಾಜಕೀಯ ಕಾರ್ಯದರ್ಶಿಯ ಸ್ಥಾನ ಕಿತ್ತುಕೊಳ್ಳಲೂ ಸಾಧ್ಯವಾಗಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮಾಡಿದ ಜಂಟಿ ಪತ್ರಿಕಾಗೋಷ್ಠಿಯ ನಂತರವೇ 'ಬೇಬಿ ಎಲಿಫೆಂಟ್' ಅನ್ನು ಸಿದ್ದರಾಮಯ್ಯ ಅವರು ಎತ್ತಂಗಡಿ ಮಾಡಿದರು. ಹೀಗಿದ್ದರೂ ಪ್ರಕರಣ ಸಂಬಂಧ ಅಧಿಕಾರಿಗಳು ನೀಡಿದ ಗೌಪ್ಯ ವರದಿಗಳು ಇಲ್ಲವೇ ಸರಕಾರದ ಕಾರ್ಯದರ್ಶಿ ನೀಡಿದ ಉತ್ತರ ಹಾಗೂ ಆದೇಶಗಳ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ ಎನ್ನುವುದು ಕಾರ್ಯಕರ್ತರ ನೋವಾಗಿದೆ

ಇನ್ನುಳಿದಂತೆ ಪ್ರತಿಪಕ್ಷದ ನಾಯಕರಾದ ಆರ್.ಅಶೋಕ ಅವರು ಕಾಲ್ತುಳಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇದಕ್ಕೆ ಕಾರಣಗಳು, ಒಳಸುಳಿಗಳು ಹಲವಾರಿದೆ ಎನ್ನುವುದು ಕೂಡ ಈಗ ಗುಟ್ಟಾಗಿ ಉಳಿದಿಲ್ಲ ಎಂದು ಅವರ ಪಕ್ಷದ ನಿಷ್ಠಾವಂತ ಕಾರ್ಯಕರ್ತರೇ ಖದ್ದಾಗಿ ಇಲ್ಲವೇ ಸಾಮಾಜಿಕ ಜಾಲತಾಣದ ಮೂಲಕ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಪಕ್ಷದ ನಾಯಕರನ್ನು ಸಂಘಟಿಸದೇ ಸರಕಾರದ ವಿರುದ್ಧ ಅಷ್ಟೇನೂ ಗಂಭೀರವಾಗಿ ಟೀಕೆಗಳನ್ನು ಅವರು ಮಾಡಲೇ ಇಲ್ಲ. ಅಲ್ಲದೆ ಕೇವಲ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಬಂದ ವರದಿಗಳನ್ನಾಧರಿಸಿಯೇ ಅದಕ್ಕೆ ಹೆಚ್ಚುವರಿಯಾಗಿ ಒಂದೆರಡು ಹೇಳಿಕೆಗಳನ್ನು ಕೊಟ್ಟರೇ ವಿನಾ ಸರಕಾರವನ್ನು ಮುಜುಗರಕ್ಕೀಡು ಮಾಡುವ ಯಾವುದೇ ದಾಖಲೆ ಇಲ್ಲವೇ ಹೋರಾಟ ಮಾಡಲೇ ಇಲ್ಲ.

ಎಲ್ಲಿ ಕಾಂಗ್ರೆಸ್‌ನ ತಮ್ಮ ಆಪ್ತ ನಾಯಕರಿಗೆ ನೋವಾಗುತ್ತದೆಯೋ ಎಂದು ಗೌರವ ಸೂಚಕವಾಗಿ ಸಿಎಂ ಹಾಗೂ ಡಿಸಿಎಂ ಅವರನ್ನು ಮಾನ್ಯ ಎಂದರೇ ಹೊರತು ಪ್ರತಿಪಕ್ಷ ನಾಯಕರಾಗಿ ಸರಕಾರದ ಗೌಪ್ಯತೆಯ ದಾಖಲೆಗಳನ್ನು ಹೊರತಂದು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸದಿರುವುದು ಕೂಡ ಅವರ ಪಕ್ಷದಲ್ಲೇ ಚರ್ಚಿತ ವಿಷಯವಾಗಿದೆ.

ಇಷ್ಟೆಲ್ಲ ವಿಚಾರವಿದ್ದರೂ ಕೈಯಲ್ಲಿದ್ದ ಕಾಲ್ತುಳಿತದ ಪ್ರಕರಣಕ್ಕೆ ಸರಿಯಾದ ಹೋರಾಟವನ್ನೂ ಮಾಡದೆ ಸರಕಾರದ ಕ್ರಮ ಬಲವಾಗಿ ಖಂಡಿಸದೆ ರಾಜ್ಯಪಾಲರಿಗೆ ದೂರು ನೀಡಿ ಸರಕಾರಕ್ಕೆ ಇಕ್ಕಟ್ಟಿಗೆ ಸಿಲುಕಿಸಬಹುದಾಗಿದ್ದ ಬಹುದೊಡ್ಡ ಅವಕಾಶವನ್ನು ಕಳೆದುಕೊಂಡು ಬಿಜೆಪಿ ನಾಯಕರು ಬಸವಳಿದು ಹೋಗಿದ್ದಾರೆ ಎನ್ನುವುದು ಕಾರ್ಯಕರ್ತರ ಅಭಿಲಾಷೆಯಂತೆ ನಿಜವೂ ಕೂಡ ಎನ್ನುವುದು ಸಂಘ ಪರಿವಾರದ ಕೆಂಗಣ್ಣಿಗೆ ಗುರಿಯಾಗಿದೆ.

ಮೇಲ್ಮನೆ ನಾಮಕರಣ ಗವರ್ನರ್ ಕೊಕ್ಕೆ

← ಮೊದಲಪುಟದಿಂದ

ಇದೇ ವೇಳೆ ಸರಕಾರ ಕಳುಹಿಸಿರುವ ಪಟ್ಟಿಗೆ ಹೈಕಮಾಂಡ್ ಕೂಡ ಸ್ಪಷ್ಟನೆ ಕೇಳಲಿದ್ದು, ಈಗ ಕಳುಹಿಸಿರುವ ಪಟ್ಟಿಯಲ್ಲಿನ ಹೆಸರು ಬದಲಾವಣೆಯಾಗಲಿರುವ ಸೂಚನೆ ದೊರತಿದೆ.

ವಿಧಾನ ಪರಿಷತ್‌ಗೆ ನಾಲ್ವರ ಹೆಸರು ಅಂತಿಮಗೊಳಿಸಿದ್ದ ಸರಕಾರ ಮೇಲ್ಮನೆಗೆ ನಾಮಕರಣ ಮಾಡಿ ಕಾರ್ಯಾಂಗದ ಮುಖ್ಯಸ್ಥರಾದ ರಾಜ್ಯಪಾಲರ ಸಹಿಗೆ ಕಳೆದ ವಾರ ಕಳುಹಿಸಿದೆ. ಸರಕಾರ ನಾಮಕರಣ ಮಾಡುವ ವೇಳೆ ಕಲೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಕ್ರೀಡೆ, ಪತ್ರಿಕೋದ್ಯಮ, ವಿಜ್ಞಾನ, ಸಿನಿಮಾ ಸೇರಿದಂತೆ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ನಾಮಕರಣ ಮಾಡುವ ಸಂಪ್ರದಾಯ ಈ ಹಿಂದಿನಿಂದಲೂ ಇದೆ. ಆದರೆ ಇತ್ತೀಚಿನ ದಶಕದಲ್ಲಿ ಇದು ಮಹತ್ವ ಕಳೆದಕೊಂಡಿದ್ದರೂ, ಈಗ ನಾಮಕರಣ ಮಾಡಿರುವವರು ಸಮಾಜ ಸೇವಕರಾಗಿರಬೇಕೆ ಹೊರತು ರಾಜಕೀಯ ಹಿನ್ನೆಲೆಯಿಂದ ಅಥವಾ ಯಾವುದೋ ಒಂದು ಸಿದ್ಧಾಂತ ಪ್ರತಿಪಾದಿಸು ವವರನ್ನೇ ಇಲ್ಲವೇ ಒಂದು ಪಕ್ಷದ ಮುಖವಾಣಿಯಂತೆ ಕೆಲಸ ಮಾಡುವವರನ್ನು ಮೇಲ್ಮನೆಗೆ ನಾಮಕರಣ ಮಾಡುವಂತಿಲ್ಲ ಎಂಬ ಸತ್ಸಂಪ್ರದಾಯವಿದೆ.

ವಿರೋಧವೇಕೆ?:

ಸರಕಾರ ಶಿಫಾರಸು ಮಾಡಿರುವವರು ರಾಜಕೀಯ ಹಿನ್ನೆಲೆ ಉಳ್ಳವರು ಹಾಗೂ ಕಾಂಗ್ರೆಸ್ ಪಕ್ಷದ ಜತೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗುರುತಿಸಿಕೊಂಡಿರುವುದರಿಂದಲೇ ರಾಜ್ಯಪಾಲರು ಅಪಸ್ವರ ತೆಗೆದಿದ್ದಾರೆ ಎನ್ನಲಾಗಿದೆ. ರಮೇಶ್ ಬಾಬು, ಆರತಿ ಕೃಷ್ಣ, ಡಿ.ಜಿ.ಸಾಗರ್ ಹಾಗೂ ಮಾಜಿ ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ಹೆಸರನ್ನು ಸರಕಾರ ಈಗಾಗಲೇ ಕಳುಹಿಸಿದೆ. ಇದರಲ್ಲಿ ರಮೇಶ್ ಬಾಬು ಈ ಹಿಂದೆ ಒಂದು ಬಾರಿ ಪರಿಷತ್ ಚುನಾವಣೆಯಲ್ಲಿ ಗೆದ್ದಿದ್ದರು.

ನಂತರ ಬದಲಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡ ನಂತರ ಅವರನ್ನು ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಲಾ ಗಿತ್ತು. ಆದರೆ ಈ ಹುದ್ದೆ ಅವರು ಸ್ವೀಕಾರ ಮಾಡಿರಲಿಲ್ಲ. ಕೆಪಿಸಿಸಿ ಸಾಮಾಜಿಕ ವಿಭಾಗದ ಹುದ್ದೆಯಲ್ಲಿರುವ ರಮೇಶ್ ಬಾಬು ಕಾಂಗ್ರೆಸ್ ಪಕ್ಷದ ಜತೆ ಗುರುತಿಸಿಕೊಂಡವರು. ಇದೀಗ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ರಮೇಶ್ ಬಾಬು ಅವರ ವಿರುದ್ಧ ರಾಜ್ಯಪಾ ಲರಿಗೆ ದೂರು ಕೂಡ ದಾಖಲಾಗಿರುವುದನ್ನು ಗಮನಿಸಿದ್ದಾರೆ ಎನ್ನಲಾಗಿದೆ. ಇದೇ ರೀತಿ ಆರತಿ ಕೃಷ್ಣ, ಡಿ.ಜಿ.ಸಾಗರ್ ಕೂಡ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರು.

ಇನ್ನು ಮಾಜಿ ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಈ ಹಿಂದೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಕರ್ತವ್ಯ ನಿರ್ವ ಹಿಸಿದ್ದರು. ಹೀಗೆ ಎಲ್ಲರೂ ಒಂದಿಲ್ಲೊಂದು ರೀತಿ ಕಾಂಗ್ರೆಸ್ ಪಕ್ಷ ಹಾಗೂ ಮುಖ್ಯ ಮಂತ್ರಿಗಳ ಆಪ್ತ ವಲಯದಲ್ಲಿ ಗುರುತಿ ಸಿಕೊಂಡಿರುವವರೇ ಆಗಿರುವುದರಿಂದ ಇವ ರನ್ನು ಮೇಲ್ಮನೆಗೆ ನಾಮಕರಣ ಮಾಡಬೇಕೆ ಎಂಬ ಮೂಲ ಪ್ರಶ್ನೆಯನ್ನು ರಾಜ್ಯಪಾಲರು ಎತ್ತಿದ್ದಾರೆ.

ಹೊರಟ್ಟಿ ಪತ್ರ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವ ರಿಗೆ ಇತ್ತೀಚೆಗೆ ಪತ್ರ ಬರೆದು ಚಿಂತಕರ ಛಾವಡಿ ಎಂದು ಕರೆಯುವ ಕರ್ನಾಟಕ ವಿಧಾನ ಪರಿಷತ್‌ಗೆ ರಾಜಕಾರಣಿಗಳನ್ನು ನಾಮಕರಣ ಮಾಡುವ ಸಂಪ್ರದಾಯ ಕೈಬಿಡಬೇಕೆಂದು ಮನವಿ ಮಾಡಿದ್ದರು. ವಿಧಾನ ಪರಿಷತ್‌ನಲ್ಲಿ ಕೇವಲ ರಾಜಕಾರಣಿಗಳಿಗೆ, ಚುನಾವಣೆಯಲ್ಲಿ ಸೋತವರಿಗೆ, ಪಕ್ಷದ ಹಿಂಬಾಲಕರಿಗೆ ಸ್ಥಾನ ಕಲ್ಪಿಸಿದರೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಅನ್ಯಾಯವಾಗುತ್ತದೆ ಎಂದು ಅಸಮಾಧಾನ ಹೊರಹಾಕಿದ್ದರು.

ಈ ಹಿಂದೆಯೂ ಮೂರು ಬಾರಿ ಕೊಕ್ಕೆ

1. ಸಾಮಾನ್ಯವಾಗಿ ಮೇಲ್ಮನೆಗೆ ಸರಕಾರ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ನಾಮಕರಣ ಮಾಡುತ್ತದೆ. ಯಾವುದೇ ಪಕ್ಷದ ಜತೆ ಗುರುತಿಸಿಕೊಳ್ಳದೆ ಕೇವಲ ಸಮಾಜಸೇವೆ ಆಧಾರದ ಮೇಲೆ ನಾಮಕರಣ ಮಾಡಲಾಗುತ್ತದೆ. ಈ ಹಿಂದೆ 2008ರಲ್ಲಿ ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ್ ಅವರನ್ನು ಮೇಲ್ಮನೆಗೆ ನಾಮಕರಣ ಮಾಡಲಾಗಿತ್ತು. ಜೆಡಿಎಸ್‌ನಿಂದ ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡಿದ್ದರು. ಹೀಗಾಗಿ ಸರಕಾರ ಮಾಡಿದ್ದ ಶಿಫಾರಸಿಗೆ ಅಂದಿನ ರಾಜ್ಯಪಾಲ ತ್ರಿಲೋಕನಾಥ್ ಚರ್ತುವೇದಿ ಸಹಿ ಹಾಕದೇ ಸರಕಾರಕ್ಕೆ ವಾಪಸ್ ಕಳುಹಿಸಿದ್ದರು. ನಂತರ ಇವರ ಬದಲಿಗೆ ಸರಕಾರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಅವರನ್ನು ನಾಮಕರಣ ಮಾಡಿತ್ತು.

2. ರಾಜ್ಯದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ವೇಳೆ ಆಪರೇಷನ್ ಕಮಲದ ಮೂಲಕ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಉಪಚುನಾವಣೆಯಲ್ಲಿ ಪರಾಭವಗೊಂಡಿದ್ದ ಹಾಲಿ ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಮೇಲ್ಮನೆಗೆ ನಾಮಕರಣ ಮಾಡುವ ಸರಕಾರದ ಪ್ರಸ್ತಾವನೆಗೆ ಅಂದಿನ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ತಗಾದೆ ತೆಗೆದಿದ್ದರು. ಕೊನೆಗೆ ಶಿಕ್ಷಣ ಕ್ಷೇತ್ರದಲ್ಲಿ ಸೋಮಣ್ಣ ಅವರು ಸಲ್ಲಿಸಿರುವ ಸೇವೆ ಪರಿಗಣಿಸುವಂತೆ ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಟ್ಟ ನಂತರ ವಿವಾದ ಸುಖಾಂತ್ಯ ಕಂಡಿತ್ತು.

3. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅವಧಿಯಲ್ಲಿ ಮೇಲ್ಮನೆಗೆ ಎಚ್.ವಿಶ್ವನಾಥ್ ಮತ್ತು ಸಿ.ಪಿ.ಯೋಗೇಶ್ವರ್ ಅವರನ್ನು ನಾಮಕರಣ ಮಾಡಲು ಕಳುಹಿಸಿಕೊಟ್ಟಿದ್ದ ಶಿಫಾರಸಿಗೆ ಅಂದಿನ ರಾಜ್ಯಪಾಲರಾಗಿದ್ದ ವಜುಬಾಯಿ ವಾಲಾ ವಿರೋಧ ವ್ಯಕ್ತಪಡಿಸಿ ತಡೆ ಹಿಡಿದಿದ್ದರು. ಕೊನೆಗೆ ಸಾಹಿತ್ಯ ಕ್ಷೇತ್ರದಲ್ಲಿ ವಿಶ್ವನಾಥ್ ಮತ್ತು ಸಿನಿಮಾ ಕ್ಷೇತ್ರದಿಂದ ಯೋಗೀಶ್ವರ್ ಅವರನ್ನು ನಾಮಕರಣ ಮಾಡಲಾಗಿತ್ತು.

ಬಾ ನಲ್ಲ, ಯಮಲೋಕಕ್ಕೆ

← ಮೊದಲಪುಟದಿಂದ

ವಿವಾಹೇತರ ಸಂಬಂಧ:

ಸೋನಮ್ 21 ವರ್ಷದ ರಾಜ್ ಕುಶ್ವಾಹ ಅವರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದರು ಮತ್ತು ಅವರ ಪತಿಯನ್ನು ಕೊಲ್ಲಲು ಪ್ರಿಯತಮನೊಂದಿಗೆ ಸಂಚು ರೂಪಿಸಿದ್ದರು. ಹೀಗಾಗಿ ಇಬ್ಬರನ್ನೂ ಬಂಧಿಸಲಾಗಿದೆ. ಸೋನಮ್, ಇಂದೋರ್‌ನಲ್ಲಿ ತನ್ನ ಮಾಜಿ ಉದ್ಯೋಗಿಯಾಗಿದ್ದ ರಾಜ್ ಮತ್ತು ಇತರ ಮೂವರಾದ ವಿಶಾಲ್ ಸಿಂಗ್ ಚೌಹಾಣ್ (22), ಆಕಾಶ್ ರಜಪೂತ್ (19) ಮತ್ತು ಆನಂದ್ ಸಿಂಗ್ ಕುರ್ಮಿ (23) ಸಹಾಯದಿಂದ ಕೊಲೆಗೆ ಸಂಚು ರೂಪಿಸಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದು, ಈ ನಾಲ್ವರನ್ನು ಬಂಧಿಸಲಾಗಿದೆ.



ವಾಪಸ್ ಬರುವ ಟಿಕೆಟ್ ಬುಕ್ ಮಾಡಿರಲಿಲ್ಲ:

ರಾಜ ರಘುವಂಶಿ ಅವರ ತಾಯಿ ಉಮಾ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದು, ಸೋನಮ್ ನನ್ನ ಮಗನನ್ನು ಪ್ರೀತಿಸಿದ್ದರೆ ಆತನನ್ನು ಸಾಯಲು ಬಿಡುತ್ತದ್ದಳೇ ಎಂದು ಪ್ರಶ್ನಿಸಿದ್ದಾರೆ. ಆಕೆ ಹೇಗೆ ಒಂದು ಗಾಯವಿಲ್ಲದೇ ಬದುಕುಳಿದಿದ್ದಾಳೆ? ಸೋನಮ್ಮೇ ನನ್ನ ಮಗನನ್ನು ಪುಸಲಾಯಿಸಿ ಮೇಘಾಲಯಕ್ಕೆ ಹನಿಮೂನ್‌ಗೆ ಕರೆದುಕೊಂಡು ಹೋಗಿದ್ದಳು. ವಾಪಸ್ ಬರುವ ಟಿಕೆಟ್‌ಗಳನ್ನೂ ಬುಕ್ ಮಾಡಿರಲಿಲ್ಲ. ನನ್ನ ಮಗನನ್ನು ಕೊಂದಿರುವವರಿಗೆ ಅತ್ಯಂತ ಕಠಿಣ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದ್ದಾರೆ.

ಆರೋಪ ತಿರಸ್ಕಾರ:

ಈ ನಡುವೆ ಸೋನಮ್ ಅವರ ತಂದೆ, ತನ್ನ ಮಗಳ ವಿರುದ್ಧ ಕೊಲೆ ಆರೋಪವನ್ನು ತಿರಸ್ಕರಿಸಿದ್ದಾರೆ ಮತ್ತು ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ. ಮೇಘಾಲಯ ಪೊಲೀಸರು ತಮ್ಮ ಮಗಳ ವಿರುದ್ಧ ಸುಳ್ಳು ಆರೋಪ ಹೊರಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಕಾಲ್ತುಳಿತ: 41 ಗಾಯಾಳುಗಳಿಗೆ ಸಮನ್ಸ್

ವಿಕಾಸ್ ಕುಮಾರ್ ಸಿಎಟಿ ಮೊರೆ

ಬೆಂಗಳೂರು ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ಸೇರಿದಂತೆ ಐವರು ಅಧಿಕಾರಿಗಳನ್ನು ಅಮಾನತು ಮಾಡಿರುವ ಆದೇಶವನ್ನು ಪ್ರಶ್ನಿಸಿ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರು ಸಿಎಟಿ ಮೊರೆ ಹೋಗಿದ್ದಾರೆ. ಇನ್ನೊಂದೆಡೆ ಕಾಲ್ತುಳಿತ ಪ್ರಕರಣ ಸಂಬಂಧ ನಗರ ಪೊಲೀಸ್ ಆಯುಕ್ತ ದಯಾನಂದ್ ಸೇರಿದಂತೆ ಮೂವರು ಐಪಿಎಸ್ ಅಧಿಕಾರಿಗಳನ್ನು ಅಮಾನತು ಮಾಡಿರುವ ಆದೇಶ ರದ್ದುಗೊಳಿಸಬೇಕೆಂದು ರಾಜ್ಯ ಸರಕಾರಕ್ಕೆ ಇಂಡಿಯನ್ ಪೊಲೀಸ್ ಫೌಂಡೇಶನ್ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿಗಳು ಪತ್ರ ಬರೆದಿದ್ದಾರೆ.

← ಮೊದಲಪುಟದಿಂದ

ಗಾಯಾಳುಗಳಿಗೆ ಜಿಲ್ಲಾಧಿಕಾರಿಗಳ ನ್ಯಾಯಾ ಲಯದ ಸಂಭಾಗಣದಲ್ಲಿ ಹೇಳಿಕೆ ದಾಖಲಿಸಲಾ ಗುವುದಾಗಿ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ಗಾಯಾಳುಗಳ ಹೇಳಿಕೆ ದಾಖಲಿಸಿದ ನಂತರ ಮೃತರ ಕುಟುಂಬಸ್ಥರ ಹಾಗೂ 13ನೇ ತಾರೀಕು ಸಾರ್ವಜನಿಕರು ಅಂದರೆ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆಯಲು ಜಿಲ್ಲಾಧಿಕಾರಿಗಳು ಮುಂದಾಗಿದ್ದಾರೆಂದು ತಿಳಿದು ಬಂದಿದೆ. ಈಗಾಲೇ ದುರಂತ ನಡೆದ ದಿನ ಸ್ಥಳದಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಸಿಬ್ಬಂದಿ ಮಾಹಿತಿ ನೀಡುವಂತೆ ಪೊಲೀಸ್ ಕಮಿಷನರ್‌ಗೆ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದು, ಕೊನೆಯದಾಗಿ ಪೊಲೀಸರ ಹೇಳಿಕೆ ದಾಖಲಿಸಿ ಸರಕಾರ ನೀಡಿರುವ ಅವಧಿ ಒಳಗಾಗಿ ಘಟನೆಯ ವರದಿಯನ್ನು ಸರಕಾರಕ್ಕೆ ಸಲ್ಲಿಸಲು ಜಿಲ್ಲಾಧಿಕಾರಿಗಳು ಮುಂದಾಗಿದ್ದಾರೆ.

ಆರ್‌ಸಿಬಿಯಿಂದ ಹೈಗೆ ಅರ್ಜಿ

ಕಾಲ್ತುಳಿತ ಪ್ರಕರಣ ಸಂಬಂಧ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್ ಮತ್ತು ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ ಪ್ರೈವೇಟ್ ಲಿಮಿಟೆಡ್‌ನಿಂದ ಹೈಕೋರ್ಟ್‌ಗೆ ಪ್ರತ್ಯೇಕ ಅರ್ಜಿಗಳು ಸಲ್ಲಿಕೆಯಾಗಿವೆ. ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ವೆಂಕಟ ವರ್ಧನ ತಿಮ್ಮಯ್ಯ ಮತ್ತು ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಮುಖ್ಯಸ್ಥ ರಾಜೇಶ್ ಮೆನನ್ ಅವರಿಂದ ಹೈಕೋರ್ಟ್‌ಗೆ ಅರ್ಜಿಗಳು ಸಲ್ಲಿಕೆಯಾಗಿವೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಳ್ಳೇಗಾಲ
ದೂರವಾಣಿ: 08224-295221
ಸಂಖ್ಯೆ:ಕೃಉಮಾಸ/ಕೊ/114/2025-26 ದಿನಾಂಕ :04-06-2025

-:: ಪ್ರಕಟಣೆ ::-

ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ "ಎ" ಮತ್ತು "ಬಿ" ಬ್ಲಾಕ್‌ನಲ್ಲಿ ಖಾಲಿ ಇರುವ 08 ಸಂಖ್ಯೆ ವಿವಿಧ ಅಳತೆಯ ಕೆಳಕಂಡ ನಿವೇಶನಗಳನ್ನು ಲೀಸ್-ಕಂ-ಸೇಲ್ ಆಧಾರದ ಮೇಲೆ ಲೈಸನ್ಸ್ ಪಡೆದ ಅರ್ಹ ಪೇಟೆಕಾರ್ಯಕರ್ತರಿಗೆ ಹಂಚಿಕೆ ಮಾಡಲು ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿವೇಶನ ಹಾಗೂ ಮೀಸಲಾತಿ ವಿವರ:- ಸಾಮಾನ್ಯ ವರ್ಗಕ್ಕೆ "ಎ"-ಬ್ಲಾಕ್- 12ನೇ ಹಾಗೂ "ಬಿ"-ಬ್ಲಾಕ್‌ನ 21, 22, 23, 25 ರ ಸಂಖ್ಯೆ ನಿವೇಶನಗಳು ಒಟ್ಟು 05 ಸಂಖ್ಯೆ. **ಪರಿಶಿಷ್ಟ ಜಾತಿಗೆ** "ಎ"-ಬ್ಲಾಕ್- 15ನೇ ಸಂಖ್ಯೆ ನಿವೇಶನ ಒಟ್ಟು 01 ಸಂಖ್ಯೆ. **ಪರಿಶಿಷ್ಟ ಪಂಗಡಕ್ಕೆ** "ಎ"-ಬ್ಲಾಕ್ 13ನೇ ಸಂಖ್ಯೆ ನಿವೇಶನ ಒಟ್ಟು 01 ಸಂಖ್ಯೆ. **ರೈತ ಉತ್ಪಾದಕ ಸಂಸ್ಥೆಗಳಿಗೆ** "ಬಿ"-ಬ್ಲಾಕ್ 26ನೇ ಸಂಖ್ಯೆ ನಿವೇಶನ ಒಟ್ಟು 01 ಸಂಖ್ಯೆ **ಷರತ್ತು ಮತ್ತು ನಿಬಂಧನೆಗಳು:**-1) ಅರ್ಹ ಪೇಟೆಕಾರ್ಯಕರ್ತರು ರೂ.500/-ಗಳನ್ನು ಪಾವತಿಸಿ ನೊಂದಣಿ ಮಾಡಿಸಿಕೊಳ್ಳಲು ಕೊನೆಯ ದಿನಾಂಕ:20-06-2025 ರ ಮಧ್ಯಾಹ್ನ 1:00 ಗಂಟೆ ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಅವಶ್ಯ ದಾಖಲೆಗಳು ಮತ್ತು ನಿವೇಶನಕ್ಕೆ ನಿಗಧಿಪಡಿಸಿರುವ ಮೌಲ್ಯದ ಶೇ.25 ರಷ್ಟು ಮೊಬಲಗಿನ Secretary, A.P.M.C. Kollegala ರವರ ಹೆಸರಿನಲ್ಲಿ ಪಡೆದ ಡಿ.ಡಿ.ಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: 26-06-2025 ರ ಸಂಜೆ 4:30 ಗಂಟೆ ಮಾತ್ರ. 2) ನಿವೇಶನದ ವಿಸ್ತೀರ್ಣ, ನಿವೇಶನಗಳ ಸಂಖ್ಯೆ, ನಕ್ಷೆ, ಪ್ರತೀ ಚದರ ಅಡಿ ಮೌಲ್ಯ ಮೀಸಲಾತಿ, ನಿವೇಶ ಹಂಚಿಕೆ ಮಾನದಂಡ, ಹಣಪಾವತಿಗೆ ಇರುವ ಕಾಲಾವಕಾಶ, ಅರ್ಹತೆ, ವಿಸ್ಕೃತ ಷರತ್ತು-ವ-ನಿಬಂಧನೆಗಳು ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಳ್ಳೇಗಾಲ
ಸಹಿ/- ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಳ್ಳೇಗಾಲ
ಸಂ:ವಾಸಾಸಂಇ:ಚಾನಗರ:129:2025-26

ASSISTANT CONSERVATOR OF FORESTS
Bengaluru North Sub Division,
BWSSB Road, Malleshwaram 18th Cross,
Bengaluru- 560 055.
Date: 02nd June 2025

REQUEST FOR PROPOSAL (RFP) FOR SELECTION OF CONSULTANT FOR MASTER PLANNING, ARCHITECTURAL SERVICES AND PROJECT CONSULTANCY SERVICES FOR DEVELOPMENT OF MADAPPANAHALLI PARK AT BENGALURU-CALL-2

Karnataka Forest Department (KFD), invites bids from Architects and Consultants having requisite experience in providing Master Planning, Architectural Services and Project Consultancy Services through the Government of Karnataka's Karnataka Public Procurement Portal (https://kppp.karnataka.gov.in)

KFD intends to select a Consultant for Master Planning, Architectural Services and Project Consultancy Services for Development of Modern Tree Park at Madappanahalil, Bengaluru in accordance with the scope of services as envisaged in the Terms of Reference of this RFP document The assignment is divided in 3 Stages Preparation of Detailed Project Report, Tender Process Management for Selection of Contractors and Project Management Consultancy. The expected duration of the entire assignment is 15 months.

Interested Consultants may submit their Request for Proposals (RFP) for providing the services for KFD and requisite EMD electronically through the Karnataka Public Procurement Portal platform of Gok at https://kppp.karnataka.gov.in/. The following shall be the calendar of events for tendering

Sl. No.	Event Description	Date
1	Date of Pre-bid Meeting	09 June 2025,12:00 hrs
2	Last date for receiving queries/clarifications	09 June 2025, 17:00 hrs
3	Last date for submitting proposals	11 June 2025, 17:00 hrs
4	Opening of Technical Proposal	12 June 2025, 17:00 hrs
5	Presentation on Technical Proposal	Will be intimated
6	Opening of Financial Proposal	18 June 2025, 12:00 hrs

Postponement of Calendar of events (if any), subsequent notification, changes, amendments and selection/ rejection of proposal shall be intimated only through Karnataka Public Procurement Portal and will not be published in newspapers KFD reserves the right to accept or reject any or all the tenders received without assigning any reasons thereof.

More details on the Services are provided in the attached Terms of Reference (TOR).

Sd/- Tender Inviting Authority,
Assistant Conservator of Forests,
Bengaluru North Sub Division, Bengaluru
DIPR/CP/1132/AKAR/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 09-06-2025

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:-876 ದಿನಾಂಕ:- 21-01-2025

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್-2024-25ನೇ ಸಾಲಿನ ಪಾಲಿಕೆಯ (Contigency Fund) ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಮರು ಕರೆ ಕಾಮಗಾರಿ
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
01) ಇಂಡೆಂಟ್ ನಂ- 33999 ರೂ. 198.00ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯುಬಹುದಾಗಿದೆ. ಕಚೇರಿಯು ದೂರವಾಣಿ ಸಂಖ್ಯೆ:0836:2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : kppp.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 10-06-2025** ಪಡೆಯಬಹುದಾಗಿದೆ.

ಕ್ರ. ಸಂ 01 ಟೆಂಡರ್ ಕಾಮಗಾರಿಯ ಪೂರ್ವಭಾವಿ ಸಭೆ ದಿನಾಂಕ: 16-06-2025
ಕ್ರ. ಸಂ 01 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 19-06-2025 ರಂದು ಸಾಯಂಕಾಲ 4.00 ಗಂಟೆಯವರೆಗೆ
ಕ್ರ. ಸಂ 01 ಟೆಂಡರ್ ತೆರೆಯುವ ದಿನಾಂಕ: 20-06-2025 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು.
ಕ್ರ. ಸಂ 01 ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23-06-2025 ರಂದು ತೆರೆಯಲಾಗುವುದು.
ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/257/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಮುಇಂವಿ/ಪ್ರ(ಕಾ)ವ/ಕಾನಿಇಂ(ಸಿ)-2/ಸಕಾನಿಇಂ(ಸಿ)-2/2025-26/2285-88 ದಿನಾಂಕ: 09.06.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

1. **ಕಾಮಗಾರಿಯ ಹೆಸರು:** ತಾಯಲೂರಿನ 66/11 ಕೆವಿ ಉಪಕೇಂದ್ರದಲ್ಲಿ ಆರ್‌ಸಿಸಿ ಅಪ್ರೋಚ್ ರಸ್ತೆ ಮತ್ತು ಇತರ ಸಂಬಂಧಿತ ಕೆಲಸಗಳ ಕಾಮಗಾರಿ. **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 20,00,000.00 **ಮೀಸಲಾದ ವರ್ಗ:** ಪರಿಶಿಷ್ಟ ಜಾತಿ
2. **ಕಾಮಗಾರಿಯ ಹೆಸರು:** ಮಂಚೇನಹಳ್ಳಿಯ 66/11 ಕೆವಿ ಉಪಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಕಟ್ಟಡದ ವಿಸ್ತರಣೆ ಕಾಮಗಾರಿ. **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 18,00,000.00 **ಮೀಸಲಾದ ವರ್ಗ:** ಸಾಮಾನ್ಯ ವರ್ಗ
3. **ಕಾಮಗಾರಿಯ ಹೆಸರು:** ದೊಡ್ಡಬಳ್ಳಾಪುರದ 66/11 ಕೆವಿ ಉಪಕೇಂದ್ರ ಡಿ ಕ್ರಾಸ್‌ನಲ್ಲಿ ನೀರು ಸರಬರಾಜು ವ್ಯವಸ್ಥೆ ಮತ್ತು ಇತರ ಸಂಬಂಧಿತ ಕೆಲಸಗಳ ಕಾಮಗಾರಿ. **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 9,00,000.00 **ಮೀಸಲಾದ ವರ್ಗ:** ಪರಿಶಿಷ್ಟ ಜಾತಿ
4. **ಕಾಮಗಾರಿಯ ಹೆಸರು:** ಮಾಲೂರು 66/11 ಕೆವಿ ಉಪ-ಕೇಂದ್ರದ ಆವರಣದಲ್ಲಿ ಕಾಂಪೌಂಡ್ ಗೋಡೆಯ ನಿರ್ಮಾಣ ಕಾಮಗಾರಿ-(ಹಂತ-3). **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 20,00,000.00 **ಮೀಸಲಾದ ವರ್ಗ:** ಸಾಮಾನ್ಯ ವರ್ಗ
5. **ಕಾಮಗಾರಿಯ ಹೆಸರು:** ಬಂಗಾರಪೇಟೆಯ 66/11 ಕೆವಿ ಉಪಕೇಂದ್ರದಲ್ಲಿ ನಿಯಂತ್ರಣ ಕೇಬಲ್ ಡಕ್ಟ್ ನಿರ್ಮಾಣ. **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 12,26,000.00 **ಮೀಸಲಾದ ವರ್ಗ:** ಸಾಮಾನ್ಯ ವರ್ಗ
6. **ಕಾಮಗಾರಿಯ ಹೆಸರು:** 66/11ಕೆವಿ ಉಪಕೇಂದ್ರ ಜುಲುಪಾಳ್ಯದಲ್ಲಿ ಕ್ಯಾಟಲ್ ಟ್ರಾಪ್ ಮತ್ತು ಇತರ ಸಂಬಂಧಿತ ಕೆಲಸಗಳನ್ನು ಒದಗಿಸುವುದು. **ಅಂದಾಜು ವೆಚ್ಚ (ಜಿ ಎಸ್ ಟಿ ಸಹಿತ) ರೂ ಗಳಲ್ಲಿ:** 4,00,000.00 **ಮೀಸಲಾದ ವರ್ಗ:** ಸಾಮಾನ್ಯ ವರ್ಗ

ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 13.06.2025 ಅಥವಾ ತದನಂತರ ಲಾಗಿನ್ ಆಗುವ ಮೂಲಕ ಪಡೆಯಬಹುದು.** ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್), ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ, ಆನಂದ್ ರಾವ್ ವೃತ್ತ, ಬೆಂಗಳೂರು-560 009, ದೂರವಾಣಿ: 080-22356320

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ
ಟೆಂಡರ್ ಪ್ರಕಟಣೆ ಸಂಖ್ಯೆ : 02/2025-261/565-69 ದಿನಾಂಕ: 02-06-2025

ಅಲ್ಪಾವಧಿ ಟೆಂಡರ್ ಪ್ರಕಟಣೆ..

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆಯಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ:20926) ಇ-ಸಂಗ್ರಹಣಾ ವೇದಿಕೆ ಮೂಲಕ 2ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 251.29 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17-06-2025 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.inನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ ಮಾರ್ಪಾಡುಗಳನ್ನು ಇ-ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್.
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/14/2025-26 ದಿನಾಂಕ: 09-06-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಹಾಗೂ ಭೂ ಪರಿವರ್ತನೆಯಾಗಿರುವ (ಸ.ನಂ. 70/2 & 71/2 ರ) ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ನಿಢಘಟ್ಟ ಗ್ರಾಮದ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ಮಂಜುನಾಥ ಬಿನ್ ಲೇಟ್ ರಾಮಯ್ಯ; ಶ್ರೀಮತಿ ಎಂ. ಶೈಲಜ ಬಿನ್ ಮಂಜುನಾಥ; ಶ್ರೀ ಎಂ. ಸಂತೋಷ್ ಬಿನ್ ಮಂಜುನಾಥ ಮತ್ತು ಶ್ರೀಮತಿ ಪ್ರೇಮಾಕುಮಾರಿ ಕೋಂ ಮಂಜುನಾಥ	70/4	00-17 1/2
2	ಶ್ರೀಮತಿ ಉಷಾ ಶ್ರೀನಿವಾಸನ್ ಬಿನ್ ಟಿ.ಕೆ. ಕೃಷ್ಣಸ್ವಾಮಿ	70/2	02-09 1/2
3		71/2	00-20

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/1139/ಅಡ್ವಟೋರ್/2025-26

ಸಮಾಚಾರ ಸಣ್ಣದಲ್ಲ

ಬೋನಿಗೆ ಬಿದ್ದ ಚಿರತೆ

ಮೈಸೂರು: ಕಳೆದ ಕೆಲವು ದಿನಗಳಿಂದ ಆಗಾಗ ಪ್ರತ್ಯಕ್ಷಗೊಂಡು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದ್ದ ಚಿರತೆ ಬೋನಿಗೆ ಬಿದ್ದಿರುವ ಘಟನೆ ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ತೊರವಳ್ಳಿ ಗ್ರಾಮದಲ್ಲಿ ನಡೆದಿದೆ. ಜಾನುವಾರಗಳ ಮೇಲೆ ದಾಳಿ ಮಾಡಿ, ಸ್ಥಳೀಯರಲ್ಲಿ ಆಂತಕ ಹುಟ್ಟಿಸಿತ್ತು. ಕಳೆದ 4 ತಿಂಗಳುಗಳಿಂದ ಬೋನಿಗೆ ಬೀಳದೆ ಉಪಟಗಳ ಕೊಟ್ಟಿತ್ತು. ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಹೆಣ್ಣು ಚಿರತೆ ಸೆರೆಯಾಗಿದ್ದು, ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ.

ನೀರಲ್ಲಿ ಮುಳುಗಿ ಇಬ್ಬರ ಸಾವು

ಚಾಮರಾಜನಗರ: ಈಜಲು ತೆರಳಿದ್ದ ಇಬ್ಬರು ಯುವಕರು ಕೃಷಿ ಹೊಂಡದಲ್ಲಿ ಸಂಗ್ರಹಣೆ ಮಾಡಿದ್ದ ನೀರಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಹನೂರು

ತಾಲೂಕಿನ ಪಿ.ಜಿ. ಪಾಳ್ಯ ಗ್ರಾಮ ಪಂಚಾಯತ್ ವ್ಯಾಪ್ತಿಯ ಆನೆಗುಂದಿ ಗ್ರಾಮದಲ್ಲಿ ನಡೆದಿದೆ. ಹನೂರು ತಾಲೂಕಿನ ಪಿ. ಜಿ. ಪಾಳ್ಯ ಗ್ರಾಮದ ಚಾಮರಾಜು (25) ಮತ್ತು ಆಕಾಶ್ (22) ಮೃತಪಟ್ಟ ಯುವಕರು. ಹನೂರು ತಾಲೂಕಿನ ಪಿ. ಜಿ ಪಾಳ್ಯ ಗ್ರಾಮದ ನಿವಾಸಿಗಳಾದ ಚಾಮರಾಜು ಚಾಲಕ ವೃತ್ತಿ ಮಾಡಿಕೊಂಡಿದ್ದರೆ, ಆಕಾಶ್ ಬೇಕರಿಯಲ್ಲಿ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಿದ್ದರು. ಭಾನುವಾರ ಸಂಬಂಧಿಕರ ಗೃಹಪ್ರವೇಶ ಇದ್ದ ಹಿನ್ನೆಲೆ ಪಿಜಿ ಪಾಳ್ಯ ಗ್ರಾಮಕ್ಕೆ ಆಗಮಿಸಿದ್ದರು. ಗೃಹಪ್ರವೇಶ ಮುಗಿಸಿ ದೊಡ್ಡಪ್ಪ ಕೆಂಪರಾಜು ಅವರ ಜಮೀನಿ ನಲ್ಲಿರುವ ಕೃಷಿ ಹೊಂಡದಲ್ಲಿ ಈಜಲು ಹೋಗಿ ಮೇಲೆ ಬರಲು ಸಾಧ್ಯವಾಗದೆ ಅಸುನೀಗಿದ್ದಾರೆ. ಹನೂರು ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶಾಸಕ ಲಕ್ಷ್ಮಣ ಸವದಿ ಕಾರು ಅಪಘಾತ

ಅಥಣಿ: ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಚಲಿಸುತ್ತಿದ್ದ ಕಾರಿಗೆ ಗೂಡ್ಸ್ ವಾಹನ

ಡಿಕ್ಕಿ ಹೊಡೆದ ಘಟನೆ ತಾಲೂಕಿನ ದರೂರ ಗ್ರಾಮದಲ್ಲಿ ನಡೆದಿದೆ. ಸೋಮವಾರ ಖಾಸಗಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ತೆರಳುವ ವೇಳೆ ದರೂರ ಗ್ರಾಮದ ಬಳಿ ಶಾಸಕ ಲಕ್ಷ್ಮಣ ಸವದಿ ಚಲಿಸುತ್ತಿದ್ದ ಕಾರಿಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಘಟನೆಯಿಂದ ಎಲ್ಲರೂ ಸುರಕ್ಷಿತರಾಗಿದ್ದಾರೆ. ಅಪಘಾತ ಮಾಡಿರುವ ಗೂಡ್ಸ್ ವಾಹನದ ಚಾಲಕ ಮದ್ಯಪಾನ ಮಾಡಿದ್ದ ಎಂದು ಹೇಳಲಾಗುತ್ತಿದೆ, ಸ್ಥಳಕ್ಕೆ ಅಥಣಿ ಪೊಲೀಸರು ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
10.06.2025
ಮಂಗಳವಾರದ ಅತಿಥಿ

ಶ್ರೀ ರಾಜ್ ಆಚಾರ್ಯ
ವಿಷಯ
ಹೆಚ್ ಎಸ್ ವಿ - ಕವನ ಅವಲೋಕನ
vishwavani.news

ಟ್ವೀಟೂ-ಖಾರಾ

ಆರ್. ಅಶೋಕ್, ಪ್ರತಿಪಕ್ಷ ನಾಯಕ

ಕಾಂಗ್ರೆಸ್ ಸರಕಾರದ ನಿರ್ಲಕ್ಷ್ಯದಿಂದ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ ಮೃತಪಟ್ಟ ದುರ್ದೈವಿ ತುಮಕೂರಿನ ನಾಗಸಂದ್ರ ಗ್ರಾಮದ ಯುವಕ ಮನೋಜ್ ಅವರ ಅಜ್ಜಿ ದೇವಿರಮ್ಮ ಅವರು ಮೊಮ್ಮಗನನ್ನು ಕಳೆದುಕೊಂಡ ನೋವಿನಲ್ಲೇ ಕೊನೆಯುಸಿರೆಳೆದಿದ್ದಾರೆ. ಕೊಲೆಗಡುಕ ಕಾಂಗ್ರೆಸ್ ಸರಕಾರ ಆ 11 ಕುಟುಂಬಗಳಿಗೆ ಎಂತಹ ಘಾಸಿ ಉಂಟುಮಾಡಿದೆ ಎನ್ನುವುದು ಹೃದಯಹೀನ ಕಾಂಗ್ರೆಸ್ ನಾಯಕರಿಗೆ ಅರ್ಥವಾಗುವುದಿಲ್ಲ.

ರಮೇಶ್

ನಿಮ್ಮಪಕ್ಷ ಸರಕಾರದ ಅಧಿಕಾರದಲ್ಲಿದ್ದಾಗ ಕೋವಿಡ್ ಸಮಯದಲ್ಲಿ ಚಾಮರಾಜನಗರ ಜಿಲ್ಲೆಯ 21 ಜನ ಸಾವಿಗೀಡಾದರೂ ಆಗಾ ನೀವು ಏನು ಮಾಡಿದ್ದೀರಿ.

ಕಾಲ್ತುಳಿತ ಪ್ರಕರಣದಿಂದ ಆಡಳಿತದಲ್ಲಿ ಕೊಂಚ ಮಂಕು | ಇನ್ನು ಮುಂದೆ ಕಠಿಣ ನೀತಿಯೊಂದಿಗೆ ಮೇಲೇಳುವ ಸರಕಾರ

ರಾಜ್ಯದಲ್ಲಿ ಇನ್ನು ಕ್ರೀಡಾ ಸಂಭ್ರಮಾಚರಣೆ ಸುಲಭವಲ್ಲ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ದೇಶದಲ್ಲೇ ಕಂಡುಕೇಳರಿಯದ ಕ್ರಿಕೆಟ್ ಸಂಭ್ರಮ ಕಾಲದ ಕಾಲ್ತುಳಿತ ದುರಂತದಿಂದ ಮಂಕಾಗಿ ಮಲಗಿರುವ ರಾಜ್ಯ ಸರಕಾರ ನಿಧಾನವಾಗಿ ಹೊಸ ಕಠಿಣ ಅಸ್ತ್ರಗಳೊಂದಿಗೆ ಎದ್ದೇಳಲು ಸಜ್ಜಾಗುತ್ತಿದೆ.

ಅಂದರೆ ಇದೇನೋ ಪ್ರತಿಪಕ್ಷದ ವಿರುದ್ಧದ ಅಸ್ತ್ರವಲ್ಲ. ಬದಲಾಗಿ ಇನ್ನುಮುಂದೆ ರಾಜ್ಯದಲ್ಲಿ ಯಾವುದೇ ಕ್ರೀಡಾ ಸಂಭ್ರಮಾಚರಣೆ ಮಾಡಬೇಕಾದರೆ ಅತ್ಯಂತ ಕಠಿಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕಾದ ಹೊಸ ನಿಯಮಗಳು. ಅಂದಹಾಗೆ ಸದ್ಯ ರಾಜ್ಯದಲ್ಲಿ ಜಾಲ್ತಿಯಲ್ಲಿರುವ 2009ರ ಸಂಭ್ರಮಾಚರಣೆಗಳ ನಿಯಮಗಳ ಪ್ರಕಾರ ಕ್ರಿಕೆಟ್ ಸೇರಿದಂತೆ ಯಾವುದೇ ಕ್ರೀಡೆಗೆ ಸಂಬಂಧಿಸಿದಂತೆ ಸಂಭ್ರಮಾಚರಣೆಗಳನ್ನು ಮಾಡಲು ಅನುಮತಿ ಕೇಳುವುದು ಮತ್ತು ನೀಡುವುದು ಅತ್ಯಂತ ಸುಲಭ ಹಾಗೂ ಅದರಲ್ಲಿ ಅವಘುಡಗಳಿಗೂ ದಾರಿಯಾಗುವ ಅವಕಾಶಗಳಿವೆ.

ಹೀಗಾಗಿಯೇ ಐಪಿಎಸ್ ಸಂಭ್ರಮಾಚರಣೆಯನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಆಯೋಜಿಸುವುದಕ್ಕೆ ಸಾಧ್ಯವಾಯಿತು. ಪರಿಣಾಮ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 11 ಮಂದಿ ಸಾವು ಮತ್ತು 45ಕ್ಕೂ ಹೆಚ್ಚು ಮಂದಿ ಗಾಯಗೊಳ್ಳುವುದಕ್ಕೂ ಕಾರಣ ವಾಯಿತು ಎಂದು ಹಿರಿಯ ಐಪಿಎಸ್ ಅಧಿಕಾರಿಗಳು ಹೇಳಿದ್ದಾರೆ.

ಇದರಿಂದ ಸರಕಾರದ ವರ್ಚಸ್ಸಿಗೆ ಧಕ್ಕೆಯಾಗವುದದಲ್ಲದೆ, ಅನೇಕ ಸಚಿವರು ತಲೆತಗ್ಗಿಸುವಂತಾಗಿ, ನಗರ ಪೊಲೀಸ್ ಆಯುಕ್ತರೂ ಸೇರಿದಂತೆ ಅನೇಕ ಐಪಿಎಸ್ ಅಧಿಕಾರಿಗಳು ಅಮಾನತುಗೊಳ್ಳಬೇಕಾಯಿತು. ಕೆಲವು ಐಎಎಸ್ ಅಧಿಕಾರಿಗಳು ಮತ್ತು ಐಪಿಎಸ್ ಅಧಿಕಾರಿಗಳ ಸ್ಥಾನ ಪಲ್ಲಟವೂ ಆಗಬೇಕಾಯಿತು. ಒಟ್ಟಾರೆ ಈ ದುರಂತದಿಂದ ಸರಕಾರದ ಆಡಳಿತ ಯಂತ್ರಕ್ಕೆ ಮಂಕು ಬಡಿದಂತಾಗಿದ್ದು, ಇಷ್ಟೊತ್ತಿಗೆಗಾಗಲೇ ಭಾರೀ ಚರ್ಚೆಗೆ ಗ್ರಾಸವಾಗಬೇಕಿದ್ದ ತಾಲೂಕು ಮತ್ತು ಜಿಲ್ಲಾಪಂಚಾಯಿತಿ ಚುನಾವಣೆ, ಒಳ ಮೀಸಲಾತಿ ಹಾಗೂ ಸರಕಾರದ ಇನ್ನಷ್ಟು ಸಾಧನಾ ಸಮಾವೇಶ ಪ್ರಸ್ತಾಪಗಳು ಕಡತಗಳಲ್ಲೇ ಉಳಿದಿವೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ಈ ಮಧ್ಯೆ, ದುರಂತದ ಬಗ್ಗೆ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಿಂದ ಪರಿಣಾಮಕಾರಿ ಹೋರಾಟಗಳು ಕಾಣದ ಹಿನ್ನೆಯಲ್ಲಿ ಸರಕಾರ ದುರಂತದಿಂದ ತ್ವರಿತವಾಗಿ ಸಾವರಿಸಿಕೊಂಡು ಮೇಲೇಳುತ್ತಿದ್ದು, ಮುಂದಿನ ವಾರ ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸುವುದು ಮತ್ತು ಅಲ್ಲಿಯೇ ಬಹು ಚರ್ಚಿತ ಸಾಮಾಜಿಕ ಮತ್ತು ಶೈಕ್ಷಣಿಕ ಅಧ್ಯಯನ ವರದಿ (ಜಾತಿ ಗಣತಿ) ಕುರಿತು ನಿರ್ಧಾರ ಪ್ರಕಟಿಸಲು ಮುಂದಾಗಿದೆ. ಇದಲ್ಲದೆ ಇನ್ನು ಮುಂದೆ ಕ್ರೀಡಾ ಸಂಭ್ರಮಾಚರಣೆಗಳನ್ನು ಅತ್ಯಂಕ ಕಠಿಣ ನಿಮಯಗಳ ಪಾಲನೆಯೊಂದಿಗೆ ಆಚರಿಸುವ ಹೊಸ ನೀತಿಯೊಂದನ್ನು ರೂಪಿಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಗೃಹ ಇಲಾಖೆ ಮೂಲಗಳು ತಿಳಿಸಿವೆ.

ಯಾವುದೇ ಕ್ರೀಡಾ ಸಂಭ್ರಮಾಚರಣೆಗಳನ್ನು ನಡೆಸಬೇಕಾದರೆ ಮೊದಲು ಸಂಬಂಧಿಸಿದ ಇಲಾಖೆಯಿಂದ ಪ್ರಸ್ತಾವನೆ ಬರಬೇಕು. ಗೃಹ ಇಲಾಖೆ, ನಗರಾಭಿವೃದ್ಧಿ ಮತ್ತು ಜಿಲ್ಲಾಡಳಿತ ಹಾಗೆಯೇ ಇತರ ವಿಪತ್ತು ನಿರ್ಹಹಣೆಗೆ ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ಬಂದು ನಂತರ ಸರಕಾರದ ಅನುಮತಿ ಹೋಗುವಂತೆ ಮಾಡಲಾಗುತ್ತಿದೆ. ಇದಕ್ಕಾಗಿ ಅನೇಕ ಹೊಸ ನಿಯಮಗಳನ್ನು ರೂಪಿಸಲಾಗುತ್ತಿದ್ದು, ಇದರ ಕರಡು ಸಿದ್ಧವಾಗುತ್ತಿದ್ದು, ಸದ್ಯದಲ್ಲೇ ನಡೆಯುವ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಇದು ಚರ್ಚೆಯಾಗಲಿದೆ. ಆನಂತರ ಸರಕಾರ ಮಟ್ಟದಲ್ಲಿ ಚರ್ಚೆಯಾಗಿ ಸದನದಲ್ಲಿ ಹೊಸ ತಿದ್ದುಪಡಿ ನಿಯಮಗಳಾಗಿ ಹೊರಬರಲಿದೆ ಎಂದು ಗೃಹ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಸಚಿವರಿಲ್ಲದಿರುವುದು ಕಾರಣವೇ?

ಕಾಲ್ತುಳಿತ ದುರಂತಕ್ಕೆ ರಾಜ್ಯದಲ್ಲಿ ಕ್ರೀಡಾ ಸಚಿವರಿಲ್ಲದಿರುವುದೂ ಕಾರಣ ಎನ್ನುವ ಚರ್ಚೆ ರಾಜಕೀಯ ವಲಯದಲ್ಲಿ ಶುರುವಾಗಿದೆ. ಏಕೆಂದರೆ ಕ್ರೀಡಾ ಸಚಿವರಿದ್ದರೆ, ಇದಕ್ಕೆ ಸಂಬಂಧಿಸಿದಂತೆ ಅವರೇ ಪ್ರಸ್ತಾಪ ಮಾಡಿ ಸಂಬಂಧಿಸಿದ ಇಲಾಖೆಗಳ ಸಚಿವರ ಸಹಮತದೊಂದಿಗೆ ಒಟ್ಟಾರೆ ಸರಕಾರದ ವಿವೇಚನೆಯ ನಿರ್ಧಾರ ಪ್ರಕಟವಾಗುವಂತೆ ಮಾಡಬೇಕಾಗಿತ್ತು. ಆದರೆ ದುರಂತಕ್ಕೆ ಕಾರಣವಾಗಿರುವ ಕ್ರಿಕೆಟ್ ಸಂಭ್ರಮಾಚರಣೆಯಲ್ಲಿ ಸರಕಾರ ಮಟ್ಟದಲ್ಲಿ ತ್ವರಿತ ನಿರ್ಧಾರದಲ್ಲಿ ಮಧ್ಯವರ್ತಿಗಳು ಅದರಲ್ಲೂ ಕ್ರೀಡೆಗೆ ಸಂಬಂಧವೇ ಇಲ್ಲದವ ಕೈಚಳಕವೇ ಹೆಚ್ಚು ಕೆಲಸ ಮಾಡಿರುವ ಅಂಶಗಳು ಪತ್ತೆಯಾಗಿವೆ. ಹೀಗಾಗಿ ಅನಿರೀಕ್ಷಿತ ಜನಸ್ತೋಮ ನಿರ್ವಹಿಸುವ ಸಿದ್ಧತೆ ಸಾಧ್ಯವಾಗಿಲ್ಲ ಎಂದು ಕ್ರೀಡಾ ಇಲಾಖೆ ಅಧಿಕಾರಗಳು ಹೇಳಿದ್ದಾರೆ.

ಕಠಿಣ ನಿಯಮಕ್ಕೆ ನಾಲ್ಕು ನಿಟ್ಟಿನ ತನಿಖೆ

ಕಾಲ್ತುಳಿದ ಪ್ರಕರಣ ನಾಲ್ಕೂ ನಿಟ್ಟಿನಲ್ಲಿ ತನಿಖೆ ನಯೆಯುತ್ತಿದ್ದು, ವಿಶೇಷ ತನಿಖಾ ದಳದ ಎಸ್‌ಪಿ.ಶುಭನ್ವಿತಾ, ಡಿವೈಎಸ್ ಪಿಗಳಾದ ಗೌತಮ್, ಪುರುಷೋತ್ತಮ್ ನೇತೃತ್ವದ ತಂಡ ಘಟನೆಗೆ ಕಾರಣಗಳನ್ನು ಹುಡುಕುತ್ತಿದೆ. ಇದರೊಂದಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದ ತಂಡ ಕೂಡ ದುರಂತಕ್ಕೆ ಕಾರಣವಾದ ಸರಣಿ ಘಟನೆಗಳು ಮತ್ತು ಅದಕ್ಕೆ ಕಾರಣಗಳನ್ನು ಹುಡುಕುತ್ತಾ ತನಿಖೆ ನಡೆಸುತ್ತಿದೆ. ಇದೀಗ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೇತೃತ್ವದ ಏಕ ಸದಸ್ಯ ಆಯೋಗ ಕೂಡ ತನಿಖೆ ನಡೆಸುತ್ತಿದೆ. ಇದರೊಂದಿಗೆ ಸಾಮಾಜಿಕ ಜಾಲತಾಣಗಳೂ ಸೇರಿದಂತೆ ಅನೇಕ ಮಾಧ್ಯಮಗಳಲ್ಲಿ ದುರಂತಕ್ಕೆ ಸಂಬಂಧಿಸಿದ ಅನೇಕ ದಾಖಲೆಗಳು ಬಹಿರಂಗವಾಗುತ್ತಿದ್ದು, ಇಲ್ಲಿಯೂ ಒಂದು ರೀತಿಯಲ್ಲಿ ತನಿಖೆಯೇ ನಡೆಯುತ್ತಿದೆ. ಇವುಗಳ ಪೈಕಿ ಹೆಚ್ಚಿನ ತನಿಖಾ ಸಂಸ್ಥೆಗಳು ಕೆಎಸ್‌ಸಿಎ (ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್) ಮಾಡಿರುವ ಮಹಾಪ್ರಮಾದಗಳನ್ನು ಗುರಿಯಾಗಿಸಿ ನಡೆಯುತ್ತಿದೆ ಎನ್ನಲಾಗಿದೆ. ಆದರೆ ಇದರಲ್ಲಿ ಸರಕಾರದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮಟ್ಟದಲ್ಲಿ ನಡೆದಿರುವ ಲೋಪಗಳನ್ನು ಗಮನದಲ್ಲಿಟ್ಟುಕೊಂಡು ತನಿಖೆ ನಡೆಸುವ ಸ್ವತಂತ್ರವಾದ ಅವಕಾಶ ಇರುವುದು ನ್ಯಾ. ಕುನ್ಹಾ ನೇತೃತ್ವದ ಏಕ ಸದಸ್ಯ ಆಯೋಗಕ್ಕೆ ಮಾತ್ರ. ಆದರೆ ಈ ಆಯೋಗ ಯಾವ ರೀತಿ ಸಮಗ್ರ ತನಿಖಾ ವರದಿ ನೀಡಲಿದೆಯೇ ಕಾದು ನೋಡಬೇಕಿದೆ. ಈ ಮಧ್ಯೆ, ಪ್ರಗತಿಯಲ್ಲಿರುವ ತನಿಖೆಗಳ ವೇಳೆ ಪತ್ತೆಯಾಗುವ ಅನೇಕ ಅಂಶಗಳನ್ನು ಗಮದಲ್ಲಿಟ್ಟುಕೊಂಡು ಹೊಸ ನಿಯಮಗಳನ್ನು ಹೇಗೆಲ್ಲಾ ಕಠಿಣಗೊಳಿಸಬೇಕು ಎನ್ನುವ ಚರ್ಚೆಯೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ಲಾಸ್ಟಿಕ್ ವಸ್ತುಗಳ ತೆರವಿಗೆ 2 ತಿಂಗಳು ಗಡುವು: ರಾಮಲಿಂಗಾರೆಡ್ಡಿ

ದೇಗುಲಗಳಲ್ಲಿ ಪ್ಲಾಸ್ಟಿಕ್ ಬ್ಯಾನ್

ಬೆಂಗಳೂರು: ಇನ್ನು ಮುಂದೆ ರಾಜ್ಯದಲ್ಲಿರುವ ದೇವಸ್ಥಾನಗಳಲ್ಲಿ ನೀರಿನ ಬಾಟಲ್, ಪ್ಲಾಸ್ಟಿಕ್ ಬಳಸದಂತೆ ಕ್ರಮ ಕೈಗೊಳ್ಳಲು ಮುಜರಾಯಿ ಇಲಾಖೆ ನಿರ್ಧರಿಸಿದೆ.

ವಿಕಾಸಸೌಧದಲ್ಲಿ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಆಗಸ್ಟ್ 15ರಿಂದ ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯ ಎಲ್ಲ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲ ಬಗೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲಾಗುವುದು ಎಂದು ತಿಳಿಸಿದರು. ಈ ಆದೇಶ ಜಾರಿಗೆ ಎರಡು ತಿಂಗಳು ಸಮಯ ಕೊಡಲಾಗಿದ್ದು, ಈಗಾಗಲೇ ಪ್ಲಾಸ್ಟಿಕ್ ಪದಾರ್ಥಗಳು ತೆಗೆದುಕೊಂಡಿದ್ದರೆ, ಅದನ್ನು ಬಳಕೆ ಮಾಡಬಹುದು. ಆಗಸ್ಟ್15ರಿಂದ ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಅವಕಾಶ ಇರುವುದಿಲ್ಲ ಎಂದರು.

15,000 ಎಕರೆ ದೇವಸ್ಥಾನಗಳ ಆಸ್ತಿ ಇಂಡೀಕರಣ ಆಗಿದೆ. ಇನ್ನೂ 20,000 ಎಕರೆ ದೇವಸ್ಥಾನಗಳ ಖಾತೆ ಮಾಡಬೇಕಾಗಿದೆ. ಸೆಕ್ಷನ್ 31/7ರಂತೆ ಮೂರು ತಿಂಗಳ ಒಳಗೆ ಟೆಂಪಲ್ ಆಸ್ತಿಯ ಬಗ್ಗೆ ಅಧಿಸೂಚನೆ ಹೊರಡಿಸಲು ಸೂಚಿಸಲಾಗಿದೆ. 3,470 ದಾಖಲೆ ಸೃಷ್ಟಿ ಮಾಡಲಾಗಿದೆ. 40,000 ಆಸ್ತಿಗಳ ಬಗ್ಗೆ ಅಧಿಸೂಚನೆ ಹೊರಡಿಸುತ್ತೇವೆ. ಗ್ರಾಮಾಂತರ ಮತ್ತು ನಗರ ಭಾಗದಲ್ಲಿ ಇರುವ ಮುಜರಾಯಿ ದೇವಾಲಯಗಳ ಆಸ್ತಿಗಳನ್ನು ಪ್ರತ್ಯೇಕ ಸರ್ವೇ ಮಾಡಬೇಕು. ದೇವಸ್ಥಾನ ಹೆಸರಿನಲ್ಲಿ ಖಾತೆ, ಆಸ್ತಿ ಪತ್ರ, ದಾಖಲೆಗಳು ಸರಿಯಾಗಿ ಇರದಿದ್ದರೆ ಎಲ್ಲಾ ದೇವಾಲಯದ ಜಾಗ 3 ತಿಂಗಳ ಒಳಗಡೆ ಸರ್ವೇ ಮಾಡಿ ನೋಟಿಫಿಕೇಶನ್ ಮಾಡಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಬೇರೆ ರಾಜ್ಯದಲ್ಲಿ ಇರುವ ಭವನಗಳ ರೂಮ್ ಬುಕ್ಕಿಂಗ್ ಅನ್ನು ಆನ್ ಲೈನ್ ಮೂಲಕ ಜಾರಿ ಮಾಡಲು ವ್ಯವಸ್ಥೆ ರೂಪಿಸಲು ಸೂಚನೆ ನೀಡಲಾಗಿದೆ. ಹೊಸ ಪ್ರಾಧಿಕಾರಗಳ ಸಮಗ್ರ ಯೋಜನೆಗೆ ಕ್ರಮವಹಿಸಲಾಗಿದೆ. ಹುಲಿಗೆಮ್ಮ, ಮಲೆ ಮಹದೇಶ್ವರ, ಘಾಟಿ ಸುಬ್ರಮಣ್ಯ, ರೇಣುಕಾ ಎಲ್ಲಮ್ಮ, ಚಾಮುಂಡೇಶ್ವರಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರ ಮಾಸ್ಟರ್ ಪ್ಲ್ಯಾನ್ ಮಾಡಲು ನಿರ್ಧರಿಸಲಾಗಿದೆ. ಚಾಮುಂಡೇಶ್ವರಿ ಬೆಟ್ಟದಲ್ಲಿ ಒತ್ತುವರಿ ಆಗಿದ್ದ 11 ಎಕರೆ ಜಾಗವನ್ನು ತೆರವು ಮಾಡಲಾಗಿದೆ. ಉಳಿದ ಜಾಗ ತೆರವುಗೊಳಿಸಲು ಸೂಚನೆ ನೀಡಲಾಗಿದೆ.

ರಾಮಲಿಂಗಾರೆಡ್ಡಿ, ಸಚಿವ

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

ಮೋದಿ ಸರಕಾರಕ್ಕೆ ಸೊನ್ನೆ ಮಾರ್ಕ್ಸ್

ಮೈಸೂರು: ಮೋದಿ ಏನು ಹೇಳಿದ್ದರೋ ಅದ್ಯಾವುದನ್ನೂ ಮಾಡಲಿಲ್ಲ. ಆದರೂ ಅವರಿಗೆ ಮೀಡಿಯಾದವರು ಹೆಚ್ಚು ಪ್ರಚಾರ ಕೊಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದ

ರಾಮಯ್ಯ ಕೇಂದ್ರ ಸರಕಾರದ ವಿರುದ್ಧ ಹರಿಹಾಯ್ದರು.

ಪ್ರಧಾನಿ ನರೇಂದ್ರಮೋದಿ ನೇತೃತ್ವದ ಕೇಂದ್ರ ಸರಕಾರ 11 ವರ್ಷ ಪೂರೈಸಿದ ವಿಚಾರ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೋದಿ ಸರಕಾರಕ್ಕೆ ಸೊನ್ನೆ ಮಾರ್ಕ್ಸ್ ನೀಡುವುದಾಗಿ ಹೇಳಿದರು.

ಅಚ್ಛೇ ದಿನ್ ಆಯೇಗಾ ಅಂದ್ರಲ್ಲ ಏನಾಯ್ತು.? ಪ್ರತಿ ವರ್ಷ 2 ಕೋಟಿ ಉದ್ಯೋಗ ಕೊಡ್ತೀನಿ ಅಂದ್ರಲ್ಲ ಏನಾಯ್ತು?. ರೈತರ ಸಮಸ್ಯೆ ಬಗೆಹರಿಸಿದ್ರಾ?, ರೈತರು ಸತತ ಒಂದು ವರ್ಷ ಯಾಕೆ ಚಳವಳಿ ಮಾಡಿದರು? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ನಮ್ಮ ಗ್ಯಾರಂಟಿ ಯೋಜನೆಗಳನ್ನು ಕೊಡಲಿಕ್ಕೆ ಆಗೋದಿಲ್ಲ, ಸರಕಾರ ದಿವಾಳಿಯಾ ಗಲಿದೆ ಅಂದರು. ಈಗ ಅವರೇ ನಮ್ಮ ಯೋಜನೆಗಳನ್ನು ಕಾಪಿ ಮಾಡಿದ್ದಾರೆ. ಮಧ್ಯ ಪ್ರದೇಶ, ರಾಜಸ್ಥಾನ, ಯುಪಿ, ದೆಹಲಿಯಲ್ಲಿ ನಮ್ಮ ಯೋಜನೆಗಳನ್ನು ಕಾಪಿ ಮಾಡಿದ್ದಾರೆ. ಗುಜರಾತ್ ಸಿಎಂ ಆಗಿದ್ದಾಗ 50% ಟ್ಯಾಕ್ಸ್ ವಾಪಸ್ ನೀಡಬೇಕು ಅಂದರು. ಪಿಎಂ ಆದ ಬಳಿಕ ಇವರು ಮಾಡಿದ್ದೇನು?. ನಿರ್ಮಲಾ ಸೀತಾರಾಮನ್ ಅನುದಾನ ಕೊಡ್ತೀನಿ ಅಂದ್ರು, ಕೊಟ್ರಾ. ಬಿಜೆಪಿಯವರು ಇದನ್ನು ಕೇಳಿ ಅಂದ್ರೇ ಕೇಳ್ತಿಲ್ಲ. ಜನರಿಗೆ ಬರೀ ಸುಳ್ಳು ಹೇಳಿ ಕೊಂಡು ಓಡಾಡ್ತಿದ್ದಾರೆ ಎಂದು ಕಟುವಾಗಿ ಟೀಕಿಸಿದರು.

ಯದುವೀರ್ ಸಮರ್ಥನೆ

ನರೇಂದ್ರಮೋದಿ ಪ್ರಧಾನಿಯಾಗಿ 11 ವರ್ಷ ಪೂರೈಸಿದ್ದಕ್ಕೆ ಸಿಎಂ ಸಿದ್ದರಾಮಯ್ಯ ಟೀಕಿಸಿದ ವಿಚಾರ ಕುರಿತು ಪ್ರತಿಕ್ರಿಯಿಸಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಧಾನಿ ಮೋದಿಯವರನ್ನು ದೇಶದ ಸಮಸ್ತ ಜನರು 3 ಬಾರಿ ಆಯ್ಕೆ ಮಾಡಿದ್ದಾರೆ. ಮೋದಿ ಅಧಿಕಾರಕ್ಕೆ ಬಂದಾಗಿನಿಂದ ತೆರಿಗೆಯಲ್ಲಿ ಪರಿವರ್ತನೆಯಾಗಿದೆ. ಮೊದಲೆರಡು ಅವಧಿಯ 10 ವರ್ಷಗಳಲ್ಲಿ ಅನೇಕ ಯೋಜನೆಗಳು ಜಾರಿಗೆ ಬಂದಿವೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಕೊಟ್ರಾ?

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಕೊಡುತ್ತೇವೆ ಎಂದಿದ್ದರು, ಕೊಟ್ರಾ? ರಾಜ್ಯಕ್ಕೆ 11,495 ಕೋಟಿ ಕೊಡಬೇಕು ಎಂದು 15ನೇ ಹಣಕಾಸು ಆಯೋಗ ಶಿಫಾರಸು ಮಾಡಿತ್ತು. ಕೊಟ್ಟರಾ? ಇವೆಲ್ಲವೂ ಮುಖ್ಯವಾದವಲ್ಲವೇ? ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆಯಲ್ಲಾ ಆ ಬಗ್ಗೆ ಪ್ರಶ್ನಿಸಿರೆಂದು ಬಿಜೆಪಿಯವರಿಗೆ ಹೇಳಿದರೆ, ಅವರು ಜನರಿಗೆ ಸುಳ್ಳುಗಳನ್ನು ಹೇಳಿ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಹೊರ ಗುತ್ತಿಗೆ ಆಧಾರದಲ್ಲಿ ಉದ್ಯೋಗ ಕೊಡಿಸುವ ಭರವಸೆ

ಮೃತ ಶಿವು ಕುಟುಂಬಕ್ಕೆ ಪರಿಹಾರ ವಿತರಣೆ

ಯಾದಗಿರಿ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಿಕ್ಕಿ ಮೃತಪಟ್ಟ ತಾಲೂಕಿನ ಹೊನಗೇರಾದ ಶಿವಲಿಂಗನ ಕುಟುಂಬಸ್ಥರಿಗೆ ಸೋಮವಾರ ಸರಕಾರದ 25 ಲಕ್ಷ ರು. ಪರಿಹಾರ ಧನದ ಚೆಕ್ ವಿತರಿಸಲಾಯಿತು.

ಮೃತ ಶಿವಲಿಂಗನ ಮನೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಚೆಕ್ ವಿತರಿಸಿದರು.

ಶಿವಲಿಂಗನ ತಂದೆ ಚಂದಪ್ಪ, ತಾಯಿ ಲಕ್ಷ್ಮೀ, ಅಣ್ಣ ಹೊನ್ನಪ್ಪ ಸಚಿವರ ಮುಂದೆ ತಮ್ಮ ಅಳಲು ತೋಡಿಕೊಂಡರು. ಕುಟುಂಬಸ್ಥರನ್ನು ಸಂತೈಸಿದ ಸಚಿವರು ದುರಂತದ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ನಡೆಯಬಾರದ ಘಟನೆ ನಡೆದಿದೆ. ವಿಧಿಯಾಟ, ಎದೆಗುಂದದೇ ಬದುಕು ಸಾಗಿಸಿ. ಮಗನನ್ನು ತಂದು ಕೊಡಲು ಯಾರಿಂದಲ್ಲೂ ಸಾಧ್ಯವಿಲ್ಲ, ಇನ್ನೊಬ್ಬ ಮಗ ಹೊನ್ನಪ್ಪನಲ್ಲಿಯೇ ಶಿವಲಿಂಗನನ್ನು ನೋಡಿ. ಸರಕಾರದ ಪರಿಹಾರ ಧನವನ್ನು ಸದ್ಬಳಕೆ ಮಾಡಿಕೊಳ್ಳಿ ಸಲಹೆ ನೀಡಿದರು. ಶಿವು ಅಣ್ಣ ಹೊನ್ನಪ್ಪನಿಗೆ ಮೆಡಿಕಲ್ ಕಾಲೇಜಿನಲ್ಲಿ ಹೊರ ಗುತ್ತಿಗೆ ಆಧಾರದ ಉದ್ಯೋಗ ಕೊಡಿಸುವ ಭರವಸೆ ನೀಡಿದರು.

ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರು, ಡಿಸಿ ಡಾ. ಸುಶೀಲಾ, ಹೆಚ್ಚುವರಿ ಡಿಸಿ ಶರಣಬಸಪ್ಪ ಕೊಟಪ್ಪಗೋಳ, ಎಸಿ ಡಾ.ಹಂಪಣ್ಣ ಸಜ್ಜನ್ ಇತರರಿದ್ದರು.



ಕಾಲ್ತುಳಿತಕ್ಕೆ ಸಿಕ್ಕಿ ಸಾವನ್ನಪ್ಪಿದ ಶಿವು ಕುಟುಂಬಸ್ಥರಿಗೆ ಸಚಿವ ಶರಣಬಸಪ್ಪ ದರ್ಶನಾಪೂರ್ 25 ಲಕ್ಷ ರು.ಪರಿಹಾರದ ಚೆಕ್ ವಿತರಿಸಿದರು.

ಅಕ್ಷತಾ ಕುಟುಂಬಕ್ಕೆ 25 ಲಕ್ಷ ರು. ಪರಿಹಾರ

ಕಾರವಾರ: ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತಕ್ಕೆ ಒಳಗಾಗಿ ಮೃತಪಟ್ಟ ಸಿದ್ದಾಪುರದ ಗೃಹಿಣಿ ಅಕ್ಷತಾ ಅವರ ಕುಟುಂಬದವರಿಗೆ ಸರಕಾರದ ವತಿಯಿಂದ 25 ಲಕ್ಷ ರು. ಪರಿಹಾರದ ಚೆಕ್‌ನ್ನು ಶಿರಸಿ-ಸಿದ್ದಾಪುರ ಶಾಸಕ ಭೀಮಣ್ಣ ನಾಯ್ಕ ಸೋಮವಾರ ಮೃತರ ಮನೆಗೆ ತೆರಳಿ ವಿತರಿಸಿದರು.

ನಂತರ ಮಾತನಾಡಿದ ಅವರು, ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತಕ್ಕೆ ಒಳಗಾದ ಕುಟುಂಬಕ್ಕೆ ರಾಜ್ಯ ಸರಕಾರ ಘೋಷಣೆ ಮಾಡಿದ 25 ಲಕ್ಷ ಪರಿಹಾರವನ್ನು ಮೃತ ಕುಟುಂಬದ ಮನೆ ಬಾಗಿಲಿಗೆ ತೆರಳಿ ಕುಟುಂಬಸ್ಥರಗೆ ಚೆಕ್ ವಿತರಿಸಲಾಗಿದೆ ಎಂದರು. ಈ ಪರಿಹಾರದ ಹಣದಿಂದ ಮೃತರ ಕುಟುಂಬಸ್ಥರ ದುಃಖವನ್ನು ಭರಿಸಲು ಸಾಧ್ಯವಿಲ್ಲ. ಈ ಘಟನೆ ನಡೆಯಬಾರದಿತ್ತು ಆದರೆ ನಡೆದಿದೆ. ಈ ನೋವುನ್ನು ಭರಿಸುವ ಶಕ್ತಿಯನ್ನು ಹಾಗೂ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿ ಜನ ಸಾಮಾನ್ಯರ ಜತೆ ಬೆರೆಯುವಂತ ಶಕ್ತಿ ಆ ಪರಮಾತ್ಮ ನೀಡಲಿ ಎಂದರು.

ಕಾಲ್ತುಳಿತಕ್ಕೆ ಒಳಗಾಗಿ ಮೃತಪಟ್ಟ ಸಿದ್ಧಾಪುರದ ಗೃಹಿಣಿ ಅಕ್ಷತಾ ಅವರ ಕುಟುಂಬದವರಿಗೆ ಸರಕಾರದ ವತಿಯಿಂದ 25 ಲಕ್ಷ ರು. ಪರಿಹಾರದ ಚೆಕ್‌ನ್ನು ಶಾಸಕ ಭೀಮಣ್ಣನಾಯ್ಕ ಮೃತರ ಮನೆಗೆ ತೆರಳಿ ವಿತರಿಸಿದರು.

ರಾಜ್ಯ ಸರಕಾರದ ವಿರುದ್ಧ ಬಿ.ವೈ.ವಿಜಯೇಂದ್ರ ಆಕ್ರೋಶ

ಪೊಲೀಸರ ಗೂಂಡಾಗಿರಿ ಮುಂದುವರಿದರೆ ಹೋರಾಟ

ಮಂಗಳೂರು: ನಮ್ಮ ಕಾರ್ಯಕರ್ತರು ಸಮಾಧಾನದಿಂದ ಇದ್ದಾರೆ ಎನ್ನುವುದನ್ನು ದೌರ್ಬಲ್ಯ ಎಂದುಕೊಳ್ಳಬೇಡಿ. ಕಾರ್ಯಕರ್ತರ ಮನೆಗೆ ಮಧ್ಯರಾತ್ರಿ ನುಗ್ಗಿ ಪೊಲೀಸರು ಗೂಂಡಾಗಿರಿ ಮಾಡುವುದನ್ನು ಮುಂದುವರಿಸಿ ದರೆ ಬೀದಿಗಿಳಿದು ಹೋರಾಟ ಮಾಡಲಿದ್ದೇವೆ. ಆಂದೋಲನ ರೂಪಿಸುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾಡಳಿತ, ಎಸ್ಪಿ, ಕಮಿಷನರ್ ಭೇಟಿಯಾಗಿ ತಿಳಿಸಿದ್ದೇವೆ. ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ಬಳಿಕ ಕಾನೂನು ಸುವ್ಯವಸ್ಥೆ ನೆಪದಲ್ಲಿ ಪೊಲೀಸ್ ಇಲಾಖೆ ಗೂಂಡಾ ವರ್ತನೆ ಮಾಡಲಾಗುತ್ತಿದೆ. ಮಧ್ಯರಾತ್ರಿ ಕಾರ್ಯಕರ್ತರ ಮನೆಗೆ ಭೇಟಿ ಮಾಡುವುದು, ಸಂಘ ಪರಿವಾರದ ಮುಖಂಡರ ಗುರಿಯಾಗಿಸುವುದು, ರಾತ್ರಿ ಭಾವಚಿತ್ರ ತೆಗೆಯುವುದು, ರಿವಾಲ್ವರ್ ತೋರಿ ಬೆದರಿಕೆ ಹಾಕುವ ಪ್ರವೃತ್ತಿ ಹೆಚ್ಚಿದೆ ಎಂದರು. ಮುಖಂಡರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ರವಿಕುಮಾರ್, ಮಾಜಿ ಸಚಿವ ಡಿ.ವಿ.ಸದಾನಂದ ಗೌಡ, ಅರವಿಂದ ಬೆಲ್ಲದ್ ಮುಂತಾದವರು ನಿಯೋಗದಲ್ಲಿ ಭಾಗಿಯಾಗಿದ್ದರು.

ಸುಹಾಸ್ ಶೆಟ್ಟಿ ಕೊಲೆಯಲ್ಲಿ ನಿಷೇಧಿತ ಸಂಘಟನೆ ಪಿಎಫ್‌ಐ ಪಾತ್ರ ಇರುವ ಸಂಶಯ ಇರುವುದರಿಂದ ಎನ್‌ಐಎ ತನಿಖೆ ಕೈಗೆತ್ತಿಕೊಂಡಿದೆ. ನಾವೇನೂ ಪೊಲೀಸರಿಂದ ಉಪಕಾರ ಬಯಸುತ್ತಿಲ್ಲ, ಆದರೆ ಸರಕಾರದ ಒತ್ತಡಕ್ಕೆ ಮಣಿದರೆ ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತದ ಪ್ರಕರಣದಂತೆ ಇಲ್ಲೂ ಪೊಲೀಸರ ತಲೆದಂಡ ಆಗುವ ಸಾಧ್ಯತೆ ಇದೆ.

-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಲವ್ ಜಿಹಾದ್, ಗೋಹತ್ಯೆ ಎಲ್ಲವೂ ನಿಲ್ಲಬೇಕು

ಕಾಂಗ್ರೆಸ್ ಸರಕಾರ ಕೆಲ ತಿಂಗಳ ಹಿಂದೆ ಕೋಮು ನಿಗ್ರಹ ದಳ ಸ್ಥಾಪನೆ ಮಾಡಿದೆ. ಅದರ ನಂತರ ಇದು ಹೆಚ್ಚಾಗಿದೆ. ಕೋಮು ನಿಗ್ರಹ ದಳ ಇರುವುದೇ ಹಿಂದೂ ಕಾರ್ಯಕರ್ತರ ಗುರಿ ಮಾಡಲು. ಹಿಂದೂಗಳ ಭದ್ರಕೋಟೆಯಲ್ಲಿ ಭಯ ಹುಟ್ಟುಹಾಕುವ ಷಡ್ಯಂತ್ರ ಇದು. ಪೊಲೀಸರು ಸರಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನೂ ಪೊಲೀಸರಿಗೆ ತಿಳಿಸಿದ್ದೇವೆ. ಇನ್ನು ಮುಂದೆ ಇದು ಆಗದಂತೆ ಭರವಸೆ ಕೊಟ್ಟಿದ್ದಾರೆ. ಲವ್ ಜಿಹಾದ್, ಗೋಹತ್ಯೆ, ಮಾದಕ, ಮರಳು ಮಾಫಿಯಾ ಎಲ್ಲವೂ ನಿಲ್ಲಬೇಕು, ಆಗ ಎಲ್ಲ ಸರಿಯಾಗುತ್ತದೆ ಎಂದು ವಿಜಯೇಂದ್ರ ಹೇಳಿದರು.

ಮೊಮ್ಮಗ ಮನೋಜ್ ಅಗಲಿಕೆ ನೋವಲ್ಲೇ ಪ್ರಾಣಬಿಟ್ಟ ಅಜ್ಜಿ

ತುಮಕೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟ ಮನೋಜ್ ಸಾವು ಕುಟುಂಬಸ್ಥರನ್ನು ಶೋಕ ಸಾಗರದಲ್ಲಿ

ಮುಳುಗಿಸಿದೆ. ಈ ಇದೇ ನೋವಲ್ಲಿ ಆಘಾತಕ್ಕೊಳಗಾದ ಮನೋಜ್ ಅವರ ಅಜ್ಜಿ ದೇವಿರಮ್ಮ (70) ಕೂಡ ಸೋಮವಾರ ಕುಣಿಗಲ್ ತಾಲೂಕಿನ ನಾಗಸಂದ್ರದಲ್ಲಿ ಮೃತಪಟ್ಟಿದ್ದಾರೆ.

ಆರ್‌ಸಿಬಿ 18 ವರ್ಷದ ಬಳಿಕ ಐಪಿಎಲ್ ಕಪ್ ಗೆದ್ದ ಹಿನ್ನೆಲೆ ವಿಜಯೋತ್ಸವ ಆಚರಿಸಲು ಆಯೋಜಿಸಿದ್ದ ಕಾರ್ಯಕ್ರಮ ನೋಡಲು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಬಳಿಕ ತೆರಳಿದ್ದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಮನೋಜ್ ಸೇರಿದಂತೆ 11 ಜನ ಸಾವನ್ನಪ್ಪಿ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಕಾಲ್ತುಳಿತದಿಂದ ಮೃತಪಟ್ಟವರ ಮನೆ ಯಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ. ಮನೋಜ್ ಅವರ ತಾಯಿಯ ತಾಯಿಯಾದ ದೇವಿರಮ್ಮ ತೀವ್ರ ಆಘಾತಕ್ಕೆ ಒಳಗಾಗಿ ಸಾವನ್ನಪ್ಪಿದ್ದಾರೆ.

ಉಳುಮೆ ವಿಚಾರಕ್ಕೆ ವೃದ್ಧನ ಕೊಲೆ

ಹುಬ್ಬಳ್ಳಿ: ಜಮೀನು ಗುತ್ತಿಗೆ ಮಾಡುವ ವಿಚಾರಕ್ಕೆ ಆರಂಭವಾದ ಜಗಳ ವೃದ್ಧನ ಕೊಲೆಯಲ್ಲಿ ಅಂತ್ಯವಾದ ಘಟನೆ ಹುಬ್ಬಳ್ಳಿ ಹೊರವಲಯದ ಮಂಟೂರು ರಸ್ತೆಯ ಜಮೀನಿನಲ್ಲಿ ನಡೆದಿದೆ. ಬಸಪ್ಪ ಕುಸುಗಲ್ (65) ಕೊಲೆಯಾದ ದುರ್ದೈವಿ. ಜಮೀನಲ್ಲಿ ಗಲಾಟೆ ನಡೆದ ವೇಳೆ ಬಸಪ್ಪ ಕುಸುಗಲ್ ಎಂಬಾತನನ್ನು ಎದೆಗೆ ಒದ್ದು ಕೊಲೆ ಮಾಡಲಾಗಿದೆ ಎನ್ನಲಾಗಿದೆ. ನಿಂಗರೆಡ್ಡಿ, ದೊಡ್ಡರೆಡ್ಡಿ ಎನ್ನುವವರ ಮೇಲೆ ಕೊಲೆ ಆರೋಪವಿದೆ. ಮಹಾದೇವಿ ಗಂಜಾಳ ಎಂಬುವವರು ತಮ್ಮ 3 ಎಕರೆ ಜಮೀನನ್ನು ಹಲವು ವರ್ಷಗಳಿಂದ ನಿಂಗರೆಡ್ಡಿ, ದೊಡ್ಡರೆಡ್ಡಿಗೆ ಗುತ್ತಿಗೆ ಉಳುಮೆಗೆ ಕೊಟ್ಟಿದ್ದರು.

ದಯಾನಂದ್ ಒಬ್ಬ ಸಮರ್ಥ, ನಿಷ್ಠಾವಂತ ಅಧಿಕಾರಿ: ಪ್ರತಾಪ್ ಸಿಂಹ

ಸಿಎಂ ಸಿದ್ದರಾಮಯ್ಯ ಪೊಲೀಸ್ ವಿರೋಧಿ

ಮೈಸೂರು: ಇಷ್ಟು ದಿನ ಹಿಂದೂ ವಿರೋಧಿ ಆಗಿದ್ದ ಸಿಎಂ ಸಿದ್ದರಾಮಯ್ಯ, ಈಗ ಪೊಲೀಸ್ ಇಲಾಖೆಯ ವಿರೋಧಿ ಆಗಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.

ಹಿಂದುಳಿದವರ ಉದ್ಧಾರಕ ಎಂದು ಹೇಳುವ ಸಿಎಂ ಸಿದ್ದರಾಮಯ್ಯ ವಾಲ್ಮೀಕಿ ಸಮುದಾಯದ ನಿಷ್ಠಾವಂತ ಅಧಿಕಾರಿ ದಯಾನಂದ್ ಅವರನ್ನು ಯಾಕೆ ಟಾರ್ಗೆಟ್ ಮಾಡಿದ್ದಾರೆ? ದಯಾನಂದ್ ಒಬ್ಬ ಸಮರ್ಥ ನಿಷ್ಠಾವಂತ ಅಧಿಕಾರಿ. ನಾಯಕ ಸಮುದಾಯದ ವ್ಯಕ್ತಿಯ ಮೇಲೆ ನಿಮಗೆ ಯಾಕೆ ಇಷ್ಟು ಕೋಪ ಎಂದು ಕೇಳಿದರು. ಪೊಲೀಸ್ ಇಲಾಖೆ ಅನ್ ಫಿಟ್ ಅಲ್ಲ. ರಾಜ್ಯ ಸರಕಾರ ಅನ್ ಫಿಟ್. ಘಟನೆ ನಡೆದು ಒಂದು ವಾರವಾದರೂ ಸಿಎಂ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತಿಲ್ಲ. ಸಿಎಂ ನಾಲ್ಕು ಹನಿ ಕಣ್ಣೀರು ಹಾಕಿಲ್ಲ. ಅನುಕಂಪ, ಪಶ್ಚಾತ್ತಾಪದ ಮಾತು ಬಂದಿಲ್ಲ. ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್ ಅವರನ್ನು ಯಾಕೆ ತೆಗೆದು ಹಾಕಿದಿರಿ?. ಮೊದಲು ಈ ರಹಸ್ಯ ಬಿಚ್ಚಿಡಿ ಎಂದು ಸೂಚ್ಯವಾಗಿ ಪ್ರಶ್ನಿಸಿದರು.

ಸಿಎಂ ತಮ್ಮ ಮೊಮ್ಮಗನಿಗೆ ಫೋಟೋಗ್ರಾಫ್, ಆಟೋಗ್ರಾಫ್ ಕೊಡಿಸಲು ಓಡುತ್ತಿದ್ದರೇನೋ. ಅದಕ್ಕೆ ಕಾಲ್ತುಳಿತದ ವಿಚಾರ ಗೊತ್ತಾಗಿಲ್ಲ. ಸತ್ಯವತಿ ಯಾಕೆ ಒತ್ತಡ ಹೇರಿ ಕಾರ್ಯಕ್ರಮ ಮಾಡಿಸಿದರು. ಯಾಕೆ ಅವರನ್ನು ಇನ್ನೂ ನೀವು ಸಂಸ್ಪೆಡ್ ಮಾಡಿಲ್ಲ. ಯಾಕೆ ಅವರನ್ನು ರಕ್ಷಣೆ ಮಾಡುತ್ತಿದ್ದೀರಿ? ಸತ್ಯವತಿ ಅವರು ಯಾಕೆ ಅಭಿಮಾನಿಗಳಿಗೆ ಚಿನ್ನಸ್ವಾಮಿ ಸ್ಟೇಡಿಯಂಗೆ ಹೋಗಿ ಅಂತ ಹೇಳಿದರು?.

ಪ್ರತಾಪ್ ಸಿಂಹ, ಮಾಜಿ ಸಂಸದ

ವಿಶ್ವವಾಣಿ

ಸಂಪಾದಕೀಯ

ಮರಗಳಿಗೆ ಕೊಡಲಿ ಬೀಳದಿರಲಿ

ಕೇವಲ ನಾಲ್ಕು ದಿನಗಳ ಹಿಂದೆ (ಜೂನ್ 6) ವಿಶ್ವ ಪರಿಸರ ದಿನದಂದು ನಮ್ಮ ನಾಯಕರೆಲ್ಲರೂ ಪರಿಸರ ಸಂರಕ್ಷಣೆಯ ಬಗ್ಗೆ ಅತೀವ ಕಳಕಳಿ ತೋರಿಸಿದ್ದಾರೆ. ಈ ಕಳಕಳಿ ಕೇವಲ ಭಾಷಣಕ್ಕೆ ಸೀಮಿತ ಎನ್ನುವುದು ಈಗ ಸ್ಪಷ್ಟವಾಗಿದೆ. ಕಾಂಕ್ರೀಟ್ ಕಾಡಾಗುತ್ತಿರುವ ಬೆಂಗಳೂರಿನಲ್ಲಿ ಎರಡು ಯೋಜನೆಗಳಿಗಾಗಿ ಸುಮಾರು ಒಂದು ಸಾವಿರ ಮರಗಳಿಗೆ ಕತ್ತರಿ ಹಾಕಲು ಸರಕಾರ ಮುಂದಾಗಿರುವುದು ದುರದೃಷ್ಟಕರ. ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮವು ದೇವನಹಳ್ಳಿಯಲ್ಲಿ ಹೊಸ ವಸತಿ ರಹಿತ ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕಾಗಿ 626 ಮರಗಳನ್ನು ಕಡಿಯಲು ರಾಜ್ಯ ಅರಣ್ಯ ಇಲಾಖೆಯಿಂದ ಅನುಮತಿ ಕೋರಿದೆ. ಇದು 600 ಕೈದಿಗಳಿಗೆ ಸ್ಥಳಾವಕಾಶ ಕಲ್ಪಿಸಲು ವಿನ್ಯಾಸಗೊಳಿಸಲಾದ ಪ್ರಸ್ತಾವಿತ ಕೇಂದ್ರ ಜೈಲು ಸಂಕೀರ್ಣದ ಭಾಗವಾಗಿದೆ. ಇದೇ ವೇಳೆ ರೈಲ್ವೆ ಸಚಿವಾಲಯದ ಅಡಿಯಲ್ಲಿ ಬರುವ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರವು 368 ಮರಗಳನ್ನು ಕಡಿಯಲು ಮತ್ತೊಂದು ಪ್ರಸ್ತಾವನೆ ಮುಂದಿಟ್ಟಿದೆ. ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಎದುರು ಎಂಟೂವರೆ ಎಕರೆ ವಿಸ್ತೀರ್ಣದಲ್ಲಿ ಬೆಳೆದು ನಿಂತ ಮರಗಳನ್ನು ಕಡಿದು ಖಾಲಿ ಜಾಗವನ್ನು ಖಾಸಗಿ ಡೆವಲಪರ್‌ಗಳಿಗೆ 60 ವರ್ಷಗಳಿಗೆ ಲೀಸ್ ಕೊಡುವ ಯೋಜನೆ ಇದು. ಲೀಸ್‌ನಿಂದ ಬರುವ 300 ಕೋಟಿ ರು. ಮೊತ್ತವನ್ನು ಬೆಂಗಳೂರಿನ ಸಬರ್ಬನ್ ರೇಲ್ವೆ ಮಾರ್ಗದ ನಿರ್ಮಾಣಕ್ಕೆ ಬಳಸುವ 'ದೂರದೃಷ್ಟಿ' ಯೋಜನೆ ರೂಪಿಸಿದವರ ನಗರಾಭಿವೃದ್ಧಿ 'ಕಾಳಜಿ'ಯನ್ನು ಮೆಚ್ಚಲೇಬೇಕು. ದೇವನಹಳ್ಳಿಯಲ್ಲಿ ಜೈಲು ನಿರ್ಮಾಣ ಸಂಬಂಧ ಬಿಬಿಎಂಪಿ 2025ರ ಏಪ್ರಿಲ್‌ನಲ್ಲಿ ಸಾರ್ವಜನಿಕ ಪ್ರತಿಕ್ರಿಯೆ ಆಹ್ವಾನಿಸಿತ್ತು. ಇದೀಗ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕಾರ, 2025ರ ಮೇ 31ರಂದು ಸಾರ್ವಜನಿಕ ಸೂಚನೆಯನ್ನು ಹೊರಡಿಸಿದ್ದು, ಆಕ್ಷೇಪಣೆಗಳನ್ನು ಸಲ್ಲಿಸಲು ನಾಗರಿಕರಿಗೆ ಹತ್ತು ದಿನಗಳ ಕಾಲಾವಕಾಶ ನೀಡಿದೆ. ಎತ್ತಿನ ಹೊಳೆ, ಎಕ್ಸ್‌ಪ್ರೆಸ್ ಹೆದ್ದಾರಿ ಸೇರಿದಂತೆ ಹತ್ತಾರು ಯೋಜನೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ಲಕ್ಷಾಂತರ ಮರಗಳನ್ನು ಉರುಳಿಸಲಾಗಿದೆ. ಇದಕ್ಕೆ ಪರ್ಯಾಯವಾಗಿ ಗಿಡಗಳನ್ನು ನೆಡಲಾಗಿದೆ ಎಂದು ಸರಕಾರ ನ್ಯಾಯಾಲಯದ ಮುಂದೆ ವಾಗ್ದಾನ ಮಾಡಿದೆ. ಆದರೆ ಎಲ್ಲೂ ಹೊಸ ಅರಣ್ಯ ಸೃಷ್ಟಿಯಾದ ಉದಾಹರಣೆಗಳಿಲ್ಲ. ಬೆಳೆದು ನಿಂತ ಮರಗಳನ್ನು ಉರುಳಿಸಿ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶವನ್ನು ಬರಡಾಗಿಸುವ ಈ ಯೋಜನೆಗಳನ್ನು ಸರಕಾರ ಕೈ ಬಿಡಬೇಕು. ಕೇವಲ ಒಂದು ಮರ ಉಳಿಸಲು ತನ್ನ ರೈಲ್ವೆ ಮಾರ್ಗವನ್ನು ಬದಲಿಸಿದ ಜಪಾನ್ ದೇಶದ ಉದಾಹರಣೆ ನಮ್ಮ ಆಡಳಿತದ ಕಣ್ತೆರೆಸಬೇಕು.

ಸೊಂಪಾದಕೀಯ

ಮಲ್ಯವರ್ಧಿತ ಸೇವೆ

ಉದ್ಯಮಿ ವಿಜಯ್ ಮಲ್ಯ ಹಲವಾರು ವರ್ಷಗಳಿಂದ ತಮ್ಮ ಸಾಲಕ್ಕಾಗಿ ಹೆಸರು ಮಾಡಿದವರು. ಇದೇ ಕಾರಣಕ್ಕಾಗಿ ಭಾರತ ತೊರೆದು ವಿದೇಶದಲ್ಲಿ ನೆಲೆಸಿರುವ ಅವರ ಮೇಲೆ ಸಾಲ ತೀರಿಸದೆ ತಲೆ ಮರೆಸಿಕೊಂಡಿರುವ ಅಪವಾದ ಇದೆ. ಆದರೆ ಇತ್ತೀಚೆಗೆ ಯೂಟ್ಯೂಬರ್ ಒಬ್ಬರಿಗೆ ಕೊಟ್ಟಿರುವ ಸಂದರ್ಶನದಿಂದಾಗಿ ಮತ್ತೆ ಸುದ್ದಿಯಲ್ಲಿದ್ದಾರೆ ಮಲ್ಯ. ಈ ಸಂದರ್ಶನದಲ್ಲಿ ಅಪರೂಪಕ್ಕೆ ದರ್ಶನ ಕೊಟ್ಟಿರುವ ಮಲ್ಯ ತಮ್ಮ ಟ್ರೇಡ್ ಮಾರ್ಕ್ ಫ್ರೆಂಚ್ ಗಡ್ಡವನ್ನು ಕೊಂಚ ಟ್ರಿಮ್ ಮಾಡಿದ್ದಾರೆ. ಮತ್ತು ತಮ್ಮ ಟ್ರೇಡ್‌ನಲ್ಲಿ ಸಾಲ ಮಾಡಿಕೊಂಡಿದ್ದು ನಿಜ, ಆದರೆ ಅದನ್ನು ಮರುಪಾವತಿ ಮಾಡಿರೋದೂ ನಿಜ ಎಂದು ಹೇಳಿಕೊಂಡಿದ್ದಾರೆ. ಆದರೆ ಭಾರತ ಸರಕಾರ ಅವರನ್ನು ಸಾಲದ ಭಾರದಿಂದ ಆರೋಪ ಮುಕ್ತರನ್ನಾಗಿ ಮಾಡಿಲ್ಲ. ಮತ್ತು ಈಗಲೂ ಅವರು ಅನೇಕ ಮೀಮ್ಸ್‌ಗಳಿಗೆ ಆಹಾರ ಆಗ್ತಾ ಇರೋದಂತೂ ನಿಜ. ಸಾಮಾಜಿಕ ಜಾಲತಾಣಗಳಲ್ಲಂತೂ ಅವರ ಪ್ರತಿ ಪೋಸ್ಟ್‌ಗೆ ಎಸ್‌ಬಿಐ ಬ್ಯಾಂಕ್‌ನ ಹೆಸರಿನಲ್ಲಿ ಸಾಲದ ಬಗ್ಗೆ ಕೇಳಿ ಗೇಲಿ ಮಾಡುವ ಕಾಮೆಂಟ್ ಒಂದು ಇದ್ದೇ ಇರುತ್ತದೆ ಎನ್ನುವ ಹಾಗೆ ಅವರನ್ನು ಚಿತ್ರೀಕರಿಸಲಾಗುತ್ತಿದೆ. ಆದರೆ ಮಲ್ಯ ಅವರ ಪ್ರಕಾರ ಅವರು ಈಗಾಗಲೇ ತೆಗೆದುಕೊಂಡಿರುವ ಹಣಕ್ಕಿಂತ ಹೆಚ್ಚಿನ ಹಣವನ್ನು ಪಾವತಿ ಮಾಡಿದ್ದಾರಂತೆ. ಅಂದರೆ ಬಡ್ಡಿ ಸಮೇತ ಅದನ್ನು ತೀರಿಸಿದ್ದಾರಂತೆ. ಆದರೂ ಅವರ buddyಗಳು ಸೇರಿದಂತೆ ಹಲವರು ಅವರನ್ನು ಬಡ್ಡಿಮಗ ಅಂತಲೇ ಅಂದುಕೊಂಡಿರೋದು ಅವರ ಬೇಸರ. ಹಾಗಾಗಿ ಈ ಮೂಲಕ ತನಗೆ ಸರಕಾರದಿಂದ ಯಾವುದೇ ವಿನಾಯಿತಿ ಸಿಕ್ಕಿಲ್ಲ, ತನಗೆ ಯಾವುದೇ ಮಲ್ಯವರ್ಧಿತ ಸೇವೆ ಸಿಗುತ್ತಿಲ್ಲ. ಬದಲಾಗಿ ನಾನು ಋಣಮುಕ್ತನಾಗಿದ್ದೇನೆ ಎಂದಿದ್ದಾರೆ ಮಲ್ಯ. ಆದರೆ ಇಷ್ಟಾದರೂ ಅವರಿಗೆ ಭಾರತಕ್ಕೆ ಮರಳುವ ಯೋಗ ಮಾತ್ರ ಇನ್ನೂ ಕೂಡಿ ಬಂದಿಲ್ಲ. ಇತ್ತೀಚೆಗೆ ಆರ್‌ಸಿಬಿ ಕಪ್ ಗೆದ್ದಾಗ ಮತ್ತೆ ಬೆಳಕಿಗೆ ಬಂದ ಮಲ್ಯ ಆರ್‌ಸಿಬಿಗೆ ವಿಶ್ ಮಾಡಿದ್ದರು. ಈಗ ಯೂಟ್ಯೂಬ್‌ನಲ್ಲಿ ಸಂದರ್ಶನ ಕೊಡುವ ಮೂಲಕ ಐ ವಿಷ್ ಐ ಕುಡ್ ರಿಟರ್ನ್ ಟು ಇಂಡಿಯಾ ಅಂತ ಅಭಿಪ್ರಾಯ ಪಟ್ಟಿದ್ದಾರೆ. ಈ ಸಂದರ್ಶನ ನೋಡಿದ ಮೇಲಾದರೂ ಸಾಲ ರಿಟರ್ನ್ ಮಾಡಿರುವ ಮಲ್ಯ ಸ್ವದೇಶಕ್ಕೆ ರಿಟರ್ನ್ ಆಗುತ್ತಾರಾ ಅನ್ನೋದನ್ನು ಕಾದು ನೋಡಬೇಕಿದೆ.

ಸಂಪಾದಕರ ಸದ್ಯಶೋಧನೆ

ಯಿಡ್ಡಿಷ್ ಭಾಷೆ ವೈಶಿಷ್ಟ್ಯ

ನೀವು ಯಿಡ್ಡಿಶ್ ಭಾಷೆ ಬಗ್ಗೆ ಕೇಳಿರಬಹುದು. ನಾನು ಇಸ್ರೇಲಿಗೆ ಹೋದಾಗ ಆ ಭಾಷೆ ಬಗ್ಗೆ ಕೇಳಿದ್ದೆ. ಆ ಭಾಷೆಗೆ ಹೀಬ್ರೂ ಅಕ್ಷರಗಳನ್ನೇ ಬಳಸುತ್ತಾರೆ. ಯಿಡ್ಡಿಶ್ ಭಾಷೆಯ ವೈಶಿಷ್ಟ್ಯವೇನೆಂದರೆ ಅದರ ಬಹುತೇಕ ಪದಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳಿವೆ. ಆಯಾ ಸನ್ನಿವೇಶ ಮತ್ತು ಸಂದರ್ಭಕ್ಕೆ ತಕ್ಕಂತೆ ಪದಗಳ ಅರ್ಥ ಬದಲಾಗುತ್ತಾ ಹೋಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಜೋಕನ್ನು ನಾನು ಆ ದೇಶದಲ್ಲಿದ್ದಾಗ ಕೇಳಿದ್ದೆ. ಒಮ್ಮೆ ಇಬ್ಬರು ಸೇಲ್ಸ್‌ಮನ್‌ಗಳು ತಮ್ಮ ತಮ್ಮಲ್ಲೇ ಮಾತಾಡುತ್ತಿದ್ದರು. ಅವರಲ್ಲೊಬ್ಬ ಬಹಳ ಚಾಲಾಕಿಯಾಗಿದ್ದ. ತನ್ನ ಮಾತು ಮತ್ತು ಹಾಸ್ಯ ಮನೋವೃತ್ತಿಯಿಂದ ಎಲ್ಲರ ಮನಸ್ಸನ್ನು ಸೆಳೆಯುತ್ತಿದ್ದ. ಎಲ್ಲರೂ ಆತನ ಸ್ನೇಹ-ಸಾಮೀಪ್ಯವನ್ನು ಬಯಸುತ್ತಿದ್ದರು. ಆತ ಇದ್ದಲ್ಲಿ ನಗುವಿನ ಹೊನಲು. ಇದನ್ನು ನೋಡಿ ಮತ್ತೊಬ್ಬನಿಗೆ ತನ್ನ ಬಗ್ಗೆಯೇ ಕೀಳರಿಮೆ ಮೂಡಲಾರಂಭಿಸಿತು. ಎಲ್ಲರೂ ಅವನನ್ನು ಇಷ್ಟಪಡುತ್ತಾರೆ, ತನ್ನ ಕಡೆ ಮೂಸಿಯೂ ನೋಡುವುದಿಲ್ಲ ಎಂದು ಅನಿಸಿತು. ಇದನ್ನು ಆತನ ಮುಂದೆಯೇ ತೋಡಿಕೊಂಡ. ಅದಕ್ಕೆ ಆತ ತನ್ನ ಸ್ನೇಹಿತನನ್ನು ಸಮಾಧಾನಪಡಿಸಲು ಯತ್ನಿಸಿದ. 'ನೋಡು, ಅದು ನನ್ನ ಮನೋಭಾವ. ನಾನು ಎಲ್ಲರನ್ನೂ ನಗಿಸುತ್ತೇನೆ, ಅದು ನಿನಗೆ ಸಾಧ್ಯವಾಗದಿರಬಹುದು. ಅಷ್ಟಕ್ಕೆಲ್ಲಾ ಬೇಸರವಾಗಬಾರದು. ನಿನ್ನಲ್ಲೂ ಏನಾದರೂ ವಿಶೇಷ ಗುಣವಿರಲೇಬೇಕು. ಆ ಮೂಲಕ ನೀನೂ ಎಲ್ಲರ ಗಮನ ಸೆಳೆಯಬಹುದು' ಎಂದು ಪ್ರೇರಣೆಯ ಮಾತುಗಳನ್ನು ಹೇಳಿದ. ಆದರೆ ಎರಡನೇ ಸೇಲ್ಸ್ ಮನ್‌ಗೆ ಏನೂ ಅನಿಸಲಿಲ್ಲ. 'ಇಲ್ಲ, ನನ್ನಲ್ಲಿ ಅಂಥ ಯಾವ ಗುಣವೂ ಇಲ್ಲ. ನಾನು ಬೋರಿಂಗ್ ಪರ್ಸನಾಲಿಟಿ. ನೀನೇ ಹೇಳು, ನಾನು ಏನು ಮಾಡಬೇಕೆಂದು. ನಾನೂ ನಿನ್ನ ಹಾಗೆ ಎಲ್ಲರ ಗಮನ ಸೆಳೆಯಬೇಕು' ಎಂದು ವಿನಂತಿಸಿಕೊಂಡ. ಮೊದಲ ಸೇಲ್ಸ್‌ಮನ್ ಯೋಚನೆಗೆ ಬಿದ್ದ. ತನ್ನ ಸ್ನೇಹಿತನಿಗೆ ಹೇಗಾದರೂ ಸಹಾಯ ಮಾಡಬೇಕು ಎಂದು ನಿರ್ಧರಿಸಿದ. 'ನೋಡು, ನಿನ್ನೆ ಪತ್ರಿಕೆಯಲ್ಲಿ ಓದಿದ್ದೆ. ನಗರದ ಸರ್ಕಸ್ ಕಂಪನಿಯನ್ನು ಮುಚ್ಚುತ್ತಿದ್ದಾರಂತೆ. ಆ ಕಂಪನಿಯಲ್ಲಿ ಒಂದು ಒಂಟೆ ಇದೆಯಂತೆ. ಅದನ್ನು ನೀನೇಕೆ ಖರೀದಿಸಬಾರದು?' ಎಂದು ಕೇಳಿದ. ಎರಡನೇಯ

ಸೇಲ್ಸ್‌ಮನ್, 'ಒಂಟೆ ಖರೀದಿಸಿ ನಾನೇನು ಮಾಡಲಿ?' ಎಂದು ಕೇಳಿದ. ಅದಕ್ಕೆ ಮೊದಲನೆಯವ, 'ನೀನು ಒಂಟೆಯ ಮೇಲೆ ಹೋಗುವಾಗ ಎಲ್ಲರೂ ನಿನ್ನನ್ನು ನೋಡುತ್ತಾರೆ. ನೀನು ಎಲ್ಲರ ಗಮನಸೆಳೆಯಬಹುದು' ಎಂದ. ಆತನಿಗೆ ಐಡಿಯಾ ಹಿಡಿಸಿತು. ಸರಿ ಎರಡನೆಯವ ಹೋಗಿ ಒಂಟೆಯನ್ನು ಖರೀದಿಸಿದ. ಮರುದಿನವೇ ಒಂಟೆಯನ್ನೇರಿ ನಗರದಲ್ಲಿ ತಿರುಗಾಡಲಾರಂಭಿಸಿದ. ಜನರೆಲ್ಲಾ ಅವನನ್ನೇ ನೋಡಲಾರಂಭಿಸಿದರು. ಅವನ ಬಿಸಿನೆಸ್ ಸಹ ಹೆಚ್ಚಿತು. ಅವನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಈ ಮಧ್ಯೆ ಒಂದು ದಿನ ಅವನ ಒಂಟೆ ಏಕಾಏಕಿ ನಾಪತ್ತೆಯಾಯಿತು. ಆತ ಕಂಗಾಲಾದ. 'ಒಂಟೆ ಕಾಣೆಯಾಗಿದೆ' ಎಂದು ಸ್ಥಳೀಯ ಪತ್ರಿಕೆಯಲ್ಲಿ ಜಾಹೀರಾತು ನೀಡಲು ನಿರ್ಧರಿಸಿದ. 'ಅದು ಗಂಡು ಒಂಟೆಯೋ, ಹೆಣ್ಣು ಒಂಟೆಯೋ?' ಎಂದು ಜಾಹೀರಾತು ವಿಭಾಗದವ ಕೇಳಿದ. 'ಅದು ಗಂಡೋ, ಹೆಣ್ಣೋ ನನಗೆ ಹೇಗೆ ಗೊತ್ತಾಗಬೇಕು?' ಎಂದು ತಲೆ ಕೆರೆದುಕೊಂಡ. ಒಂದು ಕ್ಷಣದ ನಂತರ, 'ಅದು ಹೆಣ್ಣು ಒಂಟೆ' ಎಂದು ಹೇಳಿದ. ಅದಕ್ಕೆ ಜಾಹೀರಾತು ವಿಭಾಗದವ, 'ಹೇಗೆ ಹೇಳುತ್ತೀರಿ ಅದು ಹೆಣ್ಣು ಒಂಟೆ ಅಂತ?' ಎಂದು ಕೇಳಿದ. ಅದಕ್ಕೆ ಒಂಟೆ ಸವಾರ ಸೇಲ್ಸ್‌ಮನ್ ಹೇಳಿದ - 'ಪ್ರತಿ ಸಲ ನಾನು ಬೀದಿಯಲ್ಲಿ ಹೋಗುವಾಗ, ಒಂಟೆ ಮೇಲಿರುವ schmuck ನನ್ನು ನೋಡಿ ಎಂದು ಜನ ಕಿರುಚುತ್ತಿದ್ದರು. ಅದನ್ನು ನೋಡಿ ಒಂಟೆಗೂ ಸಂತಸವಾಗುತ್ತಿತ್ತು. ಹೀಗಾಗಿ ಅದು ಹೆಣ್ಣು ಒಂಟೆಯೇ ಆಗಿರಬೇಕು.' ಅಷ್ಟಕ್ಕೂ ಯಿಡ್ಡಿಶ್ ಭಾಷೆಯಲ್ಲಿ schmuck ಅಂದ್ರೆ ಮೂರ್ಖ ಮತ್ತು ಶಿಶ್ನ ಎಂದರ್ಥ.

ಅತಿಯಾದ್ರೆ 'ಕಪ್' ಕೂಡ ಕಪ್ಪಾಗುತ್ತೆ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ವಿಶ್ವ ಕ್ರಿಕೆಟ್‌ನ 'ಆಯಾಮ'ವನ್ನು ಬದಲಾಯಿಸಿದ, ಕ್ರಿಕೆಟ್ ಕ್ರೇಜ್ ಕಡಿಮೆಯಾಗುತ್ತಿದೆ ಎನ್ನುವ ಹೊತ್ತಿನಲ್ಲಿ ಪರಿಚಯವಾಗಿದ್ದೇ ಐಪಿಎಲ್. ಬಿಸಿಸಿಐ ಆರಂಭಿಸಿದ ಐಪಿಎಲ್‌ಗೆ ಎಷ್ಟು ಪ್ರಾಯವೋ ಅಷ್ಟೇ ಪ್ರಾಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿ ಗಳ ಇಎಸ್ ಸಿಎನ್ ಅರ್ಥಾತ್ 'ಈ ಸಲ ಕಪ್ ನಮ್ದೇ' ಎನ್ನುವ ಘೋಷಣೆಗೆ. ವಿಜಯ್ ಮಲ್ಯ ಒಡೆತನದಲ್ಲಿರುವ ಆರ್‌ಸಿಬಿ ಆರಂಭದಿಂದಲೂ 'ಪೇಪರ್'ನಲ್ಲಿ ಬಲಿಷ್ಠವಾ ಗಿದ್ದರೂ 17 ವರ್ಷದಲ್ಲಿ ಒಮ್ಮೆಯೂ ಕಪ್ ಗೆಲ್ಲಲಾಗಿರಲಿಲ್ಲ. ಪ್ರತಿವರ್ಷ ಐಪಿಎಲ್ ಆರಂಭದಲ್ಲಿ ಇರುತ್ತಿದ್ದ 'ಇಎಸ್‌ಸಿಎನ್' ಹ್ಯಾಷ್ ಟ್ಯಾಗ್ ಟೂರ್ನಿ ಮುಗಿಯುವ ವೇಳೆಗೆ ಮುಂದಿನ ಸಲ ಕಪ್ ನಮ್ದೇ ಆಗಿ ಹೋಗುತ್ತಿತ್ತು.

ಐಪಿಎಲ್‌ನಲ್ಲಿ ಅತಿಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಪಟ್ಟಿಯಲ್ಲಿ ಮೊದಲೆರೆಡು ಸ್ಥಾನದಲ್ಲಿಯೇ ಆರ್‌ಸಿಬಿ ಕೂತರೂ, ಟ್ರೋಫಿಯ ವಿಷಯಕ್ಕೆ ಬಂದಾಗ ಮಾತ್ರ ಕಣ್ಣಿಗೆ ಕಾಣಿಸದಷ್ಟು ಕೆಳಗೆ ಇರುತ್ತಿತ್ತು. 18ನೇ ಆವೃತ್ತಿಯ ಆರಂಭದಲ್ಲಿಯೂ 'ಇಎಸ್‌ಸಿಎನ್' ಎನ್ನುವ ಮಹದಾಸೆಯೊಂದಿಗೆ ಆರ್‌ಸಿಬಿ ತನ್ನ ಆವೃತ್ತಿಯನ್ನು ಆರಂಭಿಸಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಹೊರತಾಗಿ ಉಳಿದೆಲ್ಲ ಕಡೆ ಉತ್ತಮ ಪ್ರದರ್ಶನ ನೀಡಿ ಕೊನೆಗೂ 'ಕಪ್ ನಮ್ದೇ' ಎನ್ನುವ ಘೋಷಣೆಯನ್ನು ಮಾಡಿದ್ದಾಯಿತು. ಆರ್ ಸಿಬಿಯ ಈ ಗೆಲುವಿನ ಕ್ಷಣವನ್ನು ಕೇವಲ ಕರ್ನಾಟಕ ಮಾತ್ರವಲ್ಲದೇ, ವಿಶ್ವಾದ್ಯಂತ ಇರುವ ಅಭಿಮಾನಿಗಳು ಸಂಭ್ರಮಿಸಿದರು. ಕೇವಲ ಆರ್‌ಸಿಬಿ ಅಭಿಮಾನಿಗಳಷ್ಟೇ ಅಲ್ಲದೇ, ಇತರೆ ತಂಡದ ಅಭಿಮಾನಿಗಳು ಕೊನೆಗೂ ಇವರ ಆಸೆ ಈಡೇರಿತು ಎನ್ನುವ ಮನಸ್ಥಿತಿಯಲ್ಲಿ ಖುಷಿಪಟ್ಟರು. ಆದರೆ ಇಷ್ಟೇ ಆಗಿದ್ದರೆ ಇದು ಅಂಕಣದ ವಿಷಯವೇ ಆಗಿರುತ್ತಿರಲಿಲ್ಲ.

18 ವರ್ಷದ ಬಳಿಕ ಗೆದ್ದ ಟ್ರೋಫಿಯ ಸಂಭ್ರಮದ ನೆಪದಲ್ಲಿ ಫ್ರಾಂಚೈಸಿ, ಸರಕಾರ ಹಾಗೂ ಅಭಿಮಾನಿಗಳ ಅತಿರೇಕದ ವರ್ತನೆಗಳು, ಸಂಭ್ರಮವನ್ನು 18 ದಿನ ಹೋಗಲಿ 18 ತಾಸು ಉಳಿಸಲಿಲ್ಲ. ಹೌದು, ಪಂಜಾಬ್ ವಿರುದ್ಧ ಅಹಮದಾಬಾದ್ ನಲ್ಲಿ ಆರ್‌ಸಿಬಿ ಗೆಲ್ಲುತ್ತಿದ್ದಂತೆ, ಇತ್ತ ಅಭಿಮಾನಿಗಳ ಸಂಭ್ರಮಾಚರಣೆಯ ಕಟ್ಟೆ ಒಡೆದಿತ್ತು. ಅತಿರೇಕದ ಅಭಿಮಾನದಿಂದ ಪಂದ್ಯ ಮುಗಿದ ರಾತ್ರಿಯೇ ಅನೇಕರು ಅಪಘಾತ, ರೋಡ್‌ರೇಜ್‌ನಂತಹ ಕಾರಣಗಳಿಗೆ ಕೊನೆಯುಸಿರು ಎಳೆದಿದ್ದರು. ಈ ಎಲ್ಲ ನಡೆದ ಬಳಿಕವೂ, ಆರ್ ಸಿಬಿ ಬೆಂಗಳೂರಿನಲ್ಲಿ ವಿಜಯೋತ್ಸವದ ಪರೇಡ್ ಅನ್ನು ತರಾತುರಿಯಲ್ಲಿ ಆಯೋಜಿಸಿತ್ತು. ಇದರ ಬೆನ್ನಲ್ಲೇ, ರಾಜ್ಯ ಸರಕಾರ ತಮ್ಮಿಂದಲೂ ಆರ್‌ಸಿಬಿ ಆಟಗಾರರಿಗೆ ಅಧಿಕೃತ ಸನ್ಮಾನ ಕಾರ್ಯಕ್ರಮ ನಡೆಸಲು ಮುಂದಾಗಿತ್ತು (ಸರಕಾರದ ವತಿಯಿಂದ ನಡೆದ ಕಾರ್ಯಕ್ರಮಕ್ಕೆ ಒತ್ತಡ ಹೇರಿದ್ದವರು ಈಗಾಗಲೇ ಅಧಿಕಾರ ಕಳೆದುಕೊಂಡಿದ್ದಾರೆ ಎನ್ನುವುದು ಬೇರೆ ಮಾತು).

ಪಂದ್ಯಾವಳಿಯ ಆರಂಭಕ್ಕೂ ಮೊದಲೇ ಆರ್‌ಸಿಬಿ ಹಾಗೂ ಕೆಎಸ್‌ಸಿಎ ವಿಜಯೋತ್ಸವ ಪರೇಡ್‌ಗೆ ಅನುಮತಿ ಕೇಳಿದ್ದರಂತೆ. ಇದಕ್ಕೆ 'ಮ್ಯಾಚ್ ಫಿಕ್ಸಿಂಗ್' ಬಣ್ಣವನ್ನು ಕಟ್ಟಲಾಗುತ್ತಿದೆ. ಆದರೆ ಪಂದ್ಯ ಗೆದ್ದ ಮರುದಿನವೇ ವಿಜಯೋತ್ಸವ ಮಾಡಿದರೆ ಎಲ್ಲ ಆಟಗಾರರು ಲಭ್ಯರಿರುತ್ತಾರೆ ಎನ್ನುವ ಲೆಕ್ಕಾಚಾರದಲ್ಲಿ ಈ ಆತುರದ ತೀರ್ಮಾನ ವನ್ನು ಆರ್‌ಸಿಬಿ ಕೈಗೊಂಡಿರಬಹುದು. ಆರಂಭದಲ್ಲಿ ಅನುಮತಿ ನೀಡದಿದ್ದರೂ, ಬಳಿಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ಕೆ.ಗೋವಿಂದರಾಜು ಅವರ 'ಅತ್ಯುತ್ಸಾಹ'ದಿಂದ ಒಲ್ಲದ ಮನಸ್ಸಿನಿಂದ ಪೊಲೀಸರು ಅನುಮತಿ ಕೊಟ್ಟಿದ್ದು, ಇದರಿಂದ ಚಿನ್ನಸ್ವಾಮಿ ಕ್ರೀಡಾಂಗಣದ ಸಾಮರ್ಥ್ಯಕ್ಕಿಂತ 10 ಪಟ್ಟು ಮಂದಿ ಸೇರಿದ್ದು, ಇದರಿಂದಾಗಿ ಶುರುವಾದ ಕಾಲ್ತುಳಿತದಲ್ಲಿ 11 ಮಂದಿ ಸತ್ತಿದ್ದು ಎಲ್ಲವೂ ಎಲ್ಲರಿಗೂ ಗೊತ್ತಿರುವ ವಿಷಯ. ಪೊಲೀಸರ ತೀವ್ರ ವಿರೋಧ ಹೊರತಾಗಿಯೂ ಕಾರ್ಯಕ್ರಮದ ಬಗ್ಗೆ ಆಸಕ್ತಿ ವಹಿಸಲು ಅವರವರ ಕಾರಣಗಳಿರುವುದಂತೂ ಸ್ಪಷ್ಟ.

ಹೌದು, ಮೊದಲಿಗೆ ಪೊಲೀಸರ ಸ್ಪಷ್ಟ ನಿರಾಕರಣೆಯ ಹೊರತಾಗಿಯೂ ಆರ್‌ಸಿಬಿ ವಿಜಯೋತ್ಸವ ಪರೇಡ್ ನಡೆಸಬೇಕು ಎಂದು ಫ್ರಾಂಚೈಸಿ ಹಾಗೂ ಕೆಎಸ್‌ಸಿಎ ತೀರ್ಮಾನಿಸಿದ್ದರಿಂದ ಹಿಂದೆ 'ಟಿಆರ್‌ಪಿ' ಇರುವುದು ಸ್ಪಷ್ಟ. ಈ ಕಾರ್ಯಕ್ರಮಕ್ಕೆ ಲಕ್ಷಾಂತರ ಜನ ಸೇರುತ್ತಾರೆ, ಲೈವ್ ನೋಡುತ್ತಾರೆ. ಈ ಲೈವ್‌ನಲ್ಲಿನ ಜಾಹೀರಾತುಗಳಿಂದ ಇನ್ನಷ್ಟು 'ಲಾಭ' ಮಾಡಿಕೊಳ್ಳುವುದು ಆರ್‌ಸಿಬಿಯ ಉದ್ದೇಶವಾಗಿತ್ತು. ಇನ್ನು ಪಂದ್ಯದ ಮರುದಿನವೇ ಕಾರ್ಯಕ್ರಮ ಆಯೋಜಿಸಿದ್ದರಿಂದ ಹಿಂದಿನ ಮತ್ತೊಂದು ಕಾರಣವೆಂದರೆ, ಆರ್‌ಸಿಬಿಯ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ, ವಿದೇಶಿ ಆಟಗಾರರಾದ ಫಿಲ್ ಸಾಲ್ಟ್, ಟಿಮ್ ಡೆವಿಡ್, ಹ್ಯಾಜಲ್‌ವುಡ್ ಸೇರಿದಂತೆ ಅನೇಕರು ಬೆಂಗಳೂರಿಗೆ ವಾಪಸಾಗುತ್ತಿದ್ದಂತೆ ಮರುದಿನವೇ ಹೊರಡುವ ಆಲೋಚನೆಯಲ್ಲಿದ್ದರು. ಈ ಎಲ್ಲ ಆಟಗಾರರು ಹೊರಟು ಹೋದರೆ ತಮಗೆ ಸಿಗಬೇಕಾಗಿರುವ 'ಟಿಆರ್‌ಪಿ' ಸಿಗುವುದಿಲ್ಲ ಎನ್ನುವ ಕಾರಣಕ್ಕೆ ಪೊಲೀಸರ ವಿರೋಧವನ್ನು ಹಾಕಿಕೊಂಡು, ಸರಕಾರದ ಮೂಲಕವೇ ಸೂಚನೆ ಕೊಡಿಸಿ ಕಾರ್ಯಕ್ರಮ ಆಯೋಜಿಸಿದರು.

ಇನ್ನು ಫ್ರಾಂಚೈಸಿ ತಂಡವೊಂದು ಗೆಲುವು ಸಾಧಿಸಿದಕ್ಕೆ ಸರಕಾರ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಅಧಿಕೃತ ಕಾರ್ಯಕ್ರಮ ಆಯೋಜಿಸಿದ್ದಾದರೂ ಏಕೆ? ಅದಕ್ಕೆ ಎಲ್ಲ ಶಿಷ್ಟಾಚಾರಗಳನ್ನು ಬದಿಗೊತ್ತಿ ರಾಜ್ಯಪಾಲರನ್ನು ಆಹ್ವಾನಿಸಿದ್ದೇಕೆ ಎನ್ನುವ ಪ್ರಶ್ನೆ ಬರುವುದು ಸಹಜ. ಇದಕ್ಕೆ ಸರಳ ಉತ್ತರ, 'ಗೋವಿಂದರಾಜು ಅವರ ಅತ್ಯುತ್ಸಾಹ' ಎನ್ನುವುದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಲ್ಲದ ಮನಸ್ಸಿನಿಂದಲೇ ಕಾರ್ಯಕ್ರಮಕ್ಕೆ ಒಪ್ಪಿಸಿ, ಸಿದ್ದರಾಮಯ್ಯ ಅವರು ಕರೆದಿದ್ದಾರೆಂದು ರಾಜ್ಯಪಾಲರನ್ನು ಒಪ್ಪಿಸಿ, ಸರಕಾರ ಕರೆದಿದೆ ಎಂದು ಆರ್‌ಸಿಬಿ ಮ್ಯಾನೇಜ್‌ಮೆಂಟ್ ಅನ್ನು ಒಪ್ಪಿಸಿದ್ದು ಗೋವಿಂದರಾಜು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಈ ಎಲ್ಲ ಪ್ರಹಸನದ ನಡುವೆ ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್ ಅವರು ಸುರಕ್ಷತಾ ದೃಷ್ಟಿಯಿಂದ ಕಾರ್ಯಕ್ರಮ ಮುಂದೂಡುವುದು ಸೂಕ್ತವೆಂದು ಗೋವಿಂದರಾಜು ಅವರಿಗೆ ನೀಡಿದ ಸಲಹೆಯನ್ನು ಮುಖ್ಯಮಂತ್ರಿಗಳ ಕಿವಿಗೆ ಬೀಳದಂತೆ ನೋಡಿಕೊಂಡರು. ಈ ಎಲ್ಲದರ ಪರಿಣಾಮ, ವಿಧಾನಸೌಧಕ್ಕೆ ಭದ್ರತೆ ಕೊಡುವ ಕಾರಣ ಚಿನ್ನಸ್ವಾಮಿ ಕ್ರೀಡಾಂಗಣವನ್ನು ಪೊಲೀಸರು ಮರೆತರು. ವಿಧಾನಸೌಧದಲ್ಲಿ ಕಾಲ್ತುಳಿತ ವಾಗದಿದ್ದರೂ, ನೂಕುನುಗ್ಗಲು ಆಗಿರುವುದು ಸ್ಪಷ್ಟ.

ಈ ಕಾಲ್ತುಳಿತದ ಬೆನ್ನಲ್ಲೇ ಒಬ್ಬೊಬ್ಬರದ್ದು ಒಂದೊಂದು ವಾದ ಶುರುವಾಯಿತು. ಅದರಲ್ಲಿಯೂ ಆರಂಭದಲ್ಲಿ ವಿಜಯೋತ್ಸವಕ್ಕೆ ಅನುಮತಿ ನೀಡದ ಪೊಲೀಸರ ನಡೆಯನ್ನು ಖಂಡಿಸಿ ಸಾಮಾಜಿಕ ಜಾಲತಾಣದಲ್ಲಿ ರೋಷಾವೇಶ ಪ್ರದರ್ಶನ ಮಾಡಿದ್ದ ಬಿಜೆಪಿ-ಜೆಡಿಎಸ್ ಇವರು, ಅನುಮತಿ ಕೊಟ್ಟಿದ್ದು ಏಕೆ ಎನ್ನುವ ಪ್ರಶ್ನೆಯನ್ನು ಶುರು ಮಾಡಿದ್ದಾರೆ. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ. ಕೆ.ಶಿವಕುಮಾರ್ ರಾಜೀನಾಮೆ ಕೇಳುತ್ತಿರುವ ಬಿಜೆಪಿ ಗರಿಗೆ, ಇಡೀ ಪ್ರಕರಣದಲ್ಲಿ ಆರ್‌ಸಿಬಿ ಹಾಗೂ ಕೆಎಸ್‌ಸಿಎ ಬಗ್ಗೆ ಮಾತನಾಡುವ ಧೈರ್ಯವಿಲ್ಲ. ಏಕೆಂದರೆ, ಕೆಎಸ್‌ಸಿಎ, ಆರ್ ಸಿಬಿ ಅಥವಾ ಬಿಸಿಸಿಐ ಅನ್ನು ಟೀಕಿಸಿದರೆ ಅದೆಲ್ಲಿ ಗೃಹ ಸಚಿವ ಅಮಿತ್ ಶಾ 'ಪುತ್ರ'ನಿಗೆ ಬೇಸರವಾಗುವುದೋ ಎನ್ನುವ ಆತಂಕದಲ್ಲಿಯೇ ತಮ್ಮ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಕೆಎಸ್‌ಸಿಎ ತಮ್ಮದೇನಿದ್ದರೂ ಕರ್ನಾಟಕದಲ್ಲಿ ಕ್ರಿಕೆಟ್ ಬೆಳವಣಿಗೆ ಬಗ್ಗೆ ಪರಿಶೀಲನೆ ನಡೆಸುವುದೇ ಹೊರತು, ಸುರಕ್ಷತೆಯ ವಿಷಯಕ್ಕೂ ಸಂಬಂಧವಿಲ್ಲ. ಚಿನ್ನಸ್ವಾಮಿ ಗೇಟ್ ಬಳಿ ಜನದಟ್ಟಣೆ ನಿರ್ವಹಣೆ ಪೊಲೀಸರು ವಿಫಲರಾಗಿದ್ದಾರೆ ಎನ್ನುವ ಮೂಲಕ ತಮಗೂ ಕಾಲ್ತುಳಿತಕ್ಕೂ ಸಂಬಂಧವಿಲ್ಲ. ಆದರೂ, ಮೃತರಿಗೆ 5ಲಕ್ಷ ಪರಿಹಾರ ಘೋಷಿಸಿ ಕೈತೊಳೆದುಕೊಂಡಿದೆ. ಇನ್ನು ಟ್ರೋಫಿ ಗೆದ್ದ ಹುಮ್ಮಸ್ಸಿನಲ್ಲಿ ಪೊಲೀಸರ ಮಾತು ಕೇಳದೇ ವಿಜಯೋತ್ಸವ ಆಯೋಜಿಸಿದ್ದ ಆರ್‌ಸಿಬಿ ಸತ್ತವರ ಕುಟುಂಬಕ್ಕೆ 10 ಲಕ್ಷ ಪರಿಹಾರ ನೀಡಿದೆ. ಆದರೆ ನಮಗೂ ಕಾಲ್ತುಳಿತಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದೆ. ಆರ್‌ಸಿಬಿ ಫ್ರಾಂಚೈಸಿ ತಂಡವಾಗಿದ್ದು, ಪ್ರತ್ಯೇಕ ಭದ್ರತಾ ಪಡೆಗಳಿಲ್ಲ. ಆದ್ದರಿಂದ ವಿಜಯೋತ್ಸವದ ವೇಳೆ ಭದ್ರತೆ ನೀಡಬೇಕಿರುವುದು ರಾಜ್ಯ ಸರಕಾರ ಕರ್ತವ್ಯ. ಇನ್ನು ವಿಧಾನಸೌಧದ ಬಳಿ ವಿಜಯೋತ್ಸವಕ್ಕೆ ನಾವು ಕೇಳಿರಲಿಲ್ಲ, ಸರಕಾರದ ನಿರ್ಧಾರ. ಕಾನೂನು ಸುವ್ಯವಸ್ಥೆ ಕಾಪಾಡಬೇಕಿರುವುದು ಸರಕಾರದ ಕರ್ತವ್ಯ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವ ಮೂಲಕ ತಮಗೂ ಈ ಇಡೀ ಪ್ರಕರಣಕ್ಕೂ ಸಂಬಂಧವಿಲ್ಲವೆಂದು ಜಾರಿಗೊಂಡಿದೆ. ಸರಕಾರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯಾವುದೇ ಸಮಸ್ಯೆಯಾಗಿಲ್ಲ, ಆಗಿರುವುದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎಂದು ಜಾರಿಗೊಂಡಿದೆ.

ಈ ಎಲ್ಲದರ ನಡುವೆ ಅತಿರೇಕ ಅಭಿಮಾನ ತೋರಿಸಲು ಹೋಗಿದ್ದೇ 11 ಜನರ ಸಾವಿಗೆ ಪ್ರಮುಖ ಕಾರಣ ಎನ್ನುವುದನ್ನು ಮರೆಯುವಂತಿಲ್ಲ. ದೀರ್ಘಕಾಲದ ಕಾಯುವಿಕೆಯ ಬಳಿಕ ಆರ್‌ಸಿಬಿ ಮಡಿಲಿಗೆ ಕಪ್ ಬಂದಿರುವುದು ಸಹಜವಾಗಿಯೇ ಎಲ್ಲರಿಗೂ ಖುಷಿ ಕೊಟ್ಟಿದೆ. ಹಾಗೆಂದ ಮಾತ್ರಕ್ಕೆ 35 ಸಾವಿರ ಸಾಮರ್ಥ್ಯವಿರುವ ಚಿನ್ನಸ್ವಾಮಿ ಕ್ರೀಡಾಂಗಣದೊಳಗೆ ಒಂದುವರೆ ಲಕ್ಷ ನುಗ್ಗಲು ಪ್ರಯುತ್ನಿಸಿದರೆ ಏನಾಗಬಹುದು ಎನ್ನುವ ಸಾಮಾನ್ಯ ಪ್ರಜ್ಞೆಯಿಲ್ಲದೇ ನುಗ್ಗಲು ಪ್ರಯತ್ನಿಸಿದ್ದಕ್ಕೆ ಯಾರು ಹೊಣೆ. ಅಭಿಮಾನವನ್ನು ತೋರುವ ಸಮಯದಲ್ಲಿ, ತಮ್ಮ ಜೀವಕ್ಕೆ ತಾವೇ ಗ್ಯಾರಂಟಿ ಎನ್ನುವುದನ್ನು ಮರೆತಿದ್ದು ಸಾರ್ವಜನಿಕರ ತಪ್ಪಲ್ಲವೇ? ಎನ್ನುವುದಕ್ಕೆ ಉತ್ತರವಿಲ್ಲ.

ಹಾಗೇ ನೋಡಿದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತಕ್ಕೆ ಮೃತಪಟ್ಟಿರುವ ಘಟನೆ ಕ್ರೀಡಾ ಜಗತ್ತಿಗೆ ಹೊಸದೇನಲ್ಲ, ಕ್ರೀಡೆಯ ಸಂಭ್ರಮಾಚರಣೆ ಅಥವಾ ಫೈನಲ್ ಪಂದ್ಯಾವಳಿಯಲ್ಲಿನ ವಿವಾದಗಳಿಗೆ ಸುಮಾರು 10ಕ್ಕೂ ಹೆಚ್ಚು ಕಾಲ್ತುಳಿತ ಪ್ರಕರಣಗಳು ಜಗತ್ತಿನಲ್ಲಿ ದಾಖಲಾಗಿದೆ. ಆದರೆ ಈ ಎಲ್ಲ ಕಾಲ್ತುಳಿತಗಳೂ, ಫುಟ್‌ಬಾಲ್ ಕ್ರೀಡೆಯಲ್ಲಿಯೇ ಆಗಿರುವುದು. ಈ ಹಿಂದೆ ಭಾರತ-ಶ್ರೀಲಂಕಾ ನಡುವಿನ ವಿಶ್ವಕಪ್ ಪಂದ್ಯಾವಳಿಯ ವೇಳೆ ಅಭಿಮಾನಿಗಳು ಬಾಟಲ್ ತೂರಿದ್ದು ಅಥವಾ 1996ರ ವಿಶ್ವಕಪ್ ಸೆಮೀಸ್‌ನಲ್ಲಿ ಕ್ರೀಡಾಂಗಣದಲ್ಲಿ ಬೆಂಕಿ ಹಾಕಿದ ಘಟನೆಗಳಿಗೆ ಭಾರತದ ಕ್ರಿಕೆಟ್ ಇತಿಹಾಸ ಸಾಕ್ಷಿಯಾಗಿದೆ. ಇನ್ನು ಪಾಕಿಸ್ತಾನದಲ್ಲಿ ಪಾಕಿಸ್ತಾನ-ಶ್ರೀಲಂಕಾ ಪಂದ್ಯದ ವೇಳೆ ಉಗ್ರರ ದಾಳಿಯಾಗಿರುವ ಇತಿಹಾಸವಿದೆ. ಆದರೆ ಕಾಲ್ತುಳಿತದಂತಹ ಘಟನೆಗಳು ವಿಶ್ವಾದ್ಯಂತ ಎಲ್ಲಿಯೂ ನಡೆದಿರಲಿಲ್ಲ.

ಆಟಗಾರರ ನಡುವಿನ ಸ್ಲೆಡ್ಜಿಂಗ್ ಅಥವಾ ಅಭಿಮಾನಿಗಳ 'ಟೀಕೆ'ಗಳನ್ನೇ ಅರಗಿಸಿಕೊಳ್ಳದ ಜೆಂಟಲ್‌ಮ್ಯಾನ್ ಗೇಮ್ ಎನಿಸಿಕೊಳ್ಳುವ ಕ್ರಿಕೆಟ್ ಜಗತ್ತು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಈ ಕಾಲ್ತುಳಿತವನ್ನು ನಿರೀಕ್ಷೆ ಮಾಡಿರಲಿಲ್ಲ. ಆದರೆ 18 ವರ್ಷದ ಟ್ರೋಫಿ ಕಾಯುವಿಕೆಯ ಬಳಿಕ ನೆಚ್ಚಿನ ತಂಡಕ್ಕೆ ಟ್ರೋಫಿ ಸಿಕ್ಕಿದ್ದಾಗ ಅಭಿಮಾನಿಗಳು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬಹುದು ಎನ್ನುವುದನ್ನು ಸರಕಾರ, ಫ್ರಾಂಚೈಸಿ ಹಾಗೂ ಕೆಎಸ್‌ಸಿಎ ಯೋಚಿಸಬಹುದಾಗಿತ್ತು. ಈ ವಿಜಯೋತ್ಸವನ್ನು ಆಚರಿಸುವ ಮೊದಲೇ, ಅಹಮದಾಬಾದ್ ನಲ್ಲಿ ಆರ್‌ಸಿಬಿ ಗೆಲುವು ದಾಖಲಿಸುತ್ತಿದ್ದಂತೆ, ಬೆಂಗಳೂರಿನಲ್ಲಿ ಮುಂಜಾನೆವರೆಗೆ ಅಭಿಮಾನಿಗಳ 'ಅತಿರೇಕ'ದ ಆಚರಣೆಯನ್ನು ನೋಡಿಯಾದರೂ ಎಚ್ಚೆತ್ತುಕೊಂಡು 'ಸಾವಕಾಶ'ವಾಗಿ ವಿಜಯೋತ್ಸವ ಆಚರಿಬಹುದಾಗಿತ್ತು. ಆದರೆ ಎಲ್ಲರೂ ತಮ್ಮ ತಮ್ಮ ಮೂಗಿನ ನೇರಕ್ಕೆ ಆಲೋಚನೆ ಮಾಡಿ, ಕಾಲ್ತುಳಿತದಲ್ಲಿ 11 ಮಂದಿ ಕೊನೆಯುಸಿರು ಎಳೆಯುವಂತಾಗಿದೆ. ಯಾವ ಉದ್ದೇಶಕ್ಕಾಗಿ ಅತಿರೇಕದ ಉತ್ಸಾಹವನ್ನು ಅಭಿಮಾನಿಗಳು, ಸರಕಾರ ಹಾಗೂ ಫ್ರಾಂಚೈಸಿ ಮಾಡಿತ್ತೋ, ಇದೀಗ ಆ ಟ್ರೋಫಿ ಗೆದ್ದ ಖುಷಿಯೇ ಉಳಿಯಲು ಬಿಡಲಿಲ್ಲ ಎನ್ನುವುದು ವಾಸ್ತವ. 18ವರ್ಷ ಟ್ರೋಫಿಗಾಗಿ ಕಾದು, ಅದರ ಸಂಭ್ರಮವನ್ನು 18 ತಾಸು ಉಳಿಸಿಕೊಳ್ಳಲಿಲ್ಲ ಎನ್ನುವುದೇ ಆರ್‌ಸಿಬಿಯ ದುರಂತ!

ಹೊಸ ಭಾರತದ ಮೇಲೆ ಸೂರ್ಯ ಪ್ರಕಾಶಿಸುತ್ತಿದ್ದಾನೆ...!

ಪ್ರಲ್ಹಾದ್ ಜೋಶಿ
ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವ
ranjith.hoskere@gmail.com

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ, ಭಾರತವು ನವೀಕರಿಸಬಹುದಾದ ಇಂಧನ ವಲಯದಲ್ಲಿ ಕೇವಲ ಮಹತ್ವಾಕಾಂಕ್ಷೆಯ ಗುರಿಗಳನ್ನು ಮಾತ್ರ ಇರಿಸಿಲ್ಲ, ಬದಲಿಗೆ ದೃಢ ಸಂಕಲ್ಪ, ನಾವೀನ್ಯತೆ ಮತ್ತು ಅಪ್ರತಿಮ ಪ್ರಮಾಣದೊಂದಿಗೆ ಅವುಗಳನ್ನು ಸಾಧಿಸಿದ್ದೇವೆ.

ಇಂದು ಭಾರತವು ವಿಶ್ವದ ಮುಂಚೂಣಿ ಸ್ವಚ್ಛ ಇಂಧನ ನಾಯಕರಲ್ಲಿ ಒಂದು. ಸೌರಶಕ್ತಿಯಲ್ಲಿ ಮೂರನೇ, ಪವನ ವಿದ್ಯುತ್ ನಲ್ಲಿ ನಾಲ್ಕನೇ ಮತ್ತು ಒಟ್ಟಾರೆ ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿದೆ. 232 ಗಿಗಾವ್ಯಾಟ್ ಗಿಂತಲೂ ಅಧಿಕ ನವೀಕರಿಸಬಹುದಾದ ಸಾಮರ್ಥ್ಯವನ್ನು ಸ್ಥಾಪಿಸಿದ್ದು, ಮತ್ತೊಂದು 176 ಗಿಗಾವ್ಯಾಟ್ ನಿರ್ಮಾಣ ಹಂತದಲ್ಲಿದೆ. ನಾವು ಕೇವಲ ನಮ್ಮ ಇಂಧನ ಅಗತ್ಯಗಳನ್ನು ಪೂರೈಸುವುದಲ್ಲದೆ, ಇಂಧನ ಪರಿವರ್ತನೆಯ ಕುರಿತಾದ ಜಾಗತಿಕ ಚರ್ಚೆಯನ್ನು ಸಕ್ರಿಯವಾಗಿ ರೂಪಿಸುತ್ತಿದ್ದೇವೆ. ಈ ಪ್ರಗತಿಯು ಕೇವಲ ಕಾಕತಾಳೀಯವಲ್ಲ, ಬದಲಾಗಿ ಕಳೆದ 11 ವರ್ಷಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಸ್ಥಿರವಾಗಿ ಅನುಸರಿಸಲಾದ ದಿಟ್ಟ ಸುಧಾರಣೆಗಳು, ಸಮಯೋಚಿತ ನಿರ್ಧಾರಗಳು ಮತ್ತು ಸ್ಪಷ್ಟವಾದ ದೂರದೃಷ್ಟಿಯ ಫಲಿತಾಂಶವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಬಲಿಷ್ಠ ನವೀಕರಿಸಬಹುದಾದ ಇಂಧನ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಕುರಿತು ಸ್ಪಷ್ಟ ದೃಷ್ಟಿಕೋನವನ್ನು ಹೊಂದಿದ್ದರು. ಗುಜರಾತ್ ನ ಮುಖ್ಯಮಂತ್ರಿಯಾಗಿದ್ದಾಗ, ಸ್ವಚ್ಛ ಇಂಧನವು ಜಾಗತಿಕ ಆದ್ಯತೆಯಾಗುವ ಮೊದಲೇ ಅವರು ದೊಡ್ಡ ಪ್ರಮಾಣದ ಸೌರ ಯೋಜನೆಗಳಿಗೆ ಮುಂದಾಳತ್ವ ವಹಿಸಿದ್ದರು. 2014 ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ, ಅವರು ಆ ದೃಷ್ಟಿಕೋನವನ್ನು ರಾಷ್ಟ್ರವ್ಯಾಪಿ ವಿಸ್ತರಿಸಿದರು. ಇದರ ಪರಿಣಾಮವಾಗಿ, ಇಂದು ಭಾರತವು ಸೌರ, ಪವನ ಮತ್ತು ಸ್ವಚ್ಛ ಇಂಧನ ನಾವೀನ್ಯತೆಯಲ್ಲಿ ಜಾಗತಿಕ ನಾಯಕನಾಗಿ ಗುರುತಿಸಿಕೊಂಡಿದೆ.

ಕಳೆದ ಒಂದು ವರ್ಷದಲ್ಲಿಯೇ, ನಾವು ರಾಷ್ಟ್ರೀಯ ಗ್ರಿಡ್‌ಗೆ ದಾಖಲೆಯ 29 ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನವನ್ನು ಸೇರಿಸಿದ್ದೇವೆ. 2014 ರಲ್ಲಿ ಕೇವಲ 2.63 ಗಿಗಾವ್ಯಾಟ್ ಇದ್ದ ಸೌರ ಸಾಮರ್ಥ್ಯವು 2025 ರಲ್ಲಿ ಬೃಹತ್ ಪ್ರಮಾಣದಲ್ಲಿ 41 ಪಟ್ಟು ಹೆಚ್ಚಾಗಿ 108 ಗಿಗಾವ್ಯಾಟ್ ಗಿಂತಲೂ ಹೆಚ್ಚಾಗಿದೆ. ಪವನ ಶಕ್ತಿಯ ಸಾಮರ್ಥ್ಯವು ಸಹ 51 ಗಿಗಾವ್ಯಾಟ್‌ಗಳನ್ನು ಮೀರಿದೆ. ದೇಶದಾದ್ಯಂತ ಹರಡಿರುವ ಈ ಯೋಜನೆಗಳನ್ನು ಈಗ ಏಕೀಕೃತ ಪ್ರಸರಣ ವ್ಯವಸ್ಥೆಯ ಮೂಲಕ ಜೋಡಿಸಲಾಗುತ್ತಿದೆ, ಇದರಿಂದಾಗಿ ಒಂದು ರಾಷ್ಟ್ರ ಒಂದು ಗ್ರಿಡ್ ಎಂಬ ಕನಸು ನನಸಾಗುತ್ತಿದೆ. ಇದರ ಮೂಲಕ ಭೌಗೋಳಿಕ ತಡೆಗಳಿಲ್ಲದೆ ಪ್ರತಿಯೊಬ್ಬ ಭಾರತೀಯನು ವಿಶ್ವಾಸಾರ್ಹ ವಿದ್ಯುತ್ ಅನ್ನು ಪಡೆಯಬಹುದು.

ಆದರೆ ಈ ಪರಿವರ್ತನೆಯ ಪ್ರಮಾಣವನ್ನು ಅರಿಯಲು, ನಾವು ಎಲ್ಲಿಂದ ಪ್ರಾರಂಭಿಸಿದ್ದೇವೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. 2014 ರಲ್ಲಿ, ಭಾರತದ ವಿದ್ಯುತ್ ವಲಯವು ತೀವ್ರ ಬಿಕ್ಕಟ್ಟಿನಲ್ಲಿತ್ತು. ವಿದ್ಯುತ್ ಕೊರತೆ ದೀರ್ಘಕಾಲೀನ ಸಮಸ್ಯೆಯಾಗಿತ್ತು. 2012 ರಲ್ಲಿ ಎರಡು ಬಾರಿ ಗ್ರಿಡ್ ವೈಫಲ್ಯವುಂಟಾಗಿತ್ತು. ಮೊದಲು ಉತ್ತರ ಪ್ರದೇಶದಲ್ಲಿ 36,000 ಮೆಗಾವ್ಯಾಟ್ ಲೋಡ್ ನಷ್ಟವನ್ನು ಉಂಟುಮಾಡಿತು. ನಂತರ ಉತ್ತರ, ಪೂರ್ವ ಮತ್ತು ಈಶಾನ್ಯ ಗ್ರಿಡ್‌ಗಳ ಕುಸಿತಕ್ಕೆ ಕಾರಣವಾಗಿ 48,000 ಮೆಗಾವ್ಯಾಟ್ ಗಳ ಮೇಲೆ ಪರಿಣಾಮ ಬೀರಿತು, ಅದು ಇನ್ನೂ ನಮ್ಮ ನೆನಪಿನಲ್ಲಿದೆ. ಅಲ್ಲಿವರೆಗೂ ನವೀಕರಿಸಬಹುದಾದ ಶಕ್ತಿಯನ್ನು ದುಬಾರಿ ಮತ್ತು ವಿಶ್ವಾಸಾರ್ಹವಲ್ಲ ಎಂದು ಪರಿಗಣಿಸಲಾಗಿತ್ತು. ಜಾಗತಿಕ ಸಮುದಾಯವು ಭಾರತವನ್ನು ಗಂಭೀರವಾದ ಶುದ್ಧ ಇಂಧನ ಆಟಗಾರನಾಗಿ ನೋಡಲಿಲ್ಲ. ದೇಶದೊಳಗೆ, ಸಾರ್ವಜನಿಕರ ನಿರೀಕ್ಷೆಗಳು ಅತ್ಯಲ್ಪವಾಗಿದ್ದವು. ನೀತಿ ನಿಶ್ಚಯವಿಲ್ಲದಿರುವುದು ಕೂಡ ಭಾರತವನ್ನು 'ದುರ್ಬಲ ಐದು' ಆರ್ಥಿಕತೆಗಳಲ್ಲಿ ಒಂದಾಗಿ ಲೇಬಲ್ ಮಾಡಲು ಕಾರಣವಾಗಿತ್ತು.

ಇಂದು ಆ ಸನ್ನಿವೇಶವು ನಿರ್ಣಾಯಕವಾಗಿ ಬದಲಾಗಿದೆ. ಭಾರತವು ಇಂಧನ ಕೊರತೆಯಿಂದ ಇಂಧನ ಆತ್ಮನಿರ್ಭರತೆಯತ್ತ ಸಾಗಿದೆ. ಹಿಂದೆ ಬಿದ್ದಿದ್ದ ನಾವು ಈಗ ಇತರರಿಗೆ ಮಾದರಿಯಾಗಿದ್ದೇವೆ. ಮೋದಿ ಸರ್ಕಾರದ ಅಡಿಯಲ್ಲಿ ಕಳೆದ 11 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ವಲಯದಲ್ಲಿನ 11 ಪರಿವರ್ತನಾತ್ಮಕ ಸುಧಾರಣೆಗಳನ್ನು ನಾನು ಎತ್ತಿ ತೋರಿಸುತ್ತೇನೆ. ಪ್ರತಿಯೊಂದು ಸುಧಾರಣೆಯೂ ನಮ್ಮ ಆತ್ಮನಿರ್ಭರತೆ, ಒಳಗೊಳ್ಳುವ ಬೆಳವಣಿಗೆ ಮತ್ತು ಸುಸ್ಥಿರತೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಮೊದಲನೆಯದಾಗಿ, ಫೀಡ್-ಇನ್ ಸುಂಕಗಳಿಂದ ಪಾರದರ್ಶಕ, ಮಾರುಕಟ್ಟೆ-ಚಾಲಿತ ಬಿಡ್ಡಿಂಗ್ ಪ್ರಕ್ರಿಯೆಗೆ ಬದಲಾವಣೆ ಒಂದು ಮಹತ್ವದ ತಿರುವು. ಸ್ಪರ್ಧಾತ್ಮಕ ಬಿಡ್ಡಿಂಗ್ ಮತ್ತು ಸುಂಕದ ತರ್ಕಬದ್ಧಗೊಳಿಸುವಿಕೆಯಿಂದಾಗಿ ಸೌರ ಶಕ್ತಿಯ ಶುಲ್ಕವು 2010 ರಲ್ಲಿ ಪ್ರತಿ ಯುನಿಟ್ ಗೆ ₹10.95 ರಿಂದ 2021 ರ ವೇಳೆಗೆ ಬೆರಗುಗೊಳಿಸುವ ₹1.99 ಕ್ಕೆ ಇಳಿಯಿತು, ಇದು ಭಾರತವನ್ನು ಸೌರ ಶಕ್ತಿಯಲ್ಲಿ ಜಾಗತಿಕ ಬೆಲೆ ನಾಯಕನಾಗಿ ಸ್ಥಾನಾಂತರಿಸಿತು. ಈ ಸುಧಾರಣೆಯು ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸಿದೆ. ಪಳೆಯುಳಿಕೆ ಇಂಧನಗಳೊಂದಿಗೆ ಬೆಲೆ ಸಮಾನತೆಯನ್ನು ಸ್ಥಾಪಿಸಿದೆ.

ಎರಡನೆಯದಾಗಿ, ಮತ್ತೊಂದು ಪ್ರಮುಖ ಸೌಲಭ್ಯವೆಂದರೆ ಅಂತರ-ರಾಜ್ಯ ಪ್ರಸರಣ ವ್ಯವಸ್ಥೆಯ ಶುಲ್ಕಗಳ ರದ್ದತಿ. ಈ ಶುಲ್ಕಗಳನ್ನು ತೆಗೆದುಹಾಕುವ ಮೂಲಕ, ಸರಕಾರವು ಯೋಜನಾಸಕ್ತರಿಗೆ ಇದ್ದ ಒಂದು ಪ್ರಮುಖ ಅಡಚಣೆಯನ್ನು ನಿವಾರಿಸಿದೆ. ಕಡಲಾಚೆಯ ಪವನ ವಿದ್ಯುತ್ ಗೆ 2032 ರವರೆಗೆ ಮತ್ತು ಹಸಿರು ಜಲಜನಕಕ್ಕೆ 2030 ರವರೆಗೆ ವಿಸ್ತರಿಸಲಾದ ಈ ನೀತಿಯು ನವೀಕರಿಸಬಹುದಾದ ಇಂಧನ ನಿಯೋಜನೆಯನ್ನು ಭೌಗೋಳಿಕ ಮಿತಿಗಳಿಂದ ಪರಿಣಾಮಕಾರಿಯಾಗಿ ಮುಕ್ತಗೊಳಿಸಿದೆ. ಅಖಿಲಭಾರತ ಮಟ್ಟದಲ್ಲಿ ಇಂಧನ ಶಕ್ತಿಯ ಹರಿವಿಗೆ ಪ್ರೋತ್ಸಾಹ ನೀಡಿದೆ.

ಮೂರನೆಯದಾಗಿ, ಆಮದು ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ಉದ್ಯೋಗಗಳನ್ನು ಸೃಷ್ಟಿಸಲು, ಸರಕಾರವು ಸೌರ ಉತ್ಪಾದನೆಗಾಗಿ ₹24,000 ಕೋಟಿ ಪ್ರೋತ್ಸಾಹಧನಗಳೊಂದಿಗೆ ಉತ್ಪಾದನೆ-ಸಂಬಂಧಿತ ಪ್ರೋತ್ಸಾಹ (Production Linked Incentive & PLI) ಯೋಜನೆಯನ್ನು ಪರಿಚಯಿಸಿದೆ. ಇದು ದೇಶೀಯ ಉತ್ಪಾದನಾ ಹೆಚ್ಚಳಕ್ಕೆ ಕಾರಣವಾಗಿದೆ, 2014 ರಲ್ಲಿ 2.3 ಗಿಗಾ ವ್ಯಾಟ್ ಇದ್ದ ಮಾಡ್ಯೂಲ್ ಸಾಮರ್ಥ್ಯವು 2025 ರ ವೇಳೆಗೆ 88 ಗಿಗಾ ವ್ಯಾಟ್‌ಗೆ ಹೆಚ್ಚಿದೆ. ಸೆಲ್ ಸಾಮರ್ಥ್ಯ ಸೊನ್ನೆಯಿಂದ 25 ಗಿಗಾ ವ್ಯಾಟ್‌ಗೆ ಬೆಳೆದಿದೆ. ಭಾರತವು ಕೇವಲ ಸೌರಶಕ್ತಿಯನ್ನು ನಿಯೋಜಿಸುವುದಷ್ಟೇ ಅಲ್ಲ, ಅದನ್ನು ಉತ್ಪಾದಿಸುತ್ತಲೂ ಇದೆ. ಇದು ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ ಮತ್ತು ಇಂಧನ ಭದ್ರತೆಯನ್ನು ಹೆಚ್ಚಿಸುತ್ತದೆ.

ನಾಲ್ಕನೆಯದಾಗಿ, ಸ್ವಾವಲಂಬನೆಯನ್ನು ಉತ್ತೇಜಿಸಲು ಮತ್ತು ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು, ಸರಕಾರವು ಮಾದರಿಗಳು ಮತ್ತು ತಯಾರಕರ ಅನುಮೋದಿತ ಪಟ್ಟಿ, ಘಟಕಗಳು ಮತ್ತು ತಯಾರಕರ ಅನುಮೋದಿತ ಪಟ್ಟಿ ಹಾಗೂ ದೇಶೀಯ ಅಂಶ ಅಗತ್ಯಗಳನ್ನು ಜಾರಿಗೊಳಿಸಿದೆ. ಇದು ಗುಣಮಟ್ಟದ ಭರವಸೆ, ಪೂರೈಕೆ ಸರಪಳಿಯ ಸಮಗ್ರತೆ ಮತ್ತು ಆಮದು ಮಾಡಿಕೊಳ್ಳುವ ಸೌರ ಘಟಕಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದೆ. ಈ ಕ್ರಮಗಳು ಭಾರತೀಯ ತಯಾರಕರಿಗೆ ಸಮಾನ ಸ್ಪರ್ಧಾತ್ಮಕ ವಾತಾವರಣವನ್ನು ಸೃಷ್ಟಿಸಿದ್ದು, ಸ್ಥಿತಿಸ್ಥಾಪಕ ಮತ್ತು ಸ್ಪರ್ಧಾತ್ಮಕ ಸೌರ ಪರಿಸರ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿವೆ.

ಐದನೆಯದಾಗಿ, ಪ್ರಧಾನಮಂತ್ರಿಯವರ 'ಪಿಎಂ-ಸೂರ್ಯ ಘರ್: ಮುಫತ್ ಬಿಜ್ಲಿ' ಯೋಜನೆ ಒಂದು ಕ್ರಾಂತಿಕಾರಿ ಉಪಕ್ರಮವಾಗಿ ಮಾರ್ಪಟ್ಟಿದೆ. ಇದು ಒಂದು ಕೋಟಿ ಮನೆಗಳಲ್ಲಿ ಮೇಲ್ಛಾವಣಿ ಸೌರ ಸ್ಥಾಪನೆಯನ್ನು ಗುರಿಯಾಗಿಸಿಕೊಂಡು 30 ಗಿಗಾವ್ಯಾಟ್ ವಿಕೇಂದ್ರೀಕೃತ ಸಾಮರ್ಥ್ಯವನ್ನು ಸೃಷ್ಟಿಸುತ್ತದೆ. ಈಗಾಗಲೇ ಸುಮಾರು 13.75 ಲಕ್ಷ ಮನೆಗಳನ್ನು ಇದರೊಂದಿಗೆ ಜೋಡಿಸಲಾಗಿದೆ. ಇದು ತಳಮಟ್ಟದಲ್ಲಿ ಶುದ್ಧ ಶಕ್ತಿಗೆ ಲಭ್ಯತೆಯನ್ನು ಹೆಚ್ಚಿಸುತ್ತಿದೆ.

ಆರನೆಯದಾಗಿ, ಪಿಎಂ-ಕುಸುಮ್ ಯೋಜನೆಯು ರೈತರು ವಿಕೇಂದ್ರೀಕೃತ ಸೌರ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುವ ಮೂಲಕ ಕೃಷಿ ಕ್ಷೇತ್ರ ಸೌರ ವಿದ್ಯುತ್ತಿಗೆ ಬದಲಾಗುತ್ತಿದೆ. ಈಗಾಗಲೇ 11 ಲಕ್ಷಕ್ಕೂ ಹೆಚ್ಚು ಪಂಪ್ ಗಳನ್ನು ಸೌರೀಕರಣಗೊಳಿಸಲಾಗಿದೆ, ಇದು ಭಾರತದ ಅತ್ಯಂತ ಹೆಚ್ಚು ಇಂಧನ-ತೀವ್ರ ವಲಯವನ್ನು ಹವಾಮಾನ ಸ್ನೇಹಿಯನ್ನಾಗಿ ಪರಿವರ್ತಿಸುತ್ತಿದೆ.

ಏಳನೆಯದಾಗಿ, ಭಾರತವು ಈಗ ಸ್ವಚ್ಛ ಇಂಧನದಲ್ಲಿ ಇಡೀ ವಿಶ್ವವನ್ನು ಹಿಂಬಾಲಿಸುತ್ತಿಲ್ಲ, ಬದಲಿಗೆ ಮುನ್ನಡೆಸುತ್ತಿದೆ. ಏಪ್ರಿಲ್ 2020 ರಿಂದ ಸೆಪ್ಟೆಂಬರ್ 2024 ರ ಅವಧಿಯಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತ 19.98 ಬಿಲಿಯನ್ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸಿದೆ. ಹಸಿರು ಇಂಧನ ಭಾರತದಲ್ಲಿ ಅತಿ ಹೆಚ್ಚು ಎಫ್‌ಡಿಐ ಆಕರ್ಷಿಸುವ ಕ್ಷೇತ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಇದು ಜಾಗತಿಕವಾಗಿ ಭಾರತದ ಸ್ಥಾನಮಾನ ಮತ್ತು ಆರ್ಥಿಕ ಸಾಮರ್ಥ್ಯದ ಏರಿಕೆಯನ್ನು ಪ್ರತಿಬಿಂಬಿಸುತ್ತದೆ. ಈ ಪಯಣದಲ್ಲಿ ಮತ್ತೊಂದು ಪ್ರಮುಖ ವೇಗವರ್ಧಕವೆಂದರೆ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್. ಇದಕ್ಕೆ ₹20,000 ಕೋಟಿ ಹೂಡಿಕೆ ಬೆಂಬಲವಿದೆ. ಇದು ಭಾರತವನ್ನು ಸ್ವಚ್ಛ ಇಂಧನಗಳ ಜಾಗತಿಕ ಕೇಂದ್ರವನ್ನಾಗಿ ಮಾಡುವ ಗುರಿಯನ್ನು ಹೊಂದಿದೆ.

ಎಂಟನೆಯದಾಗಿ, ಪ್ರಸರಣ ಮೂಲಸೌಕರ್ಯವು ಪರಿವರ್ತನೆಯ ಬೆನ್ನೆಲುಬಾಗಿ ಉಳಿದಿದೆ. ಭಾರತವು ಹಸಿರು ಇಂಧನ ಕಾರಿಡಾರ್‌ಗಳು ಮತ್ತು 2030 ರ ಪ್ರಸರಣ ಮಾರ್ಗಸೂಚಿಯಲ್ಲಿನ ಹೂಡಿಕೆಯು ನವೀಕರಿಸಬಹುದಾದ ಇಂಧನ ಯೋಜನೆಗಳು ಗ್ರಿಡ್ ಗೆ ಸಮರ್ಥವಾಗಿ ಮತ್ತು ವಿಶ್ವಾಸಾರ್ಹವಾಗಿ ಸಂಪರ್ಕಗೊಳ್ಳಲು ಸಾಧ್ಯವಾಗಿಸುತ್ತದೆ. ಈ ಬೆನ್ನೆಲುಬು ಇಂಧನ ಕಡಿತದ ಅಪಾಯಗಳನ್ನು ಕಡಿಮೆ ಮಾಡುತ್ತದೆ ಮತ್ತು ಗ್ರಿಡ್‌ನ ಸ್ಥಿರತೆಯನ್ನು ಹೆಚ್ಚಿಸುತ್ತದೆ.

ಒಂಬತ್ತನೆಯದಾಗಿ, ಭಾರತದ ಕರಾವಳಿ ಪ್ರದೇಶಗಳ ಅಪಾರ ಸಾಮರ್ಥ್ಯವನ್ನೂ ಸರ್ಕಾರ ಬಳಸಿಕೊಳ್ಳುತ್ತಿದೆ. ಕಡಲಾಚೆಯ ಗಾಳಿ ವಿದ್ಯುತ್ (Offshore wind) ಯೋಜನೆಗಳು, 2030 ರ ವೇಳೆಗೆ 37 ಗಿಗಾ ವ್ಯಾಟ್ ಟೆಂಡರ್ ಗಳನ್ನು ಯೋಜಿಸಿದ್ದು, ಕಾರ್ಯಸಾಧ್ಯತಾ ಅಂತರ ನಿಧಿ (viability gap funding) ಮತ್ತು ಸದೃಢ ಸ್ಥಳ ಸಮೀಕ್ಷೆಗಳಿಂದ ಬೆಂಬಲಿತವಾಗಿವೆ. ಗುಜರಾತ್ ಮತ್ತು ತಮಿಳುನಾಡಿನಲ್ಲಿನ ಪ್ರಾಯೋಗಿಕ ಯೋಜನೆಗಳು ಈಗಾಗಲೇ ಭಾರತದ ಮುಂದಿನ ನವೀಕರಿಸಬಹುದಾದ ಇಂಧನ ಗಡಿಯುದ್ದಕ್ಕೂ ಅಡಿಪಾಯವನ್ನು ಹಾಕುತ್ತಿವೆ.

ಹತ್ತನೆಯದಾಗಿ, ಮಧ್ಯಂತರ ವಿದ್ಯುತ್ ಪೂರೈಕೆಯ ಸವಾಲನ್ನು ಅರಿತುಕೊಂಡು, ಭಾರತವು ಹೈಬ್ರಿಡ್ ಮತ್ತು ದಿನದ 24 ಗಂಟೆಯೂ ವಿದ್ಯುತ್ ಪೂರೈಸುವ ನೀತಿಯೊಂದಿಗೆ ನಿರ್ಣಾಯಕ ಹೆಜ್ಜೆ ಇಟ್ಟಿದೆ. ಗಾಳಿ-ಸೌರ ಹೈಬ್ರಿಡ್ ಗಳನ್ನು ಮತ್ತು ದೃಢ ಹಾಗೂ ವಿತರಿಸಬಹುದಾದ ನವೀಕರಿಸಬಹುದಾದ ಇಂಧನವನ್ನು ಉತ್ತೇಜಿಸುವ ಮೂಲಕ, ಭಾರತವು 24/7 ಸ್ವಚ್ಛ ಇಂಧನ ಪರಿಹಾರಗಳನ್ನು ನಿರ್ಮಿಸುತ್ತಿದೆ. 65 ಗಿಗಾ ವ್ಯಾಟ್‌ಗೂ ಹೆಚ್ಚು ಯೋಜನೆಗಳು ಸಿದ್ಧವಾಗುತ್ತಿದ್ದು, ಇದು ಗ್ರಿಡ್ ವಿಶ್ವಾಸಾರ್ಹತೆಗೆ ಮತ್ತು ಪಳೆಯುಳಿಕೆ-ಆಧಾರಿತ ಬೇಸ್ ಲೋಡ್ ವಿದ್ಯುತ್ ಅನ್ನು ಬದಲಿಸಲು ಅತ್ಯಗತ್ಯವಾಗಿದೆ.

ಹನ್ನೊಂದನೆಯದಾಗಿ, ಬುಡಕಟ್ಟು ಮತ್ತು ದೂರದ ಪ್ರದೇಶಗಳಲ್ಲಿ, ಈ ತನಕ ವಿದ್ಯುತ್ ಇರದಿದ್ದ ಮನೆಗಳಿಗೆ ನಾವು ವಿದ್ಯುತ್ ತಲುಪಿಸುತ್ತಿದ್ದೇವೆ. ವಿಶೇಷವಾಗಿ ದುರ್ಬಲ ಬುಡಕಟ್ಟು ಗುಂಪುಗಳಿಗಾಗಿ ವಿಶೇಷ ಸೌರ ಕಾರ್ಯಕ್ರಮಗಳ ಮೂಲಕ ಮತ್ತು ಪಿಎಂ ಜನಮನ್ ಮಿಷನ್ ಹಾಗೂ ಸಿ ಪಿ ಎಸ್ ಯು ಯೋಜನೆ ಹಂತ-ಐಐ (CPSU Scheme Phase-II) ಅಡಿಯಲ್ಲಿ, ಸಾವಿರಾರು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇವು ಕೇವಲ ಇಂಧನ ಕಾರ್ಯಕ್ರಮಗಳಲ್ಲ, ಬದಲಿಗೆ ಸಬಲೀಕರಣ ಮತ್ತು ಅಂತರ್ಗತ ಬೆಳವಣಿಗೆಯ ಸಾಧನಗಳಾಗಿವೆ.

ಜಾಗತಿಕ ಮನ್ನಣೆ ಮತ್ತು ದೇಶೀಯ ಸಂಕಲ್ಪ

ಭಾರತ ಕೇವಲ ದೇಶದಲ್ಲಿ ಮಾತ್ರ ಪ್ರಗತಿ ಸಾಧಿಸುತ್ತಿಲ್ಲ. ನಾವು ಜಾಗತಿಕವಾಗಿ ಮುನ್ನಡೆಸುತ್ತಿದ್ದೇವೆ. ಪ್ರಧಾನಿ ಮೋದಿಯವರು ಪ್ರಾರಂಭಿಸಿದ ಅಂತಾರಾಷ್ಟ್ರೀಯ ಸೌರ ಒಕ್ಕೂಟವು 100 ಕ್ಕೂ ಹೆಚ್ಚು ದೇಶಗಳನ್ನು ಒಟ್ಟುಗೂಡಿಸಿದೆ. 'ಒಂದು ಸೂರ್ಯ ಒಂದು ಜಗತ್ತು ಒಂದು ಗ್ರಿಡ್' ಎಂಬ ದೂರದೃಷ್ಟಿಯು ಸೌರ ಶಕ್ತಿಯು ರಾಷ್ಟ್ರಗಳನ್ನು ಹೇಗೆ ಒಂದುಗೂಡಿಸಬಹುದು ಎಂದು ಜಗತ್ತಿಗೆ ತೋರಿಸುತ್ತಿದೆ. ಇದು ಭಾರತದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಮೊದಲ ಅಂತರರಾಷ್ಟ್ರೀಯ ಮತ್ತು ಅಂತರ-ಸರಕಾರಗಳ ಸಂಸ್ಥೆಯಾಗಿದೆ. ಜಗತ್ತು ಭಾರತವನ್ನು ಗಮನಿಸುತ್ತಿದೆ. ಮತ್ತು ಜಗತ್ತು ಭಾರತದಿಂದ ಕಲಿಯುತ್ತಿದೆ.

ವಿಶ್ವದಲ್ಲೆಡೆಯ ಹೂಡಿಕೆದಾರರು ಭಾರತದ ಶುದ್ಧ ಇಂಧನ ಭವಿಷ್ಯಕ್ಕಾಗಿ 2030ರ ವೇಳೆಗೆ 32.45 ಲಕ್ಷ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಲು ಬದ್ಧರಾಗಿದ್ದಾರೆ. ವಲಯದಲ್ಲಿ ಹಣಕಾಸಿನ ಬೆಂಬಲವನ್ನು ಬಲಪಡಿಸಲು ಮತ್ತು ಹೂಡಿಕೆಯನ್ನು ವೇಗಗೊಳಿಸಲು ಎಲ್ಲಾ ಪ್ರಮುಖ ಬ್ಯಾಂಕ್‌ಗಳ ಉನ್ನತ ಅಧಿಕಾರಿಗಳೊಂದಿಗೆ ನವೀಕರಿಸಬಹುದಾದ ಇಂಧನಕ್ಕಾಗಿ ಹಣಕಾಸು ಕ್ರೋಢೀಕರಣದ ಕುರಿತು ರಾಷ್ಟ್ರೀಯ ಕಾರ್ಯಾಗಾರವನ್ನು ಸಹ ಆಯೋಜಿಸಲಾಗಿತ್ತು. ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ತ್ವರಿತಗೊಳಿಸಲು ಮತ್ತು ಕಾರ್ಯನಿರ್ವಹಿಸಲು ಹಾಗೂ ನಾವೀನ್ಯತೆಗಳನ್ನು ಪ್ರೋತ್ಸಾಹಿಸಲು ರಾಜ್ಯಗಳ ನಡುವೆ ಸ್ಪರ್ಧಾತ್ಮಕ ವಾತಾವರಣವನ್ನು ಬೆಳೆಸಲು ಪ್ರಧಾನ ಮಂತ್ರಿಯವರ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿಗಳೊಂದಿಗೆ ನಿಯಮಿತ ಸಭೆಗಳನ್ನು ಸಹ ನಡೆಸಲಾಗುತ್ತಿದೆ.

ಇತ್ತೀಚೆಗೆ ಮೇ24 ರಂದು ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ ಸಭೆಯಲ್ಲಿ, ಪ್ರಧಾನಿ ಮೋದಿಯವರು ಶುದ್ಧ ಇಂಧನ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕುರಿತು ಎಲ್ಲಾ ಮುಖ್ಯಮಂತ್ರಿಗಳೊಂದಿಗೆ ವಿವರವಾದ ಚರ್ಚೆ ನಡೆಸಿದರು. ಭವಿಷ್ಯದ ಸಿದ್ಧ ಹಸಿರು ಕಾರ್ಯಪಡೆಯನ್ನು ಸಿದ್ಧಪಡಿಸುವ ಗುರಿಯನ್ನು ಹೊಂದಿರುವ ಪ್ರಮುಖ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಾಗಿ ಸೂರ್ಯಮಿತ್ರ, ವಾಯುಮಿತ್ರ ಮತ್ತು ಜಲ್ ಊರ್ಜಾಮಿತ್ರದಂತಹ ಉಪಕ್ರಮಗಳನ್ನು ಎತ್ತಿ ತೋರಿಸಲಾಯಿತು.

ಮುಂದಿರುವ ದಾರಿ

ಪ್ರಧಾನಿ ಮೋದಿಯವರು 2030 ರ ವೇಳೆಗೆ 500 ಗಿಗಾವ್ಯಾಟ್ ಪಳೆಯುಳಿಕೆ ರಹಿತ ವಿದ್ಯುತ್ ಸಾಮರ್ಥ್ಯವನ್ನು ಗುರಿಯಾಗಿಟ್ಟುಕೊಂಡಿದ್ದಾರೆ. ನಾವು ಈಗಾಗಲೇ 228 ಗಿಗಾವ್ಯಾಟ್ ಗಳನ್ನು ಹೊಂದಿದ್ದೇವೆ. ಇನ್ನು 176 ಗಿಗಾವ್ಯಾಟ್ ಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. 72 ಗಿಗಾವ್ಯಾಟ್ ಗಳ ಟೆಂಡರ್ ಪ್ರಕ್ರಿಯೆಯಲ್ಲಿದೆ. ನಾವು ಕೇವಲ ಗುರಿ ಮುಟ್ಟುವುದಲ್ಲ, ನಿರೀಕ್ಷೆಗಿಂತಲೂ ಮುಂದಿದ್ದೇವೆ. ಇದು ನಮ್ಮ ಹೆಚ್ಚುತ್ತಿರುವ ಇಂಧನ ಅಗತ್ಯಗಳನ್ನು ಪೂರೈಸಲು ಮಾತ್ರವಲ್ಲದೆ, 2032 ರ ವೇಳೆಗೆ ದ್ವಿಗುಣಗೊಳ್ಳುವ ನಿರೀಕ್ಷೆಯಿರುವ ನಮ್ಮ ವಿದ್ಯುತ್ ಬೇಡಿಕೆಯನ್ನು ಸಹ ಬೆಂಬಲಿಸುತ್ತದೆ.

ಅದೇ ಸಮಯದಲ್ಲಿ, ನಾವು 2047 ರ ವೇಳೆಗೆ 1,800 ಗಿಗಾವ್ಯಾಟ್ ಪಳೆಯುಳಿಕೆ ರಹಿತ (non fossil) ಇಂಧನ ಸಾಮರ್ಥ್ಯವನ್ನು ಸಾಧಿಸುವ ನಮ್ಮ ದೀರ್ಘಾವಧಿಯ ಗುರಿಯತ್ತ ಸ್ಥಿರವಾಗಿ ಕಾರ್ಯನಿರ್ವಹಿಸುತ್ತಿದ್ದೇವೆ. ಒಟ್ಟಾಗಿ, ಈ ಮೈಲಿಗಲ್ಲುಗಳು ಸ್ವಚ್ಛ ಮತ್ತು ಅಂತರ್ಗತ ಬೆಳವಣಿಗೆಯಿಂದ ಸಶಕ್ತವಾದ 'ವಿಕಸಿತ ಭಾರತ' ನಿರ್ಮಿಸುವ ನಮ್ಮ ಬದ್ಧತೆಗೆ ಬೆನ್ನೆಲುಬಾಗಿವೆ.

ಹೊಸ ಭಾರತದ ಮೇಲೆ ಸೂರ್ಯ ಪ್ರಕಾಶಿಸುತ್ತಿದ್ದಾನೆ. ಮತ್ತು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ, ನಾವು ವಿಶ್ವವನ್ನು ಮುನ್ನಡೆಸಲು ಸಿದ್ಧರಾಗಿದ್ದೇವೆ.

ಭಟ್ಟರ್ ಸ್ನ್ಯಾಕ್

- **ರಮೇಶ ದೇವರಮನೆ, ಸಿದ್ದಾಪುರ**
ಭಟ್ರೇ, ಹೆಂಡತಿ ತವರು ಮನೆಗೆ ಹೋಗ್ತಾನೇ ಇಲ್ಲವಲ್ಲ?
- **ನಿನಗೆ ಅವಳ ಜತೆ ಸರಿಯಾಗಿ ಜಗಳ ಆಡಲು ಬರೋಲ್ಲ ಅಂತಾಯ್ತು !**

- **ಭೀಮರಾವ್ ಪದಕಿ, ಬೆಂಗಳೂರು**
ಭಟ್ರೇ, ನಿಮ್ಮನ್ನು ಹಿಡ್ಕೊಂಡ್ರೆ ಬಿಡಲು ಮನಸ್ಸಾಗುವುದಿಲ್ಲವಲ್ಲ?
- **ನಿಮ್ಮ ಅಂಕಣವನ್ನು ಹಿಡ್ಕೊಂಡ್ರೆ, ಅಂತ ಸ್ಪಷ್ಟವಾಗಿ ಹೇಳಬಾರದೇ!?**

- **ರಾಜು ಕೆ. ಭರತಕುಮಾರ, ಹಾಸನ**
ಭಟ್ರೇ, ವೀರಪ್ಪ ಮೊಯಿಲಿಯವರು ಮೌನವಾಗಿದ್ದಾರಲ್ಲ?
- **ಸುಮ್ಮಿರು, ಮಾತಾಡಿದ್ರೆ ಮತ್ತೊಂದು ಮಹಾಕಾವ್ಯ ಬರೀತಿನಿ ಅಂತ ಹೊಸ ಬಾಂಬ್ ಹಾಕಬಹುದು!**

- **ಕಮಲಾ ಹೆಗಡೆ, ಉಳ್ಳಾಲ**
ಭಟ್ರೇ, ನಾವು ನಿದ್ದೆ ಮಾಡಿದ್ದೇವೆ ಎಂಬುದು ನಮಗೆ ಯಾವಾಗ ಗೊತ್ತಾಗುತ್ತದೆ?
- **ಎದ್ದಾಗ!**

- **ನಿರಂಜನ ಬಿ., ಕೆಂಗೇರಿ**
ಭಟ್ರೇ, ಟಿಪ್ಸ್ ಕೊಡಬಾರದು ಅಂತಾರಲ್ಲ?
- **ಆಗಲಾದರೂ ಮಾಲೀಕರು ಸರಿ ಯಾಗಿ ಸಂಬಳ ಕೊಡಬಹುದು ಅಂತ !**

- **ನಿರ್ಮಲ ಬಾರಿಗಿಡದ, ಗದಗ**
ಭಟ್ರೇ, ಕೆಲವರು ಬೊಜ್ಜು ಕರಗಿಸುವುದಕ್ಕಾಗಿಯೇ ನಿತ್ಯ ಜಿಮ್‌ಗೆ ಹೋಗುತ್ತಾರಾ?
- **ಇಲ್ಲ... ಬೊಜ್ಜು ಕರಗಿಸಲು ಬರುವ ಹುಡುಗಿಯರನ್ನು ನೋಡಲು!**

- **ಹರಿ ಓಂ ಶಾಸ್ತ್ರಿ, ಶಂಕರಪುರ**
ಸಾರ್, ಕೆಎಸ್‌ಸಿಎ ಅಧ್ಯಕ್ಷರಾದ ರಘುರಾಮ ಭಟ್ಟರ ಮೂರನೇ ವಿಕೆಟ್ ಯಾಕೆ ಬೀಳಲಿಲ್ಲ?
- **ಬೇರೆಯವರ ರಾಜೀನಾಮೆಗಳನ್ನು ಸ್ವೀಕರಿಸಲು ಒಬ್ಬರು ಬೇಕಲ್ಲ!?**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಓದಿ ಓದಿ ಮರುಳಾದ ಕೂಚುಬಟ್ಟಾ, ಏನೂ ಓದದೇ ಇರುವವನು?
- **ಅಡುಗೆ ಭಟ್ಟ!**

- **ಭಾಸ್ಕರ ಮೇಲೂರು, ಶಿವಮೊಗ್ಗ**
ಭಟ್ರೇ, ನಿನ್ನ ತಪ್ಪುಗಳನ್ನು ತಬ್ಬಿಕೋ ಅಂತ ಹೆಂಡತಿಗೆ ಹೇಳಿದರೆ ಏನು ಮಾಡಬಹುದು?
- **ನಿನ್ನನ್ನು ತಬ್ಬಿಕೊಳ್ತಾಳೆ!**

- **ರಘುಪತಿ ಶರ್ಮ, ಯಲ್ಲಾಪುರ**
ಭಟ್ರೇ, ಮಾತು ಮಾತಿಗೂ ಸಾರಿ ಕೇಳು ಅಂತಾಳಲ್ಲ?
- **ಅವಳದ್ದೇ ತಪ್ಪಿದ್ದರೂ ಸಾರಿ ಕೇಳು ಅಂತಾಳಾ?!**

- **ವಾಸಂತಿ ಕತ್ತಲಗೆರೆ, ಮಳವಳ್ಳಿ**
ಭಟ್ರೇ, ಅವಳ ಹೆಸರನ್ನು ಕೂಗಿ ಕರೆದರೂ ಬರುವುದಿಲ್ಲವಲ್ಲ?
- **'ಕಸ್ತೂರಬಾ' ಅಂತ ಹೆಸರಿಟ್ಟುಕೊಂಡರೆ ಇದೊಂದು ಫಜೀತಿ!**

ಕಿತ್ತಾಡದೆ ನಾವು ಬದುಕಬಲ್ಲೆವೇ?

ಜಗತ್ತಿನೆಲ್ಲೆಡೆ ಮನುಷ್ಯ ಸೇಮ್. ಅದೇ ರಾಗ ದ್ವೇಷ, ಅದೇ ನೋವು, ಹತಾಶೆ, ಸುಖ, ಸ್ವಾರ್ಥ.., ಸೇಮ್.. ಯಾವುದೂ ಬದಲಿಲ್ಲ. ಅವನ/ಅವಳ ಮೂಲ ಗುಣ ಕಿತ್ತಾಟ. ಅದಕ್ಕೆ ಕಾರಣಗಳು ಬೇಕಲ್ಲ, ಹೀಗಾಗಿ ಜಾತಿ, ಧರ್ಮ, ಭಾಷೆ ಸಾಧನವಾಗುತ್ತದೆ. ಅದು ಮುಗಿದ ಮೇಲೆ ಇನ್ನಷ್ಟು ಉಪಭಾಷೆ, ಉಪಪಂಗಡವಾಗಿ ಬೇರ್ಪಡುತ್ತಾನೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಾವು ಸಮಾಜವಾಗಿ ಒಂದಾಗಲು ಸಾಧ್ಯವಿದೆಯೇ? ಈ ಪ್ರಶ್ನೆ ನನ್ನ ಸದಾ ಕಾಡುತ್ತಲೇ ಇರುತ್ತದೆ. ಹೇಗೋ ಅಡ್ಜೆಸ್ಟ್ ಮಾಡಿಕೊಂಡು ಬದುಕುವುದು ಬೇರೆ ಕಥೆ, ಒಂದಾಗಿ ಬಾಳುವುದು? ಅದು ನಮ್ಮಿಂದ ಸಾಧ್ಯವೇ? 23ರ ಹರಯದಲ್ಲಿ ಮನೆ ಬಿಟ್ಟು, ದೇಶ ಬಿಟ್ಟು ಹೋಗುವವರೆಗೆ ಲೋಕ ಜ್ಞಾನವಿರದ ನನಗೆ ಅನೇಕ ಸತ್ಯಗಳು ನಂತರದ ದಿನಗಳಲ್ಲಿ ಗೋಚರವಾಗುತ್ತಾ ಹೋಯ್ತು. ಅದರಲ್ಲಿ ಪ್ರಮುಖವಾದದ್ದು ನಾನು, ನನ್ನದು ಎನ್ನುವುದು ಸುಲಭ, ನಮ್ಮದು, ನಮ್ಮವರು ಎನ್ನುವ ಇನ್ಕ್ಲೂಸಿವೆನೆಸ್ ಭಾವನೆ ಬರುವುದು ಮಾತ್ರ ಸುಲಭವಲ್ಲ. ಕಚ್ಚಾಟ ಮನುಷ್ಯನ ಸಹಜ ಗುಣ. ಹೊಂದಾಣಿಕೆ, ಸಹಬಾಳ್ವೆ ಇವೆಲ್ಲವನ್ನೂ ಆತ/ಆಕೆ ಪ್ರಜ್ಞಾಪೂರ್ವಕವಾಗಿ ಕಲಿತಿದ್ದರೂ, ಮೂಲದಲ್ಲಿನ ಪಶುಪ್ರವೃತ್ತಿಯಿಂದ ಹೊರಬರುವುದು ಸುಲಭದ ಮಾತಲ್ಲ. ಮನುಷ್ಯ ಏಕೆ ಜಗಳವಾಡುತ್ತಾನೆ? ಅದೇಕೆ ಆತ ಛಿದ್ರವಾಗುತ್ತಲೇ ಹೋಗುತ್ತಾನೆ? ನಂಬಿದ ತತ್ವಕ್ಕೆ ಬದ್ಧರಾಗಿ, ತತ್ವಕ್ಕೆ ವಿರುದ್ಧವಿದ್ದವರ ವಿರುದ್ಧ ಜಗಳವಾಡುತ್ತಾನೆ, ದ್ವೇಷ, ಸಿಟ್ಟು, ಸೇಡು ಇವೆಲ್ಲವೂ ಉತ್ಪನ್ನವಾಗುತ್ತವೆ. ಹಾಗೆ ಧರ್ಮ, ಭಾಷೆ, ಹಣ, ಅಧಿಕಾರ , ಕಾಮ ಇತ್ಯಾದಿಗಳು ಕಚ್ಚಾಡಿ ಛಿದ್ರವಾಗಲು ಬೇಕಾಗುವ ಕಾರಣಗಳ ಸಾಲಿನಲ್ಲಿ ಕ್ಯೂ ನಿಲ್ಲುತ್ತವೆ. ಆದರೆ ನೀವು ಗಮನಿಸಿ ನೋಡಿ ಆತ ಜಗಳವಾಡುವುದಕ್ಕೆ ಇವೆಲ್ಲವೂ ನಂತರದ ಕಾರಣಗಳು. ಮುಖ್ಯವಾದ ಕಾರಣ, ಆತನ ನೇಚರ್, ಗುಣವೇ ಜಗಳವಾಡುವುದು. ಒಟ್ಟಾಗಿರುವುದು ಆತನಿಗೆ/ಆಕೆಗೆ ಸಹಜ ಧರ್ಮವಲ್ಲ. ಕಿತ್ತಾಡುವುದೇ ಸಹಜ ಧರ್ಮ. ಇದಕ್ಕೆ ಪೂರಕವಾಗಿ ನನ್ನ ಬದುಕಿನಲ್ಲಿ ಕಂಡ ಅನೇಕ ವಿಷಯಗಳನ್ನ ಪ್ರಸ್ತಾಪಿಸುತ್ತಾ ಹೋಗುತ್ತೇನೆ. ಅಗೈನ್ ನಾನೇಳಿದ್ದೇ ಸತ್ಯ ಎನ್ನುವ ಧಾಡಸಿತನ ನನಗಿಲ್ಲ. ಉತ್ತಮ ಚರ್ಚೆಗೆ ಸದಾ ಸಿದ್ಧ.

ಭಾರತ ಬಿಟ್ಟು ಬೇರೆ ದೇಶಗಳಲ್ಲಿ ನೆಲೆಸಿದ ನಂತರ ಒಂದಷ್ಟು ಭಾರತೀಯರು ಸೇರಿದ ತಕ್ಷಣ, ಅಲ್ಲಿ ಒಂದು ಕಮ್ಯುನಿಟಿ, ಸಂಘ ಸ್ಥಾಪನೆಯಾಗುತ್ತದೆ. ಯಾವಾಗ ಅಲ್ಲಿ ಒಂದು ರಾಜ್ಯದವರು ಜಾಸ್ತಿಯಾಗುತ್ತಾ ಹೋಗುತ್ತಾರೆ, ಆಗ ಆ ರಾಜ್ಯದ ಸಂಘ ಶುರುವಾಗುತ್ತದೆ. ಅದು ನಿಧಾನವಾಗಿ ಭಾಷೆಗಳಲ್ಲಿ ವಿಭಜನೆಯಾಗುತ್ತದೆ. ನಂತರದ್ದು ಜಾತಿ ಆಧಾರಿತ ಸಂಘಗಳು, ಉಪಪಂಗಡ, ಅಲ್ಲೂ ಮೇಲು ಕೀಳು ಶುರುವಾಗುತ್ತದೆ. ಉದಾಹರಣೆಗೆ ನಾನು ಕಂಡ ಕನ್ನಡ ಸಂಘ ನಂತರದ ದಿನಗಳಲ್ಲಿ ತುಳುವರ ಸಂಘ, ಬಂಟರ ಸಂಗ, ಗೌಡರ ಸಂಘ, ಹವ್ಯಕ ಕೂಟ, ಮುಲಕನಾಡು, ಇತ್ಯಾದಿಗಳಲ್ಲಿ ಪರ್ಯಾಯಗೊಂಡಿದೆ. ಅದು ಅಷ್ಟಕ್ಕೇ ನಿಲ್ಲುವುದಿಲ್ಲ ಅತಿ ಪುಟ್ಟ ಸಂಘದಲ್ಲಿ 25 ಜನ ಸೇರಿದರೆ ಸಾಕು ಅಲ್ಲಿನ ನಾಯಕತ್ವಕ್ಕೆ ಹೊಡೆದಾಟ ಶುರು. ಅಲ್ಲಿ ವೋಟಿಂಗ್ ಶುರು. ಆಯ್ಕೆಯಾದ ನಾಯಕನ ಮೇಲೆ ಕತ್ತಿ ಮಸೆಯುತ್ತಾ 25 ಜನರಲ್ಲಿ ಸಂಘ ಇಬ್ಭಾಗವಾಗುತ್ತದೆ. ಅರೆರೇ ಇದೇನಿದು ? ನಿಮ್ಮ ಭಾಷೆ ಒಂದೇ, ಧರ್ಮವೊಂದೇ, ಜಾತಿಯೊಂದೇ, ಮುಕ್ಕಾಲುಪಾಲು ಜೀವನ ಶೈಲಿಯೊಂದೇ, ಹೀಗಿದ್ದೂ ಅದೇಕೆ ಇಬ್ಭಾಗವಾಯಿತು? ಉತ್ತರ ಸಿಂಪಲ್ ಮನುಷ್ಯ ಮೂಲಭೂತವಾಗಿ ಇರುವುದೇ ಹಾಗೆ. ಒಗ್ಗಟ್ಟು ಎನ್ನುವುದು ಸೃಷ್ಟಿತ, ಸನ್ನಿವೇಶಕ್ಕೆ, ಬದುಕಿಗೆ, ಉಳಿವಿಗೆ ಬೇಕಾದಾಗ ಮಾತ್ರ ಮೇಲ್ಪದರಕ್ಕೆ ಬರುವ ಕ್ಷಣಿಕ ಭಾವ, ಕಿತ್ತಾಟ, ಛಿದ್ರವಾಗುವುದು ಸಹಜವಾಗಿ ಬಂದದ್ದು.

ಅಯ್ಯೋ ಇವನೇನೋ ಭಾರತೀಯರ ಬಗ್ಗೆ, ಹಿಂದೂಗಳ ಬಗ್ಗೆ ಹೇಳಲು ಬಂದ. ಮುಸ್ಲಿಮರ ಬಗ್ಗೆ ಅಥವಾ ಕ್ರೈಸ್ತರ ಬಗ್ಗೆ ಹೇಳಿದರೆ ಕಾಲು ಮುರಿಯುತ್ತಾರೆ ಅದಕ್ಕೆ ಏನೂ ಹೇಳುವುದಿಲ್ಲ ಎನ್ನುವ ಭಾವನೆ ನಿಮ್ಮದಾಗಿದ್ದರೆ, ಸ್ವಲ್ಪ ನಿಧಾನಿಸಿ. ಮೇಲಿನ ಸಾಲುಗಳು ಎಲ್ಲಾ ಮನುಷ್ಯರಿಗೂ ಅನ್ವಯ. ಇದರಲ್ಲಿ ನೀನು -ನಾನು -ಅವನು ಎನ್ನುವ ಯಾವ ಭೇದವೂ ಇಲ್ಲ. ಉದಾಹರಣೆ ಹೇಳುತ್ತೇನೆ ನೋಡಿ, ಸ್ಪೇನ್ ದೇಶದ ಒಂದು ರಾಜ್ಯ ಕತಲೂನ್ಯದ ಜನರು ಇನ್ನೊಂದು ರಾಜ್ಯ ಅಂದಲೂಸಿಯಾ ಜನರ ಬಗ್ಗೆ ಅವರು ಅತಿ ಭಾವುಕರು ಎನ್ನುತ್ತಾರೆ. ಅಂದಲೂಸಿಯನ್ನರು

ಇವರನ್ನು ಕಂಡು ಭಾರಿ ಲೆಕ್ಕಾಚಾರದ ಭಾವುಕತೆ ಇಲ್ಲದ ಜನ ಎನ್ನುತ್ತಾರೆ. 88 ಲಕ್ಷ ಜನಸಂಖ್ಯೆಯ ಕತಲೂನ್ಯ ನಾವು ಸ್ಪೇನ್ ದೇಶದ ಭಾಗವಲ್ಲ ಎನ್ನುತ್ತಾರೆ. ಸ್ಪೇನ್‌ನ ಇನ್ನೊಂದು ರಾಜ್ಯ ವಾಸ್ಕೋ ತನ್ನನ್ನ ತಾನು ದೇಶವೆಂದು ಕರೆದುಕೊಳ್ಳುತ್ತದೆ. ಸ್ಕಾಟ್ಲೆಂಡ್ ಯುನೈಟೆಡ್ ಕಿಂಗ್ಡಮ್‌ನಿಂದ ಹೊರಬರಬೇಕು ಎನ್ನುವ ಹವಣಿಕೆ ದಶಕಗಳಿಂದ ನಡೆಸುತ್ತಿದೆ, ಕಸೊವೊ ಎನ್ನುವ ಪುಟ್ಟ ಜಾಗ, ಜನ, ಸೆರ್ಬಿಯನ್ನರಿಂದ ಹೊರಬಂದು ಪ್ರತ್ಯೇಕ ದೇಶವೆಂದು ಘೋಷಿಸಿಕೊಂಡಿದ್ದಾರೆ. ಚೆಕ್, ಸ್ಲೊವಾಕಿಯಾ ಬೇರೆಯಾಗಿವೆ, ಇಟಲಿಯ ರೋಮ್‌ನಲ್ಲಿರುವ ವ್ಯಾಟಿಕನ್ ಜಗತ್ತಿನ ಪುಟಾಣಿ ದೇಶವೆಂದು ಪ್ರಸಿದ್ಧಿ ಹೊಂದಿದೆ. ಇದು ಮೈಸೂರಿನ ಯಾವುದಾದರೊಂದು ಪುಟಾಣಿ ಮೊಹಲ್ಲಗಿಂತ ಕಡಿಮೆ ವಿಸ್ತೀರ್ಣ ಹೊಂದಿದೆ. ಫ್ರಾನ್ಸ್ ದೇಶದಲ್ಲಿ ಸರಿಯಾಗಿ ಫಾರ್ಮುಲಾ ಒನ್ ಟ್ರ್ಯಾಕ್ ಮಾಡಲು ಆಗದ ಮೊನಾಕೊ ಎನ್ನುವ ಜಾಗ ದೇಶವಾಗಿದೆ. ಯೂರೋಪಿನ ಉದ್ದಗಲಕ್ಕೂ ನೋಡುತ್ತಾ ಬನ್ನಿ, ಅಲ್ಲೆಲ್ಲ ಭಾಷೆಯ ಹೆಸರಿನಲ್ಲಿ, ನಂಬಿಕೆಯ ಹೆಸರಿನಲ್ಲಿ ದೇಶಗಳು ಛಿದ್ರವಾಗಿವೆ. ಬೆಂಗಳೂರಿನ ಒಂದೆರಡು ಬಡಾವಣೆಗಳಷ್ಟು ಜನಸಂಖ್ಯೆ ಹೊಂದಿರದ ಪ್ರದೇಶಗಳು ಇಲ್ಲಿ ದೇಶದ ಪಟ್ಟ ಪಡೆದು ಕುಳಿತಿವೆ. ಇನ್ನು ರಷ್ಯಾ ಹತ್ತಾರು ದೇಶಗಳಾಗಿ ಛಿದ್ರವಾಗಿ ದಶಕಗಳು ಕಳೆದಿವೆ.

ಇರಾಕಿಯನ್ನರನ್ನು ಕಂಡರೆ, ಇರಾನಿಗರಿಗೆ ಆಗುವುದಿಲ್ಲ, ಸೌದಿ ಕಂಡರೆ ಕುವೈತ್ ಗೆ ಆಗುವುದಿಲ್ಲ, ಕತಾರ್ ವೇಗವಾಗಿ ಬೆಳೆಯುತ್ತಿರುವುದು ಸೌದಿಗೆ ಬೇಕಿಲ್ಲ. ಆಫ್ರಿಕಾದ ಕಥೆ ಹೇಳುವಂತಿಲ್ಲ . ನಂಬಿಕೆ ದ್ರೋಹ , ಅವಿಶ್ವಾಸ ಎನ್ನುವುದು ದೇಶ , ಭಾಷೆ, ಧರ್ಮ, ಜಾತಿಯನ್ನ ಮೀರಿ ಜಾಗತಿಕವಾಗಿ ಬೆಳೆದು ಕುಳಿತಿದೆ. ಸದ್ದಾಂ ಹುಸೇನ್ ಎನ್ನವ ವ್ಯಕ್ತಿ ಲಕ್ಷಾಂತರ ಕುರ್ದಿಶ್‌ಗಳ ಮಾರಣ ಹೋಮಕ್ಕೆ ಕಾರಣನಾದ, ಕುರ್ದಿಶ್ರು ಕೂಡ ಮುಸ್ಲಿಮರೇ ಅಲ್ಲವೇನು? ಅಮಿಶ್ ಎನ್ನುವ ಒಂದು ಯಹೂದಿ ಸಮುದಾಯವಿದೆ. ಅಮೆರಿಕಾದ ಒಂದಷ್ಟು ಪ್ರಾಂತ್ಯದಲ್ಲಿ, ಯೂರೋಪಿನ ಒಂದೆರಡು ದೇಶಗಳಲ್ಲಿರುವ ಈ ಜನ, ಚರ್ಚಿನ ಆಜ್ಞೆ ಮೀರಿ ಹೋದವರಿಗೆ ಇಂದಿಗೂ ಬಹಿಷ್ಕಾರ ಹಾಕುತ್ತದೆ. ಗಡ್ಡ ಎಷ್ಟು ಸೆಂಟಿಮೀಟರ್ ಬಿಡಬೇಕು, ಬಿಡಬಾರದು ಎನ್ನುವ ಕುರಿತು ಚರ್ಚಿನಲ್ಲಿ ವಾದವಾಗಿ, ಅದು ಒಂದಷ್ಟು ಜನರ ಪ್ರಾಣ ತೆಗೆಯುವ ಮಟ್ಟಕ್ಕೆ ಹೋಗುತ್ತದೆ. ನಾನ್ಯಾವುದೋ 18 ಶತಮಾನದ ಕಥೆಯನ್ನ ನಿಮಗೆ ಹೇಳುತ್ತಿಲ್ಲ, ಇದೆಲ್ಲವೂ ಅಮೆರಿಕಾ ದೇಶದಲ್ಲಿ ಒಂದೆರೆಡು ದಶಕದ ಹಿಂದೆ ನಡೆದಿದೆ, ನಡೆಯುತ್ತಿದೆ.

ಇನ್ನು ಮರಳಿ ಭಾರತದ ವಿಷಯಕ್ಕೆ ಬರುವುದಾದರೆ ಕಿತ್ತಾಟ ಎನ್ನುವುದು ಸದಾ ಇದ್ದದ್ದೇ, ನಾವು ಒಂದಾಗಿ ಶತ್ರು (!?)ವನ್ನು ಎದುರಿಸಿದ ಪುರಾವೆಗಳು ಮಾತ್ರ ಬೆರಳೆಣಿಕೆ. ಅದು ಕೂಡ ಸ್ವಲ್ಪ ಸಮಯದವರೆಗೆ ಮಾತ್ರ. ತಂದೆಯನ್ನ, ಅಣ್ಣನನ್ನ, ಚಿಕ್ಕಪ್ಪನ್ನ ಕೊಂದ ಕಥೆಗಳು ಅನೇಕ. ದಾಯಾದಿ ಕಲಹದ ವಿಷಯವನ್ನು ವಿವರಿಸಬೇಕಾದ ಅವಶ್ಯಕತೆ ಇದೆಯೇ? ಮೊಘಲರದ್ದು ಕೂಡ ಸೇಮ್ ಟು ಸೇಮ್ ಕಥೆ. ತಂದೆಯನ್ನ, ಅಣ್ಣ ತಮ್ಮಂದಿರನ್ನ ಕೊಂದು ರಾಜರಾದವರ ಕಥೆ ಬಹಳವಿದೆ. ರಾಮಾಯಣ, ಮಹಾಭಾರದಲ್ಲೂ ಕಿತ್ತಾಟವೇ ಪ್ರಮುಖವಲ್ಲವೇ?

ಇವತ್ತಿನ ವಿಷಯಕ್ಕೆ ಬರೋಣ, ಒಂದೈದು ಕೋಟಿ ಬೆಲೆಬಾಳುವ ಆಸ್ತಿ ಬಿಟ್ಟು ಪೋಷಕರು ವಿಲ್ ಬರೆಯದೆ ಹೋದರೆ ಆಗ ನೋಡಿ ಮುಕ್ಕಾಲು ಪಾಲು ಜನರ ಬಣ್ಣ ಬಯಲಿಗೆ ಬರುತ್ತದೆ. ಒಗ್ಗಟ್ಟು, ವಿನಯವಂತಿಕೆ ಇವೆಲ್ಲವೂ ಪ್ರಜ್ಞಾಪೂರ್ವಕವಾಗಿ ಬೆಳಸಿಕೊಂಡ ಗುಣವಾಗಿರುವುದರಿಂದ ಸಾಮಾನ್ಯ ಸಮಯದಲ್ಲಿ ಅದು ಕೆಲಸ ಮಾಡುತ್ತದೆ. ಬದಲಾದ ಸನ್ನಿವೇಶದಲ್ಲಿ ಪಶು ಪ್ರವೃತ್ತಿ ಜಾಗ್ರತವಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಅತ್ಯಂತ ಸಂಭಾವಿತರಾಗಿರುವ ಸ್ಪ್ಯಾನಿಶರು ಕೋವಿಡ್ ಸಮಯದಲ್ಲಿ ಬೆಡ್‌ಗಾಗಿ ಕೈ ಕೈ ಮಿಲಾಯಿಸಿರುವ ಉದಾಹರಣೆ ನಮ್ಮ ಮುಂದಿದೆ. ಅದು ಇಲ್ಲೂ ಆಗಿದೆ.

ಇವೆಲ್ಲಾ ದೇಶ, ರಾಜ್ಯ, ಊರುಗಳ ಕಥೆಯಾದರೆ, ಕುಟುಂಬದ ಕಥೆ ವಿಭಿನ್ನವೇನಲ್ಲ. ಹುಟ್ಟುವಾಗ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎನ್ನುವ ಮಾತಿದೆ. ಅದನ್ನು ಸತ್ಯ ಮಾಡುವಂತೆ ಮುಖೇಶ್ ಮತ್ತು ಅನಿಲ ಅಂಬಾನಿ ಸಿಗುತ್ತಾರೆ. ಅವರು ಪ್ರಸಿದ್ದರು ಎನ್ನುವ ಕಾರಣಕ್ಕೆ ಅವರ ಹೆಸರನ್ನು ಉಲ್ಲೇಖಿಸಿದೆ. ಇದು ಇಂದಿಗೆ ಮನೆಮನೆಯ ಕಥೆ. ಇನ್ನು ದ್ವಾಪರ ಯುಗ ಎಂದ ತಕ್ಷಣ ನಮಗೆ ನೆನಪಾಗುವುದೇ ದಾಯಾದಿಗಳ ಕಲಹ. ಇವೆಲ್ಲವನ್ನೂ ಒಂದು ಬದಿಗಿಟ್ಟು ಇಂದಿನ ಸಿನಿಮಾ ನೋಡಿ. ಅದ್ಯಾವ ಭಾಷೆಯ ಸಿನಿಮಾ ಇರಲಿ ಅಲ್ಲೆಲ್ಲಾ ಸಿಗುವುದು ಹೊಡೆದಾಟ, ಕಚ್ಚಾಟ. ಭಾರತೀಯ ಸಿನೆಮಾಗಳಂತೂ ಕಳೆದ ಎರಡು ಮೂರು ವರ್ಷದಿಂದ ಕಿತ್ತಾಟ, ಬಡಿದಾಟ ಜನರಿಗೆ ಇಷ್ಟ ಎನ್ನುವುದನ್ನು ಅರಿತು ಅವವೇ ಚರ್ವಿತ ಚರ್ವಣ ಸಿನಿಮಾಗಳನ್ನು ಹೊಸೆಯುತ್ತಿವೆ. ಇವೆಲ್ಲಾ ಏಕಾಗುತ್ತದೆ ಎಂದರೆ ನಮ್ಮ ನಿಜವಾದ, ಸಹಜವಾದ ಗುಣವೇ ಕಿತ್ತಾಟದ್ದು, ಉಳಿವಿಗಾಗಿ, ಬೆಳವಣಿಗೆಗಾಗಿ ಕಿತ್ತಾಡುವುದು ಪ್ರಾಣಿ ಧರ್ಮ, ಪ್ರಕೃತಿ ಧರ್ಮ.

ನಾವು ಕಿತ್ತಾಡದೆ ಬದುಕಬಲ್ಲೆವೇ? ಕಳೆದ 80 ವರ್ಷದಲ್ಲಿ ಅಂದರೆ ಎರಡನೇ ಮಹಾಯುದ್ಧದ ನಂತರ ಜಗತ್ತಿನಲ್ಲಿ ಕಿತ್ತಾಟ ಸಾಕಷ್ಟು ಕಡಿಮೆಯಾಗಿದೆ. ಕಿತ್ತಾಟ ಕಡಿಮೆಯಾದಾಗ ಜಗತ್ತು ಅಭಿವೃದ್ಧಿ ಹೊಂದುತ್ತದೆ. ಆಗೆಲ್ಲಾ ಕಲೆ, ಸಾಹಿತ್ಯ, ಸಂಗೀತ ಮುನ್ನೆಲೆಗೆ ಬರುತ್ತದೆ. ನಾಗರಿಕತೆ ಬೆಳೆಯುತ್ತದೆ. ಸಮಾಜ, ಜಗತ್ತು ಮತ್ತೆ ಮಗ್ಗುಲು ಬದಲಿಸುವ ಸಾಧ್ಯತೆಯಿರುವ ಈ ಸಮಯದಲ್ಲಿ ಕಚ್ಚಾಟದಿಂದ ಯಾವ ಪ್ರಯೋಜನವಿಲ್ಲ ಎಂದು ಕೂಗಿ ಹೇಳಬೇಕು ಎನ್ನಿಸುತ್ತಿದೆ. ಆದರೆ ಹೇಳುವುದು ಯಾರಿಗೆ? ಹೇಳಿದರೂ ಕೇಳುವರಾರಿಲ್ಲಿ?

ಕೊನೆಯದಾಗಿ: ಜಗತ್ತಿನೆಲ್ಲೆಡೆ ಮನುಷ್ಯ ಸೇಮ್. ಅದೇ ರಾಗ ದ್ವೇಷ, ಅದೇ ನೋವು, ಹತಾಶೆ, ಸುಖ, ಸ್ವಾರ್ಥ.., ಸೇಮ್ .. ಯಾವುದೂ ಬದಲಿಲ್ಲ. ಅವನ/ಅವಳ ಮೂಲ ಗುಣ ಕಿತ್ತಾಟ. ಅದಕ್ಕೆ ಕಾರಣಗಳು ಬೇಕಲ್ಲ, ಹೀಗಾಗಿ ಜಾತಿ, ಧರ್ಮ, ಭಾಷೆ ಸಾಧನವಾಗುತ್ತದೆ. ಅದು ಮುಗಿದ ಮೇಲೆ ಇನ್ನಷ್ಟು ಉಪಭಾಷೆ, ಉಪಪಂಗಡವಾಗಿ ಬೇರ್ಪಡುತ್ತಾನೆ, ನಂತರ ಮತ್ತದೇ ಪ್ರಶ್ನೆ, ಅಯ್ಯಗಳಿರಾ ನೀವೆಲ್ಲ ಒಂದೇ ಜಾತಿಯವರು. ಒಂದೇ ಕುಲ, ಗೋತ್ರದವರು. ನಿಮ್ಮ ಆಚಾರ ವಿಚಾರ ಎಲ್ಲವೂ ಸೇಮ್, ಮತ್ತೇಕೆ ಕಿತ್ತಾಡುತ್ತಿರಿ? ಏಕೆಂದರೆ ಅವನ /ಅವಳ ಗುಣವೇ ಕಿತ್ತಾಡುವುದು.

ಅರ್ಥವಿಷ್ಟೆ, ನಾವು ಮನುಷ್ಯ ಜಾತಿ ಇರುವುದೇ ಹೀಗೆ, ಇಂದು ಜಗಳವಾಗಬೇಕಿರುವುದು/ ಹೋರಾಟವಾಗಬೇಕಿರುವುದು, ಹೆಚ್ಚುತ್ತಿರುವ ಅಸಮಾನತೆ ಬಗ್ಗೆ, ಹೆಣ್ಣು ಗಂಡಿನ ನಡುವಿನ ತಾರತಮ್ಯದ ಬಗ್ಗೆ, ನಾವಿರುವ ಮನೆಯನ್ನು ಕಾದ ಕಾವಲಿ ಮಾಡಿಕೊಂಡಿರುವ ಮುಟ್ಠಾಳತನದ ಬಗ್ಗೆ ! ಆದರೆ ನಮಗಿದಾವುದೂ ಬೇಡ. ನಮ್ಮಿಷ್ಟದ ಕಚ್ಚಾಟ ಮಾತ್ರ ನಮಗೆ ಸಾಕು.

ಪ್ರಸ್ತುತ
ಸಂದೀಪ್ ಶರ್ಮಾ ಮೂಟೇರಿ

ಯುವ ಮನಸ್ಸಿನ ನೈತಿಕ ಬತ್ತಳಿಕೆ ಖಾಲಿ

ಇಂದಿನ ಯುವ ಪೀಳಿಗೆಯು ಕ್ರಿಕೆಟ್ ಆಟಗಾರರು ಮತ್ತು ಸಿನಿಮಾ ನಟರನ್ನು ಅತಿಯಾಗಿ ಆರಾಧಿಸುವ ಪ್ರವೃತ್ತಿ ಚಿಂತನಾರ್ಹವಾಗಿದೆ. ಈ ಎರಡು ವೃತ್ತಿಗಳಿಗೂ ಸಮಾಜದ ಇತರ ಮಹತ್ವದ ಪಾತ್ರಗಳಿಗೂ ನಡುವೆ ಸಮತೋಲನ ಕಾಪಾಡುವ ಸಂಸ್ಕೃತಿ ಮತ್ತು ವಿವೇಕವನ್ನು ಯುವಜನತೆಗೆ ಬೆಳೆಸುವುದು ಅತ್ಯಗತ್ಯವಾಗಿದೆ. ಇಲ್ಲದಿದ್ದರೆ, ಸಮಾಜದ ದಿಕ್ಕು ತಪ್ಪಿ ಇನ್ನಷ್ಟು ಸೂತಕದ ಛಾಯೆ ಆವರಿಸುವುದರಲ್ಲಿ ಅತಿಶಯೋಕ್ತಿಯಿಲ್ಲ. ಸಿನಿಮಾ ನಟರನ್ನು ಕಪೋಲ ಕಲ್ಪಿತ ನಾಯಕರನ್ನು ಕೇವಲ ನಮ್ಮಂತೆ ಮನುಷ್ಯರು ಎಂದು ಗೌರವಿಸುವ ಬದಲು ಅವರನ್ನು ಅತಿಮಾನುಷರನ್ನಾಗಿ ಪೂಜಿಸುವ ಪ್ರವೃತ್ತಿ ಮತ್ತು ಕ್ರಿಕೆಟ್ ಆಟಗಾರರನ್ನು ಕ್ರೀಡಾಪಟುಗಳೆಂದು ಕಾಣದೆ ಅತಿಯಾಗಿ ಪೂಜಿಸಿ ಉನ್ನತ ಮಟ್ಟಕ್ಕೇರಿಸುವ ಮನೋಭಾವ ಸಮಾಜದಲ್ಲಿ ವ್ಯಾಪಕವಾಗಿ ಗೋಚರಿಸುತ್ತಿದೆ. ಹೆಚ್ಚು ವಿಷಾದದ ಸಂಗತಿ ಎಂದರೆ, ಸಮಾಜಕ್ಕೆ ಬೇಕಾದ ಆದರ್ಶ ವ್ಯಕ್ತಿಗಳನ್ನು ಮರೆತು ತಮ್ಮ ಯುವ ಮನಸ್ಸುಗಳಿಂದ ಅದೃಶ್ಯರಾಗಿಸಿದ್ದಾರೆ.

ರಾಷ್ಟ್ರಕ್ಕೆ ಅನ್ನವನ್ನು ನೀಡುವ ರೈತನಿಗೆ ಗೌರವವಿಲ್ಲ. ದೇಶದ ರಕ್ಷಣೆಗಾಗಿ ಪ್ರಾಣವನ್ನು ಅರ್ಪಿಸುವ ಸೈನಿಕ ನಿಜವಾದ ವೀರ, ಆದರೆ ಅವನು ನಕಲಿ ಹೀರೋ ಎನಿಸಿಕೊಂಡು ಜೀವನೋಪಾಯಕ್ಕಾಗಿ ಹಂಬಲಿಸುತ್ತಿರುವುದು ಕಡು ವಿಷಾದದ ಸಂಗತಿಯಾಗಿದೆ. ಜ್ಞಾನದೀಪವನ್ನು ಹಿಡಿದಿಡುವ ಶಿಕ್ಷಕರು ನಿಸ್ವಾರ್ಥ ಸೇವಕರು, ಆದರೆ ಅವರಿಗೆ ಸಮಾಜದಿಂದ ಸರಿಯಾದ ಮನ್ನಣೆ ದೊರಕುವುದಿಲ್ಲ, ಗೌರವವಂತು ದೂರದ ಮಾತಾಗಿಯೇ ಉಳಿದಿದೆ. ಇದಲ್ಲವೇ ವಿಪರ್ಯಾಸ! ಯಾರು ಯುವ ಪೀಳಿಗೆಯ ಆದರ್ಶರಾಗಿರಬೇಕೋ, ಅವರೆಲ್ಲರೂ ಜೀವನದ ಸಾಹಸದಲ್ಲಿ ಅಗೋಚರರಾಗಿದ್ದಾರೆ.

ಇದೇ ಯುವ ಪೀಳಿಗೆಯ ಆದರ್ಶಗಳಾಗಬೇಕಾದವರ ಬದಲು, ಸಿನಿಮಾ ನಟರು ಮತ್ತು ಕ್ರಿಕೆಟ್ ಆಟಗಾರರು ಅವರ ಕಾಲ್ಪನಿಕ ಲೋಕದ ದೇವತೆಗಳಾಗಿ ಮಾರ್ಪಟ್ಟಿದ್ದಾರೆ. ಪರದೆಯ ಮೇಲೆ ಬಣ್ಣದ ವೇಷ ಧರಿಸಿ, ಬರೆಹಗಾರರ ಸಾಲುಗಳನ್ನು ಉಚ್ಚರಿಸುವ ನಟನಿಗಾಗಿ ಯುವಕರು ಉನ್ಮತ್ತರಾಗುತ್ತಾರೆ. ಅವನ ಅಭಿನಯಕ್ಕಾಗಿ ಟಿಕೆಟ್ ಕೊಂಡು ಸಿನಿಮಾ ನೋಡುವ ಪ್ರೇಕ್ಷಕರು ಅವನ ಅನ್ನದಾತರಾಗಿದ್ದರೂ, ಯುವ ಮನಸ್ಸುಗಳು ಅವನನ್ನು ಜೀವನದ ಮಾರ್ಗದರ್ಶಕನೆಂದು ಭ್ರಮಿಸುತ್ತವೆ. ಇದು ಎಂತಹ ವಿರೋಧಾಭಾಸ! ಅತ್ತ ಆಟಗಾರರನ್ನು ಆಟಗಾರಂತೆ ನೋಡದೆ ತಮ್ಮ ಹರೆಯ ದಿನವನ್ನು ಕಳೆದುಕೊಳ್ಳುತ್ತಿದ್ದಾರೆ.

ಈ ಬೌದ್ಧಿಕ ದೌರ್ಬಲ್ಯ ಯುವ ಮನಸ್ಸುಗಳನ್ನು ಎತ್ತ ತಂದು ನಿಲ್ಲಿಸಿದೆ! ಸಿನಿಮಾ ನಾಯಕರು ಮಾಡುವ ಅಪರಾಧಗಳನ್ನು ಸಮಾಜ ಮರೆತುಬಿಡಬೇಕು ಅಥವಾ ಕ್ಷಮಿಸಬೇಕು ಎಂಬ ನಿರೀಕ್ಷೆ ಇಂದಿನ ಯುವಜನತೆಯಲ್ಲಿ ಕಂಡುಬರುವುದು ಶೋಚನೀಯ. ಕ್ರಿಕೆಟ್ ಮೈದಾನದಲ್ಲಿ ಯಶಸ್ಸು ಸಾಧಿಸಿದರೆ ಅದು ಜೀವನದ ಸಾರ್ಥಕತೆ ಎಂಬ ಭ್ರಮೆ ಪಡೆದು, ಹಣಕ್ಕಾಗಿ ಆಡುವ ಕ್ರೀಡಾಪಟುಗಳನ್ನು ದೇವತಾ ಸ್ಥಾನದಲ್ಲಿ ಇಡುವ ಅತಾರ್ಕಿಕ ಭಕ್ತಿ ಇಂದಿನ ಯುವಜನರಲ್ಲಿ ಬೇರೂರಿದೆ. ಸರಕಾರಗಳು ಸಿನಿಮಾ ಮತ್ತು ಕ್ರಿಕೆಟ್ ಉದ್ಯಮಗಳಿಗೆ ಅನಾವಶ್ಯಕ ಪ್ರಾಶಸ್ತ್ಯ ನೀಡಿ, ಯುವಜನರ ಮನಸ್ಸಿನಲ್ಲಿ ತಪ್ಪು ಸಂದೇಶಗಳನ್ನು ಬಿತ್ತುತ್ತಿವೆ. ಸಿನಿಮಾ ತಾರೆಗಳಿಗೆ ರಾಜ್ಯ ಪ್ರಶಸ್ತಿಗಳು, ಕ್ರಿಕೆಟ್ ಆಟಗಾರರಿಗೆ ಅತಿಯಾದ ಗೌರವಗಳು ಮತ್ತು ಸೌಲಭ್ಯಗಳನ್ನು ನೀಡುವ ಮೂಲಕ ಯುವಜನರಿಗೆ ತಪ್ಪು ದಿಕ್ಕನ್ನು ತೋರಿಸುತ್ತಿವೆ.

ಸಿನಿಮಾ ಮತ್ತು ಕ್ರಿಕೆಟ್ ಹೀರೋಗಳ ಕಾನೂನು ಉಲ್ಲಂಘನೆಗಳನ್ನು ಸಮಾಜ ಸಹಿಸಿಕೊಳ್ಳುವ ಮನೋಭಾವ ಹೆಚ್ಚು ಅಪಾಯಕಾರಿ. ಚಿನ್ನಸ್ವಾಮಿ ಕ್ರೀಡಾಂಗಣದ ದುರಂತದ ನಂತರವು ಸ್ಟೇಡಿಯಂ ಹೊರಗೆ ಜನರು ಪ್ರಾಣಬಿಡುತ್ತಿರುವಾಗಲೂ ಒಳಗೆ ಸಮಾರಂಭವನ್ನು ನಡೆಸುವ ನಿಷ್ಠುರತೆ ನೋಡಬೇಕಾಯಿತು. ಇದಕ್ಕೆ ಜವಾಬ್ದಾರರಾದ ರಾಜ್ಯ ಸರಕಾರ, ಆರ್‌ಸಿಬಿ ಫ್ರ್ಯಾಂಚೈಸಿ ಮತ್ತು ಕೆ. ಎಸ್‌ಸಿಎ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದ್ದರೂ, ಅಭಿಮಾನಿಗಳು ಇನ್ನೂ ಅವರನ್ನು ಸಮರ್ಥಿಸುವ ಮನೋಭಾವ ಹೊಂದಿರುವುದು ವಿಷಾದನೀಯ. ಕ್ರಿಕೆಟ್ ಕೂಡ ಎಲ್ಲಾ ಆಟಗಳಂತೆ ಅದು ಆಟ, ಕ್ರಿಕೆಟರ್ ಆಟಗಾರನೇ ಹೊರತು ಅತಿಮಾನುಷ ಶಕ್ತಿಯಲ್ಲ ಎನ್ನುವ ವಾಸ್ತವತೆಯನ್ನು ಈಗಿನ ಮಕ್ಕಳು, ಪ್ರೌಢರು ಹಾಗೂ ಯುವಕರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ.

ಸರಕಾರಿ ನೌಕರರ ಹೊಸ ಪಿಂಚಣಿ ಯೋಜನೆಗೊಂದು ಪರ್ಯಾಯ ಯೋಚನೆ

ಸರಕಾರಿ ಸಮಾಚಾರ
ಬೆಳ್ಳಿ ಚಂದ್ರಶೇಖರ ಶೆಟ್ಟಿ
vveditoped@gmail.com

ಕೇಂದ್ರ ಮತ್ತು ರಾಜ್ಯ ಸರಕಾರದ ನೌಕರರು 2004 ರ ಹಿಂದೆ ಜಾರಿಯಲ್ಲಿದ್ದ ಹಳೆ ಪಿಂಚಣಿ ನಿಯಮಾವಳಿ (ಕ್ಷ್ಯಫ ಕಟ್ಟಿಣಜಿಟ್ಟ್ಯುಛಿಠ)ಯನ್ನೇ ಪುನಃ ಜಾರಿಗೊಳಿಸಬೇಕೆಂಬ ಒತ್ತಾಯವನ್ನು ಸರಕಾರದ ಮೇಲೆ ತರುತ್ತಿದ್ದಾರೆ. ಕೆಲವು ರಾಜ್ಯಗಳು ಹೊಸ ಪಿಂಚಣಿ ಯೋಜನೆಯನ್ನು(ಫೆಕಖ) ವಾಪಸ್ಸು ಪಡೆದು ನೌಕರರ ಒತ್ತಾಯಕ್ಕೆ, ಮತ ಪಡೆಯುವ ದೂರಾಲೋಚನೆಯಿಂದ ಹಿಂದೆ ಮುಂದೆ ಯೋಚಿಸದೆ ವಾಪಸ್ ಪಡೆದು ರಾಜ್ಯದ ಸರಕಾರಿ ನೌಕರರಿಗೆ ಹಳೆ ಪಿಂಚಣಿ ನಿಯಮಾವಳಿಯನ್ನೇ ಪುನಃ ಜಾರಿಗೊಳಿಸಿವೆ. ಇನ್ನೂ ಹಲವು ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಮತಗಳಿಕೆಯ ಅಸ್ತ್ರವಾಗಿ ತಮ್ಮ ಪಕ್ಷ ಆಡಳಿತಕ್ಕೆ ಬಂದರೆ ಹಳೆ ಪಿಂಚಣಿ ಯೋಜನೆಯನ್ನು ಪುನಃ ಜಾರಿಗೆ ತರುವುದಾಗಿ ಆಶ್ವಾಸನೆ ನೀಡಿವೆ. ಕೇಂದ್ರ ಸರಕಾರವೂ ಇದಕ್ಕೆ ಹೊರತಾಗಿಲ್ಲ. ಕರ್ನಾಟಕ ಸರಕಾರವೂ ಸಹ ನೌಕರರ ಬೇಡಿಕೆಗೆ ಸ್ಪಂದಿಸಿ ಹಳೆ ಪಿಂಚಣಿ ಯೋಜನೆಯನ್ನು ಪುನಃ ಜಾರಿಗೆ ತರುವಲ್ಲಿ ಆಗಬಹುದಾದ ಗುಣಾವಗುಣಗಳ ಅಧ್ಯಯನ ಕೈಗೊಂಡು ವರದಿ ಸಲ್ಲಿಸಲು ಜ್ಞಾಪನವನ್ನು ಹೊರಡಿಸಿದೆಯಾದರೂ ಹಳೆ ಪಿಂಚಣಿ ಯೋಜನೆಯನ್ನು ಪುನಃ ತರುವ ಖಾತ್ರಿಯನ್ನಂತೂ ನೀಡಿಲ್ಲ. ಈ ಕ್ರಮವು ಸದ್ಯಕ್ಕೆ ತಕ್ಕ ಮಟ್ಟಿಗೆ ನೌಕರರು ಕಾಯುವ ತಾಳ್ಮೆಗೆ ಒಳಪಡುವಂತಾಗಿದೆ. ಸರಕಾರಗಳು ರಚಿಸಿರುವ ಸಮಿತಿಯಲ್ಲಿ ಸರಕಾರದ ವೇತನ-ಸೌಲಭ್ಯ ಪಡೆಯುವ ಅಧಿಕಾರಿಗಳೇ ಸದಸ್ಯರಾಗಿದ್ದಾರೆ. ಆರ್ಥಿಕ-ಸಾಮಾಜಿಕ, ಆಡಳಿತ ವಿಷಯತಜ್ಞರಾಗಲಿ ಅಥವಾ ಪರಿಣಿತ ಸ್ವತಂತ್ರ ಸದಸ್ಯರಾಗಲೀ ಈ ಸಮಿತಿಯಲ್ಲಿಲ್ಲ.

ಯಾವುದೇ ದುಡಿಯುವ ನೌಕರರಿಗೆ ಅವರು ನಿವೃತ್ತಿ ಹೊಂದಿದಾಗ ಗೌರವಯುತ ಜೀವನ ಸಾಗಿಸಲು ಪಿಂಚಣಿ ತೀರಾ ಅಗತ್ಯ. ಪಿಂಚಣಿ ನೌಕರರಿಗೆ ಮಾಲೀಕ ಅಥವಾ ಸರಕಾರ ನೀಡುವ ಉಪಕಾರ ಅಥವಾ ದಾನವಲ್ಲ; ಅದು ಅವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ನಿವೃತ್ತಿ ನಂತರ ಜೀವಿಸಲು ಪಾವತಿಸುವ ಬದ್ಧತೆಯ ಆದಾಯವೆಂದು ನಮ್ಮ ದೇಶದ ಘನ ಸರ್ವೋಚ್ಚ ನ್ಯಾಯಾಲಯವು ಹಲವು ಬಾರಿ ತೀರ್ಪಿನಲ್ಲಿ ಘೋಷಿಸಿದೆ. ವರಮಾನ ಕಾಯ್ದೆಯಡಿಯಲ್ಲಿಯೂ ಪಿಂಚಣಿಯನ್ನು ವೇತನವೆಂದೇ ಪರಿಗಣಿಸಲಾಗಿದೆ.

ನಮ್ಮ ದೇಶದಲ್ಲಿ ಜನವರಿ 2004ರಿಂದ ಕೇಂದ್ರ ಸರಕಾರಿ ನೌಕರರಿಗೆ ಹಾಗೂ ಇತರೆ ರಾಜ್ಯಗಳಲ್ಲಿ ನಂತರದ ದಿನಾಂಕದಿಂದ (ಕರ್ನಾಟಕದಲ್ಲಿ ಏಪ್ರಿಲ್ 2006 ರಿಂದ) ಎನ್‌ಪಿಎಸ್ ಜಾರಿಗೆ ಬಂದಿದೆ. ಇಂತಹ ದಿನಾಂಕದ ನಂತರ ಸೇವೆಗೆ ಸೇರುವ ಎಲ್ಲ ಸರಕಾರಿ ನೌಕರರಿಗೆ ಇದು ಅನ್ವಯಿಸುತ್ತದೆ. ಹಳೆ ಪಿಂಚಣಿ ನಿಯಮಾವಳಿಯಲ್ಲಿ 15 ವರ್ಷಗಳ ಸೇವೆ ಪೂರೈಸಿದ ಸರಕಾರಿ ನೌಕರರು ಅವರು ಸಲ್ಲಿಸಿರುವ ಸೇವಾವಧಿ ಅವಲಂಬಿಸಿ ಪ್ರತಿ ತಿಂಗಳೂ ಪಿಂಚಣಿ ಪಡೆಯಲು ಅರ್ಹರಾಗುತ್ತಾರಲ್ಲದೆ ವರ್ಷದಲ್ಲಿ ಆರು ತಿಂಗಳಿಗೊಮ್ಮೆ ಗ್ರಾಹಕ ಬೆಲೆ ಸೂಚ್ಯಂಕನುಸಾರ ಸೇವೆಯಲ್ಲಿರುವ ನೌಕರರಿಗೆ ನೀಡಿದ ದರದಂತೆಯೇ ತುಟ್ಟಿಭತ್ಯೆಯನ್ನೂ ನೀಡಲಾಗುತ್ತದೆ. ಅಷ್ಟೇ ಅಲ್ಲದೆ, ಸೇವೆಯಲ್ಲಿದ್ದಾಗ ಅಥವಾ ನಿವೃತ್ತಿಯ ನಂತರ ನಿಧನರಾಗುವ ನೌಕರನ/ಳ ಪತ್ನಿ/ಪತಿಯೂ ಸಹ ಜೀವನಪರ್ಯಂತ ನಿಗದಿತ ಕುಟುಂಬ ಪಿಂಚಣಿಗೆ ಅರ್ಹರಾಗುತ್ತಾರೆ.

ಹಳೆ ಪಿಂಚಣಿ ನಿಯಮಾವಳಿಯಲ್ಲಿ ಸೇವಾವಧಿ ಪೂರ್ತಿ ಹಾಗೂ ನಂತರವೂ ಪಿಂಚಣಿ/ಕುಟುಂಬ ಪಿಂಚಣಿಗೆ ನೌಕರರಿಂದ ಯಾವುದೇ ವಂತಿಕೆ ಪಡೆಯಲಾಗುವುದಿಲ್ಲ. ಸಂಪೂರ್ಣವಾಗಿ ಸರಕಾರವೇ ಖಜಾನೆಯಿಂದ ಭರಿಸುತ್ತದೆ. ಹಳೆ ಪಿಂಚಣಿ ನಿಯಮಾವಳಿಯಲ್ಲಿ ನೌಕರರ ಪಿಂಚಣಿ-ಕುಟುಂಬ ಪಿಂಚಣಿಯ ವೆಚ್ಚ ಪೂರ್ಣವಾಗಿ ಸರಕಾರವೇ ಭರಿಸುವ ವೆಚ್ಚವು ಬೃಹದಾಕಾರವಾಗಿ ಹಿಗ್ಗುತ್ತಾ ಸರಕಾರದ ಆಯವ್ಯಯದ ಬಹುಪಾಲು ನಿಧಿಯನ್ನು ಈ ಬಾಬತ್ತಿಗೇ ಮೀಸಲಾಗಿಡಬೇಕಾಗುತ್ತದೆ. ಈ ರೀತಿ ನಿವೃತ್ತಿ ನಂತರವೂ ಸರಕಾರವೇ ನೌಕರರಿಗೆ ಪಿಂಚಣಿ/ಕುಟುಂಬ ಪಿಂಚಣಿ ವೆಚ್ಚವನ್ನು ಭರಿಸುವ ಬದ್ಧತೆಯ ವ್ಯವಸ್ಥೆ ಇತರೆ ಪ್ರಗತಿಪರ ದೇಶಗಳಲ್ಲಿ ಕಂಡುಬರುವುದಿಲ್ಲ. ನಿವೃತ್ತಿಯ ನಂತರ ಸರಕಾರವೇ ನಿವೃತ್ತರನ್ನು ಪೊರೆಯುವ ವ್ಯವಸ್ಥೆ ಹಲವು ದೇಶಗಳಲ್ಲಿ ಇದೆಯಾದರೂ , ನೌಕರರ ಸೇವಾವಧಿಯಲ್ಲಿ ಅವರ ವೇತನದಿಂದ ಯಾವುದೇ ವಿನಾಯಿತಿಯಿಲ್ಲದೆ ತೆರಿಗೆಯ ರೂಪದಲ್ಲಿ ಎಲ್ಲರಿಂದಲೂ ಹಣವನ್ನು ಮುಂದಾಲೋಚನೆಯಿಂದ ಪಡೆದಿರುತ್ತವೆ . ಆದರೆ ನಮ್ಮ ದೇಶದಲ್ಲಿ ಸರಕಾರೇತರ ನೌಕರರ ಹೊರತಾಗಿ ಸರಕಾರಿ ನೌಕರರಿಂದ ಅವರ ನಿವೃತ್ತಿ ನಂತರದ ಭವಿಷ್ಯದ ಪಾಲನೆಗಾಗಿ ಯಾವುದೇ ವಂತಿಗೆಯನ್ನು 2004ರಲ್ಲಿ ಎನ್‌ಪಿಎಸ್ ಜಾರಿಗೆ ಬರುವವರೆಗೂ ಪಡೆಯದೇ ಸರಕಾರವೇ ಪೂರ್ತಿಯಾಗಿ ಭರಿಸುತಿತ್ತು. ನೌಕರರ ಸಂಖ್ಯೆ, ವೇತನ, ಪಿಂಚಣಿ, ಕುಟುಂಬ ಪಿಂಚಣಿಗಳ ಮೊತ್ತವೂ ಒಂದೇ ಸಮನೆ ಏರುತ್ತ ನಿವೃತ್ತರ ಜೀವಿತಾವಧಿ, ಪಿಂಚಣಿ-ಕುಟುಂಬ ಪಿಂಚಣಿದಾರರ ಸಂಖ್ಯೆಯ ಏರಿಕೆಯಿಂದ ಆಯವ್ಯಯದ ಬಹುಭಾಗವನ್ನು ಇದಕ್ಕಾಗಿಯೇ ಕಾದಿರಿಸಬೇಕಾದ ಪರಿಸ್ಥಿತಿ ತಲೆದೋರಿತಲ್ಲದೆ ಪಿಂಚಣಿದಾರರ ಸಂಖ್ಯೆಯು ಸೇವೆಯಲ್ಲಿರುವ ನೌಕರರ ಸಂಖ್ಯೆಯನ್ನೇ ಮೀರಬಹುದೆಂಬ ಸೂಚನೆ ಸಿಕ್ಕಾಗ ಸರ್ಕಾರ ಈ ಬಗ್ಗೆ ಸೂಕ್ತ ಬದಲಿ ಯೋಜನೆಯೊಂದರಿಂದ ಕಡಿವಾಣ ಹಾಕುವ ಪ್ರಮೇಯ ಸಾರ್ವಜನಿಕರ ಹಿತದೃಷ್ಟಿಯಿಂದ ಅನಿವಾರ್ಯವಾಗಿತ್ತು. ಈ ಸಂದರ್ಭದಲ್ಲಿ ಉದ್ಭವಿಸಿದ್ದೇ 2004ರ ರಾಷ್ಟ್ರೀಯ ಪಿಂಚಣಿ ಯೋಜನೆ.

ಎನ್‌ಪಿಎಸ್ ಯೋಜನೆ ಜಾರಿಯಾದ ದಿನಾಂಕದಿಂದ ಸೇವೆಗೆ ಸೇರುವ ಪ್ರತಿ ಸರಕಾರಿ ನೌಕರನೂ ತನ್ನ ಮಾಸಿಕ ವೇತನದ (ಮೂಲವೇತನ ಮತ್ತು ತುಟ್ಟಿ ಭತ್ಯೆ ಸೇರಿ) ಶೇ.10 ನೌಕರರ ಪಾಲಿನ ವಂತಿಕೆಯನ್ನೂ ಮತ್ತು ಸರಕಾರವು ಅದೇ ರೀತಿ ಶೇ.10 ತನ್ನ ಪಾಲಿನ ವಂತಿಕೆಯನ್ನು (ಪ್ರಸಕ್ತ ಅದನ್ನು ಶೇ.14 ಕ್ಕೆ ಹೆಚ್ಚಿಸಲಾಗಿದೆ) ನೀಡಿ ನಿಧಿಯನ್ನು ಸ್ಥಾಪಿಸಬೇಕು. ಈ ನಿಧಿಯ ಉಸ್ತುವಾರಿಯ ನಿರ್ವಹಣೆಗೆ 'ವ್ಯವಸ್ಥಾಪಕ'(ಫಂಡ್ ಮ್ಯಾನೇಜರ್) ಸಂಸ್ಥೆಗೆ ವಹಿಸಬೇಕು. ನೌಕರನು ನಿವೃತ್ತಿ ಹೊಂದಿದಾಗ/ಸೇವೆಯಿಂದ ಮುಕ್ತಿ ಹೊಂದಿದಾಗ ಆತನ ಖಾತೆಯಲ್ಲಿರುವ ಒಟ್ಟು ಹಣದ ಶೇಕಡಾ 60 ರಷ್ಟನ್ನು ಪಡೆಯಬಹುದು. ಉಳಿದ ಶೇ.40 ಆತನ ಪಿಂಚಣಿ ಪಾವತಿಗೆ ವಿನಿಯೋಗಿಸಲು ಉಪಯೋಗಿಸಲಾಗುವುದು. ಈ ಯೋಜನೆಯಲ್ಲಿಯ ಪಿಂಚಣಿ ನಿಧಿಯ ಮೊತ್ತವನ್ನು ಷೇರುಗಳಲ್ಲಿ ತೊಡಗಿಸುವುದರಿಂದ ಅದರ ಮೌಲ್ಯವು ಮಾರುಕಟ್ಟೆ ಏರಿಳಿತಕ್ಕೊಳಪಟ್ಟು ಅಸಲು ಮೊತ್ತಕ್ಕೆ ಸಂಚಕಾರ ಬರಬಹುದೆಂಬ ಅನುಮಾನ ಸಹಜವಾಗಿಯೇ ನೌಕರರನ್ನು ಚಿಂತಿಸುವಂತೆ ಮಾಡಿದೆ. ನೌಕರ ನಿವೃತ್ತಿಯಾದಾಗ ಅಥವಾ ನಿಧನ ಹೊಂದಿದಾಗ ಲಭಿಸುವ ಇಡುಗಂಟು ಹಾಗೂ ಲಭಿಸುವ ಪಿಂಚಣಿ, ಕುಟುಂಬ ಪಿಂಚಣಿಯ ಮೊತ್ತಕ್ಕೆ ಯೋಜನೆಯಲ್ಲಿ ಸ್ಪಷ್ಟತೆಯಿಲ್ಲ. ಸೇವಾವಧಿ ಮುಗಿದ ನಂತರ ಜೀವನಾವಶ್ಯಕ ಮಾಸಿಕ ಆದಾಯದ ಖಾತ್ರಿ ಸ್ಪಷ್ಟತೆಯಿಂದ ತನ್ನ ನಿವೃತ್ತ ಜೀವನವನ್ನು ರೂಪಿಸಿಕೊಳ್ಳುವಲ್ಲಿ ನೆರವಾಗುವಂತಿರಬೇಕು. ಆದರೆ ಸರಕಾರದ ಎನ್‌ಪಿಎಸ್ ಎಡವಿದ್ದೇ ಇಲ್ಲಿ.

ನೌಕರರಿಗೆ ಅನ್ವಯಿಸುವ ಅಥವಾ ಹೊಸದಾಗಿ ಜಾರಿಗೊಳಿಸಲಾಗುವ ಸೇವಾ ಸವಲತ್ತು ನಿಯಮಾವಳಿಗಳ ಬಗ್ಗೆ ನೌಕರರ ವಿಶ್ವಾಸ ಮತ್ತು ನಂಬಿಕೆಯನ್ನು ಸರಕಾರ ಗಳಿಸಿರಬೇಕು. ಹೊರಗಿನ ಸಂಸ್ಥೆ ಫಂಡ್ ವ್ಯವಸ್ಥಾಪಕರ ಬದಲಿಗೆ ಸರಕಾರದ ಸೌಮ್ಯದ ಸಂಸ್ಥೆಯೇ ಆಗಿರುವ ನೌಕರರ ಭವಿಷ್ಯ ನಿಧಿ ಸಂಸ್ಥೆಗೆ ಇದನ್ನು ವಹಿಸಿ ನೌಕರರ ವಿಶ್ವಾಸ ಪಡೆಯಬಹುದಿತ್ತು. ನೌಕರರ ಭವಿಷ್ಯನಿಧಿ ಮತ್ತು ಇತರೆ ಸೌಲಭ್ಯಗಳ ಕಾಯ್ದೆ-1952- ದೇಶದ ಸರಕಾರಿ ಮತ್ತು ಖಾಸಗಿ ಉದ್ಯೋಗಿಗಳ ಸಾಮಾಜಿಕ ಭದ್ರತೆಯ ಪ್ರಮುಖ ಕಾನೂನು. ಇದರಲ್ಲಿ ಪಿಂಚಣಿ,ಕುಟುಂಬ ಪಿಂಚಣಿ, ಮಕ್ಕಳ ಪಿಂಚಣಿ, ಸೌಲಭ್ಯಗಳಲ್ಲದೆ ಸ್ವಂತ ಮನೆ ಹೊಂದಲು, ಮಕ್ಕಳ ಶಿಕ್ಷಣ,ಮದುವೆ, ವೈದ್ಯಕೀಯ ವೆಚ್ಚಕ್ಕಾಗಿ ಮುಂಗಡ ಪಡೆಯಲು ಅವಕಾಶವಿರುವುದಲ್ಲದೆ, ಚಂದಾದಾರ ನೌಕರನು ಸೇವಾವಧಿಯಲ್ಲಿ ನಿಧನ ಹೊಂದಿದರೆ ಯಾವುದೇ ಕನಿಷ್ಠ ಅವಧಿಯ ಸೇವೆ ಸಲ್ಲಿಸಬೇಕೆಂಬ ಷರತ್ತಿಲ್ಲದೆ ಠೇವಣಿ-ಜೋಡಿತ ವಿಮೆ (EDLI) ಯೋಜನೆಯಿಂದ ಮೃತರ ಕುಟುಂಬಕ್ಕೆ 5 ಲಕ್ಷ ರೂ.ಗಳ ಸೌಲಭ್ಯವೂ ಉಂಟು. ವಿಮೆ ಸೌಲಭ್ಯಕ್ಕೆ ನೌಕರನಿಂದ ಯಾವುದೇ ವಂತಿಕೆ ಇರುವುದಿಲ್ಲ. ಅಲ್ಲದೆ ನೌಕರನು ನಿವೃತ್ತಿ ಸಂದರ್ಭದಲ್ಲಿ ಖಾತೆಯಲ್ಲಿರುವ ಪಾವತಿಸಿದ ಪೂರಾ ಮೊತ್ತವನ್ನು ಜತೆಗೆ ಮಾಲೀಕನು ಭವಿಷ್ಯ ನಿಧಿ ಲೆಕ್ಕಕ್ಕೆ ಪಾವತಿಸಿದ ಶೇ.3.67 ಮೊತ್ತವನ್ನು ಬಡ್ಡಿ ಸಮೇತ ಸೇರಿಸಿ ನೀಡಲಾಗುತ್ತದೆ.

ದೇಶಾದ್ಯಂತ ಕಾರ್ಖಾನೆಗಳಲ್ಲಿ, ಅಂಗಡಿ ವಾಣಿಜ್ಯೋದ್ಯಮಗಳಲ್ಲಿ ಶೇ. 99 ರಷ್ಟು ದುಡಿಯುವ ನೌಕರರಿಗೆ ಅನ್ವಯಿಸುತ್ತಿರುವ ಈ ಕಾಯ್ದೆಯನ್ನು ಸರಕಾರಿ ನೌಕರರಿಗೆ ಅನ್ವಯಿಸಿ ವಿಸ್ತರಿಸಲು ಮೂಲ ಕಾಯಿದೆಗೆ ಕೆಲವು ತಿದ್ದುಪಡಿಯ ಅವಶ್ಯಕವಿದೆ.'ಸಂಸ್ಥೆ' ಯ ವ್ಯಾಖ್ಯಾನಕ್ಕೆ ಸರಕಾರಿ ನೌಕರರನ್ನೂ 'ನೌಕರ' ಎಂದು ಸೇರಿಸಬೇಕು. ಕಾಯ್ದೆಗೊಳಪಡಿಸುವಲ್ಲಿ ವೇತನದ ಯಾವುದೇ ಮಿತಿಯಿರದೆ ಎಲ್ಲರಿಗೂ ಅನ್ವಯಿಸುವಂತಿರಬೇಕು. (ಪ್ರಸಕ್ತ, ಮೂಲವೇತನ ಮತ್ತು ತುಟ್ಟಿ ಭತ್ಯೆ ಸೇರಿ 15000 ರು.ಗಳ ಮಿತಿಯಿದೆ.) ಇದು ಸರಕಾರಿ ಸೌಮ್ಯದ ಸಂಸ್ಥೆಯಾಗಿರುವುದರಿಂದ ನೌಕರರಲ್ಲೂ ನಂಬಿಕೆ-ವಿಶ್ವಾಸ ಮೂಡಿಸಬಹುದು. ದೇಶದ ಸರಕಾರೇತರ ಕೈಗಾರಿಕೋದ್ಯಮಗಳಲ್ಲಿಯ ಶೇ.98 ರಷ್ಟು ದುಡಿಯುವ ಹಾಗೂ ನಿತ್ಯ 8 -9 ಗಂಟೆಗಳಷ್ಟು ಕಾಲ ಉತ್ಪಾದನಾ ನೌಕರರಿಗೆ ಅನ್ವಯಸುವ ಈ ಕಾಯ್ದೆಯನ್ನು ಶೇ.2ರಷ್ಟಿರುವ ಮತ್ತು ನಿತ್ಯ 6 ರಿಂದ 7 ಗಂಟೆಗಳಷ್ಟು ಅನುತ್ಪಾದಕ ಕೆಲಸ ನಿರ್ವಹಿಸವ ಸರಕಾರಿ ನೌಕರರಿಗೆ ವಿಸ್ತರಿಸುವುದು ಸಮಾನತೆಯ ಹಾಗೂ ರಾಷ್ಟ್ರೀಯ ವೇತನ ನೀತಿಗೂ ಸಮೀಪವೆನಿಸುತ್ತದೆ.



ನಮ್ಮ ದೇಶದ ಯಾವುದೇ ಸರಕಾರವು ತನ್ನ ನೌಕರರಿಗೆ ಹಳೆ ಪಿಂಚಣಿ ನಿಯಮವನ್ನು ಮರಳಿ ಜಾರಿಗೆ ತರುವ ನಿರ್ಧಾರ ಅಥವಾ ರಾಜಕೀಯ ಲಾಭಕ್ಕಾಗಿ ನೀಡುವ ಆಶ್ವಾಸನೆಯು ರಾತ್ರಿ ಕಂಡ ಭಾವಿಗೆ ಹಗಲು ಬಿದ್ದಂತೆ. ಇಂತಹ ಅಪ್ರಬುದ್ಧವಾದ ಅಂತಹ ಯಾವುದೇ ನಿರ್ಧಾರ ದೇಶದ ಸಾಮಾನ್ಯ ಜನರ ಹಿತಕ್ಕೆ,ಆರ್ಥಿಕತೆಗೆ ಎಸಗುವ ದ್ರೋಹ. ಹಳೆ ಪಿಂಚಣಿ ಮರಳಿ ಜಾರಿಗೊಳಿಸಿದರೆ ಸರಕಾರ ಆಯವ್ಯಯವನ್ನು ಸರಿದೂಗಿಸಲಾಗದೆ ತಾನೇ ಹೆಣೆದ ಬಲೆಯಲ್ಲಿ ಸಿಕ್ಕಿಕೊಳ್ಳುವುದರಲ್ಲಿ ಸಂಶಯವಿಲ್ಲ. ಫಲಾನುಭವಿ ನೌಕರರಿಂದ ಯಾವುದೇ ವಂತಿಕೆ ಪಡೆಯದೆ (ನಮ್ಮ ಶಾಸಕರು ಮತ್ತು ಮಂತ್ರಿಗಳಂತೆ!) ಪಿಂಚಣಿ ಸೌಲಭ್ಯ ನೀಡುವುದು ಯಾವುದೇ ಜನ ಕಲ್ಯಾಣಪರ ಸರಕಾರಕ್ಕೆ ತರವಲ್ಲ.

ಇದಕ್ಕೆ ಪರ್ಯಾಯವಾಗಿ ನೌಕರರಿಂದಲೂ ವಂತಿಕೆ ಪಡೆಯಬೇಕಾದ ಅವರಿಗೂ ಅನುಕೂಲಕರವಾದ ಹೊಸ ತೊಂದು ಪಿಂಚಣಿ ಯೋಜನೆಯನ್ನೂ ರೂಪಿಸಿ ಜಾರಿಗೊಳಿಸಬಹುದು. ಈ ಯೋಜನೆಯಲ್ಲಿ, ಪ್ರತಿ ಸರ್ಕಾರಿ ನೌಕರನೂ ತನ್ನ ವೇತನದ ಶೇ.12.5 ರಷ್ಟು (ಮೂಲವೇತನ ಮತ್ತು ತುಟ್ಟಿ ಭತ್ಯೆ ಸೇರಿ) ಪಾವತಿಸುವುದು ಮತ್ತು ಅಷ್ಟೇ ಸಮನಾದ ವಂತಿಕೆಯನ್ನು ಸರಕಾರದಿಂದಲೂ ಪಾವತಿಸುವುದು. ಈ ಪಿಂಚಣಿ ನಿಧಿಯ ನಿರ್ವಹಣೆ ಆಯಾ ಸರ್ಕಾರದ ಹಿಡಿತದಲ್ಲಿರಬೇಕು. ಅಂದರೆ, ಪ್ರತಿ ತಿಂಗಳೂ ಒಟ್ಟು ವೇತನದ ಶೇ. 25ರಷ್ಟು (ಎರಡೂ ಕಡೆ ಸೇರಿ) ನೌಕರನ ಪಿಂಚಣಿ ಖಾತೆಗೆ ಜಮೆ ಆಗುತ್ತದೆ. ಉದಾಹರಣೆಗಾಗಿ ನೌಕರನೊಬ್ಬನ 25 ವರ್ಷದ ಸೇವಾವಧಿಯ ಸರಾಸರಿ ಮಾಸಿಕ ವೇತನ ರೂ.40000. ಅದರಲ್ಲಿ ನೌಕರ ಮತ್ತು ಸರಕಾರದ ವಂತಿಕೆ ಮಾಸಿಕ ರೂ.10000 ಹಾಗೂ ವರ್ಷಕ್ಕೆ ರೂ.1 ಲಕ್ಷ 20 ಸಾವಿರ. ಅಂದರೆ 25 ವರ್ಷಕ್ಕೆ ರು 30 ಲಕ್ಷ. ಈ ಮೊತ್ತಕ್ಕೆ ಶೇಕಡಾ 9 ರಷ್ಟು ಸರಳ ಬಡ್ಡಿಯನ್ನು ಲೆಕ್ಕ ಹಾಕಿದರೆ ಬಡ್ಡಿ ರೂ.33 ಲಕ್ಷದ 91 ಸಾವಿರ ಆಗುತ್ತದೆ (ಭವಿಷ್ಯ ನಿಧಿಯಲ್ಲಿ ಶೇ.8.05ರಷ್ಟು ಬಡ್ಡಿ ದರವಿದೆ) . ಅಂದರೆ, ಅಸಲು ಮೊತ್ತ ಸೇರಿ 25 ವರ್ಷಕ್ಕೆ ನಿವೃತ್ತಿ ಹೊಂದಿದಾಗ ಆತನ ಪಿಂಚಣಿ ಖಾತೆಯಲ್ಲಿ 63 ಲಕ್ಷದ 91 ಸಾವಿರ ರು. ಇರುತ್ತದೆ. ಈ ಮೊತ್ತಕ್ಕೆ ಶೇ.9 ರಷ್ಟು ಬಡ್ಡಿ ಲೆಕ್ಕ ಹಾಕಿದಲ್ಲಿ ವರ್ಷಕ್ಕೆ 5 ಲಕ್ಷದ 75 ಸಾವಿರ ರು. ಹಾಗೂ ತಿಂಗಳಿಗೆ 48 ಸಾವಿರ ರು. ಪಿಂಚಣಿ ರೂಪದಲ್ಲಿ ಪಡೆಯಬಹುದು. ಸೇವಾವಧಿ 25 ರಿಂದ 35 ವರ್ಷದವರೆಗೂ ಅಥವಾ ವಯೋ ನಿವೃತ್ತಿಯ ವಯಸ್ಸಿನವರೆಗೂ ವಿಸ್ತರಿಸುವುದರಿಂದ ಮಾಸಿಕ ಪಿಂಚಣಿ ಮೊತ್ತ ಗಣನೀಯವಾಗಿ ಹೆಚ್ಚುತ್ತದೆ. ಇಲ್ಲಿ ಉದಾಹರಣೆಗಾಗಿ ಕನಿಷ್ಠ ಸರಾಸರಿ ವೇತನವನ್ನು ಲೆಕ್ಕಹಾಕಲಾಗಿದೆ. ಹೆಚ್ಚಿನ ವೇತನ ಶ್ರೇಣಿಗೆ ಲೆಕ್ಕ ಹಾಕಿದಲ್ಲಿ ಅದು ಮಾಸಿಕ ಪಿಂಚಣಿ ಮೂರು ನಾಲ್ಕು ಪಟ್ಟು ಹೆಚ್ಚುತ್ತದೆ. ವಿಶೇಷ ಎಂದರೆ, ಪಿಂಚಣಿದಾರ ನಿಧನ ಹೊಂದಿದರೂ ಕುಟುಂಬ ಪಿಂಚಣಿಯೂ ಕಡಿಮೆಯಾಗದೇ ಅಷ್ಟೇ ದೊರೆಯುತ್ತದೆ. ಪಿಂಚಣಿ ನಿಯಮಾವಳಿಯಲ್ಲಿ ಭಾಗಶಃ ಪಿಂಚಣಿಯನ್ನು ಮುಂಚಿತವಾಗಿ (commutation) ಪಡೆಯುವ ಬಗ್ಗೆ ಅಥವಾ ಮಾಸಿಕ ಪಿಂಚಣಿ ಬಯಸದವರು ಯಾವುದೇ ಸಂದರ್ಭದಲ್ಲಿ ತಮ್ಮ ಖಾತೆಯಲ್ಲಿರುವ ಪೂರ್ಣ ಮೊತ್ತವನ್ನು ಪಡೆಯುವಂತೆ ಮತ್ತು ಪಿಂಚಣಿದಾರನ ನಿಧನದ ನಂತರ ಕುಟುಂಬ ಪಿಂಚಣಿ ಪಡೆಯುವ ನಾಮಿನಿಯೂ ಸಮಾನ ಹಕ್ಕನ್ನು ಪಡೆಯುವಂತಿರಬೇಕು.

ಇಂತಹ ಯೋಜನೆಯಿಂದ ಹೊಸ ಪಿಂಚಣಿ ಯೋಜನೆಗಿಂತ ಕಡಿಮೆ ಖರ್ಚಿನಲ್ಲಿಯೇ (ಶೇ.14ರ ಬದಲಾಗಿ ಶೇ.12 .5) ಹೆಚ್ಚಿನ ಆರ್ಥಿಕ ಹೊರೆಯಿಲ್ಲದೆ ಆರ್ಥಿಕತೆಯನ್ನು ನಿಭಾಯಿಸಬಹುದು. ನೌಕರರ ಪಾಲಿನ ವಂತಿಕೆಯನ್ನೂ 11 .5 ಕ್ಕೆ ಇಳಿಸಲೂಬಹುದು. ಈ ರೀತಿಯ ಖಜಾನೆ ಉಳಿತಾಯದ ಯೋಜನೆಯನ್ನು ರೂಪಿಸದೆ ಹಳೆ ಪಿಂಚಣಿ ಯೋಜನೆಯನ್ನು ಪುನಃ ತಂದಲ್ಲಿ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಆಗಬಹುದಾದ ಅಪಾಯದ ಚಿತ್ರಣ ಅಂಗೈಯೊಳಗಿನ ಹುಣ್ಣಿನಷ್ಟು ಸ್ಪಷ್ಟ. ಕೇಂದ್ರ ಮತ್ತು ರಾಜ್ಯಸರಕಾರ ಪುನಃ ಹಳೆ ಪಿಂಚಣಿ ಯೋಜನೆ ತರುವ ವಿಚಾರದಲ್ಲಿ ಆಶ್ವಾಸನೆ ನೀಡುವುದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:146

ಸಮಾಚಾರ ಸಣ್ಣದಲ್ಲ

ಸಿಕ್ಕಿಂ: 6 ಯೋಧರಲ್ಲಿ ಒಬ್ಬರ ಶವ ಪತ್ತೆ

ಗ್ಯಾಂಗ್ಟಕ್: ಜೂ.1ರಂದು ಮೇಘಸ್ಫೋಟದಿಂದಾಗಿ ಧಾರಾಕಾರ ಮಳೆ ಸುರಿದಾಗ ಮಾಂಗನ್ ಜಿಲ್ಲೆಯಲ್ಲಿದ್ದ ಸೇನಾಶಿಬಿರದ ಮಗ್ಗಲಲ್ಲಿದ್ದ ಪರ್ವತದ ಭಾಗ ಕುಸಿದಿದ್ದರಿಂದ 6 ಯೋಧರು ಹುತಾತ್ಮರಾಗಿ, 6 ಮಂದಿ ಕಣ್ಮರೆಯಾಗಿದ್ದರು. ನಾಲ್ವರು ಗಾಯಗೊಂಡಿದ್ದರು. ಕಣ್ಮರೆಯಾಗಿದ್ದವರಿಗಾಗಿ 8 ದಿನಗಳಿಂದಲೂ ಎನ್‌ಡಿಆರ್‌ಎಫ್ ಸೇರಿದಂತೆ ವಿವಿಧ ಸಂಸ್ಥೆಗಳ ನುರಿತ ಸಿಬ್ಬಂದಿಗಳ ತಂಡದಿಂದ ಶೋಧ ಕಾರ್ಯ ನಡೆದಿತ್ತು. ಸೋಮವಾರ ಒಬ್ಬ ಯೋಧನ ಮೃತದೇಹ ಪತ್ತೆಯಾಗಿದೆ. ಮೃತ ಯೋಧನನ್ನು ಸೈನುದ್ದೀನ್ ಪಿ.ಕೆ. ಎಂದು ಗುರುತಿಸಲಾಗಿದೆ. ಉಳಿದ ಐವರು ಯೋಧರಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಛತ್ತೀಸ್‌ಗಢ: ನಕ್ಸಲ್ ಐಇಡಿಗೆ ಎಎಸ್‌ಪಿ ಬಲಿ

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ನಕ್ಸಲರಿಟ್ಟಿದ್ದ ಐಇಡಿ ಸೋಮವಾರ ಸ್ಫೋಟಿಸಿದ್ದರಿಂದ ಹಿರಿಯ ಪೊಲೀಸ್ ಅಧಿಕಾರಿ ಆಕಾಶ್ ರಾವ್ ಗಿರೆಪುಂಜೆ ಹುತಾ

ತ್ಮರಾದರು. ಆಕಾಶ್ ರಾವ್ 2013ರ ಬ್ಯಾಚ್‌ನ ರಾಜ್ಯ ಪೊಲೀಸ್ ಅಧಿಕಾರಿಯಾಗಿದ್ದು, ಕೊಂಟಾ ವಿಭಾಗದಲ್ಲಿ ಎಎಸ್‌ಪಿ ಆಗಿದ್ದರು. ಇತ್ತೀಚೆಗೆ ಬಿಜಾಪುರದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ 7 ನಕ್ಸಲರನ್ನು ಪೊಲೀಸ್ ಜಂಟಿ ತಂಡ ಹೊಡೆದುರುಳಿಸಿತ್ತು. ಅದಕ್ಕೆ ಪ್ರತಿಕಾರವಾಗಿ ನಕ್ಸಲರು ಪೊಲೀಸರ ಗಸ್ತು ಮಾರ್ಗದಲ್ಲಿ ಐಇಡಿ ಸ್ಫೋಟಿಸಿದ್ದಾರೆ ಎನ್ನಲಾಗಿದೆ. ಕೊಂಟಾ-ಎರ್ರಾಬೋರ್ ರಸ್ತೆಯ ದೊಂಡ್ರಾ ಗ್ರಾಮ ಬಳಿ ಗಸ್ತು ನಡೆಸಿದ್ದಾಗ ಐಇಡಿ ಸ್ಫೋಟವಾಗಿದ್ದು, ಕೆಲ ಪೊಲೀಸರು ಗಾಯಗೊಂಡಿದ್ದಾರೆ. ನಕ್ಸಲರು ಹಿಂಸಾಚಾರ ಕೈಬಿಟ್ಟು ಶರಣಾಗಿ ಮುಖ್ಯವಾಹಿನಿಗೆ ಬರಬೇಕು. ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಉಪ ಮುಖ್ಯಮಂತ್ರಿ (ಗೃಹಖಾತೆ) ವಿಜಯ್ ಶರ್ಮಾ ಹೇಳಿದ್ದಾರೆ.

ಪಾಕ್ ಬೇಹು ಜ್ಯೋತಿ ನ್ಯಾ.ಬಂಧನ ವಿಸ್ತರಣೆ

ಹಿಸಾರ್: ಪಾಕಿಸ್ತಾನ ಪರ ಬೇಹುಗಾರಿಕೆ ನಡೆಸಿ ಬಂಧಿತಳಾಗಿರುವ ಹರಿಯಾಣದ ಯುಟ್ಯೂಬರ್ ಜ್ಯೋತಿ ಮಲ್ಹೋತ್ರಾ(33) ನ್ಯಾಯಾಂಗ ಬಂಧನ

ಅವಧಿಯನ್ನು ಸ್ಥಳೀಯ ನ್ಯಾಯಾಲಯ 2 ವಾರ ವಿಸ್ತರಿಸಿ ಸೋಮವಾರ ಆದೇಶಿಸಿದೆ. ಜ್ಯೋತಿಯನ್ನು ಸೆರೆಮನೆಯಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಹಿಸಾರ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಪ್ರಥಮ ದರ್ಜೆ) ಸುನಿಲ್ ಕುಮಾರ್ ಅವರ ನ್ಯಾಯಾಲದೆದುರು ಪೊಲೀಸರು ಹಾಜರುಪಡಿಸಿದ್ದರು. ಮುಂದಿನ ವಿಚಾರಣೆಯನ್ನು ಜೂ.23ಕ್ಕೆ ನಿಗದಿಪಡಿಸಿದೆ. ಹಿಸಾರ್ ಪೊಲೀಸರು ಮೇ 16ರಂದು ಪಾಕ್ ಪರ ಬೇಹುಗಾರಿಕೆ ನಡೆಸಿದ ಆರೋಪದಡಿ ಜ್ಯೋತಿಯನ್ನು ಬಂಧಿಸಿದ್ದಾರೆ.

ಮನೆಗೆ ದೂರವಾಣಿ ರಾಣಾಗೆ ಅನುಮತಿ

ದೆಹಲಿ: ಮಹಾರಾಷ್ಟ್ರದ ರಾಜಧಾನಿ ಮುಂಬೈ ಮಹಾನಗರದಲ್ಲಿ 2008ರ ನ.26ರಂದು ನಡೆದ ಭಯೋತ್ಪಾದಕ ದಾಳಿಯ ಮುಖ್ಯ ಆರೋಪಿಗಳಲ್ಲೊಬ್ಬನಾದ

ಪಾಕಿಸ್ತಾನ ಮೂಲದ ತಹಾವುರ್ ರಾಣಾನ ಮನವಿ ಮೇರೆಗೆ ಕುಟುಂಬದವರಿಗೆ ಒಂದು ಬಾರಿ ದೂರವಾಣಿ ಕರೆ ಮಾಡಲು ದೆಹಲಿ ಪಟಿಯಾಲಾ ಹೌಸ್ ಸಂಕೀರ್ಣದಲ್ಲಿನ ಸೆಷನ್ಸ್ ನ್ಯಾಯಾಲಯ ಅನುಮತಿ ನೀಡಿದೆ. ಸೆರೆಮನೆಯ ಹಿರಿಯ ಅಧಿಕಾರಿಗಳ ನಿಗಾದಲ್ಲಿಯೇ ದೂರವಾಣಿ ಕರೆ ಮಾಡಬೇಕು ಎಂಬ ಷರತ್ತನ್ನೂ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಚಂದ್ರಜಿತ್ ಸಿಂಗ್ ವಿಧಿಸಿದ್ದಾರೆ. ರಾಣಾ ದೇಹಾರೋಗ್ಯದ ಬಗೆಗಿನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆಯೂ ನ್ಯಾಯಾಧೀಶರು ವಿಚಾರಣೆ ವೇಳೆ ಸೆರೆಮನೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಎಡವಿಬಿದ್ದ ಟ್ರಂಪ್!

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ನ್ಯೂಜೆರ್ಸಿಯ ಮಾರಿಸ್‌ಟೌನ್‌ನಲ್ಲಿರುವ ಮುನ್ಸಿಪಲ್ ವಿಮಾನ ನಿಲ್ದಾಣದಲ್ಲಿ ಏರ್‌ಫೋರ್ಸ್ -1 ವಿಮಾನವನ್ನೇರುವಾಗ ಮೆಟ್ಟಿಲುಗಳ ಮೇಲೆ ಎಡವಿದ್ದಾರೆ. ಕಾಲು ಎಡವಿದ ಬಳಿಕ ಟ್ರಂಪ್ ಸಾವರಿಸಿಕೊಂಡು ಮೇಲೆದ್ದು ವಿಮಾನವೇರಿ ಒಳಗೆ ಸೇರಿಕೊಂಡಿದ್ದಾರೆ. ಆದರೆ, ಟ್ರಂಪ್ ಎಡವಿ ಬಿದ್ದ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಈ ಮೊದಲು ಟ್ರಂಪ್, ಜೋ ಬೈಡನ್‌ರನ್ನು ಗೇಲಿ ಮಾಡಿದ್ದನ್ನು ಮುಂದಿಟ್ಟುಕೊಂಡು ನೆಟ್ಟಿಗರು ಟ್ರಂಪ್ ಕಾಲೆಳೆಯುತ್ತಿದ್ದಾರೆ.

{ಸಂಜಯ್ ರಾವತ್ } ಶಿವಸೇನೆ(ಯುಬಿಟಿ)

ರಾಹುಲ್ ಗಾಂಧಿ ಚುನಾವಣಾ ಆಯೋಗದ ನಡವಳಿಕೆ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಬಿಜೆಪಿಗೇನೂ ಪ್ರಶ್ನೆ ಕೇಳಿಲ್ಲ. ಚುನಾವಣೆ ಆಯೋಗದ ಪರ ಸಿಎಂ ದೇವೇಂದ್ರ ಫಡ್ನವಿಸ್ ಏಕೆ ಪ್ರತಿಕ್ರಿಯಿಸಿದ್ದಾರೆ? ಚು.ಆಯೋಗ ತನ್ನ ಮುಖದ ಧೂಳು ಒರೆಸಲು ಮತ್ತು ತನ್ನ ಕಾರ್ಯವೈಖರಿ ಬಗೆಗಿನ ಶಂಕೆ ಪರಿಹರಿಸುವ ಕೆಲಸವನ್ನು ಬಿಜೆಪಿಗೆ ಗುತ್ತಿಗೆ ಮೇಲೆ ನೀಡಿದೆಯೇ?

4 ದಶಕ ಬಳಿಕ ಭಾರತೀಯನ ಗಗನಯಾನ | 1984ರಲ್ಲಿ ರಾಕೇಶ್ ಶರ್ಮಾ ಮೊದಲ ಗಗನಯಾನ | ಅಮೆರಿಕದ ಆಕ್ಸಿಯಮ್ ಮಿಷನ್ | ಭಾರತ, ಅಮೆರಿಕ, ಪೋಲೆಂಡ್, ಹಂಗೆರಿ ಯಾತ್ರಿಗಳು | 28 ಗಂಟೆ ಪಯಣ, 14 ದಿನ ವಾಸ

ಶುಭಾಂಶು ನಾಳೆ ಬಾಹ್ಯಾಕಾಶಕ್ಕೆ

ದೆಹಲಿ: ಭಾರತೀಯ ವಾಯುಪಡೆ ಪೈಲಟ್ ಶುಭಾಂಶು ಶುಕ್ಲಾ ಬುಧವಾರ ಸಂಜೆ ಆ್ಯಕ್ಸಿಯಮ್ ಮಿಷನ್-4ರಲ್ಲಿ ಗಗನಕ್ಕೆ ಜಿಗಿಯಲಿದ್ದಾರೆ.

ಅಮೆರಿಕದ ಫ್ಲೋರಿಡಾದಲ್ಲಿನ ಉಡ್ಡಯನ ಕೇಂದ್ರದಿಂದ ಹೊರಡಲಿರುವ ಸ್ಪೇಸ್‌ಎಕ್ಸ್ ಕಂಪನಿಯ ಗಗನನೌಕೆ ಶುಭಾಂಶು ಶುಕ್ಲ ಸೇರಿದಂತೆ ನಾಲ್ವರು ಗಗನಯಾತ್ರಿಕರನ್ನು 'ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ'ಕ್ಕೆ(ಐಎಸ್‌ಎಸ್) ಕರೆದೊಯ್ಯಲಿದೆ. ಈ ಬಾಹ್ಯಾಕಾಶ ಪಯಣ ಭಾರತದ 2027ರ ಮಾನವ ಸಹಿತ ಗಗನಯಾನ ಯೋಜನೆಗೆ ಒಳ್ಳೆಯ ಅನುಭವ ಕಟ್ಟಿಕೊಡಲಿದೆ ಎಂದೇ ನಿರೀಕ್ಷಿಸಲಾಗಿದೆ.

ಫ್ಲೋರಿಡಾದಲ್ಲಿನ ಕೆನಡಿ ಸ್ಪೇಸ್ ಸೆಂಟರ್‌ನಿಂದ ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ 'ಸ್ಪೇಸ್ ಎಕ್ಸ್' ಕಂಪನಿಯ 'ಡ್ರ್ಯಾಗನ್' ರಾಕೆಟ್ ಫಾಲ್ಕಂ-9 ಗಗನನೌಕೆ ಹೊತ್ತು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಲಿದೆ.

28 ಗಂಟೆ ಪಯಣ: 'ಆ್ಯಕ್ಸಿಯಮ್ ಮಿಷನ್-4' ಗಗನನೌಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಲು 28 ಗಂಟೆಗಳಷ್ಟು ಸಮಯ ತೆಗೆದುಕೊಳ್ಳಲಿದೆ. ಶುಭಾಂಶು ಅವರ ಮೊದಲ ಗಗನಯಾನ 'ವಾಣಿಜ್ಯ ಉದ್ದೇಶದ ಗಗನನೌಕೆ'ಯಲ್ಲಿ ನಡೆಯಲಿದೆ. ಈ ಬಗೆಯ ಗಗನಯಾನ ನಡೆಸಿದ ಮೊದಲ ಭಾರತೀಯ ಎಂಬ ದಾಖಲೆಯೂ ಶುಭಾಂಶು ಹೆಸರಲ್ಲಿ ದಾಖಲಾಗಲಿದೆ.

ಯಾತ್ರಿಕರು 4: ಈ ಗಗನಯಾತ್ರೆಯಲ್ಲಿ ಶುಭಾಂಶು ಶುಕ್ಲ ಮಿಷನ್ ಪೈಲಟ್ ಆಗಿದ್ದರೆ, ನಾಸಾದ ನುರಿತ ಗಗನಯಾತ್ರಿ ಅಮೆರಿಕದ ಮೆಗ್ಗಿ ವಿಟ್ಸನ್ ಮಿಷನ್ ಕಮಾಂಡರ್ ಆಗಿದ್ದಾರೆ. ಇವರು 675 ದಿನಗಳನ್ನು ಬಾಹ್ಯಾಕಾಶ ಕಳೆದ ಅನುಭವಿ. ಪೋಲೆಂಡ್‌ನ 'ಸಿಇಆರ್‌ಎನ್' ಇಂಜಿನಿಯರ್ ಸ್ಲೆವೋಜ್ ಉಜ್‌ನ್ಯಾನ್ಸ್‌ಕಿ ಮತ್ತು ಹಂಗೆರಿಯ ಟಿಬೋರ್ ಕಾಪು ಮಿಷನ್ ಸ್ಪೆಷಲಿಸ್ಟ್ ಆಗಿದ್ದಾರೆ.

'ಆಕ್ಸಿಯಮ್ ಮಿಷನ್-4'ರ ನಾಲ್ವರು ಗಗನಯಾತ್ರಿಗಳು

ಭಾರತಕ್ಕೇನು ಲಾಭ?

ಶುಭಾಂಶು ಶುಕ್ಲಾ ಐಎಸ್‌ಎಸ್‌ಗೆ ಹೋಗಿ ಬರುವುದರಿಂದ ಭಾರತದ ಮುಂಬರುವ ಮಾನಹ ಸಹಿತ ಗಗನಯಾನ ಯೋಜನೆಗಳಿಗೆ ಅನುಭವಿ ಗಗನಯಾತ್ರಿ ದೊರೆತಂತಾಗಲಿದೆ. ಅವರಿಂದ ಭಾರತದ ಭವಿಷ್ಯದ ಗಗನಯಾತ್ರಿಗಳಿಗೆ ತರಬೇತಿ ಕೊಡಿಸಲು ಅವಕಾಶವಾಗಲಿದೆ. 2027ರಲ್ಲಿ ಭಾರತ ಹಮ್ಮಿಕೊಳ್ಳಲಿರುವ ಮಾನವ ಸಹಿತ ಗಗನಯಾನ ಯೋಜನೆಗೆ ದೊಡ್ಡ ಮಟ್ಟದಲ್ಲಿ ಶುಭಾಂಶು ನೆರವಾಗಲಿದ್ದಾರೆ ಎಂಬ ನಿರೀಕ್ಷೆಗಳಿವೆ. ಗಗನಯಾನ ವೇಳೆ ಎದುರಾಗುವ ಸಮಸ್ಯೆಗಳು, ಅವುಗಳನ್ನು ಎದುರಿಸುವ ವಿಧಾನಗಳು ಮೊದಲಾದ ಮಹತ್ವದ ಸಂಗತಿಗಳನ್ನು ಖುದ್ದಾಗಿ ಅರಿಯಲು ಭಾರತೀಯರಿಗೆ ಅವಕಾಶ ಸಿಕ್ಕಂತಾಗಲಿದೆ.

ಭಾರತ ಮೂಲದ ಗಗನಯಾತ್ರಿಗಳು

ಭಾರತೀಯನಾಗಿ ಗಗನಯಾತ್ರೆ ಕೈಗೊಂಡ ಮೊಟ್ಟ ಮೊದಲ ವ್ಯಕ್ತಿ ವಾಯುಪಡೆ ವಿಂಗ್ ಕಮಾಂಡರ್ ಆಗಿದ್ದ ರಾಕೇಶ್ ಶರ್ಮಾ. 1984ರ ಏ.3ರಂದು ರಷ್ಯಾದ ಸ್ಯೂಯೆಟ್ ಟಿ-11 ಗಗನ ನೌಕೆಯಲ್ಲಿ ಬಾಹ್ಯಾಕಾಶ ಯಾತ್ರೆ ಕೈಗೊಂಡರು. ಉಳಿದಂತೆ ಭಾರತ ಮೂಲದವರಾಗಿ ಸುನೀತಾ ವಿಲಿಯಮ್ಸ್ ಮತ್ತು ಕಲ್ಪನಾ ಚಾವ್ಲಾ ಹೆಸರುಗಳು ಗಗನಯಾತ್ರಿಕರ ಪಟ್ಟಿಯಲ್ಲಿ ಸೇರಿಕೊಂಡಿವೆ.

ರಾಕೇಶ್ ಶರ್ಮಾ ಸ್ಯಾಲ್ಯುಟ್-7 ಬಾಹ್ಯಾಕಾಶ ನಿಲ್ದಾಣದಲ್ಲಿ 8 ದಿನಗಳ ಕಾಲ ಉಳಿದಿದ್ದರು. ಆ ಯಾತ್ರೆಯಲ್ಲಿ ರಾಕೇಶ್ ಶರ್ಮಾ ಪೇಲೋಡ್ ಸ್ಪೆಷಲಿಸ್ಟ್ ಆಗಿದ್ದರು.

ಕಲ್ಪನಾ ಚಾವ್ಲಾ ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ಮೊದಲ ಭಾರತೀಯ ಮಹಿಳೆ. 2003ರಲ್ಲಿ ಅವರು ನಾಸಾದ ಗಗನನೌಕೆಯಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದರು. ಆದರೆ, ಐಎಸ್‌ಎಸ್‌ನಲ್ಲಿ ಉಳಿದಿರಲಿಲ್ಲ. ವಾಪಸಾಗುವಾಗ ಗಗನನೌಕೆ ಭೂವಾತಾವರಣ ಪ್ರವೇಶಿಸುವ ವೇಳೆ ವಿಪರೀತ ಬಿಸಿಯಾಗಿ ಸ್ಫೋಟಗೊಂಡಿದ್ದರಿಂದ ದುರ್ಮರಣವಪ್ಪಿದ್ದರು.

ಸುನೀತಾ ವಿಲಿಯಮ್ಸ್ ಪೂರ್ಣಪ್ರಮಾಣದ ಗಗನಯಾತ್ರಿಯಾಗಿದ್ದು, ಎರಡು ಬಾರಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿಬಂದಿದ್ದಾರೆ. ಮೂಲ ಭಾರತವೇ ಆಗಿದ್ದರೂ ಸುನೀತಾ ಅಮೆರಿಕವನ್ನು ಪ್ರತಿನಿಧಿಸುತ್ತಾರೆ.

ಇಸ್ರೊ ಉಸ್ತುವಾರಿ

ಭಾರತದ ಪರವಾಗಿ ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಅಮೆರಿಕದ 'ಆ್ಯಕ್ಸಿಯಮ್ ಸ್ಪೇಸ್' ಸಂಸ್ಥೆಗೆ ತೆರಳಿ ಆಗಿರುವ ಎಲ್ಲಾ ವ್ಯವಸ್ಥೆಗಳನ್ನೂ ಪರಿಶೀಲಿಸಿದ್ದಾರೆ. ಗಗನಯಾತ್ರಿಕರ ತಂಡದ ಎಲ್ಲಾ 4 ಸದಸ್ಯರೂ ಎಲ್ಲಾ ಹಂತಗಳ ತರಬೇತಿಗಳನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಿ ಮೇ 25ರಿಂದಲೂ ಕ್ವಾರಂಟೈನ್(ಏಕಾಂತ ವಾಸ)ದಲ್ಲಿದ್ದಾರೆ. ಆಕ್ಸಿಯಮ್ ಮಿಷನ್-4ರಲ್ಲಿ ಇಸ್ರೊ ಕೂಡ ಭಾಗಿಯಾಗಿದೆ. ಇದರಿಂದ ಇಸ್ರೊಗೆ 550 ಕೋಟಿ ರು. ವೆಚ್ಚವಾಗಲಿದೆ. ಆದರೆ, ಇದರಿಂದ ಭಾರತದ 2027ರ ಗಗನಯಾನ ಯೋಜನೆಗೆ ಉತ್ತಮ ಪೂರ್ವಭಾವಿ ಪ್ರಯೋಗ ನಡೆಸಿದಂತಾಗಲಿದೆ.

ಪ್ರಧಾನಿ ಸಂವಾದ: ಶುಭಾಂಶು ಶುಕ್ಲ ಐಎಸ್‌ಎಸ್ ತಲುಪಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೆ ವರ್ಚುವಲ್ ಸಂವಾದ ನಡೆಸಲಿದ್ದಾರೆ. ಶುಭಾಂಶು ಶುಕ್ಲ ಅವರ ಈ ಗಗನಯಾನ ಭಾರತದ ಬಾಹ್ಯಾಕಾಶ ಕ್ಷೇತ್ರದ ಸಂಶೋಧನೆ, ಮಾನವ ಸಹಿತ ಗಗನಯಾನ ಮೊದಲಾದ ಯೋಜನೆಗಳಿಗೆ ಬಹಳ ಮಹತ್ವದ್ದಾಗಿದೆ.

ಯುದ್ಧ ವಿಮಾನ ಪೈಲಟ್ ಶುಕ್ಲಾ

ಉತ್ತರ ಪ್ರದೇಶದ ಲಖನೌನಲ್ಲಿ 1985ರ ಅ.10ರಂದು ಜನಿಸಿದ ಶುಭಾಂಶು ಶುಕ್ಲಾ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ)ಯಲ್ಲಿ ವ್ಯಾಸಂಗ ಮಾಡಿ ಭಾರತೀಯ ವಾಯುಪಡೆ ಪೈಲಟ್ ಆಗಿ ಬಹಳ ವರ್ಷಗಳ ಅನುಭವ ಪಡೆದಿದ್ದಾರೆ. ಸುಖೋಯ್ 30, ಜಾಗ್ವಾರ್, ಹಾಕ್, ಡಾರ್ನಿಯರ್ ಮೊದಲಾದ ಜೆಟ್ ವಿಮಾನಗಳನ್ನು ಒಟ್ಟಾರೆ 2,000 ಗಂಟೆಗಳಿಗೂ ಅಧಿಕ ಕಾಲ ಚಲಾಯಿಸಿ ಉತ್ತಮ ಅನುಭವ ಹೊಂದಿದ್ದಾರೆ.

ಭಾರತದ ಗಗನಯಾನ ಯೋಜನೆಗೆ ಸಮರ್ಥ ಗಗನಯಾತ್ರಿಯನ್ನು ಆಯ್ಕೆ ಮಾಡಲು ವಾಯುಪಡೆಯ ಇನ್‌ಸ್ಟಿಟ್ಯೂಟ್ ಆಫ್ ಏರೋಸ್ಪೇಸ್ ಮೆಡಿಸಿನ್ ಮತ್ತು ಇಸ್ರೊ ಜಂಟಿಯಾಗಿ ಕಾರ್ಯನಿರ್ವಹಿಸಿವೆ. ಅರ್ಜಿ ಹಾಕಿದ್ದ ನೂರಾರು ತಂತ್ರಜ್ಞರಲ್ಲಿ ಶುಭಾಂಶು ಶುಕ್ಲ ಸೇರಿದಂತೆ ನಾಲ್ವರ ಹೆಸರನ್ನು ಆಯ್ಕೆ ಮಾಡಿ ಗಗನಯಾತ್ರಿ ಪಟ್ಟಿಗೆ ಸೇರಿಸಿವೆ.

ಐಎಎಫ್ ಯುದ್ಧ ವಿಮಾನಗಳನ್ನು ಚಲಾಯಿಸಿದ ಹೆಚ್ಚಿನ ಅನುಭವ ಪಡೆದಿರುವ ಕಾರಣ ಅಮೆರಿಕದ ಆ್ಯಕ್ಸಿಯಮ್‌ನ 4ನೇ ಬಾಹ್ಯಾಕಾಶ ಪ್ರಯಾಣಕ್ಕೆ ಮುಖ್ಯ ಪೈಲಟ್ ಆಗಿ ಶುಭಾಂಶು ಶುಕ್ಲ ಆಯ್ಕೆಯಾಗಿದ್ದಾರೆ. ಶುಕ್ಲ ಈವರೆಗೆ ರಷ್ಯಾ, ಯೂರೋಪ್, ಅಮೆರಿಕದ ನಾಸಾದಲ್ಲಿ ಗಗನಯಾತ್ರೆಗೆ ಸಂಬಂಧಿಸಿ ಎಲ್ಲಾ ರೀತಿಯ ತರಬೇತಿ ಪಡೆದಿದ್ದಾರೆ.



- ಅಮೆರಿಕದ ಆಕ್ಸಿಯಮ್ ಕಂಪನಿಯ 4ನೇ ಬಾಹ್ಯಾಕಾಶ ಯಾನ ಯೋಜನೆ
- ಎಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ಕಂಪನಿಯ 'ಫಾಲ್ಕನ್ 9' ರಾಕೆಟ್
- ಡ್ರ್ಯಾಗನ್-ಸಿ213 ಗಗನನೌಕೆಯಲ್ಲಿ ನಾಲ್ವರು ಗಗನಯಾತ್ರಿಗಳ ಪಯಣ
- ಭಾರತದ ವಿಂಗ್ ಕಮಾಂಡರ್ ಶುಭಾಂಶು ಶುಕ್ಲಗೆ ಮುಖ್ಯ ಪೈಲಟ್ ಹೊಣೆ

ಎಷ್ಟು ದಿನ ಬಾಹ್ಯಾಕಾಶ ವಾಸ?

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ನಾಲ್ವರು ಗಗನಯಾತ್ರಿಕರ ತಂಡ 14 ದಿನಗಳ ಇರಲಿದೆ ಎಂದು ಸಮಯ ನಿಗದಿ ಪಡಿಸಲಾಗಿದೆ. ಹೆಚ್ಚುವರಿ ದಿನ ಇರಬೇಕಾಗಿ ಬಂದರೆ ಎಂಬ ಮುಂಜಾಗ್ರತೆ ಕ್ರಮವಾಗಿ ನಾಲ್ವರನ್ನೂ ಅದಕ್ಕೆ ಮಾನಸಿಕ-ದೈಹಿಕವಾಗಿ ಸಜ್ಜುಗೊಳಿಸಲಾಗಿದೆ.

ಐಎಸ್‌ಎಸ್‌ನಲ್ಲಿ ಇರುವಷ್ಟೂ ಸಮಯ ನಾಲ್ವರೂ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದ್ದಾರೆ. ಶುಭಾಂಶು ಆಹಾರ ಮತ್ತು ಪೌಷ್ಟಿಕಾಂಶ ಸಂಬಂಧಿ ಪ್ರಯೋಗಗಳನ್ನು ನಡೆಸಲಿದ್ದಾರೆ. ಶೂನ್ಯ ಗುರುತ್ವಾಕರ್ಷಣ ಪರಿಸರದಲ್ಲಿ ಕಾಳುಗಳನ್ನು ಮೊಳಕೆ ಬರಿಸುವುದು ಇತ್ಯಾದಿ ಪ್ರಯೋಗಗಳನ್ನು ಇದು ಒಳಗೊಂಡಿರುತ್ತದೆ. ಇಸ್ರೊ ಸಂಸ್ಥೆಯ ಪರವಾಗಿ 7 ಪ್ರಯೋಗ ಮತ್ತು ನಾಸಾಗಾಗಿ 5 ಜಂಟಿ ಪ್ರಯೋಗ ನಡೆಯಲಿವೆ.

ಥಾಣೆ: ಕಿಕ್ಕಿರಿದಿದ್ದ ರೈಲಿನಿಂದ ಜಾರಿ 6 ಪ್ರಯಾಣಿಕರ ಸಾವು

ಥಾಣೆ: ಮಹಾರಾಷ್ಟ್ರದ ಥಾಣೆ ನಗರ ಬಳಿಯ ದಿವಾದಲ್ಲಿ ಕಿಕ್ಕಿರಿದು ತುಂಬಿದ್ದ 'ಲೋಕಲ್ ಟ್ರೈನ್'ನಿಂದ ಕೆಳಕ್ಕೆ ಜಾರಿಬಿದ್ದ ಆರು ಪ್ರಯಾಣಿಕರು ದುರ್ಮರಣಕ್ಕೀಡಾಗಿದ್ದಾರೆ. ಏಳು ಮಂದಿ ಗಾಯಗೊಂಡಿದ್ದಾರೆ. ಮೃತರೆಲ್ಲರೂ 30-35ರ ವಯೋಮಾನದವರು.

ಕಾಲಿಡಲೂ ಜಾಗವಿಲ್ಲದಷ್ಟು ಪ್ರಮಾಣದಲ್ಲಿ ಪ್ರಯಾಣಿಕರಿಂದ ಕಿಕ್ಕಿರಿದಿದ್ದ ಸ್ಥಳೀಯ ಸಂಚಾರಿ ರೈಲಿನ ಬಾಗಿಲಲ್ಲಿ ನಿಂತು ಪ್ರಯಾಣಿಕರು ನೇತಾಡುತ್ತಿದ್ದರು. ರೈಲು, ಕಾಸರ್ ಕಡೆಗೆ ಸಾಗುತ್ತಿದ್ದಾಗ ಬೆಳಗ್ಗೆ 9.30ರ ವೇಳೆ ದಿವಾ ಮತ್ತು ಕೋಪರ್ ನಿಲ್ದಾಣಗಳ ನಡುವೆ 13 ಪ್ರಯಾಣಿಕರು ಕೈಹಿಡಿತ ತಪ್ಪಿ ಜಾರಿ ಕೆಳಕ್ಕೆ ಬಿದ್ದಿದ್ದಾರೆ.

ಜನದಟ್ಟಣೆ ಅವಧಿಯಾಗಿದ್ದರಿಂದ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿದ್ದರು. ಹಾಗಾಗಿ ಹಲವರು ರೈಲಿನ ಬಾಗಿಲಲ್ಲಿ ನೇತಾಡುತ್ತಾ ಸಾಗಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಪ್ರಯಾಣಿಕರು ತಾವಾಗಿಯೇ ಕೆಳಗೆ ಬಿದ್ದರೇ? ಅಥವಾ ಯಾರಾದರೂ ತಳ್ಳಿದ್ದಾರೆಯೇ? ಎಂಬುದನ್ನು ತಿಳಿಯಬೇಕಿದೆ. ಅದಕ್ಕಾಗಿ ತನಿಖೆ ನಡೆಸಬೇಕಿದೆ ಎಂದು ಶಿವಸೇನೆ ಸಂಸದ ನರೇಶ್ ಮ್ಹಾಸ್ಕೆ ಆಗ್ರಹಿಸಿದ್ದಾರೆ.

ಇದು ಅತ್ಯಂತ ದುರದೃಷ್ಟಕರ ಘಟನೆ ಎಂದಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ದುರ್ಘಟನೆ ಬಗ್ಗೆ ಭಾರತೀಯ ರೈಲ್ವೆ ತನಿಖೆ ಆರಂಭಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ಥಾಣೆಯಲ್ಲಿ ಲೋಕಲ್ ಟ್ರೈನ್‌ನಿಂದ ಬಿದ್ದು 6 ಪ್ರಯಾಣಿಕರ ಸಾವಿಗೀಡಾಗಿರುವುದು ದುರದೃಷ್ಟಕರ ಎಂದು ಹೇಳಿದ ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್, ಜನದಟ್ಟಣೆ ಗಮನದಲ್ಲಿಟ್ಟುಕೊಂಡು ಉಪನಗರ ರೈಲುಗಳಲ್ಲಿ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಬೇಕು ಎಂದು ರೈಲ್ವೆಗೆ ಮನವಿ ಮಾಡಿದ್ದಾರೆ.

ಸ್ವಯಂಚಾಲಿತ ಬಾಗಿಲು!

6 ಪ್ರಯಾಣಿಕರ ಸಾವಿನ ನಂತರ ಎಚ್ಚೆತ್ತ ರೈಲ್ವೆ ಸಚಿವಾಲಯ, ಮುಂಬೈ ಸಬರ್ಬನ್‌ಗಾಗಿ ಹೊಸ ಹಾಗೂ ಹಳೆಯ ಲೋಕಲ್ ಟ್ರೈನ್‌ಗಳ ಎಲ್ಲಾ ಬೋಗಿಗಳಿಗೂ ಸ್ವಯಂಚಾಲಿತ ಬಾಗಿಲು ಸೌಲಭ್ಯ ಕಲ್ಪಿಸಲು ನಿರ್ಧರಿಸಿದೆ ಎಂದು ರೈಲ್ವೆ ಮಂಡಳಿ ಮಾಹಿತಿ ಮತ್ತು ಪ್ರಚಾರ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ದಿಲೀಪ್ ಕುಮಾರ್ ಹೇಳಿದ್ದಾರೆ. ಅಲ್ಲದೆ, ಪ್ರಸ್ತುತ ಸೇವೆಯಲ್ಲಿರುವ ಎಲ್ಲಾ ರೇಕ್‌ಗಳನ್ನು ಮರುವಿನ್ಯಾಸ ಮಾಡಲಾಗುವುದು ಎಂದಿದ್ದಾರೆ.

ನಮೋ ಆಪ್ ಸಮೀಕ್ಷೆ

ದೆಹಲಿ: ಕಳೆದ 11 ವರ್ಷಗಳಲ್ಲಿ ಭಾರತದ ಬೆಳವಣಿಗೆ, ಎನ್‌ಡಿಎ ಮೈತ್ರಿಕೂಟ ಸರಕಾರದ ಆಡಳಿತ ಕುರಿತು ದೇಶದ ಜನರ ಅಭಿಪ್ರಾಯ ತಿಳಿಯಲು ಮುಂದಾಗಿರುವ ಪ್ರಧಾನಿ ನರೇಂದ್ರ ಮೋದಿ, 'ನಮೋ ಅಪ್ಲಿಕೇಶನ್' ಮೂಲಕ ನೇರ ಸಮೀಕ್ಷೆಗೆ ಮುಂದಾಗಿದ್ದಾರೆ. ಕೇಂದ್ರದ ಎನ್‌ಡಿಎ ಮೈತ್ರಿಕೂಟ ಸರಕಾರದಿಂದ ನಡೆಯುತ್ತಿರುವ ಮೊದಲ ನೇರ ಸಮೀಕ್ಷೆ ಇದಾಗಿದೆ. ಸಮೀಕ್ಷೆಯಲ್ಲಿ ಭಾಗವಹಿಸಿ ಅಭಿಪ್ರಾಯ ಹಂಚಿಕೊಳ್ಳಿ ಎಂದು ಪ್ರಧಾನಿ ಮೋದಿ ದೇಶದ ಜನರಲ್ಲಿ ಮನವಿ ಮಾಡಿದ್ದಾರೆ.

ಕೇಂದ್ರ ಸರಕಾರದ ಆಡಳಿತ ಕುರಿತು ಪ್ರತಿಕ್ರಿಯೆ ನೀಡುವ ಜನರು ತಮ್ಮ ರಾಜ್ಯ, ಕ್ಷೇತ್ರದ ಹೆಸರನ್ನೂ ದಾಖಲಿಸುವಂತೆ, ಜತೆಗೆ ಸಮೀಕ್ಷೆಯಲ್ಲಿನ ಕೆಲ ಪ್ರಶ್ನೆಗಳಿಗೂ ಉತ್ತರಿಸುವಂತೆ 'ಜನ-ಮನ ಸಮೀಕ್ಷೆ' ಎಂದೇ ಹೆಸರಿಸಲಾಗಿರುವ ಈ ಸಮೀಕ್ಷೆಯಲ್ಲಿ ಕೋರಲಾಗಿದೆ.

'ನಿಮ್ಮ ಅಭಿಪ್ರಾಯ ನಮಗೆ ಬಹಳ ಮುಖ್ಯ. ನಮೋ ಆಪ್‌ನ ಸಮೀಕ್ಷೆಯಲ್ಲಿ ಎಲ್ಲರೂ ಭಾಗವಹಿಸಿ. 11 ವರ್ಷಗಳಲ್ಲಿ ಭಾರತದ ಪ್ರಗತಿಯ ಗತಿಯ ಬಗ್ಗೆ ನಿಮಗೆ ಏನು ಅನಿಸಿತು ಎಂದು ನಮಗೆ ತಿಳಿಸಿ' ಎಂದು ಪ್ರಧಾನಿ ಮೋದಿ ಸೋಮವಾರ 'ಎಕ್ಸ್' ಖಾತೆಯಲ್ಲಿ ಕೋರಿದ್ದಾರೆ.

ಕೊಚ್ಚಿ ಬಳಿ ಸರಕು ಸಾಗಣೆ ನೌಕೆಗೆ ಬೆಂಕಿ: ನಾಲ್ವರು ಕಣ್ಮರೆ

ಕೊಚ್ಚಿ: ಶ್ರೀಲಂಕಾದ ರಾಜಧಾನಿ ಕೊಲಂಬೊದಿಂದ 650 ಕಂಟೇನರ್‌ಗಳನ್ನು ಹೊತ್ತು ಮುಂಬೈನತ್ತ ತೆರಳುತ್ತಿದ್ದ ಸಿಂಗಾಪುರದ ಕಂಪನಿಯ ಕಂಟೇನರ್ ಸಾಗಣೆ 'ಎಂವಿ ವ್ಯಾನ್ ಹೈ 503' ವಾಣಿಜ್ಯ ನೌಕೆಗೆ ಕೇರಳದ ಕಡಲ ತೀರದ ಕೊಚ್ಚಿ ಬಂದರಿನ ಸಮೀಪ ಸೋಮವಾರ ಬೆಳಗ್ಗೆ ಬೆಂಕಿ ಹೊತ್ತಿಕೊಂಡಿದ್ದು, ಭಾರೀ ಪ್ರಮಾಣದ ಹಾನಿ ಸಂಭವಿಸಿದೆ. ಹಡಗಿನಲ್ಲಿದ್ದ ಕಂಟೇನರ್‌ಗಳಲ್ಲಿ 50 ಕಂಟೇನರ್‌ಗಳು ಸಮುದ್ರಕ್ಕೆ ಮುಳುಗಿ ಹೋಗಿವೆ.

ಸುದ್ದಿ ತಿಳಿದ ತಕ್ಷಣವೇ ಕೊಚ್ಚಿ ಬಂದರಿನಿಂದ ರಕ್ಷಣಾ ಕಾರ್ಯಾಚರಣೆ ಪುಟ್ಟ ನೌಕೆಗಳು ತೆರಳಿ ರಕ್ಷಣಾ ಕಾರ್ಯ ಆರಂಭಿಸಿವೆ. ಭಾರತೀಯ ನೌಕಾಪಡೆಯ ರಕ್ಷಣಾ ತಂಡ ಸ್ಥಳಕ್ಕೆ ಧಾವಿಸಿ ವಾಣಿಜ್ಯ ನೌಕೆಯ ಸಿಬ್ಬಂದಿ ರಕ್ಷಣೆಗೆ ನೆರವಾಗಿದೆ. ವಾಣಿಜ್ಯ ನೌಕೆಯಲ್ಲಿದ್ದ ಸಿಬ್ಬಂದಿ ವರ್ಗದ 22 ಮಂದಿಯಲ್ಲಿ 18 ಜನರನ್ನು ರಕ್ಷಿಸಲಾಗಿದ್ದು, ಕಣ್ಮರೆಯಾಗಿರುವ ನಾಲ್ವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಕೊಚ್ಚಿ ಬಂದರು ಸಮೀಪದ ಬೇಯ್‌ಪೋರ್ ಮತ್ತು ಅಳಿಕ್ಕಳ್ ಬಂದರುಗಳ ನಡುವಿನ ಕಡಲಿನ ಮಧ್ಯೆಯೇ, ತೀರದಿಂದ 40 ಕಿಮೀ ದೂರದಲ್ಲಿರುವಾಗ ಕಂಟೇನರ್ ಸಾಗಣೆ ನೌಕೆಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಹಡಗಿನಲ್ಲಿದ್ದ ಸಿಬ್ಬಂದಿಗಳಲ್ಲಿ 18 ಮಂದಿ ಬೆಂಕಿಯಿಂದ ತಪ್ಪಿಸಿಕೊಳ್ಳಲು ಸಮುದ್ರಕ್ಕೆ ಜಿಗಿದಿದ್ದಾರೆ. ಬಳಿಕ ಸಮುದ್ರ ಮಧ್ಯದಲ್ಲಿ ಹೊತ್ತಿ ಉರಿಯುತ್ತಿದ್ದ 270 ಮೀಟರ್ ಉದ್ದವಾದ ಸರಕು ಸಾಗಣೆ ನೌಕೆಗೆ ತಗುಲಿದ್ದ ಬೆಂಕಿಯನ್ನು ನಂದಿಸಲು ಹಲವು ನೌಕೆಗಳು ಗಂಟೆಗಟ್ಟಲೆ ಶ್ರಮಿಸಿವೆ. ನೌಕಾಪಡೆಯ ಹೆಲಿಕಾಪ್ಟರ್‌ಗಳೂ ಬೆಂಕಿ ನಂದಿಸಲು ನೆರವಾಗುತ್ತಿವೆ ಎನ್ನಲಾಗಿದೆ.

ಲಾಸ್‌ಏಂಜಲೀಸ್ 44, ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ 60 ಮಂದಿ ಬಂಧನ

ಅಮೆರಿಕಕ್ಕೆ ಅಕ್ರಮ ವಲಸಿಗರ ಬೆಂಕಿ, ಕಲ್ಲೆಸೆತ

ಲಾಸ್‌ಏಂಜಲೀಸ್: ಅಕ್ರಮ ವಲಸಿಗರ ಮೇಲಿನ ಅಮೆರಿಕ ಸರಕಾರ ಕಠಿಣ ಕ್ರಮ ಕೈಗೊಂಡಿರುವುದನ್ನು ವಿರೋಧಿಸಿ ಲಾಸ್ ಏಂಜಲೀಸ್ ರಾಜ್ಯದ ವಿವಿಧೆಡೆ ಹಿಂಸಾತ್ಮಕ ಪ್ರತಿಭಟನೆ ವಾರಾಂತ್ಯದ ಭಾನುವಾರ ಮೇರೆ ಮೀರಿತ್ತು. ಕ್ಯಾಲಿಫೋರ್ನಿಯಾ, ಲಾಸ್ ಏಂಜಲೀಸ್ ಮೊದಲಾದೆಡೆ ಪ್ರತಿಭಟನಾಕಾರರು ವಾಹನಗಳಿಗೆ, ರಸ್ತೆಯಲ್ಲಿ ಸಿಕ್ಕ ಸಿಕ್ಕ ವಸ್ತುಗಳಿಗೆ ಬೆಂಕಿ ಹಚ್ಚುವ ಮೂಲಕ ಆಕ್ರೋಶ ಹೊರಹಾಕುತ್ತಿದ್ದಾರೆ.

ವಲಸೆ ಮತ್ತು ಕಸ್ಟಮ್ಸ್ ಜಾರಿ ಇಲಾಖೆ ಲಾಸ್ ಏಂಜಲೀಸ್‌ನಲ್ಲಿ 2 ಹೋಮ್ ಡಿಪೋ, ಡೋನಟ್ ಅಂಗಡಿ ಮತ್ತು ಫ್ಯಾಷನ್ ಡಿಸ್ಟ್ರಿಕ್ಟ್‌ನಲ್ಲಿನ ಜವಳಿ ಗೋದಾಮು ಮೊದಲಾದೆಡೆ ದಾಳಿ ಮಾಡಿ ಅಕ್ರಮ ವಲಸಿಗರ ಬಂಧನಕ್ಕೆ ಮುಂದಾದಾಗ ಶುಕ್ರವಾರ ಪ್ರತಿಭಟನೆ ಶುರುವಾಗಿದ್ದು, ಹಿಂಸಾತ್ಮಕವಾಗಿ ಬದಲಾಗಿದೆ.

ಜನರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದನ್ನು 'ಕಾನೂನು ವಿರೋಧಿ ಕೃತ್ಯ' ಎಂದು ವರ್ಗೀಕರಿಸಿರುವ ಲಾಸ್‌ಏಂಜಲೀಸ್ ಪೊಲೀಸರು, ಹಲವು ಪ್ರತಿಭಟನಾಕಾರರನ್ನು ಬಂಧಿಸಿದ್ದಾರೆ. ಸ್ಯಾನ್‌ಫ್ರಾನ್ಸಿಸ್ಕೊದಲ್ಲಿಯೂ 60 ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ.

ಪ್ರತಿಭಟನೆ ಹೆಸರಲ್ಲಿ ಗಲಭೆ ನಡೆಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಪ್ರತಿಭಟನೆ ಧಮನಿಸಲು ಸ್ಥಳೀಯ ಪೊಲೀಸರಿಗೆ ನೆರವಾಗುವುದಕ್ಕಾಗಿ ಲಾಸ್‌ಏಂಜಲೀಸ್‌ಗೆ ರಾಷ್ಟ್ರೀಯ ಗಾರ್ಡ್‌ನ 2000 ಸಿಬ್ಬಂದಿಗಳನ್ನೂ ಟ್ರಂಪ್ ಕಳುಹಿಸಿಕೊಟ್ಟಿದ್ದಾರೆ.

- ಕ್ಯಾಲಿಫೋರ್ನಿಯದಲ್ಲೂ ವಾಹನಗಳಿಗೆ ಪ್ರತಿಭಟನಾಕಾರರ ಬೆಂಕಿ
- ಪ್ರತಿಭಟನೆ ಹತ್ತಿಕ್ಕಲು 2000 ನ್ಯಾಷನಲ್ ಗಾರ್ಡ್ಸ್ ಪಡೆ ರವಾನೆ

ರಾಜ್ಯಪಾಲರ ಅನುಮತಿಯಿಲ್ಲದೆ ಒಂದು ರಾಜ್ಯಕ್ಕೆ ರಾಷ್ಟ್ರೀಯ ಗಾರ್ಡ್‌ಗಳನ್ನು ಕಳುಹಿಸಿಕೊಟ್ಟಿರುವುದು ಅಮೆರಿಕದಲ್ಲಿ ಇದೇ ಮೊದಲು. ರಾಷ್ಟ್ರೀಯ ಗಾಡ್‌ಗಳನ್ನು ಕಳುಹಿಸಿರುವ ಅಧ್ಯಕ್ಷ ಟ್ರಂಪ್ ಅವರ ನಿರ್ಧಾರವನ್ನು ಕ್ಯಾಲಿಫೋರ್ನಿಯ ಗವರ್ನರ್ ಗ್ಯಾವಿನ್ ನ್ಯೂಸಮ್ ಮತ್ತು ಲಾಸ್ ಏಂಜಲೀಸ್ ಮೇಯರ್ ಕರೆನ್ ಬಾಸ್ ಬಲವಾಗಿ ವಿರೋಧಿಸಿದ್ದಾರೆ.

ಉಗ್ರರ ನುಸುಳುವಿಕೆಗೆ ಡ್ರೋನ್ ತಂತ್ರ ಬಳಕೆ?

ದೆಹಲಿ: ಡ್ರೋನ್ ತಂತ್ರಜ್ಞಾನ ಬಳಸಿ ನಿಯಂತ್ರಣ ರೇಖೆ(ಎಲ್‌ಒಸಿ) ಮೂಲಕ ಜಮ್ಮು-ಕಾಶ್ಮೀರಕ್ಕೆ ಉಗ್ರರನ್ನು ನುಸುಳಿಸುವ ಪ್ರಯತ್ನಗಳನ್ನು ಪಾಕಿಸ್ತಾನದ ಗುಪ್ತಚರ ಸಂಸ್ಥೆ (ಐಎಸ್‌ಐ) ಇತ್ತೀಚೆಗೆ

ಹೆಚ್ಚು ಮಾಡಿದೆ ಎಂದು ಭಾರತದ ಗುಪ್ತಚರ ಬ್ಯೂರೊ(ಐಬಿ) ಕೇಂದ್ರ ಸರಕಾರವನ್ನು ಎಚ್ಚರಿಸಿದೆ. ಉಗ್ರರನ್ನು ಭಾರತದೊಳಕ್ಕೆ ದೂಡುವುದಕ್ಕೂ ಮುನ್ನ ಗಡಿ ಭಾಗದಲ್ಲಿನ ನಿಖರ ಕಣ್ಗಾವಲು ಮತ್ತು ಆ ಸಮಯದ ಪರಿಸ್ಥಿತಿ ಅರಿಯಲು ಐಎಸ್‌ಐ ಡ್ರೋನ್‌ಗಳನ್ನು ಬಳಸುತ್ತಿದೆ ಎಂದು 'ಐಬಿ' ವರದಿ ಸಲ್ಲಿಸಿದೆ. ಮೇ 14ರಂದು ಪಾಕ್ ಆಕ್ರಮಿತ ಕಾಶ್ಮೀರದ(ಪಿಒಕೆ) ವಿವಿಧ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ತರಬೇತಿ ಶಿಬಿರಗಳ ಕಮಾಂಡರ್‌ಗಳು ಮತ್ತು ಮಾರ್ಗದರ್ಶಕರ ಸಭೆಯನ್ನು ಐಎಸ್‌ಐ ಅಧಿಕಾರಿಗಳು ನಡೆಸಿದ್ದಾರೆ. ಎಲ್‌ಇಟಿಗೆ ಉಗ್ರರ ನೇಮಕ ಪ್ರಮಾಣ ಹೆಚ್ಚಿಸುವ ಬಗೆಗೂ ಚರ್ಚೆಗಳು ನಡೆದಿವೆ. ಉಗ್ರರ ಒಳನುಸುಳುವಿಕೆಗೂ ಮೊದಲು ಗಡಿ ಪರಿಸ್ಥಿತಿ ಮೇಲ್ವಿಚಾರಣೆಗೆಂದೇ ಡ್ರೋನ್ ಹಾರಾಟವನ್ನು ಐಎಸ್‌ಐ ಹೆಚ್ಚಿಸಿದೆ ಎಂದು ಐಬಿ ವರದಿಯಲ್ಲಿ ಗಮನ ಸೆಳೆಯಲಾಗಿದೆ. ಭಾರತದ ಭದ್ರತಾ ಪಡೆಗಳ ನಿಯೋಜನೆ ಮತ್ತು ಚಲನ ವಲನ ಕಂಡುಕೊಂಡು ಗಸ್ತು ಪಾಳಿಯ ದುರ್ಬಲ ಕ್ಷಣಗಳನ್ನು ಗುರುತಿಸಿ ಉಗ್ರರನ್ನು ಭಾರತದೊಳಕ್ಕೆ ದೂಡಲು ಐಎಸ್‌ಐ ಹುನ್ನಾರ ನಡೆಸಿದೆ.

ಲಡ್ಡು: ಟಿಟಿಡಿ ಮಾಜಿ ಅಧ್ಯಕ್ಷ, ಇಒಗೆ ನೋಟಿಸ್

ತಿರುಮಲ: ಆಂಧ್ರ ಪ್ರದೇಶದ ತಿರುಮಲ ತಿರುಪತಿ ದೇವಸ್ಥಾನದ ಲಡ್ಡು ತಯಾರಿಸಲು ಕಲಬೆರಕೆ ತುಪ್ಪ ಬಳಸಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಆಂಧ್ರ ಪೊಲೀಸ್ ಇಲಾಖೆಯ 'ವಿಶೇಷ ತನಿಖಾ ತಂಡ(ಎಸ್‌ಐಟಿ) ವೈಎಸ್‌ಆರ್ ಕಾಂಗ್ರೆಸ್ ಆಡಳಿತ ಕಾಲದಲ್ಲಿ ತಿರುಪತಿ ತಿರುಮಲ ದೇಗುಲ ಟ್ರಸ್ಟ್(ಟಿಟಿಡಿ) ಮಾಜಿ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ನೋಟಿಸ್ ನೀಡಲಿದೆ. ಟಿಟಿಡಿ ಮಾಜಿ ಅಧ್ಯಕ್ಷ ವೈ.ವಿ.ಸುಬ್ಬಾ ರೆಡ್ಡಿ, ಧರ್ಮರೆಡ್ಡಿ ಸೇರಿದಂತೆ ಹಿಂದಿನ ಅವಧಿಯ ಅಧ್ಯಕ್ಷರುಗಳು ಮತ್ತು ಅನಿಲ್ ಕುಮಾರ್ ಸಿಂಘಾಲ್ ಸೇರಿದಂತೆ ಮಾಜಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೋಟಿಸ್ ನೀಡಲಾಗುವುದು ಎಂದು 'ಎಸ್‌ಐಟಿ' ಮೂಲಗಳು ಸೋಮವಾರ ಸುದ್ದಿಸಂಸ್ಥೆಗೆ ತಿಳಿಸಿವೆ. ಹಗರಣದ ಕೇಂದ್ರಬಿಂದುವಾದ 3 ಡೇರಿಗಳ ನಿರ್ದೇಶಕರಿಗೆ ಜಾಮೀನು ನೀಡಲು ಸಿಬಿಐ ತೀವ್ರ ವಿರೋಧ ವ್ಯಕ್ತಪಡಿಸಿದ ಎರಡು ದಿನದ ನಂತರ ಈ ಬೆಳವಣಿಗೆಯಾಗಿದೆ. ಕಲಬೆರಕೆ ತುಪ್ಪ ಬಳಸಿರುವುದರಿಂದ ತಿರುಮಲದ ಕೋಟ್ಯಂತರ ಭಕ್ತರ ನಂಬಿಕೆಗೆ ದ್ರೋಹ ಬಗೆದಂತಾಗಿದೆ. ಬಹುಕೋಟಿ ಮೊತ್ತದ ಸಂಚಿನ ಪ್ರಕರಣವಾಗಿದೆ ಎಂದು ಸಿಬಿಐ ನ್ಯಾಯಾಲಯದಲ್ಲಿ ವಾದಿಸಿದೆ. ಭೋಲೆಬಾಬಾ, ವೈಷ್ಣವಿ ಮತ್ತು ಎಆರ್ ಡೈರಿ ಜಂಟಿಯಾಗಿ ಟಿಟಿಡಿಗೆ ಕಳಪೆ ತುಪ್ಪ ನೀಡಿ ನೂರಾರು ಕೋಟಿ ರು. ವ್ಯವಹಾರ ನಡೆಸಿವೆ. ಜತೆಗೆ, ಆರೋಪಿಗಳು ತನಿಖೆಗೂ ಅಡ್ಡಿಪಡಿಸುತ್ತಿದ್ದಾರೆ ಎಂದು ಸಿಬಿಐ ಆರೋಪಿಸಿದೆ.

ಭಾರತದ ಬಡವರ ಜೀವನ ಸುಧಾರಣೆ

ದೆಹಲಿ: ಭಾರತದಲ್ಲಿ ತೀರಾ ಬಡತನದಲ್ಲಿ ನರಳುತ್ತಿದ್ದ ಕೋಟ್ಯಂತರ ಕುಟುಂಬಗಳು 2011-2022ರ ನಡುವಿನ ದಶಕದ ಅವಧಿಯಲ್ಲಿ ಸುಧಾರಣೆ ಕಂಡು ಬಡತನ ಹಣೆಪಟ್ಟಿಯಿಂದ ಹೊರಬಂದಿವೆ ಎಂದು ವಿಶ್ವಬ್ಯಾಂಕ್ ಬಹಳವಾಗಿ ಶ್ಲಾಘಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಯೋಜನೆಗಳಿಂದಾಗಿ ಈ ಮಹತ್ವದ ಸಾಧನೆ ಸಾಧ್ಯವಾಗಿದೆ. ಭಾರತ ಕಳೆದ ದಶಕದಲ್ಲಿ ತೀರಾ ಬಡತನದಲ್ಲಿದ್ದವರ ಬದುಕನ್ನು ಸುಧಾರಣೆಗೊಳಿಸಿದೆ. ದೇಶದ ಪ್ರಗತಿಯ ಜತೆಗೇ ಬಡ ಕುಟುಂಬಗಳ ಪ್ರಗತಿಗೂ ಕಾರಣವಾಗಿದೆ ಎಂದು ಕೇಂದ್ರ ಸರಕಾರ ಹೇಳಿಕೊಂಡಿದೆ. 2011-12ರಲ್ಲಿ ಒಟ್ಟು ಜನಸಂಖ್ಯೆಯ ಶೇ.27.1ರಷ್ಟಿದ್ದ ತೀವ್ರ ಬಡತನ ಪ್ರಮಾಣ, 2022-23ರಲ್ಲಿ ಶೇ.5.3 ಕ್ಕೆ ಇಳಿದಿದೆ ಎಂಬುದನ್ನು ವಿಶ್ವಬ್ಯಾಂಕ್‌ನ ಇತ್ತೀಚಿನ ದತ್ತಾಂಶ ತಿಳಿಸಿಕೊಡುತ್ತದೆ. ಭಾರತದಲ್ಲಿನ ತೀರಾ ಬಡವರ ಸಂಖ್ಯೆ 2011-12ರಲ್ಲಿ 34.45 ಕೋಟಿಯಷ್ಟಿದ್ದಿತು. 2022-23ರ ಅವಧಿಯಲ್ಲಿ ಇದು 7.52 ಕೋಟಿಗೆ ಇಳಿಕೆಯಾಗಿದೆ, 11 ವರ್ಷಗಳಲ್ಲಿ ಒಟ್ಟು 26.90 ಕೋಟಿ ಜನರು ತೀವ್ರ ಬಡತನದ ಬದುಕಿನಿಂತ ಮೇಲೆದ್ದು ಬಂದಿದ್ದಾರೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶ ಶೇ.65ರಷ್ಟು ಜನರು ತೀರಾ ಬಡವರಾಗಿದ್ದರು. 2022-23ರ ವೇಳೆಗೆ ಒಟ್ಟಾರೆ ತೀವ್ರ ಬಡತನದ ಕುಸಿತದ ಮೂರನೇ ಎರಡರಷ್ಟು ಕೊಡುಗೆ ನೀಡಿವೆ. ತೀರಾ ಬಡತನದಲ್ಲಿದ್ದವರ ಸಂಖ್ಯೆ 34.45 ಕೋಟಿಯಿಂದ 7.52 ಕೋಟಿಗೆ ತಗ್ಗಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಕರೋನಾ ರೂಪಾಂತರಿ ಎಕ್ಸ್‌ಎಫ್ಜಿ 163 ಪ್ರಕರಣ

ದೆಹಲಿ: ಕೋವಿಡ್-19ರ ಹೊಸ ರೂಪಾಂತರಿ ಎಕ್ಸ್‌ಎಫ್‌ಜಿ ಸೋಂಕಿನ 163 ಪ್ರಕರಣ ಪತ್ತೆಯಾಗಿವೆ. ಎಕ್ಸ್‌ಎಫ್‌ಜಿ ವೈರಾಣು 4 ಪ್ರಮುಖ ಸ್ಪೈಕ್ ರೂಪಾಂತರಗಳನ್ನು ಹೊಂದಿದೆ.



ಕೆನಡಾದಲ್ಲಿ ಮೊದಲ ಪ್ರಕರಣ ಪತ್ತೆಯಾದ ನಂತರ ವಿವಿಧ ದೇಶಗಳಲ್ಲಿ ವೇಗವಾಗಿ ಹರಡುತ್ತಿದೆ ಎಂದು 'ದಿ ಲ್ಯಾನ್ಸೆಟ್ ಜರ್ನಲ್' ಲೇಖನ ಪ್ರಕಟಿಸಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಕೋವಿಡ್-19 ಎಕ್ಸ್‌ಎಫ್‌ಜಿ ಪ್ರಕರಣ(89) ಕಂಡುಬಂದಿವೆ. ತಮಿಳುನಾಡಲ್ಲಿ 16, ಕೇರಳ 15, ಗುಜರಾತ್ 11 ಮತ್ತು ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ 6 ಪ್ರಕರಣಗಳು ವರದಿಯಾಗಿವೆ. ಮೇ ತಿಂಗಳಲ್ಲಿ ಎಕ್ಸ್‌ಎಫ್‌ಜಿ ರೂಪಾಂತರ ವೈರಸ್‌ನ 159 ಮಾದರಿಗಳು ಪತ್ತೆಯಾಗಿದ್ದವು. ಜೂನ್‌ನಲ್ಲಿ ಎರಡು ಮಾದರಿಗಳನ್ನು ಪರೀಕ್ಷಿಸಲಾಗಿದೆ ಎಂದು ದತ್ತಾಂಶದಿಂದ ತಿಳಿದುಬಂದಿದೆ. ಕೇಂದ್ರ ಆರೋಗ್ಯ ಸಚಿವಾಲಯ ಭಾನುವಾರ ಬಿಡುಗಡೆ ಮಾಡಿದ ಅಂಕಿ-ಅಂಶ ಪ್ರಕಾರ, ಕಳೆದೆರಡು ದಿನಗಳಲ್ಲಿ ದೇಶದಲ್ಲಿ 769 ಹೊಸ ಕರೋನಾ ಪ್ರಕರಣ ದಾಖಲಾಗಿವೆ. ಇದರೊಂದಿಗೆ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 6 ಸಾವಿರ ದಾಟಿದೆ.

ರಾಜ್ಯದ 20ಕ್ಕೂ ಅಧಿಕ ಜಿಲ್ಲೆಗಳಲ್ಲಿ ಬಿರುಗಾಳಿ-ಮಳೆ

ಬೆಂಗಳೂರು: ರಾಜ್ಯಾದ್ಯಂತ ಬಹುತೇಕ ಜಿಲ್ಲೆಗಳಲ್ಲಿ ಮುಂದಿನ 7 ದಿನಗಳ ಕಾಲ ಬಿರುಗಾಳಿ ಸಹಿತ ಕನಿಷ್ಠ 110 ರಿಂದ 200 ಮಿ.ಮೀವರೆಗೆ ಭಾರಿ ಮಳೆಯಾಗುವ ಹಿನ್ನೆಲೆ ಆರೆಂಜ್, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಭಾರತೀಯ ಹವಮಾನ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಭಾನುವಾರ ಅಲ್ಲಲ್ಲಿ ಹಗುರ ಮಳೆಯಾಗಿದ್ದು, ಜೂನ್ 11 ರಿಂದ ಧಾರಾಕಾರ ಮಳೆ ಆರಂಭವಾದರೂ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಭಾರೀ ಮಳೆಯಿರುವುದರಿಂದ ಯೆಲ್ಲೋ ಅಲರ್ಟ್ ನೀಡಲಾಗಿದೆ. ಜೂನ್ 12ರಂದು ಎಲ್ಲಿಯೂ ಮಳೆ ಮುನ್ಸೂಚನೆ ಇಲ್ಲ. ಅಲ್ಲಿಯವರೆಗೆ ಹಗುರ, ತುಂತುರು ಮಳೆ ಬರುವ ಮುನ್ಸೂಚನೆ ಇದೆ ಎಂದು ಐಎಂಡಿ ತಿಳಿಸಿದೆ.

ಜೂನ್ 13 ರಿಂದ ಮೂರು ದಿನ (ಜೂನ್ 15ರವರೆಗೆ) ರಾಜ್ಯದ ಕರಾವಳಿ, ಒಳನಾಡು, ಮಲೆನಾಡು ಸೇರಿದಂತೆ ಒಟ್ಟು 20 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಮಳೆ ಆರ್ಭಟ ಕಂಡು ಬರಲಿದೆ. ಇದರಿಂದ ಕನಿಷ್ಠ 110 ಮಿ.ಮೀ ಹಾಗೂ ಗರಿಷ್ಠ 200 ಮಿ.ಮೀ ವರೆಗೆ ಮಳೆಗೆ ಸಾಕ್ಷಿ ಆಗುವ ಜಿಲ್ಲೆಗಳು ಸೇರಿದಂತೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ಯೆಲ್ಲೋ, ಆರೆಂಜ್ ಅಲರ್ಟ್

ಕರಾವಳಿಯ ಉಡುಪಿ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮರೆಯಾಗಿದ್ದ ಮುಂಗಾರು ಜೂನ್ 13ರಿಂದ ಮೂರು ದಿನ ಧಾರಾಕಾರವಾಗಿ ನಿರಂತರವಾಗಿ ಸುರಿಯಲಿದೆ. ಹೀಗಾಗಿ ಮೊದಲ ಎರಡು ದಿನ ಯೆಲ್ಲೋ ಅಲರ್ಟ್ ನಂತರ ಒಂದು ದಿನ ಆರೆಂಜ್ ಅಲರ್ಟ್ ನೀಡಲಾಗಿದೆ. ಒಳನಾಡು ಜಿಲ್ಲೆಗಳಾದ ಬೆಳಗಾವಿ, ಬೀದರ್, ಧಾರವಾಡ, ಗದಗ, ಕಲಬುರಗಿ, ವಿಜಯಪುರ, ಹಾವೇರಿ, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು, ಮೈಸೂರು, ಶಿವಮೊಗ್ಗ, ವಿಜಯನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ 110 ಮಿ.ಮೀಗಿಂತಲೂ ಹೆಚ್ಚಿನ ಮಳೆ ಆಗಲಿದೆ. ಈ ಜಿಲ್ಲೆಗಳಿಗೆ ಒಂದು ದಿನ ಆರೆಂಜ್ ಅಲರ್ಟ್, ಎರಡು ದಿನ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಡಿಸಿಎಂ ಡಿಕೆಶಿ ಭೇಟಿ

ದೆಹಲಿ ಮಾದರಿಯಲ್ಲಿ ಬೆಂಗಳೂರು ಕಸ ವಿಲೇವಾರಿ

ಬೆಂಗಳೂರು: ದೆಹಲಿ ಕಸ ವಿಲೇವಾರಿ ಕೇಂದ್ರ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದೆ, ಬೆಂಗಳೂರಿನಲ್ಲಿ ಈ ಮಾದರಿ ಅಳವಡಿಸುವ ಬಗ್ಗೆ ಸಹೋದ್ಯೋಗಿಗಳ ಜತೆ ಚರ್ಚೆ ಮಾಡಿ ತೀರ್ಮಾನಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸೋಮವಾರ ಭೇಟಿ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಇದುವರೆಗೂ ಪರಿಶೀಲನೆ ಮಾಡಿರುವ ಕಸ ವಿಲೇವಾರಿ ಕೇಂದ್ರಗಳ ಪೈಕಿ ದೆಹಲಿ ಕಸ ವಿಲೇವಾರಿ ಕೇಂದ್ರ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದೆ. ಅತಿ ಕಡಿಮೆ ಪ್ರದೇಶದಲ್ಲಿ ಅತ್ಯುತ್ತಮವಾಗಿ ಕಸ ವಿಲೇವಾರಿ ಕೇಂದ್ರ ನಿರ್ವಹಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಹಿಂದೆ ಪ್ರಯೋಗಿಸಿದ್ದ 10ರಿಂದ 15 ಮೆ.ವ್ಯಾಟ್ ವಿದ್ಯುತ್ ಉತ್ಪಾದನಾ ಕೇಂದ್ರಗಳು ವಿಫಲವಾಗಿದ್ದವು. ಆದರೆ ಇಲ್ಲಿ 25 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇಂತಹ ಅತ್ಯುತ್ತಮ ಕೇಂದ್ರ ಅಳವಡಿಸಿರುವ ಜಿಂದಾಲ್ ಸಂಸ್ಥೆಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಬೆಂಗಳೂರಿನ ಹೊರ ವಲಯದಲ್ಲಿ ನಾಲ್ಕು ಕಡೆಗಳಲ್ಲಿ ಕಸ ವಿಲೇವಾರಿ ಮಾಡಲು ತೀರ್ಮಾನಿಸಿದ್ದು, ಎರಡು ಕಡೆ ಟೆಂಡರ್ ಕರೆಯಲಾಗಿದೆ. ದೆಹಲಿಯಲ್ಲಿ ಹೊಸ ತಂತ್ರಜ್ಞಾನ ಪರಿಶೀಲನೆ ಮಾಡಲಾಗಿದೆ. ಚೆನ್ನೈನಲ್ಲಿ ಅನಿಲ ಉತ್ಪಾದನೆ, ಹೈದರಾಬಾದ್‌ನಲ್ಲಿ ಅನಿಲ ಹಾಗೂ ವಿದ್ಯುತ್ ಎರಡನ್ನೂ ಉತ್ಪಾದನೆ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ಕಸ ವಿಲೇವಾರಿ ಮಾಡುವ ಜಾಗದ ಅಕ್ಕಪಕ್ಕದ ಪ್ರದೇಶದವರು ಕಸ ವಿಲೇವಾರಿಯಿಂದ ದುರ್ವಾಸನೆ ಬರುತ್ತದೆ ಎಂದು ವಿರೋಧಿಸುತ್ತಾರೆ. ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ಈ ಸಮಸ್ಯೆ ಎದುರಾಗುತ್ತಿದೆ. ದೆಹಲಿಯಲ್ಲಿ ದುರ್ವಾಸನೆ ರಹಿತವಾಗಿ ಈ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ನಿತ್ಯ 6 ಸಾವಿರ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ದೆಹಲಿಯಲ್ಲಿನ ಮಾದರಿಯನ್ನು ಅಧಿಕಾರಿಗಳ ತಂಡದೊಂದಿಗೆ ಪರಿಶೀಲಿಸಿದ್ದೇವೆ. ಈ ವಿಚಾರವಾಗಿ ನಮ್ಮ ಸಹೋದ್ಯೋಗಿಗಳ ಜತೆ ಚರ್ಚೆ ಮಾಡುತ್ತೇನೆ ಎಂದು ಡಿಕೆಶಿ ಹೇಳಿದರು.

ರಾಜ್ಯಪಾಲರಿಗೆ ಆಹ್ವಾನ ಕೊಟ್ಟಿದ್ದು ಯಾರು ಎಂಬ ಪ್ರಶ್ನೆಗೆ ಉತ್ತರಿಸಿ, ರಾಜ್ಯಪಾಲರಿಗೆ ಆಹ್ವಾನ ಕೊಟ್ಟಿದ್ದು ಯಾರು ಎಂಬುದನ್ನು ರಾಜ್ಯಪಾಲರನ್ನೇ ಕೇಳಿ. ಕಾಲ್ತುಳಿತ ಪ್ರಕರಣದ ಬಗ್ಗೆ ಕುನ್ಹಾ ಅವರ ಆಯೋಗ ತನಿಖೆ ಮಾಡುತ್ತಿದ್ದು, ಅವರ ತನಿಖೆ ಮೇಲೆ ಪ್ರಭಾವ ಬೀರಬಾರದು. ಹೀಗಾಗಿ ಈ ವಿಚಾರವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ತಿಳಿಸಿದರು.

ನವದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ಕಸ ವಿಲೇವಾರಿ ತಂತ್ರಜ್ಞಾನ ಕುರಿತು ಅಧಿಕಾರಿಗಳ ಜತೆ ಸಭೆ ನಡೆಸಿದರು.

- ದೆಹಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಭೇಟಿ ಬಳಿಕ ಡಿಸಿಎಂ ಡಿಕೆಶಿ
- ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ದೆಹಲಿ ಕಸ ವಿಲೇವಾರಿ ಕೇಂದ್ರ
- ಘನ ತ್ಯಾಜ್ಯದಿಂದ ದೆಹಲಿಯಲ್ಲಿ 25 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ

ನವದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನ ಘನ ತ್ಯಾಜ್ಯ ವಿಲೇವಾರಿ ಕೇಂದ್ರಕ್ಕೆ ಭೇಟಿ ನೀಡಿರುವುದು ಒಂದು ಕಲಿಕಾ ಅನುಭವ ಕೊಟ್ಟಿದೆ. ಇಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹೊಂದಿ, ಅತ್ಯುತ್ತಮವಾಗಿ ಕಸ ವಿಲೇವಾರಿ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಕಸ ವಿಲೇವಾರಿ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ದೆಹಲಿ ಮಾದರಿ ತಂತ್ರಜ್ಞಾನ ಅಳವಡಿಕೆಯಿಂದ ಸಮಸ್ಯೆ ಬಗೆಹರಿಯಬಹುದು. ಈ ಕುರಿತು ಅಧಿಕಾರಿಗಳ ಜತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು.

– **ಡಿ.ಕೆ.ಶಿವಕುಮಾರ್.** ಉಪ ಮುಖ್ಯಮಂತ್ರಿ

ಕಾಲ್ತುಳಿತ ಪ್ರಕರಣ: ಎಫ್‌ಐಆರ್ ರದ್ದು ಕೋರಿ ಡಿಎನ್‌ಎ, ಆರ್‌ಸಿಬಿ ಹೈಕೋರ್ಟ್‌ಗೆ ಅರ್ಜಿ

ಎಫ್‌ಐಆರ್ ಮಧ್ಯಂತರ ತಡೆಗೆ ಹೈ ಮೊರೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣ ಸಂಬಂಧ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್ ಮತ್ತು ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ ಪ್ರೈವೇಟ್ ಲಿಮಿಟೆಡ್‌ನಿಂದ ಹೈಕೋರ್ಟ್‌ಗೆ ಪ್ರತ್ಯೇಕ ಅರ್ಜಿಗಳು ಸಲ್ಲಿಕೆಯಾಗಿವೆ.

ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ವೆಂಕಟ ವರ್ಧನ ತಿಮ್ಮಯ್ಯ ಮತ್ತು ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಮುಖ್ಯಸ್ಥ ರಾಜೇಶ್ ಮೆನನ್ ಅವರಿಂದ ಹೈಕೋರ್ಟ್‌ಗೆ ಅರ್ಜಿಗಳು ಸಲ್ಲಿಕೆಯಾಗಿವೆ.

ಅರ್ಜಿಯಲ್ಲೇನಿದೆ? : ಕಾಲ್ತುಳಿತ ಘಟನೆಯು ರಸ್ತೆ ಮತ್ತು ಪಾದಚಾರಿ ಮಾರ್ಗದಲ್ಲಿ ನಡೆದಿದ್ದು, ಅದಕ್ಕೆ ಅರ್ಜಿದಾರರನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೆ ಅವಕಾಶವಿಲ್ಲ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕ್ರೀಡಾಂಗಣದ ಒಳಗಡೆ ಎಲ್ಲವನ್ನು ನಿಯಂತ್ರಣ ಮಾಡುವುದು ಅರ್ಜಿದಾರರ ಜವಾಬ್ದಾರಿಯಾಗಿದೆ. ಜತೆಗೆ, ಅರ್ಜಿದಾರರು ಯಾರನ್ನೂ ಕಾರ್ಯಕ್ರಮಕ್ಕೆ ಆಹ್ವಾನ ನೀಡಿರಲಿಲ್ಲ. ಅದಕ್ಕೆ ಸಂಬಂಧಿಸಿದಂತೆ ಎಲ್ಲಿಯೂ ಪ್ರಚಾರ ನೀಡಿರಲಿಲ್ಲ. ಆದರೆ, ವಿಧಾನಸೌಧ ಮತ್ತು ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮ ಸರಕಾರದ ಹಮ್ಮಿಕೊಂಡಿರುವುದಾಗಿತ್ತು ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರತಿವಾದಿಯಾಗಿರುವ ಸರಕಾರ ಒಂದೇ ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಮೂರು ಎಫ್‌ಐಆರ್‌ಗಳನ್ನು ದಾಖಲಿಸಿರುವುದು ಕಾನೂನುಬಾಹಿರ ಮತ್ತು ಸುಪ್ರೀಂ ಕೋರ್ಟ್ ಆದೇಶಗಳಿಗೆ ವಿರುದ್ಧ. ಜತೆಗೆ, ಅರ್ಜಿದಾರರ ವಿರುದ್ಧ ದಾಖಲಿಸಿರುವ ಸೆಕ್ಷನ್‌ಗಳ ಅಡಿಯಲ್ಲಿ ಯಾವುದೇ ಕೃತ್ಯಗಳನ್ನು ನಡೆಸಿಲ್ಲ ಎಂದು ತಿಳಿಸಲಾಗಿದೆ.

ಘಟನೆಗೆ ಅರ್ಜಿದಾರರು ಯಾವ ರೀತಿಯಲ್ಲಿ ಕಾರಣರಾಗಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ಸೂಕ್ತ ಕಾರಣವನ್ನು ನೀಡದೆ ಪ್ರಕರಣ ದಾಖಲಿಸಲಾಗಿದೆ. ಅಲ್ಲದೆ, ಹೈಕೋರ್ಟ್ ಈಗಾಗಲೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವುದರಿಂದ ಇದೇ ಘಟನೆ ಸಂಬಂಧ ಮತ್ತೊಂದು ಎಫ್‌ಐಆರ್ ದಾಖಲಿಸುವುದಕ್ಕೆ ಅವಕಾಶವಿಲ್ಲ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸರಕಾರ ಮತ್ತು ಪೊಲೀಸರ ತಪ್ಪಿನಿಂದ ಇಡೀ ಘಟನೆ ನಡೆದಿದೆ. ರಾಜಕೀಯ ಒತ್ತಡದಿಂದ ಎಫ್‌ಐಆರ್ ದಾಖಲಿಸಲಾಗಿದೆ. ಸರಕಾರದ ಸೂಚನೆ ಮೇರೆಗೆ ಅರ್ಜಿದಾರ ಸಂಸ್ಥೆಗಳ ಪದಾಧಿಕಾರಿಗಳನ್ನು ಬಂಧಿಸುವುದಕ್ಕೆ ಪೊಲೀಸರು ಮುಂದಾಗಿದ್ದಾರೆ. ಸುಮಾರು 40 ವರ್ಷಗಳಿಂದ ಉತ್ತಮ ಹೆಸರು ಹೊಂದಿರುವ ಸಂಸ್ಥೆಗೆ ಕೆಟ್ಟ ಹೆಸರು ತರುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಸ್ತುತ ದಾಖಲಾಗಿರುವ ಎಫ್‌ಐಆರ್‌ಗಳು ಕಾನೂನಿನ ದುರ್ಬಳಕೆಯಾಗಿದೆ. ಆದ್ದರಿಂದ ಎಫ್‌ಐಆರ್ ರದ್ದುಪಡಿಸಬೇಕು. ಜತೆಗೆ, ಅರ್ಜಿಯ ವಿಚಾರಣೆ ಪೂರ್ಣಗೊಳ್ಳುವವರೆಗೂ ಎಫ್‌ಐಆರ್‌ಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಅರ್ಜಿಯ ಮುಖ್ಯಾಂಶಗಳು

- ಕ್ರೀಡಾಂಗಣದ ಒಳಗೆ ದುರಂತ ನಡೆದರೆ ಅರ್ಜಿದಾರರ ವ್ಯಾಪ್ತಿಗೆ ಬರುತ್ತೆ
- ಪಾದಚಾರಿ ಮಾರ್ಗದಲ್ಲಿ ದುರ್ಘಟನೆ, ಅರ್ಜಿದಾರರು ಹೊಣೆಯಲ್ಲ
- ಸರಕಾರ ಮತ್ತು ಪೊಲೀಸರ ತಪ್ಪಿನಿಂದ ದುರ್ಘಟನೆ ಸಂಭವಿಸಿದೆ
- ಪ್ರತೇಕ 3 ಎಫ್‌ಐಆರ್‌ಗಳ ದಾಖಲು ಕಾನೂನು ಮತ್ತು ಸುಪ್ರೀಂ ಆದೇಶಕ್ಕೆ ವಿರೋಧ

ಪದ್ಮ ಪ್ರಶಸ್ತಿಗೆ ಶಿಫಾರಸಿ ಆಹ್ವಾನ

ಬೆಂಗಳೂರು: ಸಮಾಜದ ಯಾವುದೇ ಕ್ಷೇತ್ರಗಳಲ್ಲಿ ಅಂದರೆ ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಸೇವೆ, ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರಗಳು, ನಾಗರೀಕ ಸೇವೆ, ವ್ಯಾಪಾರ ಮತ್ತು ಕೈಗಾರಿಕೆ, ಇತ್ಯಾದಿಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ 2026ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗಳಾದ ಪದ್ಮ ವಿಭೂಷಣ', ಪದ್ಮ ಭೂಷಣ' ಮತ್ತು ಪದ್ಮಶ್ರೀ ಪ್ರಶಸ್ತಿ'ಗಳಿಗೆ ಸಾಧಕರ ಹೆಸರುಗಳನ್ನು ಶಿಫಾರಸ್ಸು ಮಾಡಲು ಆಹ್ವಾನಿಸಲಾಗಿದೆ.

2026ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗಳಿಗೆ ಅನ್ವಯಿಸುವ ನಿಯಮಾವಳಿಗಳು https://padmaawards.gov.in ರಲ್ಲಿ ಲಭ್ಯವಿದ್ದು, ಅರ್ಹ ಹೆಸರುಗಳನ್ನು ಶಿಫಾರಸ್ಸು ಮಾಡುವಾಗ ಕೇಂದ್ರ ಸರ್ಕಾರ ಸೂಚಿಸಿರುವ ಅಂಶಗಳನ್ನು ಪರಿಗಣಿಸುವುದು. ಮೇಲೆ ಸೂಚಿಸಿದ ಕ್ಷೇತ್ರಗಳಲ್ಲಿ ನೀಡಬಹುದಾದ ಪದ್ಮಶ್ರೇಣಿ ಪ್ರಶಸ್ತಿಗಳಿಗೆ ಸಂಬಂಧಿಸಿದ ಶಿಫಾರಸ್ಸಿನ ಪ್ರಸ್ತಾವನೆಗಳನ್ನು ಸಲ್ಲಿಸುವ ಪ್ರಕ್ರಿಯೆಯು 2025 ನೇ ಜುಲೈ 31 ರಂದು ಮುಕ್ತಾಯಗೊಳ್ಳುತ್ತದೆ ಎಂದು ಕೇಂದ್ರ ಸರಕಾರವು ತಿಳಿಸಿದೆ.

ಜುಲೈ 31ರೊಳಗಾಗಿ ಕೇಂದ್ರ ಸರಕಾರಕ್ಕೆ ಆನ್‌ಲೈನ್ ಮೂಲಕ ಮಾತ್ರ ಕಳುಹಿಸಬೇಕಾಗಿರುವುದರಿಂದ ಪದ್ಮ ಪ್ರಶಸ್ತಿಗಳಿಗೆ ಶಿಫಾರಸು ಮಾಡುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಇಲಾಖೆಗಳು 2025ನೇ ಜುಲೈ 15 ರೊಳಗೆ ಸಲ್ಲಿಸುವುದು ಹಾಗೂ ಸಾಫ್ಟ್ ಪ್ರತಿಗಳನ್ನು ಇ-ಮೇಲ್ ವಿಳಾಸ: uspolitical&dparkamataka.gov.in ಕ್ಕೆ ಕಳುಹಿಸುವುದು. 2025ನೇ ಜುಲೈ 15 ರ ನಂತರ ಬರುವ ಯಾವುದೇ ಪ್ರಸ್ತಾವನೆ/ಮನವಿಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡಿಜಿ ಐಜಿಪಿಯಾಗಿ ಸಲೀಂ ನೇಮಕ ಪ್ರಶ್ನಿಸಿ ಹೈಗೆ ಅರ್ಜಿ

ಬೆಂಗಳೂರು: ಡಾ.ಎಂ.ಎ.ಸಲೀಂ ಅವರನ್ನು ಕರ್ನಾಟಕ ರಾಜ್ಯದ ಪ್ರಭಾರ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು (ಡಿಜಿ ಮತ್ತು ಐಜಿಪಿ) ಆಗಿ ನೇಮಿಸಿರುವ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆಯಾಗಿದೆ.

ಸುಪ್ರೀಂ ಕೋರ್ಟ್‌ನ ನಿಯಮಗಳನ್ನು ಉಲ್ಲಂಘಿಸಿ ಡಾ. ಎಂ.ಎ.ಸಲೀಂ ಅವರನ್ನು ಡಿಜಿ ಮತ್ತು ಐಜಿಪಿಯನ್ನಾಗಿ ನೇಮಕ ಮಾಡಿ ಹೊರಡಿಸಿರುವ ಆದೇಶ ರದ್ದುಪಡಿಸಲು ಕೋರಿ ವಕೀಲೆ ಸುಧಾ ಕಟ್ವಾ ಎಂಬುವರು ಈ ಅರ್ಜಿ ಸಲ್ಲಿಸಿದ್ದು, ವಿಚಾರಣೆಗೆ ಬರಬೇಕಾಗಿದೆ.

ಅರ್ಜಿಯಲ್ಲೇನಿದೆ ?

ರಾಜ್ಯ ಸರಕಾರ ಸಲೀಮ್ ಅವರನ್ನು ಡಿಜಿಐಜಿಪಿಯನ್ನಾಗಿ ನೇಮಕ ಮಾಡಿ ಮೇ 5ರಂದು ಹೊರಡಿಸಿರುವ ಅಧಿಸೂಚನೆ ಸುಪ್ರೀಂಕೋರ್ಟ್ ನಿರ್ದೇಶನಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಪ್ರಕಾಶ್ ಸಿಂಗ್ ಅವರ ಪ್ರಕರಣ ಮತ್ತು ನಂತರದ ಆದೇಶಗಳಲ್ಲಿ, ನಿಯಮಿತ ಡಿಜಿಪಿ ಯನ್ನು ಕೇಂದ್ರೀಯ ಲೋಕಸೇವಾ ಆಯೋಗದಿಂದ (ಯುಪಿಎಸ್ಸಿ) ಮೂರು ಹಿರಿಯ ಅಧಿಕಾರಿಗಳ ಪ್ಯಾನಲ್‌ನಿಂದ ಆಯ್ಕೆ ಮಾಡಬೇಕು. ಇದು ಮೆರಿಟ್, ಸೇವಾ ಹಿರಿತನ ಮತ್ತು ಅನುಭವದ ಆಧಾರದ ಮೇಲೆ ಇರಬೇಕು ಮತ್ತು ಅವರಿಗೆ ಕನಿಷ್ಠ ಎರಡು ವರ್ಷಗಳ ಅಧಿಕಾರಾವಧಿ ಇರಬೇಕು. ಜತೆಗೆ, 'ಕಾರ್ಯಕಾರಿ' ಅಥವಾ 'ಪ್ರಭಾರ' ಡಿಜಿಪಿಗಳ ನೇಮಕಾತಿ ಮಾಡುವುದಕ್ಕೆ ಸುಪ್ರೀಂಕೋರ್ಟ್ ನಿಷೇಧಿಸಿದೆ. ಸಲೀಂ ಅವರನ್ನು ನೇಮಕ ಮಾಡಿರುವ ಸಂಬಂಧ ಯುಪಿಎಸ್ಸಿ ಯಿಂದ ಮಾಹಿತಿ ಹಕ್ಕು ಕಾಯಿದೆಯಡಿ(ಆರ್‌ಟಿಐ) ಮಾಹಿತಿ ಪಡೆಯಲಾಗಿದ್ದು, ನೇಮಕ ಪ್ರಕ್ರಿಯೆಯಲ್ಲಿ ಲೋಪವಿದೆ ಎಂಬ ಅಂಶ ಗೊತ್ತಾಗಿದೆ. ಹೀಗಾಗಿ ರಾಜ್ಯ ಸರಕಾರ ಯುಪಿಎಸ್ಸಿ ಎಂಪ್ಯಾನೆಲ್ ಪ್ರಕ್ರಿಯೆಯನ್ನು ಉಲ್ಲಂಘಿಸಿ ಪ್ರಭಾರ ಡಿಜಿಪಿಯನ್ನು ನೇಮಕ ಮಾಡಿದೆ. ಇದು ರಾಜಕೀಯ ಪರಿಗಣನೆಗಳ ಆಧಾರದ ಮೇಲೆ ಇದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ಜತೆಗೆ, ಪ್ರಭಾರ ನೇಮಕಾತಿ ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಪ್ರಕಾರ ಕಟ್ಟುನಿಟ್ಟಾಗಿ ನಿಯಮಿತ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಲು ಕೋರಲಾಗಿದೆ.

ಬ್ಯಾಂಕ್ ಆಫ್ ಬರೋಡ
ಜಯನಗರ ಶಾಖೆ, ಪಿ. ಬಿ. ನಂ. 1120
9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಜಯನಗರ,
ಬೆಂಗಳೂರು – 560 068 , ಫೋನ್ : 080-26630533
Email: JAYANA@bankofbaroda.co.in

ಸ್ವಾಧೀನ ಸೂಚನೆ

(ಸ್ಥಿರಾಸ್ತಿಗಾಗಿ)

ಆದಾಗ್ಯೂ, ಕೆಳಸಹಿದಾರರು, ಬ್ಯಾಂಕ್ ಆಫ್ ಬರೋಡ, ಜಯನಗರ ಶಾಖೆ, ಬೆಂಗಳೂರು, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು 2002ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3ನ್ನು ಓದಿಕೊಂಡಂತೆ ಪ್ರಕರಣ 13(2)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ತಗಾದೆ ಸೂಚನೆಯನ್ನು ಸಾಲಗಾರರಾದ ಶ್ರೀ ಕಿರಣ್ ಕುಮಾರ್ ಎನ್ S/o ಶ್ರೀ ನಾರಾಯಣ ಎಂ. **(Account No's: 07640600005030 & 07640600005037)** ಇವರಿಗೆ ದಿನಾಂಕ **11.03.2025**ರಂದು ನೀಡಿದ್ದರು. ಅದರಂತೆ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.58,48,886.19** (ರೂಪಾಯಿ ಐವತ್ತೆಂಟು ಲಕ್ಷ ನಲವತ್ತೆಂಟು ಸಾವಿರದ ಎಂಟು ನೂರ ಎಂಬತ್ತಾರು ಮತ್ತು ಪೈಸೆ ಹತ್ತೊಂಬತ್ತು ಮಾತ್ರ) ಮತ್ತು ಮುಂದಿನ, ಖರ್ಚು, ವೆಚ್ಚಗಳನ್ನು ಪಾವತಿಮಾಡಲು ಅವರನ್ನು ಕೋರಿದ್ದರು.

ಸಾಲಗಾರರು/ಜಾಮೀನುದಾರರು/ಅಡಮಾನುದಾರರು ತಗಾದೆ ಸೂಚನೆಯಲ್ಲಿ ಸೂಚಿಸಿರುವ ಮೊತ್ತವನ್ನು ಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ /ಜಮೀನುದಾರರಿಗೆ/ಆಸ್ತಿಯ ಮಾಲೀಕರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ಆಕ್ಟ್‌ನ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಸೆಕ್ಷನ್ 13 ಸಬ್ ಸೆಕ್ಷನ್(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಸ್ವತ್ತನ್ನು ಕೆಳಸಹಿದಾರರು ದಿನಾಂಕ **05.06.2025** ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ/ಅಡಮಾನುದರರಿಗೆ ಮತ್ತು ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ , ಯಾರೂ ಈ ಕೆಳಗೆ ಸೂಚಿಸಿರುವ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ಬ್ಯಾಂಕ್ ಆಫ್ ಬರೋಡ, ಇವರಿಗೆ ಬರಬೇಕಾದ ಬಾಕಿ ಮೊತ್ತ **ರೂ.58,48,886.19** (ರೂಪಾಯಿ ಐವತ್ತೆಂಟು ಲಕ್ಷ ನಲವತ್ತೆಂಟು ಸಾವಿರದ ಎಂಟು ನೂರ ಎಂಬತ್ತಾರು ಮತ್ತು ಪೈಸೆ ಹತ್ತೊಂಬತ್ತು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಬಡ್ಡಿ ಮತ್ತು ಇತರ ಖರ್ಚು, ವೆಚ್ಚ ಇತ್ಯಾದಿಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಸ್ಥಿರ ಸ್ವತ್ತುಗಳ ವಿವರ

ಷೆಡ್ಯೂಲ್ 'ಎ' ಆಸ್ತಿ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗೊಲ್ಲಹಳ್ಳಿ ಗ್ರಾಮ, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ, ಬೆಂಗಳೂರು, ಇಲ್ಲಿರುವ ಆಸ್ತಿಯ ಬಿಬಿಎಂಪಿ ಖಾತಾ ನಂ. 134/471/33/1 ಅಳತೆ 73.758 ಚದರ ಅಡಿ, ಪರಿವರ್ತಿತ ಸರ್ವೆ ನಂ. 33/1 (ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಇವರ ದಿನಾಂಕ 02.04.2005ರ ಪರಿವರ್ತನಾ ಆದೇಶ ನಂ.BDS:ALN:SR(S):553/2004-05 ರಂತೆ ಕೃಷಿ ಉದ್ದೇಶದಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿತವಾಗಿದೆ) ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಬಿಡಿಎ ಲೇಔಟ್, ಪಶ್ಚಿಮಕ್ಕೆ: 60 ಅಡಿ ಬಿಡಿಎ ರಸ್ತೆ, ಉತ್ತರಕ್ಕೆ: ಬಿಡಿಎ ಲೇಔಟ್ ಮತ್ತು ದಕ್ಷಿಣಕ್ಕೆ: 40 ಅಡಿ ರಸ್ತೆ.

ಷೆಡ್ಯೂಲ್ 'ಬಿ' ಆಸ್ತಿ: (ಈ ಕೆಳಗಿನಂತೆ ವಿಭಾಗಿಸಲಾಗದ ಆಸಕ್ತಿ) ಷೆಡ್ಯೂಲ್ 'ಎ' ಆಸ್ತಿಯಲ್ಲಿ 432.90 ಚದರ ಅಡಿ ಅವಿಭಜಿತ ಪಾಲು, ಹಕ್ಕು, ಆಸಕ್ತಿ ಮತ್ತು ಹಿತಾಸಕ್ತಿ.

ಷೆಡ್ಯೂಲ್ 'ಸಿ' ಆಸ್ತಿ: (ವಾಸವಾಗುವಂತ ಫ್ಲಾಟ್/ಅಪಾರ್ಟ್‌ಮೆಂಟ್‌ನ ವಿವರ) ಷೆಡ್ಯೂಲ್ 'ಎ' ರಲ್ಲಿರುವ ಆಸ್ತಿಯಲ್ಲಿ ನಿರ್ಮಾಣವಾದ "ಕುಪನ್ ಬ್ಯಾಸನ್" ಎಂಬ ವಸತಿ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ನಂ. [illegible] ಇಲ್ಲಿ 2 ಬೆಡ್ ರೂಂ, ಒಂದು ಕಿಚನ್, ಡೈನಿಂಗ್ ಮತ್ತು ಲಿವಿಂಗ್ ರೂಂ, ಬಾಲ್ಕನಿ ಮತ್ತು ಯುಟಿಲಿಟಿಗಳು ಪ್ರದೇಶಗಳ ಸೇರಿ ನಿರ್ಮಿತ ಪ್ರದೇಶ 1110 ಚದರ ಅಡಿ ಜೊತೆಗೆ ಸ್ಟಿಲ್ಟ್ ಮಹಡಿಯಲ್ಲಿ ಒಂದು ಮೇಲ್ಛಾವಣಿ ಇರುವ ಕಾರು ನಿಲುಗಡೆ ಪ್ರದೇಶ ಹಾಗೂ ಸಾಮಾನ್ಯ ಪ್ರದೇಶಗಳಾದ ಲಿಫ್ಟ್, ಮೆಟ್ಟಲು, ಲಾಬಿಗಳು, ಈಜುಕೊಳ, ಜಿಮ್ ಮತ್ತು ಇತರ ಸೌಕರ್ಯಗಳು, ಆರ್‌ಸಿಸಿ ಮೇಲ್ಛಾವಣಿ, ಟೀಕ್ ಮರದ ಚೌಕಟ್ಟು ಹೊಂದಿರುವ ಮುಖ್ಯ ದ್ವಾರ, ಪಾಲಿಷ್ ಮಾಡಿರುವ ಸ್ಕಿನ್ ಡೋರ್‌ಗಳು, ಲಿವಿಂಗ್ ಮತ್ತು ಡೈನಿಂಗ್, ಬೆಡ್‌ರೂಂ, ಕಿಚನ್ ಬಾಲ್ಕನಿ ಮತ್ತು ಯುಟಿಲಿಟಿ ಪ್ರದೇಶಗಳಿಗೆ ವಿಟ್ರಿಫೈಡ್ ನೆಲಹಾಸು, UPVC ಸ್ಲೈಡಿಂಗ್ ಕಿಟಕಿಗಳು ಮತ್ತು MS ಗ್ರಿಲ್‌ಗಳನ್ನು ಹೊಂದಿರುವ ಆಸ್ತಿ.

ಸ್ಥಳ : ಬೆಂಗಳೂರು
ದಿನಾಂಕ : 05.06.2025

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ನಮೂನೆ ಸಂ. INC-26
[ಕಂಪನಿಗಳು (ಸಂಯೋಜನೆ) ನಿಯಮಗಳು, 2014, ನಿಯಮ 30 ರ ಅನುಸಾರವಾಗಿ]

ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಂಪನಿಯ ನೋಂದಾಯಿತ ಕಚೇರಿ ಬದಲಾವಣೆಗಾಗಿ ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು

ಕೇಂದ್ರ ಸರ್ಕಾರ / ಪ್ರಾದೇಶಿಕ ನಿರ್ದೇಶಕರ ಮುಂದೆ
ಆಗ್ನೇಯ ವಲಯ, 3 ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯಣ್ಣರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ

ಕಂಪನಿಗಳ ಕಾಯ್ದೆ, 2013 ಸೆಕ್ಷನ್ 13 ರ ಉಪ-ವಿಭಾಗ (4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ನಿಯಮ 30 ರ ಉಪ-ನಿಯಮ (5) ರ ಷರತ್ತು (ಎ) ರ ವಿಷಯದಲ್ಲಿ

ಮತ್ತು

ಮ್ಯಾಪ್ ಡಿಟಿ ಪ್ರೈವೇಟ್ ಲಿಮಿಟೆಡ್ (ಹಿಂದೆ ವಿಟೆಕ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ತನ್ನ ನೋಂದಾಯಿತ ಕಚೇರಿಯನ್ನು ನಂ.1134, 4ನೇ ಮಹಡಿ, ಶ್ರೀ ರಾಮ್ ನಿವಾಸ್ ಎದುರು, ಆಕ್ಸಿಸ್ ಬ್ಯಾಂಕ್ ಎದುರು, 100 ಅಡಿ ರಸ್ತೆ, ಇಂದಿರಾ ನಗರ, ಬೆಂಗಳೂರು, ಕರ್ನಾಟಕ 560038 **ನಲ್ಲಿ ಹೊಂದಿರುವ** ವಿಷಯದಲ್ಲಿ.......... ಅರ್ಜಿದಾರರು

ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯ"** ದಿಂದ **"ದೆಹಲಿ ರಾಜ್ಯ"** ಎಂದು ಬದಲಾಯಿಸಲು ಅನುವು ಮಾಡಿಕೊಡಲು **2025 ರ ಮೇ 15** ರಂದು ನಡೆದ ಹೆಚ್ಚುವರಿ ಸಾಮಾನ್ಯ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಅನ್ನು ಬದಲಾಯಿಸಲು ದೃಢೀಕರಣವನ್ನು ಕೋರುವುದಕ್ಕೆ ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ (ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, 3 ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯಣ್ಣರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ) ಅರ್ಜಿ ಸಲ್ಲಿಸಲು ಕಂಪನಿಯು ಉದ್ದೇಶಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಕಂಪನಿಯ ನೋಂದಾಯಿತ ಕಚೇರಿಯ ಉದ್ದೇಶಿತ ಬದಲಾವಣೆಯಿಂದ ಆಸಕ್ತಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿಯು ಎಂಸಿಎ -21 ಪೋರ್ಟಲ್ (www.mca.gov.in) ನಲ್ಲಿ ಹೂಡಿಕೆದಾರರ ದೂರು ನಮೂನೆಯನ್ನು ಸಲ್ಲಿಸುವ ಮೂಲಕ ಅಥವಾ ತಲುಪಿಸಬೇಕಾದ ಕಾರಣವನ್ನು ಸಲ್ಲಿಸುವ ಮೂಲಕ ಅಥವಾ ನೋಂದಾಯಿತ ಅಂಚೆ ಮೂಲಕ ಆಗ್ನೇಯ ವಲಯದ ಪ್ರಾದೇಶಿಕ ನಿರ್ದೇಶಕರು, 3 ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯಣ್ಣರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ ಇವರಿಗೆ ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗೆ ಅರ್ಜಿದಾರ ಕಂಪನಿಗೆ ಅದರ ನೋಂದಾಯಿತ ಕಚೇರಿಯಲ್ಲಿ ಈ ಕೆಳಗಿನ ವಿಳಾಸದಲ್ಲಿ ಒಂದು ಪ್ರತಿಯೊಂದಿಗೆ ಅವನ /ಅವಳ ಆಕ್ಷೇಪಣೆಯನ್ನು ಕಳುಹಿಸಬಹುದು.

ಕಂಪನಿಯ ನೋಂದಾಯಿತ ಕಚೇರಿ - ನಂ. 1134, 4 ನೇ ಮಹಡಿ, ಆಕ್ಸಿಸ್ ಬ್ಯಾಂಕ್ ಎದುರಿನ ಶ್ರೀ ರಾಮ್ ನಿವಾಸ್, 100 ಅಡಿ ರಸ್ತೆ, ಇಂದಿರಾ ನಗರ, ಬೆಂಗಳೂರು, ಕರ್ನಾಟಕ 560038.

ಪರವಾಗಿ:
ಮ್ಯಾಪ್ ಡಿಟಿ ಪ್ರೈವೇಟ್ ಲಿಮಿಟೆಡ್
(ಈ ಹಿಂದೆ ವಿಟ್ಟೆಕ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ರೋಹನ್ ವರ್ಮಾ
ವ್ಯವಸ್ಥಾಪಕ ನಿರ್ದೇಶಕರು
ಡಿನ್ : 01797489

ದಿನಾಂಕ: 10.06.2025
ಸ್ಥಳ: ಬೆಂಗಳೂರು

THIS IS A PUBLIC ANNOUNCEMENT FOR INFORMATION PURPOSES ONLY. THIS IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE FOR UNITS OR SECURITIES. NOT FOR RELEASE, PUBLICATION OR DISTRIBUTION, DIRECTLY OR INDIRECTLY OUTSIDE INDIA.

(Please use this QR Code to view the Addendum cum Corrigendum)

VINIR ENGINEERING

VINIR ENGINEERING LIMITED

Our Company was originally incorporated as a private limited company under the name of "Vinir Engineering Private Limited" on August 01, 1983, under the Companies Act, 1956, pursuant to a certificate of incorporation issued by the Registrar of Companies, Karnataka, Bangalore. Thereafter, our Company was converted into a public limited company pursuant to a special resolution passed by our Shareholders at their extraordinary general meeting held on October 04, 2024 and the name of our Company was changed to "Vinir Engineering Limited", and a fresh certificate of incorporation consequent upon conversion from a private company to a public limited company was issued by the Registrar of Companies, Central Processing Centre, on November 19, 2024. For further details of change in the name of our Company and the registered office, see "*History and Certain Corporate Matters*" on page 187 of the Draft Red Herring Prospectus.

Registered Office: No.104, Bommasandra Industrial Area, Bangalore, Karnataka, India, 560099; **Tel**: +91 80 27832313
Contact Person: Pradeep Kumar Chamaria, Company Secretary and Compliance Officer; **E-mail**: compliance@vinirforge.org, **Website**: https://vinirforge.org
Corporate Identity Number: U74210KA1983PLC005477

OUR PROMOTERS: NARESH CHANDRA GUPTA, NITESH GUPTA AND RITESH GUPTA

INITIAL PUBLIC OFFER OF UP TO 53,300,000 EQUITY SHARES OF FACE VALUE OF ₹ 2 EACH ("EQUITY SHARES") OF VINIR ENGINEERING LIMITED ("COMPANY" OR "ISSUER") FOR CASH AT A PRICE OF ₹ [●] PER EQUITY SHARE (INCLUDING A SHARE PREMIUM OF ₹ [●] PER EQUITY SHARE) ("OFFER PRICE") AGGREGATING UP TO ₹ [●] MILLION THROUGH AN OFFER FOR SALE (THE "OFFER") OF UP TO 53,300,000 EQUITY SHARES OF FACE VALUE OF ₹ 2 EACH AGGREGATING UP TO ₹ [●] MILLION BY NITESH GUPTA ("PROMOTER SELLING SHAREHOLDER") (THE "OFFER FOR SALE" AND SUCH EQUITY SHARES, THE "OFFERED SHARES"). THE OFFER SHALL CONSTITUTE [●] % OF OUR POST-OFFER PAID-UP EQUITY SHARE CAPITAL OF OUR COMPANY.

NOTICE TO INVESTORS: ADDENDUM CUM CORRIGENDUM TO THE DRAFT RED HERRING PROSPECTUS DATED JANUARY 17, 2025 (THE "DRAFT RED HERRING PROSPECTUS") (THE "ADDENDUM CUM CORRIGENDUM")

This addendum cum corrigendum is with reference to the Draft Red Herring Prospectus dated January 17, 2025 ("**DRHP**") filed with the Securities and Exchange Board of India ("**SEBI**") in relation to the Offer.

In this regard, attention of the potential investors is drawn to the following:

Suprajit Engineering Limited ("**Suprajit**"), through its Advocates, had issued certain letters including a latest letter dated May 5, 2025 received by us on May 21, 2025, alleging non-disclosure of certain outstanding legal proceedings involving the Company and Suprajit in the DRHP. The Company, through its Advocates, submitted its responses thereon resting with the letter dated June 9, 2025. Notably, on May 9, 2025, the Company had already published an Addendum-cum-Corrigendum to the DRHP inter-alia disclosing the pending legal proceedings involving the Company and Suprajit.

Potential Bidders may note that in order to assist the Bidders to get a complete understanding of the updated information, the abovementioned information is to be read in conjunction with the DRHP and accordingly relevant references in the DRHP stand updated pursuant to this Addendum cum Corrigendum. The information in this Addendum cum Corrigendum supplements the DRHP and updates the information in the DRHP, as applicable. However, this Addendum cum Corrigendum does not reflect all the changes that have occurred between the date of filing of the DRHP and the date hereof, and accordingly does not include all the changes and/or updates that will be included in the Red Herring Prospectus and the Prospectus. Please note that the information included in the DRHP will be suitably updated, including to the extent stated in this Addendum cum Corrigendum, as may be applicable, in the Red Herring Prospectus and the Prospectus, as and when filed with the RoC, SEBI and the Stock Exchanges. Investors should not rely on the DRHP or this Addendum cum Corrigendum for any investment decision, and should read the Red Herring Prospectus, as and when it is filed with the RoC, SEBI and the Stock Exchanges before making an investment decision with respect to the Offer.

This Addendum cum Corrigendum filed with SEBI shall be made public by publication in all editions of Business Standard, an English national daily newspaper, in all editions of Business Standard, a Hindi national daily newspaper, and all editions of Vishwavani, a Kannada daily newspaper (Kannada being the regional language of Bangalore, Karnataka where our Registered Office is located) and will be available on the website of SEBI at www.sebi.gov.in, the website of the Stock Exchanges at www.nseindia.com and www.bseindia.com , the website of the Company at https://vinirforge.org and the website of the BRLM viz. Pantomath Capital Advisors Private Limited at www.pantomathgroup.com.

All capitalised terms used in this Addendum cum Corrigendum shall, unless the context otherwise requires, have the meaning ascribed to them in the Draft Red Herring Prospectus.

BOOK RUNNING LEAD MANAGER TO THE OFFER	REGISTRAR TO THE OFFER
Pantomath Capital Advisors Private Limited Pantomath Nucleus House, Saki-Vihar Road, Andheri-East, Mumbai - 400072, Maharashtra, India. **Tel.:** 1800 889 8711 **E-mail:** vinir.ipo@pantomathgroup.com **Investor grievance e-mail:** investors@pantomathgroup.com **Website:** www.pantomathgroup.com **Contact Person:** Amit Maheshwari **SEBI Registration Number:** INM000012110	**KFIN Technologies Limited** Selenium Tower-B, Plot No. 31 & 32, Gachibowli, Financial District, Nanakramguda, Serilingampally, Hyderabad - 500032, Telangana **Tel:** 040-67162222/18003094001 **E-mail:** vel.ipo@kfintech.com **Investor grievance E-mail:** einward.ris@kfintech.com **Website:** www.kfintech.com **Contact Person:** M.Murali Krishna **SEBI Registration No:** INR000000221

For **Vinir Engineering Limited**
On behalf of the **Board of Directors**
Sd/-
Pradeep Kumar Chamaria
Company Secretary and Compliance Officer

Place: Bangalore
Date: June 9, 2025

Disclaimers: Vinir Engineering Limited is proposing, subject to applicable statutory and regulatory requirements, receipt of requisite approvals, market considerations and other considerations to undertake an Initial Public Offer of its Equity Shares and has filed the Draft Red Herring Prospectus dated January 17, 2025 with SEBI. The Draft Red Herring Prospectus is available on the website of the SEBI at www.sebi.gov.in, BSE at www.bseindia.com, NSE at www.nseindia.com as well as on the website of Book Running Lead Manager at www.pantomathgroup.com and the Company at https://vinirforge.org. Investors should note that investment in Equity Shares involves a high degree of risk and for details relating to the same, see "*Risk Factors*" beginning on page 28 of the Draft Red Herring Prospectus. Potential investors should not rely on the Draft Red Herring Prospectus filed with the SEBI for making any investment decisions. This announcement is not an Issue of securities for sale in United States or in any restricted jurisdiction. This announcement may not be published or distributed in the United States or in any restricted jurisdiction.

The Equity Shares have not been and will not be registered under the U.S. Securities Act or any other applicable law of the United States and, unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in offshore transactions in reliance on Regulation S under the U.S. Securities Act and the applicable laws of each jurisdiction where such offers and sales are made. The Equity Shares have not been and will not be registered, listed or otherwise qualified in any other jurisdiction outside India and may not be offered or sold, and Bids may not be made, by persons in any such jurisdiction except in compliance with the applicable laws of such jurisdiction.

Adfactors 183/25

ಜಿ-7 ಶೃಂಗಸಭೆ

ಭಾರತ-ಕೆನಡಾ ಸಂಬಂಧ ಸುಧಾರಣೆಗೊಂದು ವೇದಿಕೆ

ಜಸ್ಟಿನ್ ಟ್ರುಡೋ ಅವಧಿಯಲ್ಲಿ ಹದಗೆಟ್ಟಿದ್ದ ಭಾರತ-ಕೆನಡಾ ದ್ವಿಪಕ್ಷೀಯ ಸಂಬಂಧವನ್ನು ಮರುಸ್ಥಾಪಿಸುವುದು ತಮ್ಮ ಆದ್ಯತೆ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಕಳೆದ ಮಾರ್ಚ್‌ನಲ್ಲಿ ಅಧಿಕಾರ ವಹಿಸಿಕೊಂಡಾಗ ಹೇಳಿದ್ದರು. ಆ ಕಾರಣಕ್ಕಾಗಿಯೇ ಜಿ-7 ಶೃಂಗಸಭೆಯಲ್ಲಿ ಭಾರತ ಭಾಗವಹಿಸಬೇಕೆಂದು ಕೆನಡಾ ಕೋರಿಕೊಂಡಿದೆ. ಈ ಒಕ್ಕೂಟದಲ್ಲಿ ವಿಶ್ವದ ಬಲಾಢ್ಯ ಸದಸ್ಯ ರಾಷ್ಟ್ರಗಳು ಇರುವುದರಿಂದ ವಿಶೇಷ ಆಹ್ವಾನಿತರಾಗಿ ಪ್ರಧಾನಿ ಮೋದಿ ಕೂಡಾ ಭಾಗವಹಿಸುತ್ತಿರುವುದು ಖಚಿತವಾಗಿದ್ದು, ಶೃಂಗಸಭೆಯು ಭಾರತ-ಕೆನಡಾ ಬಾಂಧವ್ಯ ವೃದ್ಧಿಗೊಂದು ಪ್ರಮುಖ ವೇದಿಕೆಯಾಗುವುದಂತೂ ನಿಶ್ಚಿತ.

ನರೇಂದ್ರ ಪಾರೆಕಟ್

ಮುಂದಿನ ವಾರ, ಅಂದರೆ ಜೂನ್ -15ರಿಂದ 17ರ ತನಕ ಕೆನಡಾದ ಆಲ್ಬರ್ಟಾದಲ್ಲಿ ನಡೆಯಲಿರುವ ಮಹತ್ವದ ಜಿ-7 ಶೃಂಗಸಭೆಗೆ ಇದೀಗ ವೇದಿಕೆ ಸಜ್ಜುಗೊಂಡಿದೆ. ಕೆನಡಾ ಪ್ರಧಾನಿಯೇ ಖುದ್ದಾಗಿ ಆಹ್ವಾನ ನೀಡಿರುವ ಕಾರಣ ತಾನೂ ಶೃಂಗಸಭೆಯಲ್ಲಿ ಭಾಗವಹಿಸುತ್ತಿರುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ. ಹಾಗಾಗಿ ಜಸ್ಟಿನ್ ಟ್ರುಡೋ ಅವಧಿಯಲ್ಲಿ ಹದಗೆಟ್ಟಿದ್ದ ಭಾರತ-ಕೆನಡಾ ಸಂಬಂಧ ಸಧಾರಣೆಗೆ ಅದೊಂದು ಪ್ರಮುಖ ವೇದಿಕೆ ಎನಿಸಲಿದೆ. ಆ ಕಾರಣಕ್ಕಾಗಿಯೇ ಈ ಸಲದ ಶೃಂಗ ಸಭೆ ಭಾರತ-ಕೆನಡಾ ಪಾಲಿಗೆ ನಿಜಕ್ಕೂ ಮಹತ್ವದ ಅವಕಾಶ. ಭಾರತದೊಂದಿಗೆ ಅಸ್ತಿತ್ವದಲ್ಲಿರುವ ಭಿನ್ನಾಭಿಪ್ರಾಯವನ್ನು ದ್ವಿಪಕ್ಷೀಯ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವ ನಿರೀಕ್ಷೆ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿರವರ ಯೋಚನೆಯಾಗಿದೆ.

ಜಸ್ಟಿನ್ ಟ್ರುಡೋ ಅವರು ಕೆನಡಾದಲ್ಲಿ ಖಲಿಸ್ತಾನಿ ಚಳುವಳಿಗೆ ಬೆಂಬಲ ನೀಡುತ್ತಿದ್ದುದು ಮತ್ತು ಕೆನಡಾದಲ್ಲಿ ಹತನಾದ ಖಲಿಸ್ತಾನಿ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಗುಪ್ತಚರ ಸಂಸ್ಥೆಗಳ ಕೈವಾಡ ಇದೆ ಎಂದು ಆರೋಪಿಸಿದ್ದು, ಭಾರತ-ಕೆನಡಾ ನಡುವಿನ ರಾಜತಾಂತ್ರಿಕ ಸಂಬಂಧಕ್ಕೆ ಭಾರೀ ಪೆಟ್ಟು ನೀಡಿತ್ತು.

'ಭಾರತದೊಂದಿಗಿನ ವ್ಯಾಪಾರ ಸಂಬಂಧಗಳನ್ನು ವೈವಿಧ್ಯಗೊಳಿಸುವದು ನನ್ನ ಪ್ರಮುಖ ಆದ್ಯತೆಗಳಲ್ಲೊಂದು. ಅಲ್ಲದೇ, ಉಭಯ ದೇಶಗಳ ನಡುವೆ ಅಸ್ತಿತ್ವದಲ್ಲಿರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನು ರಾಜತಾಂತ್ರಿಕ ಮಾತುಕತೆಯ ಮೂಲಕ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಭಾರತ-ಕೆನಡಾದ ರಚನಾತ್ಮಕ ರಾಜತಾಂತ್ರಿಕ ಸಂಬಂಧವು ಜಾಗತಿಕ ಪರಿಣಾಮಗಳನ್ನೂ ಬೀರುತ್ತದೆ. ಹಾಗಾಗಿಯೇ ಈ ಬಗ್ಗೆ ನಾನು ಖಂಡಿತವಾಗಿಯೂ ಹೆಚ್ಚು ಗಮನಹರಿಸುತ್ತೇನೆ' ಎಂದು ಮಾರ್ಕ್ ಕಾರ್ನಿ ಅಧಿಕಾರ ವಹಿಸಿಕೊಂಡಾಕ್ಷಣವೇ ಹೇಳಿದ್ದರು.

ಪ್ರತಿ ವರ್ಷ ಏಳು ಅತ್ಯಂತ ಶಕ್ತಿಶಾಲಿ ಆರ್ಥಿಕ ಶಕ್ತಿಯನ್ನೊಂದಿದ ದೇಶದ ನಾಯಕರು ಒಂದೆಡೆ ಸೇರಿ ಪ್ರಚಲಿತ ವಿಷಯಗಳ ಮಾತುಕತೆ, ನಿರ್ಧಾರ ಮತ್ತು ಘೋಷಣೆಗಳಿಗಾಗಿ ಒಟ್ಟುಗೂಡುವ ಉದ್ದೇಶವಾಗಿರುವ ಜಿ-7 ಶೃಂಗಸಭೆಯ ವೇಳೆಯೇ ಭಾರತದ ಬೆಂಬಲ ಮತ್ತೆ ತನಗೆ ದೊರಕಲಿ ಎಂಬ ಉದ್ದೇಶ ಮಾರ್ಕ್ ಕಾನಿ ಅವರದ್ದಾಗಿದೆ.

ವಿಶ್ವದ ಒಟ್ಟು ಜನಸಂಖ್ಯೆಯ ಶೇ.10ರಷ್ಟನ್ನು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ದೇಶಗಳು ಪ್ರತಿನಿಧಿಸುತ್ತದೆ. ನ್ಯಾಟೋ ಗುಂಪಿನಂತೆ ಜಿ-7ಗೆ ಯಾವುದೇ ಕಾನೂನು ಅಸ್ತಿತ್ವ, ಶಾಶ್ವತ ಸಚಿವಾಲಯ ಇಲ್ಲ. ಆದರೂ ಜಿ-7 ಸಭೆಯಲ್ಲಿ ತೆಗೆದುಕೊಳ್ಳಲಾಗುವ ನಿರ್ಧಾರಗಳು, ಮಾಡಿಕೊಳ್ಳಲಾದ ಒಪ್ಪಂದಗಳನ್ನು ಆಯಾ ದೇಶಗಳ ಆಡಳಿತವು ಅನುಮೋದಿಸಬೇಕಾಗುತ್ತದೆ. ನಮ್ಮ ದೇಶವು ಜಿ-7ನ ಸದಸ್ಯದೇಶ ಅಲ್ಲದಿದ್ದರೂ, 2019ರಿಂದ ಶೃಂಗಸಭೆಯಲ್ಲಿ ಭಾಗವಹಿಸುತ್ತಿದೆ.



ಜಿ-7 ಒಕ್ಕೂಟದ ವಿಸ್ತೃತ ರೂಪ ಮತ್ತು ಸಮೂಹ ದೇಶಗಳು

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಿ-7 ಎಂದರೆ ಗ್ರೂಪ್ ಆಫ್ ಸೆವೆನ್ (ದೇಶಗಳು) ಎಂಬುದರ ಸಂಕ್ಷಿಪ್ತ ರೂಪವಾಗಿದೆ. ಜಿ-7 ಸಮೂಹಕ್ಕೆ ಒಳಪಡುವ ದೇಶಗಳು ಯಾವುವೆಂದರೆ ಅಮೆರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್ ಮತ್ತು ಕೆನಡಾ.

ಜಿ-7 ಒಕ್ಕೂಟ ಪ್ರಾರಂಭವಾಗಿದ್ದು ಹೇಗೆ?

1973ರಲ್ಲಿ ಅಮೆರಿಕವು ಬ್ರಿಟನ್, ಆಗಿನ ಪಶ್ಚಿಮ ಜರ್ಮನಿ ಮತ್ತು ಫ್ರಾನ್ಸ್‌ನ ಹಣಕಾಸು ಮಂತ್ರಿಗಳ ಅನೌಪಚಾರಿಕ ಸಭೆಯೊಂದನ್ನು ಕರೆದಿತ್ತು. ಶ್ವೇತಭವನದ ಗ್ರಂಥಾಲಯ ಕೋಣೆಯಲ್ಲಿ ನಡೆದ ಆ ಸಭೆಯನ್ನು 'ಗ್ರಂಥಾಲಯ ಗುಂಪು' ಎಂದೇ ವಿಶ್ಲೇಷಿಸಲಾಗಿತ್ತು. 1973ರಲ್ಲಿ ತಲೆದೋರಿದ ತೈಲ ಬಿಕ್ಕಟ್ಟು, ಆರ್ಥಿಕ ಅಸ್ಥಿರತೆಯ ಬಳಿಕ 1975, ನವೆಂಬರ್‌ನಲ್ಲಿ ಫ್ರಾನ್ಸ್ ನಲ್ಲಿ ಮೊದಲ ಶೃಂಗಸಭೆ ಆಯೋಜಿಸಲಾಗಿತ್ತು. ಐದು ದೇಶಗಳ ಒಂದು ಗುಂಪು ಮತ್ತು ಇಟಲಿ ದೇಶವೂ ಸೇರಿದಂತೆ ಆಗ ಜಿ-6 ರಚಿಸಿಕೊಂಡವು. ಒಂದು ವರ್ಷದ ನಂತರ ಕೆನಡಾ ದೇಶವನ್ನೂ ಸಹ ಆ ಗುಂಪಿಗೆ ಸೇರ್ಪಡೆ ಮಾಡಲಾಯಿತು.1976ರಲ್ಲಿ ಮೊದಲ ಜಿ-7 ಶೃಂಗಸಭೆ ನಡೆಯಿತು. ಸ್ಥೂಲ ಆರ್ಥಿಕ ನೀತಿಗಳನ್ನು ಸಂಘಟಿಸಲು ಸಮಾನ ಮನಸ್ಕ ಬಂಡವಾಳಶಾಹಿ ಪ್ರಜಾಪ್ರಭುತ್ವ ದೇಶಗಳಿಗೆ ಅದು ಒಂದು ಉತ್ತಮ ಸಂವಹನ ವೇದಿಕೆಯಾಗಿ ಮಾರ್ಪಟ್ಟಿತು. 1991ರಲ್ಲಿ ಸೋವಿಯತ್ ಒಕ್ಕೂಟದ ಪತನ ಹಾಗೂ 1997 ಜಿ-7 ಶೃಂಗಸಭೆಯ ನಂತರ ರಷ್ಯಾವನ್ನು ಜಿ-7ನ ಭಾಗವಾಗಲು ಔಪಚಾರಿಕವಾಗಿ ಆಹ್ವಾನ ನೀಡಲಾಗಿತ್ತು. ಹಾಗಾಗಿ 1998ರಲ್ಲಿ ರಷ್ಯಾ ಆ ಬಳಗಕ್ಕೆ ಸೇರ್ಪಡೆ ಆಯಿತು. ಆಗ ಅದು ಜಿ-8 ಎಂದು ಕರೆಯಲ್ಪಟ್ಟಿತು. ಆದರೆ ಉಕ್ರೇನ್‌ನಿಂದ ಕ್ರಿಮಿಯಾವನ್ನು ರಷ್ಯಾ ಸ್ವಾಧೀನಪಡಿಸಿಕೊಂಡ ಬಳಿಕ, ಅಂದರೆ 2014ರಲ್ಲಿ ರಷ್ಯಾದ ಸದಸ್ಯತ್ವವನ್ನು ಅಮಾನತುಗೊಳಿಸಲಾಯಿತು.

ದ್ವಿಪಕ್ಷೀಯ ಸಂಬಂಧ ಸುಧಾರಣೆಗೆ ಯತ್ನ

1982ರಲ್ಲಿಇಂದಿರಾಗಾಂಧಿಯವರು ಖಲಿಸ್ತಾನಿ ಆತಂಕಿ ತಲ್ವಿಂದರ್ ಪಾರ್ಮರ್‌ನನ್ನು ಭಾರತಕ್ಕೆ ಹಸ್ತಾಂತರಿಸಲು ಕೋರಿದ್ದಾಗ ಜಸ್ಟಿನ್ ಟ್ರುಡೊ ತಂದೆ ಪಿಯರ್ ಎಲಿಯಟ್ ಟ್ರುಡೊ ಅಂದು ಪ್ರಧಾನಿಯಾಗಿದ್ದರು. ಪಾರ್ಮರ್‌ನನ್ನು ಕೆನಡಾದಲ್ಲೆ ಇಟ್ಟುಕೊಂಡ ಪರಿಣಾಮ ಆತ ನಡೆಸಿದ ವಿಮಾನ ಬಾಂಬ್ ಸ್ಫೋಟದಿಂದಾಗಿ 329 ಜನರು ಅಸುನೀಗಿದ್ದರು. ಕೆನಡಾವು ಭಾರತದಿಂದ ಔಷಧ, ಕಬ್ಬಿಣ, ಪರಮಾಣು ಒಲೆ ಆಮದು ಮಾಡಿಕೊಳ್ಳುತ್ತದೆ. ಇಲ್ಲಿನ ಶೇ.47 ವಿದೇಶಿ ವಿದ್ಯಾರ್ಥಿಗಳು ಭಾರತೀಯರಾಗಿದ್ದಾರೆ. ಹಾಗಾಗಿ ಭಾರತದ ಜತೆ ಸಂಬಂಧ ಮತ್ತಷ್ಟು ಹದಗೆಟ್ಟರೆ ಕೆನಡಕ್ಕೆ ಭಾರೀ ನಷ್ಟ ಎಂಬುದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರ ಈ ಬದಲಾದ ನಿಲುವಿಗೆ ಮುಖ್ಯ ಕಾರಣ.

ಶೃಂಗಸಭೆ ಗಮನಹರಿಸುವ ವಿಷಯಗಳು

ಹವಾಮಾನ ಬದಲಾವಣೆ ಮತ್ತು ಇಂಧನ ಭದ್ರತೆ, ಕೃತಕ ಬುದ್ಧಿಮತ್ತೆ, ಡಿಜಿಟಲ್ ಆಡಳಿತ, ಜಾಗತಿಕ ಆರೋಗ್ಯ-ಸಾಂಕ್ರಾಮಿಕ ಸಿದ್ಧತೆ, ಆಹಾರ ಭದ್ರತೆ, ಅಭಿವೃದ್ಧಿ ನೆರವು, ಭೌಗೋಳಿಕ-ರಾಜಕೀಯ ಬಿಕ್ಕಟ್ಟುಗಳು, ಉಕ್ರೇನ್, ಗಾಜಾ, ಇಂಡೋ-ಪೆಸಿಫಿಕ್ ಉದ್ವಿಗ್ನತೆಗಳು, ಆರ್ಥಿಕ ಸ್ಥಿತಿಸ್ಥಾಪಕತ್ವ ಮತ್ತು ಪೂರೈಕೆ ಸರಪಳಿ ಭದ್ರತೆ ಹೀಗೆ ಹಲವು ವಿಷಯಗಳ ಮೇಲೆ ಜಿ-7 ರಾಷ್ಟ್ರಗಳು ತೀವ್ರ ಗಮನ ಕೊಡುತ್ತಿವೆ. ಮೂಲಭೂತವಾಗಿ ಬೃಹತ್ ರಾಜಕೀಯ ಮತ್ತು ಆರ್ಥಿಕ ಶಕ್ತಿಯನ್ನು ಹೊಂದಿರುವ ಜಾಗತಿಕ ಚಿಂತಕರ ಚಾವಡಿ ಕೂಡಾ ಇದಾಗಿದೆ ಎಂದರೂ ತಪ್ಪಾಗಲಾರದು.

ಬಲಿಷ್ಠ ದೇಶಗಳ ಸಹಯೋಗದ ವೇದಿಕೆ ಇದಾಗಿದ್ದರೂ ಜಿ-7 ಸಾಕಷ್ಟು ಟೀಕೆಗಳನ್ನು ಎದುರಿಸುತ್ತಿದೆ. ಜಾಗತಿಕವಾಗಿ ಶ್ರೀಮಂತ ರಾಷ್ಟ್ರಗಳ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ಕಾರ್ಯಸೂಚಿಯನ್ನು ಜಾರಿಗೆ ತರುವ ವೇದಿಕೆ ಅದಾಗಿದೆ ಎಂಬ ಮಾತೂ ಆಗಾಗ ಕೇಳಿಬರುತ್ತಿದೆ. ಹವಾಮಾನ ಬದಲಾವಣೆ ಮತ್ತು ಜಾಗತಿಕ ಆರ್ಥಿಕ ಅಸಮಾನತೆಗಳಂತಹ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಆದಷ್ಟು ಬೇಗ ಜಿ-7 ಸಫಲತೆಯನ್ನು ಕಾಣಬೇಕೆಂಬ ನಿರೀಕ್ಷೆ ಸದಸ್ಯ ರಾಷ್ಟ್ರಗಳದ್ದಾಗಿದೆ.

ಜಿ-7: ಭಾರತದ ಪಾತ್ರವೂ ಪ್ರಮುಖ

ಸಮೂಹದ ಸದಸ್ಯದೇಶ ಅಲ್ಲದಿದ್ದರೂ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ವಿಶಿಷ್ಟತೆಯು ಭಾರತವನ್ನು ಜಿ-7 ಶೃಂಗಸಭೆಗಳಲ್ಲಿ ಗೌರವಾನ್ವಿತ ಅತಿಥಿಯನ್ನಾಗಿ ಮಾಡಿದೆ. ಭಾರತ ಇದುವರೆಗೆ ಹನ್ನೊಂದು ಬಾರಿ ಜಿ-7 ಶೃಂಗಸಭೆಗಳಲ್ಲಿ ಭಾಗವಹಿಸಿದೆ. 2003ರಲ್ಲಿ ಮೊದಲ ಬಾರಿಗೆ ಶೃಂಗಸಭೆಯಲ್ಲಿ ಭಾಗವಹಿಸಿದ ನಂತರ ಭಾರತವು ನಿಯಮಿತವಾಗಿ ಹಲವಾರು ಜಿ-7 ಶೃಂಗಸಭೆಯಗಳಲ್ಲಿ ಭಾಗವಹಿಸಿದೆ. ಭಾರತವು ನಾಲ್ಕನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರವಾಗಿದ್ದು ತಂತ್ರಜ್ಞಾನ, ವ್ಯಾಪಾರ, ಹವಾಮಾನ ಮತ್ತು ಭದ್ರತೆಯಲ್ಲಿ ಬಲವಾದ ಪಾಲನ್ನು ಭಾರತ ಹೊಂದಿದೆ.

ತೊಗರಿ ನಾಡಿನ ರಾಜಕೀಯ ನಾಯಕರ ಪ್ರತಿಷ್ಠೆ | ಕಲಬುರಗಿಗೆ ಬೇಕು ರೈಲ್ವೆ ವಿಭಾಗೀಯ ಕೇಂದ್ರ ಈಡೇರುತ್ತಿಲ್ಲ ಈ ಭಾಗದ ಜನರ ದಶಕಗಳ ಬೇಡಿಕೆ | ಕೇಂದ್ರ ಬಿಜೆಪಿ ಸರಕಾರದ ಅಲಕ್ಷ್ಯಕ್ಕೆ ಜನಾಕ್ರೋಶ

ರೈಲ್ವೆ ಡಿವಿಜನ್‌ಗಾಗಿ ಫೈಟ್ ಕ್ರೆಡಿಟ್ ಪಾಲಿಟಿಕ್ಸ್ ವಾರ್

ಜಿಲ್ಲಾ ನೋಟ

ದೇವೇಂದ್ರ ಜಾಡಿ ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನವೆಂದರೆ ಕಲಬುರಗಿ. ಇಲ್ಲೊಂದು ರೈಲ್ವೆ ಡಿವಿಜನ್ ಆಗಬೇಕು ಎನ್ನುವುದು ದಶಕಗಳ ಬೇಡಿಕೆ. ಆದರೆ ಇಲ್ಲಿ ವಿಭಾಗೀಯ ರೈಲ್ವೆ ಕೇಂದ್ರ, ಕಚೇರಿ ಸ್ಥಾಪನೆ ಮಾಡುವ ವಿಚಾರ ರಾಜಕೀಯ ನಾಯಕರ ಕ್ರೆಡಿಟ್ ಪೊಲಿಟಿಕ್ಸ್ ನಿಂದಾಗಿ ಈ ಭಾಗದ ಜನರ ಬಹುದಿನದ ಬೇಡಿಕೆ ನೆನೆಗುದಿಗೆ ಬಿದ್ದಿದೆ. 1984ರಲ್ಲಿ ನ್ಯಾ.ಸರಿನ್ ಸಮಿತಿ ಕೇಂದ್ರಕ್ಕೆ ಶಿಫಾರಸು ಮಾಡಿದಾಗಿನಿಂದ ಈ ಬೇಡಿಕೆಯಿದ್ದರೂ ಸರಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದುಕಾಣುತ್ತಿದೆ. ಅಂದಿನ ಯುಪಿಎ-2 ಸರಕಾರದಲ್ಲಿ ರೈಲ್ವೆ ಸಚಿವರಾಗಿದ್ದ ಡಾ. ಮಲ್ಲಿಕಾರ್ಜುನ ಖರ್ಗೆ ಅವರು 2013ರಲ್ಲಿ ಕಲಬುರಗಿ ರೈಲ್ವೆ ವಿಭಾಗೀಯ ಕೇಂದ್ರಕ್ಕೆ ಮಂಜೂರು, ಮಾಡಿ, 2014ರಲ್ಲಿ ಶಂಕು ಸ್ಥಾಪನೆ ಸಹ ನೆರವೇರಿಸಿದರು. ಬಳಿಕ ಬಂದ ಎನ್.ಡಿ.ಎ ಸರಕಾರ ಕಲಬುರಗಿ ರೈಲ್ವೆ ವಿಭಾಗೀಯ ಕಚೇರಿ ಸ್ಥಾಪನೆಗೆ ಮಾತ್ರ ಮನಸ್ಸು ಮಾಡುತ್ತಿಲ್ಲ.

ಅನುಮತಿಗೆ ದಶಕ:

ಅನುಮತಿ ದೊರೆತು ದಶಕವೇ ಗತಿಸಿದೆ. ಆದರೆ ಈ ಕೆಲಸಕ್ಕೆ ಕೇಂದ್ರ ಸರಕಾರ ಕೈಹಾಕದೆ ಇರುವುದು ನೋಡಿದರೆ, ಈ ಭಾಗದ ಬಹುದೊಡ್ಡ ಕೆಲಸವೊಂದನ್ನು ಮಕಾಡೇ ಮಲಗಿಸುವ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಕಲಬುರಗಿಯಲ್ಲಿ ರೈಲ್ವೆ ಡಿವಿಷನ್ ಆಗಬೇಕು ಎಂಬುದು 40 ವರ್ಷಗಳಿಂದ ಬೇಡಿಕೆಯಾಗಿದೆ. 1984ರಲ್ಲಿ ನ್ಯಾ. ಸರಿನ್ ಸಮಿತಿ ಕೇಂದ್ರಕ್ಕೆ ಶಿಫಾರಸು ಮಾಡಿದಾಗಿನಿಂದ ಈ ಬೇಡಿಕೆಯಿದ್ದು, ನಂತರ 2014ರಲ್ಲಿ ಕೇಂದ್ರ ರೈಲ್ವೆ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಮಂಜೂರು ಮಾಡಿದ್ದರು. 2017ರಲ್ಲಿ ಕೇಂದ್ರ ಸರಕಾರ ಕರ್ನಾಟಕದ ಕಲಬುರಗಿ, ಜಮ್ಮು ಕಾಶ್ಮೀರ ಹಾಗೂ ಅಸ್ಸಾಂನ ಸಿಲ್ಚರ್ ರೈಲ್ವೆ ವಿಭಾಗೀಯ ಕೇಂದ್ರಗಳ ಆರಂಭಕ್ಕೆ ಆಡಳಿತಾತ್ಮಕ ಒಪ್ಪಿಗೆ ಪಡೆಯಲಾಗಿತ್ತು. ಆದರೆ, ನಂತರ ಎಜಿ ಕಮಿಟಿ ಸಿಲ್ಚರ್ ಬೇಡಿಕೆ ಕೈಬಿಟ್ಟಿದ್ದು ಬಿಟ್ಟರೆ ಜಮ್ಮು, ಕಲಬುರಗಿ ಡಿವಿಷನ್ ಮುಂದುವರಿಸಿದ್ದವು.

ರೈಲ್ವೆ ಡಿವಿಷನ್ ಕತೆ ಸಾಗಿ ಬಂದ ದಾರಿ..

- ನ್ಯಾ.ಎಚ್.ಸಿ ಸರೀನ್ ಸಮಿತಿ ಶಿಫಾರಸು: 1984
- ಬಜೆಟ್‌ನಲ್ಲಿ ಘೋಷಣೆ: ಡಿಸೆಂಬರ್ 2013
- ಕಟ್ಟಡಕ್ಕಾಗಿ ಕರೆದ ಟೆಂಡರ್ ಮೊತ್ತ : 3.5ಕೋಟಿ
- ರೈಲ್ವೆ ಡಿವಿಷನ್ ಗೆ ಶಂಕುಸ್ಥಾಪನೆ: ಫೆ. 28, 2014
- ಯೋಜನೆಗಾಗಿ ನೀಡಿದ ಒಟ್ಟು ಜಾಗ: 42 ಎಕರೆ
- ನಿಯೋಜಿತ ವಿಶೇಷ ಅಧಿಕಾರಿ: ಎಂ ಆರ್ ಎನ್ ರೆಡ್ಡಿ
- ಟೆಂಡರ್ ರದ್ದುಪಡಿಸಿದ ದಿನ: 2014 (ಮಾ. 13)
- ಡಿಪಿಆರ್‌ಗಾಗಿ ತೆಗೆದಿಟ್ಟ ಹಣಕಾಸು : 76 ಕೋಟಿ

ರಾಜಕೀಯ ಕ್ರೆಡಿಟ್ ವಾರ್ :

ಆದರೆ, ಕೇಂದ್ರ ಸರಕಾರ ಪ್ರತಿ ವರ್ಷ ಹಣ ಮೀಸಲಿಟ್ಟು ನಿರ್ಲಕ್ಷ್ಯ ಧೋರಣೆ ಮುಂದುವರಿಸುತ್ತಿದೆ. ಜಮ್ಮು ಕಾಶ್ಮೀರ ಕಾರ್ಯ ಪೂರ್ಣಗೊಳಿಸಿ, ಕಲಬುರಗಿ ರೈಲ್ವೆ ಡಿವಿಷನ್‌ಗೆ ಮಾತ್ರ ನಿರ್ಲಕ್ಷ್ಯ ಏಕೆ? ಇದನ್ನು ಗಮನಿಸಿದರೆ ರಾಜಕೀಯ ಪಕ್ಷಗಳ ಕ್ರೆಡಿಟ್ ವಾರ್ ನಿಂದಾಗಿ ಕಲ್ಯಾಣ ಜನರ ಬಹುದಿನಗಳ ಬೇಡಿಕೆಗೆ ಕೇಂದ್ರ ಸರಕಾರ ತಿಲಾಂಜಲಿ ಇಡಲು ಹೊರಟಂತಿದೆ.

ಕನ್ನಡಿಗ ರೈಲ್ವೇ ಸಚಿವ :

ಕಳೆದ ವಾರ ರೇಲ್ವೆ ಖಾತೆ ರಾಜ್ಯ ಸಚಿವರಾದ ಬಳಿಕ ಇದೇ ಮೊದಲ ಬಾರಿಗೆ ಕಲಬುರಗಿಗೆ ಆಗಮಿಸಿದ ವಿ. ಸೋಮಣ್ಣ, ಕಲಬುರಗಿಗೆ ರೈಲ್ವೆ ವಿಭಾಗೀಯ ಕೇಂದ್ರ ಕಚೇರಿ ನೀಡುವುದು ಕಷ್ಟದ ಸಂಗತಿ, ನಮಗೂ ಇಲ್ಲಿ ವಿಭಾಗೀಯ ಕಚೇರಿ ಆಗಬೇಕು ಎನ್ನುವ ಆಸೆಯಿದೆ. ಆದರೆ, ಅದು ಅಷ್ಟು ಸುಲಭದ ಮಾತಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಚಿಂತನೆ ನಡೆಸಲಾಗುವುದು. ಈಗಾಗಲೇ, ಕಲಬುರಗಿಯಿಂದ ಬೆಂಗಳೂರಿಗೆ ನೇರ ರೈಲಿನ ಬೇಡಿಕೆ ಬಗ್ಗೆ, ವಂದೇ ಭಾರತ್ ರೈಲಿನ ವಿಚಾರ, ಕಲಬುರಗಿ ರೇಲ್ವೆ ವಿಭಾಗೀಯ ಕಚೇರಿ ಕಾಮಗಾರಿ ಹೀಗೆ ಹಲವಾರು ವಿಷಯಗಳ ಬೇಡಿಕೆಗಳಿವೆ. ಎಲ್ಲವನ್ನು ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಈ ಭಾಗದ ಜನರ ಬೇಡಿಕೆಗಳ ಬಗ್ಗೆ ಕೇವಲ ಭರವಸೆ ನೀಡಿದ್ದು ಬಿಟ್ಟರೇ, ಪ್ರಬಲ ಇಚ್ಛಾ ಶಕ್ತಿ ಅವರ ಮಾತಿನಲ್ಲಿ ಕಾಣಲಿಲ್ಲ.

ಕೇಂದ್ರ ಸರಕಾರದ ಅಲಕ್ಷ್ಯ :

ಹೀಗಾಗಿ, ಕಲಬುರಗಿಯಲ್ಲಿ ರೈಲ್ವೆ ವಿಭಾಗೀಯ ಕೇಂದ್ರ ಸ್ಥಾಪನೆಯು ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಪ್ರಮುಖವಾಗಿದೆ. ಇದು ಸಂಪರ್ಕ ಸುಧಾರಿಸುವುದರ ಜತೆಗೆ ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುತ್ತದೆ. ಆದಾಗ್ಯೂ, ರಾಜಕೀಯ ಮತ್ತು ತಾಂತ್ರಿಕ ಕಾರಣಗಳಿಂದ ಈ ಯೋಜನೆ ಇನ್ನೂ ನೆರವೇರಿಲ್ಲ. ಕಳೆದ ನಾಲ್ಕು ದಶಕಗಳಿಂದ ಇಲ್ಲಿನ ಜನರ ಬೇಡಿಕೆಗೆ ಕೇಂದ್ರ ಸರಕಾರ ಲಕ್ಷ್ಯ ಕೊಡುತ್ತಿಲ್ಲ. ನಾಯಕರಾದವರು ಕ್ರೆಡಿಟ್ ಪೊಲಿಟಿಕ್ಸ್ ಬಿಟ್ಟು, ಜಿಲ್ಲೆಯ ಜನರ ಬದುಕಿಗೆ ಸ್ಪಂದಿಸಬೇಕಾಗಿದೆ.

ಕೋಟ್ಯಂತರ ಆದಾಯ:

ರೈಲ್ವೆ ಇಲಾಖೆಗೆ 2023-24ನೇ ಸಾಲಿನಲ್ಲಿ ಜಿಲ್ಲೆಯೊಂದರಿಂದಲೇ ಬರೋಬ್ಬರಿ 1,082 ಕೋಟಿ ರು. ಗಳಿಗೂ ಹೆಚ್ಚು ಆದಾಯ ಪಡೆಯುತ್ತಿದೆ. ಗರಿಷ್ಠ ಆದಾಯ ಬಂದರೂ ರೈಲ್ವೆ ವಿಭಾಗೀಯ ಕೇಂದ್ರ ಆರಂಭಿಸದೇ ಇರುವ ಬಗ್ಗೆ ವ್ಯಾಪಕ ಜನಾಕ್ರೋಶಕ್ಕೆ ಕಾರಣವಾಗಿದೆ. ಪ್ರಯಾಣಿಕರು, ಗೂಡ್ಸ್, ಕಾರ್ಖಾನೆಗಳಿಂದ ಭರ್ಜರಿ ಆದಾಯವನ್ನು ರೈಲ್ವೆ ಇಲಾಖೆ ಪಡೆಯುತ್ತಿದೆ. ರೈಲ್ವೆ ಇಲಾಖೆ ಅಂಕಿ ಅಂಶಗಳ ಪ್ರಕಾರ, ಜಿಲ್ಲೆಯಿಂದ ಪ್ರಯಾಣಿಸಿದ ಪ್ರಯಾಣಿಕರಿಂದಲೇ ಒಂದು ವರ್ಷಕ್ಕೆ 143.3 ಕೋಟಿ ರು. ಆದಾಯ ಪಡೆದಿದೆ. ಕಲಬುರಗಿ 108.1 ಕೋಟಿ, ವಾಡಿ 12 ಕೋಟಿ, ತಾಜಸುಲ್ತಾನಪುರ 0.6 ಕೋಟಿ, ಶಹಾಬಾದ್ 3.9 ಕೋಟಿ, ಚಿತ್ತಾಪುರ 4.8, ಸೇಡಂ 12.9 ಕೋಟಿ ಸೇರಿ ಒಟ್ಟು 143.3 ಕೋಟಿ ರೂ. ಜಿಲ್ಲೆ ಪ್ರಯಾಣಿಕರಿಂದಲೇ ಆದಾಯ ಪಡೆಯುತ್ತಿದೆ. ಆದರೆ, ರೈಲ್ವೆ ಇಲಾಖೆಗೆ ವಿಭಾಗೀಯ ಸ್ಥಾನಮಾನ ನೀಡಲು ರಾಜಕೀಯ ಇಚ್ಛಾಶಕ್ತಿ ಕೊರತೆಯಿದೆ. ಜಿಲ್ಲೆಯು ಎಲ್ಲ ಮೂಲಗಳಿಂದ ವಿಭಾಗೀಯ ಕೇಂದ್ರಕ್ಕೆ ಎಲ್ಲ ಅರ್ಹತೆಯಿದ್ದರೂ ಪಕ್ಷಗಳ ಪ್ರತಿಷ್ಠೆಯ ಹಗ್ಗಜಗ್ಗಾಟದಿಂದ ವಂಚಿತಗೊಳ್ಳುತ್ತಿದೆ.

ಮತ್ತಷ್ಟು ಲಾಭ ಸಾಧ್ಯತೆ :

ಪ್ರಸ್ತುತ ಕಲಬುರಗಿ ಜಿಲ್ಲೆಯು ಸೋಲಾಪುರ ವಿಭಾಗೀಯ ಕೇಂದ್ರ ಹಾಗೂ ಸಿಕ್ಕಂದರಾಬಾದ್ ವಿಭಾಗೀಯ ಕೇಂದ್ರಕ್ಕೆ ಹಂಚಿ ಹೋಗಿದೆ. ಸೋಲಾಪುರ ವಿಭಾಗವೊಂದೇ 1000 ಕೋಟಿ ರು. ಒಳಗೆ ಆದಾಯ ಗಳಿಸುತ್ತಿದೆ. ಆದರೆ, ಕಲಬುರಗಿ ಜಿಲ್ಲೆಯೊಂದೇ ಸಾವಿರ ಕೋಟಿ ರು. ಆದಾಯದ ಗಡಿ ದಾಟಿದೆ. ಇನ್ನು ಕಲಬುರಗಿ ವಿಭಾಗೀಯ ಕೇಂದ್ರ ಘೋಷಣೆಯಾದರೆ ಯಾದಗಿರಿ, ರಾಯಚೂರು, ಬೀದರ್, ಬಾಗಲಕೋಟೆ, ವಿಜಯಪುರ ರೈಲ್ವೆ ನಿಲ್ದಾಣಗಳೂ ಸೇರುವುದರಿಂದ ಇನ್ನೂ ಹೆಚ್ಚಿನ ಆದಾಯ ಗಳಿಸಲಿದೆ.

ನಡೆದಿದೆ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸಿದ್ಧತೆ | ಎಚ್.ಬಿ.ಹಳ್ಳಿ ತಾಲೂಕಿನಲ್ಲಿ ಭೂಮಿ ನಿಗದಿ ಬಂಗಾರು ಶುಗರ್ಸ್ ಕಂಪನಿಯಿಂದ ತಯಾರಿ | ಜಿಲ್ಲೆಯ ಕಬ್ಬು ಬೆಳೆಗಾರರಲ್ಲಿ ಹೆಚ್ಚಿದ ಸಂತಸ

ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆ ಹೊಸಪೇಟೆ ಜಿಲ್ಲೆ ಮಟ್ಟಿಗೆ ಸಾಧನೆ

ಜಿಲ್ಲಾ ನೋಟ

ಅನಂತ ಪದ್ಮನಾಭರಾವ್, ಹೊಸಪೇಟೆ

ವಿಜಯನಗರ (ಹೊಸಪೇಟೆ) ಜಿಲ್ಲೆಯ ಮಟ್ಟಿಗೆ ಭೌಗೋಳಿಕವಾಗಿ ಮಧ್ಯ ಪ್ರದೇಶದಂತಿದೆ ಹಗರಿಬೊಮ್ಮನಹಳ್ಳಿ. ಈ ತಾಲೂಕಿನ ಕೆಚ್ಚಿನಬಂಡಿ ಬಳಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವುದಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಇದರಿಂದಾಗಿ ಜಿಲ್ಲೆಯ ಪಶ್ಚಿಮ ತಾಲೂಕುಗಳ ರೈತರಲ್ಲಿ, ಕಬ್ಬು ಬೆಳೆಗಾರರಲ್ಲಿ ಸಂತಸ ಮನೆ ಮಾಡಿದೆ.

ಎಷ್ಟು ಕಬ್ಬಿನ ಪ್ರದೇಶ :

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 1249.64 ಹೆಕ್ಟೇರ್ ಪ್ರದೇಶ ಕಬ್ಬು ಬೆಳೆಯಲಾಗುತ್ತಿದೆ. ಕೊಳವೆಬಾವಿ ಅವಲಂಬಿತ ಕೃಷಿಯಲ್ಲಿ ಕಬ್ಬು ಬೆಳೆಯುತ್ತಿದ್ದು, ನೀರಿನ ಲಭ್ಯತೆ ಮೇಲೆ ಬೆಳೆ ವಿಸ್ತೀರ್ಣದಲ್ಲಿ ವ್ಯತ್ಯಾಸವಾಗುತ್ತದೆ. ಕಾರ್ಖಾನೆ ನಿರ್ಮಾಣ ಉದ್ದೇಶಿತ ಪ್ರದೇಶ ಹಂಪಸಾಗರ ಮತ್ತು ತಂಬ್ರಹಳ್ಳಿ ಹೋಬಳಿಗಳಿಂದ 20 ಕಿ.ಮೀ. ಅಂತರದಲ್ಲಿದೆ. ಇದುವರೆಗೂ ತಾಲೂಕಿನ ರೈತರು ದುಗ್ಗಾವತಿ, ಮೈಲಾರ ಮತ್ತು ಮುಂಡರಗಿ ಬಳಿ ಇರುವ ಕಾರ್ಖಾನೆಯನ್ನು ಅವಲಂಬಿಸಿದ್ದು, ಸಾಗಣೆ ವೆಚ್ಚ ಹೊರೆಯಾಗಿತ್ತು. ಕಾರ್ಖಾನೆ ಸ್ಥಾಪನೆಯಾದಲ್ಲಿ ಪಶ್ಚಿಮ ತಾಲೂಕುಗಳ ರೈತರಿಗೆ ಅನುಕೂಲವಾಗಲಿದೆ.

ಸಕ್ಕರೆ ಕಾರ್ಖಾನೆ ಏಳು ಬೀಳು:

ಈ ಹಿಂದೆ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಒಂದು ಖಾಸಗಿ ಸಕ್ಕರೆ ಕಾರ್ಖಾನೆ ಇತ್ತು. ಅದು ಪೂರ್ತಿ ಬಂದ್ ಆಗಿ ಸುಮಾರು ಇಪ್ಪತ್ತೈದು ವರ್ಷಗಳೇ ಆಗಿ ಹೋಗಿವೆ. ಅದಾಗ ಹೊಸಪೇಟೆಯಲ್ಲಿದ್ದ ಒಂದು ಖಾಸಗಿ ಸಕ್ಕರೆ ಕಾರ್ಖಾನೆ ಕೂಡ ಏಳೆಂಟು ವರ್ಷಗಳ ಹಿಂದೆಯೇ ಮುಚ್ಚಿ ಹೋಗಿದೆ. ಬಹುತೇಕ ಆರ್ಥಿಕ ಲಾಭ ನಷ್ಟಗಳ ಲೆಕ್ಕಾಚಾರದ ಕಾರಣಗಳಿಗೆ ಇವೆರಡೂ ಕಾರ್ಖಾನೆ ಬಂದ್ ಆಗಿ

ಇತಿಹಾಸದ ಪುಟ ಸೇರಿವೆ. ಇನ್ನು ಜಿಲ್ಲೆಯ ಹರಪನಹಳ್ಳಿ ತಾಲೂಕಿನ ದುಗ್ಗಾವತಿ ಬಳಿಯ ಸಕ್ಕರೆ ಕಾರ್ಖಾನೆ ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದೀಗ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ತಲೆ ಎತ್ತುವ ಹೊಸ ಸಕ್ಕರೆ ಕಾರ್ಖಾನೆ ಈ ಭಾಗದ ರೈತರಿಗೆ, ಕೂಲಿ ಕಾರ್ಮಿಕರಿಗೆ ಹೊಸ ಭರವಸೆಯ ಆಶಾಕಿರಣವಾಗುವ ಸಾಧ್ಯತೆಗಳಿವೆ.

ಅಗತ್ಯ ಭೂಮಿ ಖರೀದಿ:

ಕರ್ನಾಟಕ ಬಂಗಾರು ಶುಗರ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಕಾರ್ಖಾನೆ ನಿರ್ಮಾಣಕ್ಕೆ ಅಗತ್ಯವಾದ ಭೂಮಿ ಖರೀದಿಸಿದೆ. ಈ ಕುರಿತಂತೆ ಸರಕಾರಕ್ಕೆ ಫೆ.22 ಮತ್ತು ಮೇ 20, 2024 ರಂದು ಪ್ರಸ್ತಾವ ಸಲ್ಲಿಸಲಾಗಿದೆ. ಈಗಾಗಲೇ ತಾಲೂಕಿನ ತಹಸೀಲ್ದಾರ್ ಹಾಗೂ ಪಿಡಬ್ಲ್ಯುಡಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜಂಟಿಯಾಗಿ ಸರ್ವೇ ಮಾಡಿ ಸ್ಥಳ ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಿದ್ದಾರೆ. ಈ ಕುರಿತು ಸರ್ವೇ ಆಫ್ ಇಂಡಿಯಾದ ನಿರ್ದೇಶಕರು ನೀಡಿರುವ ವರದಿಯನ್ನಾಧರಿಸಿ ಅಂತರ ಪ್ರಮಾಣ ಪತ್ರ ನೀಡಲು ಹಾಗೂ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುವಂತೆ ಕೋರಿ ಆಯಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಗೆ 2025ರ ಮೆ 21ರಂದು ಪತ್ರ ಬರೆದಿದ್ದಾರೆ.

ಮೂರು ಕಡೆ ಸಂಪರ್ಕ ರಸ್ತೆ :

ಕಾರ್ಖಾನೆಯ ಸಂಪರ್ಕಕ್ಕೆ ಅಗತ್ಯವಾದ ಮೂರು ರಸ್ತೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಹೊಸಪೇಟೆ- ಶಿವಮೊಗ್ಗ ಹೆದ್ದಾರಿ, ಆನೇಕಲ್ಲು-ಹಂಪಾಪಟ್ಟಣ, ಕೆಚ್ಚಿನಬಂಡಿ-ಹಲಗಾಪುರ ರಸ್ತೆಗಳು ಸಂಪರ್ಕ ಕಲ್ಪಿಸುತ್ತವೆ. ಕಾರ್ಖಾನೆ ಉದ್ದೇಶಿತ ಸ್ಥಳದ ಜಮೀನುಗಳ ಅಕ್ಕ ಪಕ್ಕದಲ್ಲಿಯೇ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿವೆ. ಬದುಕು ಕಟ್ಟಿಕೊಳ್ಳಲು ಈ ಜಮೀನುಗಳೇ ಆಸರೆಯಾಗಿದ್ದು, ಯಾವುದೇ ಕಾರಣಕ್ಕೂ ಭೂಮಿ ಸ್ವಾಧೀನ ಪಡಿಸಿಕೊಳ್ಳಬಾರದು ಎಂದು ಪರಿಶಿಷ್ಟ ಜಾತಿಯ ರೈತರ ಒತ್ತಾಯವೂ ಇದೆ. ಆದರೆ ಕಾರ್ಖಾನೆ ಸ್ಥಾಪನೆಗೆ ಅನುಮತಿಗಾಗಿ ಆಡಳಿತಾತ್ಮಕ ಚಟುವಟಿಕೆ ವೇಗ ಪಡೆದುಕೊಂಡಿವೆ.



ಜಿಲ್ಲೆಯಲ್ಲಿ ಇನ್ನೂ ಹತ್ತು ಸಕ್ಕರೆ ಕಾರ್ಖಾನೆ ಬಂದರೂ ಸ್ವಾಗತಿಸುವೆ. ರೈತರಿಗೆ ಅನುಕೂಲವಾಗುವುದಾದರೇ ಕಾರ್ಖಾನೆ ಸ್ಥಾಪನೆ ಮಾಡುವುದರಲ್ಲಿ ಏನು ಸಮಸ್ಯೆ ಇಲ್ಲ. ನಮ್ಮ ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈತರ ಸಲುವಾಗಿ ಈ ಹಿಂದೆ ಹೇಳಿದಂತೆ ಸಕ್ಕರೆ ಕಾರ್ಖಾನೆ ತೆರೆಯಲಾಗುವುದು.

-ಎಚ್.ಆರ್. ಗವಿಯಪ್ಪ ಶಾಸಕರು, ವಿಜಯನಗರ ಕ್ಷೇತ್ರ.

ಸಕ್ಕರೆ ಕಾರ್ಖಾನೆ ಸ್ಥಾಪನೆಯಿಂದ ರೈತರಿಗೆ ಒಳ್ಳೆಯದು ಆಗಲಿದೆ. ಇದರಿಂದ ಉದ್ಯೋಗ ಸೃಷ್ಟಿಯಾಗಲಿದೆ. ಒಂದೇ ಜಿಲ್ಲೆಯಲ್ಲಿ ಕಾರ್ಖಾನೆ ಸ್ಥಾಪಿಸಬಾರದು ಎಂಬುದೇನಿಲ್ಲ. ಇದರಿಂದ ರೈತರ ಸಂಕಷ್ಟವೂ ನೀಗುವ ವಿಶ್ವಾಸವಿದೆ. ಈ ಬಗ್ಗೆ ಕೆಲವೇ ದಿನಗಳಲ್ಲಿ ಎಲ್ಲಾ ಅಧಿಕೃತ ಮಾಹಿತಿ ಹಂಚಿಕೊಳ್ಳುವೆ.

-ರಾಣಿ ಸಂಯುಕ್ತಾ, ಕಾಂಗ್ರೆಸ್ ನಾಯಕಿ, ಹೊಸಪೇಟೆ

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
10-06-2025 ಮಂಗಳವಾರ

ಚಿತ್ತವಿಹಾರ

ಮಾತು ಮಧುರವಾಗಿರಲಿ

● ಮಹಾದೇವ ಬಸರಕೋಡ

ನಮ್ಮ ಮಾತುಗಳು ನಮ್ಮ ವ್ಯಕ್ತಿತ್ವದ ಪ್ರತಿರೂಪ. ಮಾತುಗಳಿಗೆ ತನ್ನದೇ ಆದ ಘನತೆಯಿದೆ. ಅದು ಬಹು ಶಕ್ತಿಶಾಲಿ ಸಾಧನ ಕೂಡ. ಇಂತದೊಂದು ಅರಿವಿನ ನಡುವೆಯೂ ನಾವು ವಿವೇಚನಾರಹಿತವಾಗಿ ಮಾತನಾಡಿ ಬಿಡುತ್ತೇವೆ. ಅವಸರದ ಮಾತಿನಿಂದ ಅವಘಡಗಳನ್ನು ತಂದುಕೊಳ್ಳುತ್ತೇವೆ. ಆಚಾರವಿಲ್ಲದ ನಮ್ಮ ನಾಲಿಗೆ ಬದುಕನ್ನು ಬರುಡಾಗಿಸುತ್ತದೆ. ಕೋಪ ತಾಪ ದ್ವೇಷ ಸಂಘರ್ಷಗಳಿಗೆ ನಮ್ಮ ಮಾತುಗಳು ಕಾರಣವಾಗುತ್ತವೆ. ಸಂಬಂಧಗಳನ್ನು ಸಡಿಲಗೊಳಿಸುತ್ತವೆ. ಮಹಾಭಾರತದಲ್ಲಿ ದ್ರೌಪದಿಯು ದುರ್ಯೋಧನನ ಕುರಿತಾಗಿ ಆಡಿದ ಒಂದು ಕೊಂಕು ಮಾತು ಅದೇಷ್ಟು ರಾದ್ಧಾಂತಕ್ಕೆ ಕಾರಣವಾಯಿತು ಎಂಬುದು ನಮಗೆಲ್ಲ ತಿಳಿದ ಸಂಗತಿ. 'ಎಲವೋ' ಎನ್ನುವ ಮಾತು ನಮ್ಮ ಬದುಕನೆಲ್ಲ ನರಕವಾಗಿಸಲು ಮುನ್ನುಡಿ ಬರೆಯಬಲ್ಲದು. ಮಾತುಗಳು ದಾರಿ ತಪ್ಪಿಸುವ ಮತ್ತು ಕಾಲಹರಣ ಕಾರಣವಾಗದಿರುವಂತೆ ಮುನ್ನೆಚ್ಚರಿಕೆ ವಹಿಸದಿದ್ದರೆ ಮಾತುಗಳು ನಮ್ಮ ವಿನಾಶಕ್ಕೆ ಕೂಡ ಕಾರಣವಾಗಬಲ್ಲದು.

ಬುದ್ಧನ ಅಂತಿಮ ದಿನದ ಭೋಜನದ ಕಥೆ ನಮಗೆ ಅಪರಿಚಿತವೇನಲ್ಲ. ಬುದ್ಧ ಅಂದು ಅಪರಿಚಿತ ಕಡುಬಡವನ ಭೋಜನಕ್ಕಾಗಿ ಹೋಗಿದ್ದರು. ಆ ದಿನದ ಮೊದಲ ಭೋಜನ ತನ್ನ ಮನೆಯದೇ ಆಗಿರಬೇಕೆಂಬ ಅವನ ಬಹುದಿನದ ಕೋರಿಕೆಯನ್ನು ಮನ್ನಿಸಿ ನುಸಕಿ ನಲ್ಲಿಯೇ ಅವನ ಮನೆ ತಲುಪಿದ್ದರು. ಇದು ಅಪರಿಚಿತನಿಗೆ ತೀರ ಆಶ್ಚರ್ಯ ಮತ್ತು ಆನಂದ ವನ್ನುಂಟು ಮಾಡಿತ್ತು. ತೀರ ಗಡಿಬಿಡಿಯಲ್ಲಿ ಆಹಾರವನ್ನು ತಯಾರಿಸಿ ಪ್ರೀತಿಯಿಂದಲೇ ಬಡಿಸಿದ. ಬುದ್ಧ ಸಂತಸದಿಂದಲೇ ಸ್ವೀಕರಿಸಿದರು. ಅದು ಒಂದಷ್ಟು ವಿಷಕಾರಿಯಾಗಿತ್ತು ಎಂಬ ಅರಿವಿನ ನಡುವೆಯೂ ಬುದ್ಧ ಅದನ್ನು ತೋರ್ಪಡಿಸದೇ ಆಹಾರ ಸೇವನೆಯನ್ನು ಪೂರೈಸಿದರು.

ಸ್ವಲ್ಪ ಸಮಯದ ನಂತರ ಬುದ್ಧನ ಆರೋಗ್ಯದ ಸ್ಥಿತಿ ಏರುಪೇರಾಗತೊಡಗಿತು. ಶಿಷ್ಯರು ಗಾಬರಿಗೊಂಡರು. ಅಪರಿಚಿತ ವ್ಯಕ್ತಿ ಕೂಡ ತನ್ನಿಂದ ಪ್ರಮಾದವಾಯಿತೆಂದು ಕೊರಗತೊಡಗಿದ. ಬುದ್ಧನ ಸಾವು ಸನ್ನಿತವಾದಂತೆ ತೋರಿತು. ಬುದ್ಧ ಅಪರಿಚಿತ ವ್ಯಕ್ತಿಯನ್ನು ಕರೆದು ನೀನು ಯಾವುದೇ ಕಾರಣಕ್ಕೂ ದುಃಖಿಸದಿರು. ವಾಸ್ತವದಲ್ಲಿ ನೀನು ಸಂತಸ ಪಡಬೇಕು ಎಂದರು. ಅಲ್ಲಿದ್ದ ಎಲ್ಲರಿಗೂ ಬುದ್ಧನ ಮಾತು ಆಶ್ಚರ್ಯವನ್ನುಂಟು ಮಾಡಿತ್ತು. ಅಪರಿಚಿತನ ಮೇಲೆ ಎಲ್ಲರೂ ಹರಿಹಾಯ್ದರು. ಬುದ್ಧ ಮಂದಸ್ಮಿತನಾಗಿ ಅಪರಿಚಿ ವ್ಯಕ್ತಿಯ ಕುರಿತಾಗಿ ಎಲ್ಲರೂ ಅಭಿಮಾನ ಪಡಬೇಕು. ಬುದ್ಧನಿಗೆ ಮೊದಲ ತುತ್ತನ್ನು ತಿನ್ನಿಸಿದ್ದ ತಾಯಿ ಯಾದರೆ ಕೊನೆಯ ಊಟ ನೀಡಿದ ಸೌಭ್ಯಾಗ್ಯ ಅವನದು. ಅದು ಎಲ್ಲರಿಗೂ ಸಿಗುವಂತದ್ದಲ್ಲ. ಅಲ್ಲಿದ್ದ ಎಲ್ಲರಿಗೂ ಬುದ್ಧರ ಮಾತು ಕೇಳಿ ಅವನ ಮೇಲಿದ್ದ ಕೋಪವೆಲ್ಲ ಕರಗಿ ಅವನ ಕುರಿತಾಗಿ ಗೌರವಭಾವನೆ ಉಂಟಾಯಿತು. ಅಪರಿಚಿತನೂ ಕೂಡ ತನ್ನ ತಪ್ಪಿಸ್ಥ ಭಾವದಿಂದ ಹೊರಬಂದು ಸಮಾಧಾನ ಪಡುವಂತಾಯಿತು.

ನಮ್ಮ ಮಾತುಗಳು ನಮ್ಮ ಮಾತುಗಳು ಇತರರಿಗೆ ಸಂತೋಷವನ್ನು, ಸಮಾಧಾನವನ್ನು ತರಬೇಕು. ಯಾರ ಮನಸ್ಸನ್ನು ನೋಯಿಸದಂತಿರಬೇಕು. ಮಾತುಗಳು ಕಠೋರವಾಗಿರದೆ, ಮಧುರವಾಗಿರಬೇಕು. ನಮ್ಮ ಮಾತುಗಳಿಗೆ ಆಚಾರದ ಲೇಪನವಿರಬೇಕು. ವಿವೇಚನೆಯ ಮೂಸೆಯಲ್ಲಿ ಪುಟಕ್ಕಕ್ಕಿ ಪರಿಶುದ್ಧಗೊಳಸಿದ ಚಿನ್ನದಂತಿರಬೇಕು. ಮಾತುಗಳು ಜಗತ್ತನ್ನು ಮಧುರಗೊಳಿಸಬೇಕು. ಸಕಲರ ಲೇಸನ್ನು ಬಯಸುವ ತುಡಿತ ಹೊಂದಿರಬೇಕು. ಖಲೀಲ್ ಗಿಬ್ರಾನ್ ಅವರ ಮಾತಿನಂತೆ ಯಾವಾಗ ನೀವು ಹೃದಯದ ಏಕಾಂತದಲ್ಲಿ ನೆಲೆ ನಿಲ್ಲಲಾಗುವುದಿಲ್ಲವೋ ಆಗ ನಾವು ನೀವು ನಿಮ್ಮ ತುಟಿಗಳ ಮೇಲೆ ವಾಸ ಮಾಡಲು ಆರಂಭ ಮಾಡುತ್ತೀರಿ ಎಂಬುವದು ಗಮನೀಯವಾಗಿದೆ. ನಮ್ಮ ಮಾತುಗಳು ಹೃದಯಾಳದಿಂದ ಹೊಮ್ಮಬೇಕು. ಬಸವಣ್ಣ ಹೇಳಿದಂತೆ ಲಿಂಗ ಮೆಚ್ಚುವುದು ಮಾತ್ರವಲ್ಲದೇ ಅಹುದು ಅಹುದು ಎನ್ನುವಂತಿರಬೇಕು.

ಮನೆ ಕಟ್ಟಲು 3ಡಿ ಡಿಸೈನ್

● ಅಕ್ಷಿತ್ ದೇವಾಡಿಗ ಎಲ್ಲೂರು

ಜೀವನದಲ್ಲಿ ಸ್ವಂತ ಮನೆ ನಿರ್ಮಿಸಬೇಕು, ಅದರಲ್ಲಿ ತನ್ನ ಪುಟ್ಟ ಸಂಸಾರದೊಂದಿಗೆ ನಗುನಗುತಾ ಬಾಳಬೇಕು ಅನ್ನೋದು ಮನುಷ್ಯನ ಸಹಜ ಆಸೆ. ಆದರೆ ಗೃಹ ನಿರ್ಮಾಣ ಅನ್ನೋದು ಸುಲಭದ ಮಾತೇನು? ಅಡಿಪಾಯದಿಂದ ಹಿಡಿದು ಗೃಹಪ್ರವೇಶದ ತನಕ ಪ್ರತಿಯೊಂದು ಕೆಲಸಾನೂ ಶ್ರದ್ಧೆ-ಭಕ್ತಿಯಿಂದ ಮಾಡ್ಬೇಕಾಗುತ್ತೆ; ಪ್ರತೀ ಹಂತದಲ್ಲೂ ದುಡ್ಡಿನ ಕಂತೆ-ಕಂತೆ ಎಣಿಸಿ ಸುರಿಯಬೇಕಾಗುತ್ತೆ. ಇಷ್ಟೆಲ್ಲಾ ಖರ್ಚು ಮಾಡಿ ಕಟ್ಟಿದ ಮನೆ ಎಷ್ಟೋ ಸಲ ನಾವೆಣಿಸಿದಂತೆ ಬರಲಾರದು. ಹೊರಾಂಗಣ ವಿನ್ಯಾಸ ಸರಿಯಿಲ್ಲ, ಈ ಬಣ್ಣ ಚೆನ್ನಾಗಿಲ್ಲ, ಒಳಾಂಗಣ ವಿನ್ಯಾಸದಲ್ಲಿ ಏನೋ ಕೊರತೆಯಿದೆ ಅಂತೆಲ್ಲಾ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಪ್ರೀತಿಯಿಂದ ಕಟ್ಟಿದ ಮನೆ ಆತ್ಮತೃಪ್ತಿಯಿಲ್ಲದೆ ಭೂತಬಂಗಲೆಯಂತೆ ಕಾಣಬಹುದು.

ಅಂದಹಾಗೆ ಇಷ್ಟೊಂದು ಪರಿಶ್ರಮ ಪಟ್ಟು ಕಟ್ಟಿದ ಮನೆ ನಮ್ಮ

ಮನೆಯ ವಿನ್ಯಾಸವನ್ನು 3ಡಿ ತಂತ್ರಜ್ಞಾನದ ಮೂಲಕ ಮುಂಚಿತವಾಗಿ ಖಚಿತಪಡಿಸಿಕೊಂಡರೆ, ಮನಸ್ಸಿಗೂ ತೃಪ್ತಿ, ಖರ್ಚೂ ಕಡಿಮೆ.

ಎಣಿಕೆಯಂತೆ ರೂಪುಗೊಳ್ಳದಿರಲು ಮುಖ್ಯ ಕಾರಣ ಅದರ ವಿನ್ಯಾಸದ ಕೊರತೆ. ನಮಗೆ ರುಚಿಸಿದ ಯಾವುದಾದರೊಂದು ನಕ್ಷೆಯನ್ನು ಇಂಜಿನಿಯರ್‌ಗೆ ಆಯ್ದು ಕೊಟ್ಟರೆ ಮುಗಿಯಿತು ಎಂಜಿನಿಯರುಗಳು ಗೃಹ ನಿರ್ಮಾಣಕ್ಕೆ ಮುಂದಡಿಯಿಡುತ್ತಾರೆ. ಆದರೆ ಕಟ್ಟಡದ ಸ್ಪಷ್ಟ ಚಿತ್ರಣ ಸಿಗುವುದು ಅದು ಮುಕ್ತಾಯದ ಹಂತಕ್ಕೆ ಬಂದಾಗಲೇ. ಆಗ ನಾವು ಅದು ಸರಿ ಇಲ್ಲ, ಇದು ಹೀಗಾಗಬೇಕಿತ್ತು ಅಂತ ತಗಾದೆ ತೆಗೆಯೋ ಹಾಗಿಲ್ಲ. ಒಂದು ಪಕ್ಷ ಅಂತಿಮ ಘಟ್ಟದಲ್ಲಿ ಹೊರಾಂಗಣ ವಿನ್ಯಾಸ ಬದಲಿಸಿದಲ್ಲಿ ಕಟ್ಟಡವನ್ನು ಅಲ್ಲಲ್ಲಿ ಒಡೆಯಬೇಕಾದೀತು; ಇದರಿಂದ ಸಮಯ-ದುಡ್ಡು ಎಲ್ಲಾ ವ್ಯರ್ಥ, ಅಂತೆಯೇ ಕಟ್ಟಡದ ಗುಣಮಟ್ಟಕ್ಕೂ ಕೊಡಲಿಯೇಟು ಕೊಟ್ಟಂತೆ.

ಹಾಗಾದರೆ ಇದಕ್ಕೇನು ಪರಿಹಾರ? ನಮ್ಮ ಕನಸಿನ ಮನೆಯ

3 ಆಯಾಮದ ವಿನ್ಯಾಸದಿಂದ ಉಪಯೋಗಗಳು

1. ಕಟ್ಟಡದ ಸ್ಪಷ್ಟ ಚಿತ್ರಣ ಸಿಗುವುದರಿಂದ ಅಂತಿಮ ಸ್ಪರ್ಷದ(ಫೈನಲ್ ಟಚ್) ಬಗ್ಗೆ ಆತಂಕವಿರದು.
2. ಕಿಟಕಿ-ಬಾಗಿಲುಗಳ ವಿನ್ಯಾಸ, ಗೋಡೆಗಳ ಬಣ್ಣದ ಆಯ್ಕೆಗೆ ನೀವು ಸ್ವತಂತ್ರರು.
3. ಅಭಿರುಚಿಗೆ ತಕ್ಕಂತೆ ಹೊರಾಂಗಣ ವಿನ್ಯಾಸ, ಪಾರ್ಕಿಂಗ್ ಜಾಗ ಮುಂತಾದ ಅಗತ್ಯಗಳ ಬಗ್ಗೆ ನಿರ್ಧರಿಸುವ ಆಯ್ಕೆ.
4. ಖರ್ಚು-ವೆಚ್ಚಗಳ ಬಗ್ಗೆ ನಿಖರ ಮಾಹಿತಿ ಪಡೆದುಕೊಳ್ಳಬಹುದು.
5. ಮನೆಯ ಒಳಾಂಗಣ ವಿನ್ಯಾಸವನ್ನು ಇದೇ ತಂತ್ರಜ್ಞಾನದಿಂದ ರಚಿಸಬಹುದು. ಇದರಿಂದ ಅಗತ್ಯ ವಸ್ತುಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಕೊಠಡಿಗಳ ಜಾಗ ವ್ಯರ್ಥವಾಗುವುದನ್ನು ತಪ್ಪಿಸಬಹುದು.

3ಡಿ ಡಿಸೈನ್ ಮಾಡಲು ತಗಲುವ ವೆಚ್ಚ

ಇದೊಂದು ತಾಳ್ಮೆ ಬೇಡುವ ಕೆಲಸ, ಹಲವು ಗಂಟೆಗಳ ಕಾಲ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡಬೇಕಾ ಗುತ್ತದೆ. ಸುಮಾರು 5 ಸಾವಿರ ರೂಪಾಯಿಂದ ಹಿಡಿದು ಲಕ್ಷಗಟ್ಟಲೆ ತನಕ ಶುಲ್ಕ ವಿಧಿಸಬಹುದು. ಅದು ಕಟ್ಟಡದ ಗಾತ್ರ, ವಿನ್ಯಾಸದ ಮೇಲೆ ಅವಲಂಭಿತವಾಗಿರುತ್ತದೆ. ಎರಡಂತಸ್ತಿನ ಮನೆಯ ವಿನ್ಯಾಸ ತಯಾರಿಸಲು ಸುಮಾರು 10 ರಿಂದ 15 ಸಾವಿರದವರೆಗೆ ಖರ್ಚಾಗ ಬಹುದು. ಅಪಾರ್ಟ್‌ಮೆಂಟ್, ವಾಣಿಜ್ಯ ಕಟ್ಟಡವಾದರೆ ಈ ಬೆಲೆ ಇನ್ನೂ ಹೆಚ್ಚು.

ಕೆಲವು ವೃತ್ತಿಪರ ವಿನ್ಯಾಸಗಾರರೂ 3 ಆಯಾಮದ ಚಿತ್ರ ತಯಾರಿಸುತ್ತಾರೆ; ಅದಕ್ಕಾಗಿ ಟ್ರೈನಿಂಗ್ ಕೊಡುವ ಕೆಲವು ಖಾಸಗಿ ಸಂಸ್ಥೆಗಳಿವೆ. ಇಂತಹ ವಿನ್ಯಾಸಗಾರರು ಇನ್ನೂ ಕಡಿಮೆ ಬೆಲೆಗೆ 3ಡಿ ಚಿತ್ರ ತಯಾರಿಸಿಕೊಡುತ್ತಾರೆ. ಆರಂಭದಲ್ಲಿ ಒಂದಿಷ್ಟು ಖರ್ಚು ಮಾಡಿ, 3 ಡಿ ವಿನ್ಯಾಸವನ್ನು ಮಾಡಿಕೊಂಡರೆ, ಮನೆ ಸೌಂದರ್ಯವನ್ನು ಇಮ್ಮಡಿಗೊಳಿಸಬಹುದು.

ಅಂದಹಾಗೆ 3 ಆಯಾಮದ ಚಿತ್ರ ರಚಿಸಿದಂತೆ 3 ಆಯಾಮದ ದೃಶ್ಯವನ್ನೂ ತಯಾರಿಸಬಹುದು: ಅದುವೇ 3ಡಿ ವಾಕ್‌ಥ್ರೂ!

ಚಿತ್ರಣ ಮೊದಲೇ ಸಿಕ್ಕಿಬಿಟ್ಟರೆ ಎಷ್ಟು ಚೆನ್ನ ಅಲ್ವಾ? ಅದಕ್ಕಿದೆ ಸಿಂಪಲ್ ಪರಿಹಾರ, ಅದೇ 3ಡಿ ಡಿಸೈನ್ ಅರ್ಥಾತ್ ಮೂರು ಆಯಾಮದ ವಿನ್ಯಾಸ.

ಕಟ್ಟಡ ಯಾವುದೇ ಇರಲಿ, ಅದು ರೂಪುಗೊಳ್ಳುವ ಮೊದಲೇ ಅದರ ಅಂದ-ಚೆಂದವನ್ನು ಕಣ್ತುಂಬಿಕೊಳ್ಳಲು ಇರುವ ಮಾರ್ಗವೇ 3ಡಿ ಡಿಸೈನ್. ಮೊದಲೆಲ್ಲಾ ಕಟ್ಟಡದ ಹೊರಾಂಗಣ ವಿನ್ಯಾಸವನ್ನು 2ಡಿ(ಎರಡು ಆಯಾಮ) ವಿಧಾನದ ಮೂಲಕ ಚಿತ್ರಿಸುತ್ತಿದ್ದರು. ಈಗ 3ಡಿ ಡಿಸೈನ್ ತಂತ್ರಜ್ಞಾನದಿಂದ ಮೂರು ಆಯಾಮದ ಚಿತ್ರವನ್ನು ಪಡೆಯಬಹುದು. ಇದರಿಂದ ಕಟ್ಟಡದ ಬಣ್ಣ, ವಿನ್ಯಾಸ, ಕಿಟಕಿ-ಬಾಗಿಲುಗಳ ಸ್ಥಾನ ಎಲ್ಲವನ್ನೂ ಸ್ಪಷ್ಟವಾಗಿ ಕಂಡುಕೊಳ್ಳಬಹುದು; ಅಭಿರುಚಿಗೆ ತಕ್ಕಂತೆ ಮಾರ್ಪಡಿಸಲೂಬಹುದು.

ನಾರುಗಡ್ಡೆಗಳು

● ಡಾ. ಕರವೀರಪ್ರಭು ಕ್ಯಾಲಕೊಂಡ

ನರಸಾಪುರದ ನಾಗವ್ವಗೆ ನಲವತ್ತು ವರ್ಷ. ಒಮ್ಮಿಯೂ ಜಡ್ಡಿಗೆ ಬಿದ್ದವಳಲ್ಲ. ದವಾಖಾನಿ ಕಟ್ಟಿ ಹತ್ತಿದವಳಲ್ಲ. ರಟ್ಟಿ ಮುರದ ರೊಟ್ಟಿ ತಿನ್ನುವಾಕಿ. ಗುಂಡಕಲ್ಲಿನ್ಹಂಗ ಗಟ್ಟಿ ಮುಟ್ಟಾಗಿ ಇದ್ಲು. ಇತ್ತಿತ್ಲಾಗಿ ಮುಟ್ಟು ಹೆಚ್ಚು ಕಡಮಿ ಆಗಾಕ ಹತ್ತು. ಎರಡ ಮೂರ ತಿಂಗಳದಾಗ ಜರ್‍ರಂಯ ಇಳದ ಹೊದ್ಲು. ಚಿವುಟಿದರ ಹನಿ ರಕ್ತ ಇಲ್ದಾರಂಗ ಆದ್ಲು. ಏಳಾಕ ಬ್ಯಾಸ್ರಾ. ಕೂಡಾಕ ಬ್ಯಾಸ್ರಾ. ಸ್ವಲ್ಪ ಅವಸ್ರಾ ಮಾಡಿ ನಡದ್ರೂ ದಮ್ಮು ಬರಾಕ ಹತ್ತು. ದಡಗ್ಗನ ಎದ್ರ ಕಣ್ಣಿಗೆ ಕತ್ಲಾ ಕವಿಯಾಕ ಹತ್ತು. ಎದಿ ಹಾವ ನೋಡಿದಾರಗತೆ ಡವಾ ಡವಾ ಬಡಕೊಳ್ಳಾಕ ಹತ್ತು.... ಗಾಬರಿಯಾಗಿ ಮಗ್ಗಲೂರಿನ ದೊಡ್ಡ ದವಾಖಾನಿಗೆ ಬಂದ್ಲು. ಅಲ್ಲಿ ಡಾಕ್ಟರು ನಾಗವ್ವನ ಪರೀಕ್ಷಾ ಮಾಡಿದ್ರು. ಗರ್ಭಚೀಲದಾಗ ಗಡ್ಡಿ ಬೆಳದೈತಿ. ಆಪರೇಶನ್ ಮಾಡಬೇಕು.... ಅಂದ್ರು.



ಮೊದಲು ರಕ್ತಹೀನತೆ

ನಾರುಗಡ್ಡೆ (ಫೈಬ್ರಾಯ್ಡ್)ಯ ನೆರಳಲ್ಲಿ ನರಳುವ ನಾರಿಯರು ಹೆಚ್ಚಾಗಿ 30-40 ವರ್ಷಗಳ ವಯೋಮಾನದಲ್ಲಿರುವವರು. ಮಕ್ಕಳಾಗದ ನತದೃಷ್ಟರು ಅಥವಾ ಕೆಲವು ವರ್ಷಗಳ ಹಿಂದೆ ಒಂದೋ, ಎರಡನ್ನು ಹೆತ್ತ ಹೆಣ್ಣು ಮಕ್ಕಳು. ಇವರೆಲ್ಲ ರಕ್ತಹೀನತೆಯ ರಂಗಿನಾಟದ ರಂಗೋಲಿಯಲ್ಲಿ ಕಂಗಾಲಾಗಿರುತ್ತಾರೆ. ದುಗುಡ, ದುಮ್ಮಾನಗಳು ಮುಖದಲ್ಲಿ ರಾರಾಜಿಸುತ್ತಿರುತ್ತವೆ. ಕಳೆಗುಂದಿದ ಕಣ್ಣುಗಳಲ್ಲಿ ಭಯ, ಭೀತಿ ಆವರಿಸಿರುತ್ತದೆ.

ಕ್ಯಾನ್ಸರ್ ಗಡ್ಡೆಗಳಲ್ಲ: ನಾರಿಯರ ಗರ್ಭಕೋಶದಲ್ಲಿ ಬೆಳೆಯುವ ನಾರುಗಡ್ಡೆಗಳು ಕ್ಯಾನ್ಸರ್ ಗಡ್ಡೆಗಳೇನೂ ಅಲ್ಲ. ಹಾಗೆಂದು ಅವುಗಳನ್ನು ನಿರ್ಲಕ್ಷಿಸುವಂತೆಯೂ ಇಲ್ಲ. ಇವು ಕೆಲವರಲ್ಲಿ ಮುಟ್ಟನ್ನು ಹೆಚ್ಚು ಮಾಡಿದರೆ, ಮತ್ತೆ ಕೆಲವರಲ್ಲಿ ಮುಟ್ಟಿನ ವೇಳೆಯಲ್ಲಿ ಕಿಬ್ಬೊಟ್ಟೆಯ ವಿಪರೀತ ನೋವಿಗೆ ನಾಂದಿ ಹಾಡುವವು. ಹಲವರ ಬಂಜೆತನಕ್ಕೆ ವೀಳ್ಯೆ ನೀಡಬಹುದು. ಗರ್ಭಕೋಶದಲ್ಲಿ ಬೆಳೆದ ಗಡ್ಡೆಗಳು ಸುತ್ತ ಮುತ್ತ ಇರುವ ಅಂಗಾಂಗಗಳ ಮೇಲೆ ಒತ್ತಡ ಉಂಟು ಮಾಡಬಹುದು. ತನ್ನ ಇರುವಿಕೆಯ ಕುರುಹನ್ನು ಹಲವಾರು ಲಕ್ಷಣ ಹೊರಹೊಮ್ಮಿಸುವ ಮೂಲಕ ತಿಳಿಸಬಹುದು.

ನಾರುಗಡ್ಡೆಗೆ ಕಾರಣಗಳು: ನಾರು ಗಡ್ಡೆಯಾಗಲು ನಿಖರವಾದ ಕಾರಣ ಸ್ಪಷ್ಟವಾಗಿಲ್ಲ. ಆದಾಗ್ಯೂ, ಈಸ್ಟ್ರೊಜನ್, ಹ್ಯುಮನ್ ಪ್ಲಾಸೆಂಟಲ್ ಲ್ಯಾಕ್ಟೋಜನ್, ಬೆಳವಣಿಗೆ ಹಾರ್ಮೋನುಗಳು ನಾರುಗಡ್ಡೆಗಳ ಹುಟ್ಟು, ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಯೌವನಾವಸ್ಥೆಗೆ ಮೊದಲು, ಋತುಬಂಧದ ನಂತರ ನಾರುಗಡ್ಡೆಯ ಹಾವಳಿ ಅಪರೂಪ. ಇದಕ್ಕೆ ಬಡವ, ಬಲ್ಲಿದರೆಂಬ ಬೇದ ಭಾವವಿಲ್ಲ. ಈಸ್ಟ್ರೋಜನ್ ಉತ್ಪತ್ತಿ ಹೆಚ್ಚಿಸುವಂತಹ ಆರೋಗ್ಯ ಸಮಸ್ಯೆ ಇರುವ ಮಹಿಳೆಯರಲ್ಲಿ ನಾರುಗಡ್ಡೆಗಳ ಸಾಧ್ಯತೆ ಜಾಸ್ತಿ.

ನಾರುಗಡ್ಡೆಯಲ್ಲಿ ಮಾಂಸಲ ಎಳೆಗಳು ಮಾತ್ರವಲ್ಲ, ನಡುನಡುವೆ ನಾರಿನ ಎಳೆಗಳು ಹೆಣೆದು ಕೊಂಡಿರುವುದರಿಂದ, ಗಡ್ಡೆಗೆ ಬಿರುಸುತನದ ಉಡುಗೊರೆಯನ್ನು ನೀಡುವವು. ಗರ್ಭಕೋಶದ ನಡುಪದರಲ್ಲಿ ನಾರುಗಡ್ಡೆ ಹುಟ್ಟಿದಾಗ, ಗರ್ಭಕೋಶ ತನ್ನ ಪೇರುಹಣ್ಣಿನ ವಿಶಿಷ್ಟ ಆಕಾರದಲ್ಲಿಯೇ ಬೆಳೆಯುತ್ತ ಹೋಗುವುದು. ಗರ್ಭಕೋಶದ ಹೊರಪದರಲ್ಲಿ ಹುಟ್ಟುವ ನಾರುಗಡ್ಡೆಗಳು ಆ ಭಾಗವನ್ನು ವಿರೂಪಗೊಳಿಸುವವು. ಒಳಪದರಲ್ಲಿ ಉಗಮಹೊಂದಿದ ನಾರುಗಡ್ಡೆಗಳು ಗರ್ಭಕೋಶದ ಒಳಾವರಣದ ವಿಸ್ತೀರ್ಣವನ್ನು ಹೆಚ್ಚಿಸಿ, ಮುಟ್ಟಿನ ಏರುಪೇರುಗಳಿಗೆ ದಾರಿ ಮಾಡುವುದರ ಜೊತೆಗೆ ಹೊಟ್ಟೆ ನೋವು ತರುತ್ತವೆ.

ಪರಿಹಾರ ಏನು?: ಅವು ಔಷಧಿಗೆ ಎಂದೂ ಕರಗುವುದಿಲ್ಲ. ಆದ್ದರಿಂದ ಇದನ್ನು ಕರಗಿಸುತ್ತೇವೆ ಎನ್ನುವ ನಾಟಿ ಚಿಕಿತ್ಸೆ ಇಲ್ಲಿ ಫಲಕಾರಿ ಆಗುವುದಿಲ್ಲ. ಇದರ ಪರಿಹಾರಕ್ಕೆ, ಶಸ್ತ್ರಚಿಕಿತ್ಸೆಯೊಂದೇ ದಾರಿ. ಮುಂದೆ ಮಕ್ಕಳಾಗಬೇಕು ಎನ್ನುವ ಹಂಬಲ ಹೊತ್ತಿರುವ ಹೆಣ್ಣು ಮಕ್ಕಳಲ್ಲಿ, ನಾರುಗಡ್ಡೆಯನ್ನು ಮಾತ್ರ ಕೊಯ್ದು ತೆಗೆದು, ಗರ್ಭಕೋಶವನ್ನು ಉಳಿಸಲು ಪ್ರಯತ್ನಿಸಲಾಗುವುದು. ಮಕ್ಕಳು ಬೇಡವೇ ಬೇಡ ಎನ್ನುವ ಮಹಿಳೆಯರಲ್ಲಿ ಇಡೀ ಗರ್ಭಕೋಶವನ್ನೇ ತೆಗೆದು ಹಾಕಲಾಗುವುದು. ಹೀಗೆ ಮಾಡುವುದರಿಂದ ಭವಿಷ್ಯದಲ್ಲಿ ಬರಬಹುದಾದ ತೊಡಕು ತೊಂದರೆಗಳಿಗೆ ವಿದಾಯ ಹೇಳಬಹುದು!

ಮುಂದೇನೆಂಬ ಭಯ ಬೇಡ

ಇನ್ನೇನು ಮತ್ತೇನು ಗತಿಯೆಂದು ಬೆದರಿದರು!
ನಿನ್ನ ಕೈಯೊಳಗಿಹುದೆ ವಿಧಿಯ ಲೆಕ್ಕಣಿಕೆ
ಕಣ್ಣಿಗೆಟುಕದೆ ಸಾಗುತಿಹುದು ದೈವದ ಸಂಚು!
ತಣ್ಣಗಿರಿಸಾತ್ಮವನು - ಮಂಕುತಿಮ್ಮ

ನಮ್ಮಯ ಜೀವನ ಅನಿಶ್ಚಿತತೆಯ ಆಗರ. ಜೀವನದ ಹಾದಿಯಲಿ ಯಾವಾಗ ಏನು ಬಂದೊದುಗುತ್ತದೆಯೋ ಬಲ್ಲವರಾರು? ಸೂತ್ರ ಹಿಡಿದು ಆಡಿಸುವ ಭಗವಂತನ ಲೀಲೆಯ ಕಂಡವರಾದರೂ ಯಾರು? ಈ ಹಂತದಲ್ಲಿ ನಮಗೆ ಜೀವನದಲ್ಲಿ ಏನು ಬರುತ್ತದೆಯೋ? ಇನ್ನೇನು ಬಂದೊದಗುತ್ತದೆಯೋ? ಮತ್ತೇನು ಘಟಿಸುತ್ತದೆಯೋ? ಎಂಬ ಆತಂಕದಿಂದ ನೀನು ಬೆದರದಿರು. ನಿನ್ನ ಜೀವನದಲ್ಲಿ ನೀನಂದುಕೊಂಡಂತೆ ನೀ ನಡೆಯಲು ಆ ವಿಧಿಯ ಲೇಖನಿಯೇನಾದರೂ ಅದು ನಿನ್ನ ಕೈನಲ್ಲಿರುವುದೇ? ಕಣ್ಣಿಗೆ ಕಾಣದಂತೆ, ಮನಸ್ಸಿಗೆ ಎಟಕದಂತೆ ಆ ದೈವದ ಸಂಚು ನಡೆಯುತ್ತಿದೆ ಹಾಗೆಯೇ ನಡೆಯುತ್ತಲೂ ಇರುತ್ತದೆ. ಎಲ್ಲವನ್ನೂ ದೈವದ ಬುಡಕ್ಕಿಟ್ಟು ನೀನು ನಿನ್ನಯ ಆತ್ಮವನ್ನು ತಣ್ಣಗಿರಿಸಿಕೋ. ನಾಳೆಗಳ ಬಗ್ಗೆ ಬೆದರು, ಆತಂಕ, ಉದ್ವೇಗ, ಕಕ್ಕುಲತೆಗಳ ಅವಶ್ಯಕತೆ ಇಲ್ಲಿ ಬೇಕಾಗಿಲ್ಲ.

ನಮ್ಮಯ ಜೀವನದಲ್ಲಿ ನಾವೇನೋ ಅಂದುಕೊಂಡು, ಯಾವುದೋ ಒಂದು ಕಾರ್ಯವನ್ನು ಮಾಡುತ್ತೇವೆ, ಆದರೆ ಆ ಕಾರ್ಯವು ಸಫಲವಾಗದೆ ಇದ್ದಾಗ ನಮಗೆ ಭಯದೊಂದಿಗೆ ಭವಿಷ್ಯದ ಬಗ್ಗೆ ಆತಂಕವೂ ಉಂಟಾಗುತ್ತದೆ. ಒಮ್ಮೆ ಆತಂಕ ಮನದಲ್ಲಿ ಮನೆಮಾಡಿದರೆ ಚಡಪಡಿಕೆ, ಹೇಳಲಾರದ ತಪನೆಗಳೆಲ್ಲವೂ ಮನಸ್ಸಿನ ಹಂದರದಲ್ಲಿ ಮೂಡುತ್ತವೆ. ಅದಕ್ಕೆಲ್ಲಾ ಈ ಪದ್ಯದಲ್ಲಿ ಒಂದು ಸಲಹೆಯನ್ನು ಮಾನ್ಯರು ನೀಡಿದ್ದಾರೆ. ನಿನ್ನ ಕೆಲಸಗಳನ್ನ ನೀನು ಮಾಡುತ್ತಲಿರು. ಕೈಗೊಂಡಿರುವ ಕೆಲಸ ಕಾರ್ಯಗಳು ಕೈಗೂಡುತ್ತವೋ? ಬಿಡುತ್ತವೋ? ಅದರ ಬಗೆಗೆ ಇನ್ನೇನೋ ಮತ್ತೇನೋ ಗತಿ ಎಂದು ಬೆದರದಿರು, ಮುಂದೆ ಏನಾಗುತ್ತದೆಯೋ ಎಂಬ ಆತಂಕ ಏಕೆ? ನಿನ್ನ ಭವಿಷ್ಯದ ಬಗ್ಗೆ ಚಿಂತೆಗಳೇಕೆ? ಇಲ್ಲಿ ಯಾವುದೇ ಕಾರಣಕ್ಕೂ ನೀನು ಬೆದರುವ ಅವಶ್ಯಕತೆ ಇಲ್ಲ. ಎಲ್ಲವನ್ನೂ ವಿಧಿರಾಯನೆಂಬ ಸಮಯವು ನಿರ್ಧರಿಸುತ್ತದೆ. ಆ ವಿಧಿರಾಯನ ಆಣತಿಯಂತೆಯೇ ಇಲ್ಲಿ ಎಲ್ಲವೂ ಜರುಗುವುದು, ಏಕೆಂದರೆ ಆ ವಿಧಿಯ ಕೈನಲ್ಲಿರುವ ಲೇಖನಿ ಏನಾದರೂ ನಿನ್ನ ಕೈನಲ್ಲಿದೆಯೇ? ಆ ವಿಧಿಯ ಲೇಖನಿಯಿಂದ ನಿನಗಿಷ್ಟ ಬಂದಂತೆ ನೀನು ನಿನ್ನ ಹಣೆಬರಹವನ್ನು ಬರೆಯಲಾದೀತೆ? ಅದು ಎಂದಿಗೂ ಸಾಧ್ಯವಿಲ್ಲದ ಮಾತು.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಆ ವಿಧಿಯೂ ಹಾಗೂ ಆ ದೈವವು ನಿನ್ನ ಕಣ್ಣಳತೆಗೆ, ಮನಸ್ಸಿಗೂ ಮೀರಿದ ಶಕ್ತಿಯಾಗಿದ್ದು ಅವುಗಳಾಣತಿಯಂತೆಯೇ ಇಲ್ಲಿ ಎಲ್ಲವೂ ಜರುಗುವುದು. ಹಾಗಾಗಿ ನೀನು ನಿನ್ನ ಕರ್ಮಗಳನ್ನು ಮಾಡುತ್ತಾ ನಿಶ್ಚಿಂತೆಯಿಂದ ನಿನ್ನ ಜೀವನವನ್ನು ಸಾಗಿಸು. ಎಲ್ಲವೂ ನಾವಂದುಕೊಂಡಂತೆ ಜರುಗಿದರೆ ಆ ದೈವಕ್ಕೂ, ವಿಧಿಗೂ ಬೆಲೆ ಏನಾದರೂ ಇರುತ್ತದೆಯೇ? ಆಯಾ ಸಮಯಕ್ಕೆ ಏನಾಗಬೇಕೆಂದು ಪೂರ್ವನಿರ್ಧಾರ ವಾಗಿರುತ್ತದೋ ಅದೇ ರೀತಿ ಇಲ್ಲಿ ಎಲ್ಲವೂ ಜರುಗುತ್ತಿರುತ್ತದೆ. ಆದುದರಿಂದ ನಿನ್ನ ಕೆಲಸ ಕಾರ್ಯಗಳ ಬಗ್ಗೆ, ಭವಿಷ್ಯದ ಬಗ್ಗೆ, ಇನ್ನೇನಾಗುವುದೋ? ಮತ್ತೇನಾಗುವುದೋ? ಎಂಬ ಆತಂಕ, ಭಯ, ಚಡಪಡಿಕೆಗಳನ್ನು ಬಿಟ್ಟು, ನಿಷ್ಕಾಮದಿಂದ ನಿನ್ನ ಕರ್ತವ್ಯ ಮಾಡು, ನಮಗರಿವಿಲ್ಲದೆ ಆ ದೈವದ ಸಂಚೊಂದು ಬೇರೆಯೇ ಇರುತ್ತದೆ. ಆದುದರಿಂದ ನಿನ್ನ ಆತ್ಮವನ್ನು ನೀನು ತಣ್ಣಗಿರಿಕೊಂಡು ಶಾಂತವಾಗಿ, ನಿರುಮ್ಮಳನಾಗಿ ನಿನ್ನ ಜೀವನವನ್ನು ಮಾಡುವುದು ಸೂಕ್ತವಾಗಿದೆ.

ನಾಳೆ ಎಂಬುವುದರ ಬಗ್ಗೆ ಇಂದೆಯೇ ನಾವು ಚಿಂತಿತರಾದರೆ ಇಂದಿನ ಮನಸ್ಸಿನ ಶಾಂತಿಯೂ ಹಾಳಾಗುತ್ತದೆ. ನಿನ್ನೆ ಎಂಬುದು ಆಗಲೇ ಸತ್ತು ಹೋಗಿದೆ, ನಾಳೆ ಎಂಬುದು ಹುಟ್ಟಬೇಕಿದೆ, ಆದರೆ ಇಂದು ಎನ್ನುವುದೇ ವಾಸ್ತವ ಹಾಗೂ ಸತ್ಯ. ಹುಟ್ಟಬೇಕಾಗಿರುವ ನಾಳೆಗಳ ಬಗ್ಗೆ ಇಂದಿರುವ ವಾಸ್ತವತೆಯಲ್ಲಿ ಆತಂಕ, ಭಯ, ದುಗುಡ, ಚಡಪಡಿಕೆಗಳಿದ್ದರೆ ಮನಸ್ಸಿಗೆ ಶಾಂತಿ ಎಂಬುದೆಲ್ಲಿದೆ? ನಮ್ಮ ಪಾಲಿನ ಕೆಲಸ ಕಾರ್ಯಗಳನ್ನು, ಕರ್ಮಗಳನ್ನು ಮಾಡಬೇಕು, ಮಾಡಿದ ಕೆಲಸಗಳಿಗೆ ನಾಳಿನ, ಭವಿಷ್ಯದ ಆತಂಕವನ್ನು ತೊಲಗಿಸಿ, ನಮ್ಮ ಆತ್ಮವನ್ನು ಶಾಂತವಾಗೊಟ್ಟುಕೊಳ್ಳುವುದೇ ಈ ಜೀವನದ ನಿಜ ಸೂತ್ರ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಹೋಗುವುದಲ್ಲ, ಬರುವುದು (4)
4. ದೇವರನ್ನಿಡುವ ಮರದ ಮಂಟಪ (4)
6. ಇನ್ನೊಬ್ಬ ನೋಡುಗ (3)
8. ಅಳತೆಯೂ ಆಗಬಲ್ಲ ಗೌರವ (2)
9. ದಿಕ್ಕುತಪ್ಪಿಸಿ ಬಂದ ಅಪ್ಪಣೆಚೀಟಿ (4)
11. ಮರ ಮತ್ತು ಬಳ್ಳಿ (4)
13. ಎಣಿಸಲು ಆಗದಂತಹ (4)
16. ಮನಸ್ಸುಗಳ ನಡುವಿನ ವಿರಸ (4)
18. ಹಸುವಿನ ಕೂಸು (2)
19. ಗ್ರೀಸ್ ದೇಶದವನು (3)
21. ಕಡೆಯದಾಗಿ ಹಾಕಿದ ಲಗಾಮು (4)
22. ಮೋಹಕ ನಗೆಯುಳ್ಳವಳು (4)

ಮೇಲಿಂದ ಕೆಳಕ್ಕೆ

2. ಹಕ್ಕಿಯ ಪುಕ್ಕ (2)
3. ಯಾವ ಕಡೆಯಿಂದ ನೋಡಿದರೂ ಹೊಸದೇ (3)
4. ಮಂಕು ಕವಿದಾಗ ಕಂಡ ಬುಟ್ಟಿ (3)
5. ಬಹಳ ದೊಡ್ಡದಾದ ಪಟ್ಟಣ (3)
7. ತನಗೆ ತಾನೇ ಮಾತನಾಡಿಕೊಳ್ಳುವುದು (3)
8. ಸೋದರಮಾವ (3)
10. ಹೆಣ್ಣು ಜಿಂಕೆ (3)
12. ರೋಗದ ಜೊತೆಗೆ ಬರುವ ಜೋಡಿಪದ (3)
14. ಘರ್ಜಿಸು ಅಥವಾ ಬೆದರಿಸು (3)
15. ಅನುವಾದ (3)
16. ಮಾರುವಾಗ ತೋರಿದ ಅನುಕಂಪ (3)
17. ಪ್ರವಾಸ (3)
18. ನಿದ್ದೆಯಲ್ಲಿ ಕಂಡ ಸ್ವಪ್ನ (3)
20. ಎರಡಕ್ಷರದ ಸೇವಕಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಆಗಮನ 4. ಮಂದಾಸನ
6. ವೀಕ್ಷಕ 8. ಮಾನ 9. ರಿದಾಹರ
11. ತರುಲತೆ 13. ಅಗಣಿತ
16. ಮನಸ್ತಾಪ 18. ಕರು
19. ಯವನ 21. ಕಡಿವಾಣ
22. ಸುಹಾಸಿನಿ

ಮೇಲಿಂದ ಕೆಳಕ್ಕೆ
2. ಗರಿ 3. ನವೀನ 4. ಮಂಕರಿ
5. ನಗರ 7. ಸ್ವಗತ 8. ಮಾತುಲ
10. ಹರಿಣಿ 12. ರುಜಿನ
14. ಗದರು 15. ತರ್ಜುಮೆ
16. ಮರುಕ 17. ಪಯಣ
18. ಕನಸು 20. ದಾಸಿ

ಹೃದಯದೊಳಗೆ ಭಗವಂತನಿರಲೇಬೇಕು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಮ್ಮೆ ನಾರದ ಮುನಿಗಳು ಹನುಮಂತನನ್ನು ಸಂಚಾರ ಮಾಡುವ ವೇಳೆ ಭೇಟಿಯಾದಾಗ, ಎಂದಿನ ತಮ್ಮ ಕುಹಕ ಬುದ್ಧಿಯನ್ನು ಪ್ರದರ್ಶಿಸುತ್ತಾ. .. ನನ್ನ ಪ್ರಕಾರ ನೀನು ಭಕ್ತನಲ್ಲ! ಎಂದು ಹೇಳಿದರು. ನಾರದರು ಸ್ವತಃ ನಾರಾಯಣನ ದೊಡ್ಡ ಭಕ್ತರಾಗಿದ್ದರು ಮತ್ತು ಹನುಮಂತನ ನಿಜವಾದ ಭಕ್ತಿಯನ್ನು ಅನಾವರಣ ಗೊಳಿಸಲು ಬಯಸಿದ್ದರಿಂದ, ನಾರದರು ತಮಾಷೆಯಾಗಿ ಹೀಗೆ ಹೇಳಿದರು.

ಆಶ್ಚರ್ಯಚಕಿತನಾದ ಹನುಮಂತ, ನಾರದರು ಆ ತೀರ್ಮಾನಕ್ಕೆ ಹೇಗೆ ಬಂದರು ಎಂದು ಕೇಳಿದನು. ವೇದಗಳ ಪ್ರಕಾರ, ಆರು ರೀತಿಯ ಆಕ್ರಮಣಕಾರರಿದ್ದಾರೆ, ಮತ್ತು ಅವರಲ್ಲಿ ಒಂದು ರೀತಿಯವರು ಇತರರ ಮನೆಗಳಿಗೆ ಬೆಂಕಿ ಹಚ್ಚುವ ಗುಣದವರು. ನೀನು ಲಂಕೆಯಲ್ಲಿ ತಾಯಿ ಸೀತೆಯನ್ನು ಹುಡುಕಲು ಹೋದಾಗ, ಹಿಂದಿರುಗುವ ಮುಂಚೆ ರಾಕ್ಷಸರ ಮನೆಗಳಿಗೆ ಬೆಂಕಿ ಹಚ್ಚಿದ್ದೀಯ. ಇದಾದಮೇಲೆ ಇನ್ನು ನಾನು ನಿಮ್ಮನ್ನು ಭಗವಂತನ ಭಕ್ತ ಎಂದು ಹೇಗೆ ಕರೆಯಲಿ? ಎಂದರು ಸುಳ್ಳು ನಗೆ ನಗುತ್ತಾ.

ನಾರದರ ಉದ್ದೇಶವನ್ನು ಅರ್ಥಮಾಡಿಕೊಂಡ ಹನುಮಂತನು ಮುಗುಳ್ನಗುತ್ತಾ, ''ನನ್ನ ಪ್ರೀತಿಯ ನಾರದರೇ, ರಾಮಭಕ್ತನ ಪ್ರಮುಖ ಕರ್ತವ್ಯವೆಂದರೆ ಅನಾಥ ಮೃತದೇಹಗಳನ್ನು ನೋಡಿಕೊಳ್ಳುವುದು ಮತ್ತು ಅವರ ಮುಂದಿನ ಜನ್ಮದಲ್ಲಿ ಉತ್ತಮ ಜೀವನವನ್ನು ಪಡೆಯಲು ಅವರ ಅಂತಿಮ ವಿಧಿಗಳನ್ನು ನಿರ್ವಹಿಸುವುದು. ನಾನು ಲಂಕೆಗೆ ಹೋದಾಗ, ಆ ದೊಡ್ಡ ಅರಮನೆಗಳಲ್ಲಿ ಯಾರೂ ಭಗವಂತನ ನಾಮಗಳನ್ನು ಜಪಿಸುತ್ತಿರಲಿಲ್ಲ.ಎಂದು ನಾನು ಕಂಡುಕೊಂಡೆ. ಭಗವಂತನ ಪವಿತ್ರ ನಾಮಗಳು ಮತ್ತು ಕೀರ್ತಿಯನ್ನು ಜಪಿಸದವರನ್ನು ಮೃತ ದೇಹಗಳೆಂದು ಪರಿಗಣಿಸಲಾಗುತ್ತದೆ ಎಂದು ಶಾಸ್ತ್ರಗಳು ಹೇಳುತ್ತವೆ. ಅವರು ಈಗಾಗಲೇ ಸತ್ತಿದ್ದರಿಂದ, ಅವರ ಅತ್ಯಂತ ದುಃಖಕರ ಅಸ್ತಿತ್ವದಿಂದ ಅವರನ್ನು ಬಿಡುಗಡೆ ಮಾಡಲು, ನಾನು ಅವರ ಅರಮನೆಗಳ ಜೊತೆಗೆ ಅವೆಲ್ಲವನ್ನೂ ಸುಟ್ಟುಹಾಕಿದೆ. ನಾನು ಸುಡದೆ ಬಿಟ್ಟ ಏಕೈಕ ಅರಮನೆ ವಿಭೀಷಣನದ್ದು, ಅಲ್ಲಿಂದ ರಾಮನ ನಾಮದ ಜಪದ್ವನಿಗಳು ನನ್ನ ಕಿವಿಗೆ ಬಂದು ತಟ್ಟಿದವು. ಅಲ್ಲಿ ಮಾತ್ರ ಬದುಕಿರುವ ಆತ್ಮಗಳು ಉಸಿರಾಡುತ್ತಿದ್ದವು. ಮಿಕ್ಕೆಲ್ಲ ಕಡೆ ಭಗವಂತನಿಲ್ಲದ ಜೀವಂತ ಶವಗಳು ಓಡಾಡಿಕೊಂಡಿದ್ದವು.

ಹನುಮಂತನು ಮುಂದುವರೆಸುತ್ತಾ, ವಾಸ್ತವವಾಗಿ, ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜೋರಾಗಿ ಘರ್ಜನೆ ಮಾಡಿದೆ, ಅದು ಲಂಕೆಯ ಎಲ್ಲಾ ನಿವಾಸಿ ರಾಕ್ಷಸರನ್ನು ಹೆದರಿಸಿತು. ಆ ಭೀಕರ ಘರ್ಜನೆಯನ್ನು ಕೇಳಿ, ಅನೇಕ ಗರ್ಭಿಣಿ ರಾಕ್ಷಸಿಯರ ಗರ್ಭಪಾತವಾಯಿತು. ಈ ರೀತಿಯಾಗಿ, ಭವಿಷ್ಯದಲ್ಲಿ ರಾಕ್ಷಸ ಕುಲವು ಲಂಕೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ ಮತ್ತು ತೊಂದರೆಗಳನ್ನು ಉಂಟುಮಾಡುವುದಿಲ್ಲ ಎಂದು ನಾನು ಖಚಿತಪಡಿಸಿಕೊಂಡೆ ಎಂದನು.

ಹನುಮಂತನ ಉತ್ತರವನ್ನು ಕೇಳಿ ನಾರದ ಮುನಿಗಳು ಸಂತೋಷಪಟ್ಟರು. ಅವರು ಹನುಮಂತನನ್ನು ಅಪ್ಪಿಕೊಂಡು ರಾಮನ ಮೇಲಿನ ಅಪ್ರತಿಮ ಭಕ್ತಿಯನ್ನು ಹೊಗಳಿದರು.

ನಡೆದ ಈ ಘಟನೆ ಕಾಲ್ಪನಿಕ ವಿರಬಹುದು, ಆದರೆ ಅದು ಸಾರುವ ವೃತ್ತಾಂತ ಮಾತ್ರ ಹೃದಯಕ್ಕೆ ನಿಲುಕುವಂಥದ್ದು. ನಮ್ಮೊಳಗೆ ಭಗವಂತನೆನ್ನುವ ಆತ್ಮ ಸಾಕ್ಷಿ ಇರುವವರೆಗೂ ನಮ್ಮ ಅಸ್ತಿತ್ವಕ್ಕೆ ಒಂದು ಬೆಲೆ. ಭಗವಂತನೇ ಇಲ್ಲದ ಜೀವಗಳು ಬದುಕಿದ್ದೂ ಸತ್ತಂತೆ. ಎಲ್ಲಿಯವರೆಗೆ ನಮ್ಮಲ್ಲಿ ಭಗವಂತನ ನಾಮಸ್ಮರಣೆ, ಇರುತ್ತದೋ ಅಲ್ಲಿಯವರೆಗೆ ಧರ್ಮ ಕರ್ಮಗಳ ಆಲೋಚನೆಗಳು ನಮ್ಮನ್ನು ಸರಿದಾರಿಯಲ್ಲಿ ನಡೆಸಲು ನೆರವಾಗುತ್ತದೆ.

ರಾಷ್ಟ್ರಕವಿ ಕುವೆಂಪುರವರು ತಮ್ಮ ಪದ್ಯದಲ್ಲಿ ಬರೆದಿಲ್ಲವೇ - ''ಶಿವನಿಲ್ಲದ ಸೌಂದರ್ಯವೇ! ಶವ ಮುಖದಾ ಕಣ್ಣೋ''. ಎಷ್ಟು ಅರ್ಥ ಪೂರ್ಣವಾದ ಸಾಲುಗಳು. ಯಾರಲ್ಲಿ ಸುಳ್ಳು ಸತ್ಯ, ಧರ್ಮ ಕರ್ಮ, ನೀತಿ ಅನೀತಿಯ ವಿವೇಚನೆ ಇರುವುದಿಲ್ಲವೋ ಅವರ ಕಣ್ಣುಗಳಲ್ಲಿ ಯಾವ ರೀತಿಯ ಕಾಂತಿ ತೇಜಸ್ಸು ಸಹ ಇಲ್ಲದೆ ಶವದ ಮುಖದಂತೆ ತಣ್ಣಗಿರುತ್ತದೆ. ಅಂತಹವರನ್ನು ನೋಡಿದಾಗ ಮಾತನಾಡಿಸಿ ದಾಗ ನಮಗೆ ಯಾವ ರೀತಿಯ ಆಪ್ತ ಭಾವವೂ ಮೂಡುವು ದಿಲ್ಲ. ಆದ್ದರಿಂದಲೇ ಜೀವನದಲ್ಲಿ ನಮ್ಮೆಲ್ಲರಿ ಗಿಂತ ದೊಡ್ಡವನು ನಮ್ಮನ್ನು ಕಾಯುವ ಭಗವಂತನಿದ್ದಾನೆ ಎನ್ನುವ ಒಂದು ಸಾತ್ವಿಕ ಭಯದಿಂದ ಬದುಕುವವರೆಗೆ ನಮ್ಮ ಅಸ್ತಿತ್ವಕ್ಕೆ ಒಂದು ಬೆಲೆ. ನಮ್ಮ ಬದುಕಿಗೂ ಒಂದು ನೆಲೆ.

ಮಾರುಕಟ್ಟೆಯಲ್ಲಿ ಮಾವು

● ಡಾ. ಶ್ರೀಲತಾ ಪದ್ಯಾಣ

ಹಣ್ಣುಗಳ ರಾಜ ಮಾವು ಈಗ ಮಾರುಕಟ್ಟೆಯಲ್ಲಿ ಧಾರಾಳವಾಗಿ ಸಿಗುತ್ತಿವೆ. ಮಕ್ಕಳಿಂದ ಹಿಡಿದು ಹಿರಿಯರವರೆಗೂ ಮಾವಿನ ಹಣ್ಣನ್ನು ತಿನ್ನಲು ಇಷ್ಟಪಡದೇ ಇರುವವರು ಇಲ್ಲ. ರಸ್ತೆ ಬದಿಗಳಲ್ಲಿ , ಗಲ್ಲಿ ಗಲ್ಲಿಗಳಲ್ಲಿ, ನಗರಗಳಲ್ಲಿ ಈಗ ಮಾವಿನ ಹಣ್ಣುಗಳದ್ದೇ ಮೇಳ!

ಇಂದು ಮಾರುಕಟ್ಟೆಯಲ್ಲಿ ಋತುವಿಗೆ ತಕ್ಕಂತೆ ತಾಜಾ ಹಣ್ಣುಗಳು ದೊರಕುತ್ತಿದೆಯೇ? ಅಥವಾ ಕೃತಕವಾಗಿ ಹಣ್ಣು ಮಾಡಿದ್ದು ಲಭಿಸುತ್ತಿದೆಯೇ? ಈ ಊಹಾಪೋಹಗಳು ಇತ್ತೀಚೆಗೆ ಗಮನಕ್ಕೆ ಬರುತ್ತಲೇ ಇರುತ್ತವೆ ಹಾಗೆಯೇ ಸಂಶೋಧನೆಗಳು ನಡೆಯುತ್ತಲೇ ಇರುತ್ತವೆ. ಆರೋಗ್ಯ ರಕ್ಷಣೆಗಾಗಿ ಕೊಂಚ ಮಾಹಿತಿಯನ್ನು ತಿಳಿದುಕೊಳ್ಳುವುದು ಸೂಕ್ತವಲ್ಲವೇ?

● ಆಹಾರ ಮತ್ತು ಔಷಧೀಯ ಪ್ರಾಧಿಕಾರವು (ಎಫ್‌ಡಿಎ) ಮಾವಿನಹಣ್ಣುಗಳ ಕೃತಕ ಪಕ್ವಗೊಳಿಸುವಿಕೆಯ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದೆ. ಏಕೆಂದರೆ ಇತ್ತೀಚೆಗೆ ಮಾವಿನ ಹಣ್ಣುಗಳನ್ನು ಕೃತಕವಾಗಿ ಪಕ್ವಗೊಳಿಸಲು ನಿಷೇಧಿತವಾದ ಕ್ಯಾಲ್ಸಿಯಂ ಕಾರ್ಬೈಡ್ ಎಂಬ ರಾಸಾಯನಿಕ ಸಂಯುಕ್ತವನ್ನು ಬಳಸಲಾಗುತ್ತಿದೆ! 2022 ರ ಅಂತಾರಾಷ್ಟ್ರೀಯ ಆಹಾರ ಸುರಕ್ಷತಾ ಜರ್ನಲ್ ಪ್ರಕಟಿಸಿದ ಅಧ್ಯಯನದ ಪ್ರಕಾರ ಭಾರತದ ಮಾರುಕಟ್ಟೆಯಲ್ಲಿನ ಮಾವಿನ ಹಣ್ಣುಗಳಲ್ಲಿ, 68% ಮಾರಾಟವಾಗಿರುವುದು ಈ ಕ್ಯಾಲ್ಸಿಯಂ ಕಾರ್ಬೈಡ್ ಸಂಯುಕ್ತ ಹೊಂದಿರುವ ಹಣ್ಣುಗಳು!

● ಕ್ಯಾಲ್ಸಿಯಂ ಕಾರ್ಬೈಡ್ ಎಂಬುದು ಸುರಕ್ಷಿತ ಆಹಾರ ಸಂಯುಕ್ತವಲ್ಲ. ಹಾಗಾಗಿ ಹಣ್ಣುಗಳನ್ನು ಪಕ್ವಗೊಳಿಸಲು ಬಳಸುವಿಕೆಯನ್ನು ನಿಷೇಧಿಸಲಾಗಿದೆ. ಈ ಸಂಯುಕ್ತ ನೀರಿನೊಂದಿಗೆ ಬೆರೆತಾಗ ಅಸಿಟಲಿನ್ ಗ್ಯಾಸ್ ಉತ್ಪತ್ತಿಯಾಗುತ್ತದೆ. ಇದು ಆರ್ಸೆನಿಕ್ ಮತ್ತು ಫಾಸ್ಫರಸ್‌ನ್ನು ಒಳಗೊಂಡಿರುವುದರಿಂದ ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕ. ಇದರಿಂದಾಗಿ ಬಾಯಾರಿಕೆ, ತಲೆತಿರುಗುವಿಕೆ, ಚರ್ಮದ ಹುಣ್ಣುಗಳು ಇತರ ಸಮಸ್ಯೆಗಳು ಉಂಟಾಗುತ್ತದೆ. ಇದರ ದೀರ್ಘಾವಧಿಯ ಬಳಕೆಯಿಂದ ಹೊಟ್ಟೆಯ ಹುಣ್ಣುಗಳು, ವಾಂತಿ, ಅಜೀರ್ಣ, ಶ್ವಾಸಕೋಶದ ಸಮಸ್ಯೆಗಳು ಹಾಗೂ ನರಗಳ ಹಾನಿ ಸಂಭವಿಸುವುದು ಖಚಿತ. ಅಲ್ಲದೇ ಇದು ಕ್ಯಾನ್ಸರ್‌ಕಾರಕ ಎಂದು ಹೇಳಲಾಗಿದೆ.

● ಹಾಗಿದ್ದರೆ ಸೂಕ್ತ ಮಾವಿನ ಹಣ್ಣುಗಳನ್ನು ಬಳಸುವುದು ಹೇಗೆ? ಮಾರುಕಟ್ಟೆಯ ಮಾವಿನ ಹಣ್ಣುಗಳ ಬಣ್ಣ, ವಾಸನೆಗಳನ್ನು ಗಮನಿಸಬೇಕು. ಸಹಜವಾಗಿ ಹಣ್ಣಾದ ಮಾವು ಹಳದಿ-ಕಿತ್ತಳೆ ಬಣ್ಣವನ್ನು ಹೊಂದಿದ್ದರೆ, ಕೃತಕವಾದವುಗಳು ಅತಿ ಹೆಚ್ಚು ಹಳದಿಯೊಂದಿಗೆ ಹಸಿರು ತೇಪೆಯಿಂದ ಕೂಡಿರುತ್ತವೆ. ಹಣ್ಣುಗಳ ತೊಟ್ಟಿನ ಭಾಗದಲ್ಲಿ ನಸು ಸಿಹಿ ಪರಿಮಳವು ಇರುತ್ತವೆ; ಆದರೆ ಕೃತಕವಾಗಿ ಹಣ್ಣೂ ಮಾಡಿದ್ದರಲ್ಲಿ ಯಾವ ವಾಸನೆಯೂ ಇರುವುದಿಲ್ಲ.

ಮಾರುಕಟ್ಟೆಯಲ್ಲಿ ಮಾವಿನಹಣ್ಣುಗಳನ್ನು ಹಾಗು ಇತರೆ ಮಾರುವವರಿಗೆ ಹಾಗೂ ಜನಸಮುದಾಯಕ್ಕೆ ಎಚ್ಚರಿಕೆ ಕ್ರಮಗಳನ್ನು ಆಹಾರ ಮತ್ತು ಔಷಧೀಯ ಆಡಳಿತವು ನೀಡಿದೆ. ಮತ್ತು ಆಹಾರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಹಾಗೆಂದು, ಮಾವಿನ ಹಣ್ಣುಗಳನ್ನು ಸವಿಯದೇ ಇರಬೇಡಿ. ಏಕೆಂದರೆ ಋತು ಕಳೆದರೆ ಮತ್ತೆ ಮಾವಿನಹಣ್ಣುಗಳು ಸಿಗದು. ಸಹಜವಾಗಿ ಹಣ್ಣಾದ ಮಾವು ಕೆಲವು ಕಡೆ ದೊರಕುತ್ತದೆ; ಬಲಿತ ಕಾಯಿಗಳನ್ನು ಖರೀದಿಸಿ, ಒಣ ಹುಲ್ಲಿನ ನಡುವೆ ಇಟ್ಟರೆ ಹಣ್ಣಾಗುತ್ತವೆ. ಸಹಜವಾಗಿ ಹಣ್ಣಾದ ಹಣ್ಣುಗಳನ್ನು ತಿನ್ನಿ, ಆರೋಗ್ಯ ಕಾಪಾಡಿಕೊಳ್ಳಿ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಿಷಬ್ ಪಂತ್ ಗಾಯಾಳು

ಲಂಡನ್: ಭಾರತ ತಂಡದ ಉಪನಾಯಕ ಮತ್ತು ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ರಿಷಭ್ ಪಂತ್ ಇಲ್ಲಿ ಅಭ್ಯಾಸದ ಸಮಯದ ವೇಳೆ ಗಾಯಗೊಂಡಿದ್ದಾರೆ. ಅವರ ಎಡಗೈಗೆ ಚೆಂಡು ತಗುಲಿದ್ದು, ಐದು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ನಡೆಯುವ ಮೊದಲು, ಪಂತ್ ಅವರ ಗಾಯವು ಭಾರತ ತಂಡದಲ್ಲಿ ಆತಂಕ ಉಂಟುಮಾಡಿದೆ. ಅಭ್ಯಾಸದ ಸಮಯದಲ್ಲಿ ಬ್ಯಾಟಿಂಗ್ ಮಾಡುವಾಗ ಪಂತ್ ಅವರ ಎಡ ಮೊಣಕೈ ಕೆಳಗೆ ಚೆಂಡು ತಗುಲಿದೆ. ಅವರು ಗಾಯದಿಂದ ನೋವಿನಿಂದ ಬಳಲಿದ್ದಾರೆ. ತಕ್ಷಣ ಭಾರತೀಯ ತಂಡದ ವೈದ್ಯಕೀಯ ಸಿಬ್ಬಂದಿ ಅವರಿಗೆ ಚಿಕಿತ್ಸೆ ನೀಡಲು ಮುಂದೆ ಬಂದರು. ಅವರ ಕೈಗೆ ಐಸ್ ಪ್ಯಾಕ್ ಹಚ್ಚಲಾಯಿತು ಮತ್ತು ಗಾಯಗೊಂಡ ಜಾಗವನ್ನು ಟೇಪ್ ಮಾಡಲಾಗಿದೆ. ನಂತರ ಅವರು ಬ್ಯಾಟಿಂಗ್ ಮಾಡದಿದ್ದರೂ, ದಿನವಿಡೀ ಮೈದಾನದಲ್ಲಿಯೇ ಕಳೆದಿದ್ದಾರೆ.

ಡೇವಿಡ್ ಮಲನ್ ಹೊಸ ದಾಖಲೆ

ಲೀಡ್ಸ್: ಇಂಗ್ಲೆಂಡ್‌ನ ಮಾಜಿ ಆಟಗಾರ ಹಾಗೂ ಯಾರ್ಕ್‌ಶೈರ್ ತಂಡದ ನಾಯಕ ಡೇವಿಡ್ ಮಲನ್ ಟಿ20 ಕ್ರಿಕೆಟ್‌ನಲ್ಲಿ 10,000 ರನ್ ಬಾರಿಸುವ ಮೂಲಕ ರೋಹಿತ್ ಶರ್ಮಾ ಹೆಸರಿನಲ್ಲಿದ್ದ ದಾಖಲೆ ಮುರಿದಿದ್ದಾರೆ. ಲೀಸೆಸ್ಟರ್‌ಶೈರ್ ವಿರುದ್ಧದ ಪಂದ್ಯದಲ್ಲಿ ಮಲನ್ ಈ ಸಾಧನೆ ಮಾಡಿದ್ದಾರೆ, ಆ ಮೂಲಕ ಈ ದಾಖಲೆ ಬರೆದ ಇಂಗ್ಲೆಂಡ್‌ನ 5ನೇ ಆಟಗಾರ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಪಂದ್ಯದ ಆರಂಭಕ್ಕೂ ಮುನ್ನ ಈ ದಾಖಲೆ ಬರೆಯಲು ಡೇವಿಡ್ ಮಲನ್‌ಗೆ ಎರಡು ರನ್ ಅವಶ್ಯಕತೆ ಇತ್ತು. ಆದರೆ ಮ್ಯಾಟ್ ಸ್ಯಾಲಿಸ್ ಬರಿ ಎಸೆತದಲ್ಲಿ ಸಿಕ್ಸರ್ ಬಾರಿಸಿ ಟಿ20 ಕ್ರಿಕೆಟ್‌ನಲ್ಲಿ 10,000 ರನ್ ಪೂರ್ಣಗೊಳಿಸಿದರು. ಈ ಪಂದ್ಯದಲ್ಲಿ ಸ್ಫೋಟಕ ಪ್ರದರ್ಶನ ತೋರಿದ ಮಲನ್ 48 ಎಸೆತಗಳಲ್ಲಿ 88 ರನ್ ಬಾರಿಸಿ ಯಾರ್ಕ್‌ಶೈರ್ ತಂಡವು 213 ರನ್ ಬೃಹತ್ ಮೊತ್ತ ಗಳಿಸಲು ನೆರವು ನೀಡಿದರು. ಟಿ20 ಸ್ವರೂಪದಲ್ಲಿ ರೋಹಿತ್ ಶರ್ಮಾ ತಮ್ಮ 362 ಇನ್ನಿಂಗ್ಸ್‌ನಲ್ಲಿ 10,000 ರನ್ ಪೂರೈಸಿದ್ದರು. ಆದರೆ ಡೇವಿಡ್ ಮಲನ್ ತಮ್ಮ 358ನೇ ಇನ್ನಿಂಗ್ಸ್‌ನಲ್ಲಿ ಈ ಮೈಲುಗಲ್ಲು ತಲುಪಿದ್ದಾರೆ. ಪಾಕಿಸ್ತಾನದ ಬಾಬರ್ ಆಝುಮ್ 285 ಇನ್ನಿಂಗ್ಸ್‌ನಲ್ಲಿ 10 ಸಾವಿರ ಪೂರ್ಣಗೊಳಿಸಿ ಮೊದಲ ಸ್ಥಾನದಲ್ಲಿದ್ದಾರೆ.

ಮುಂದಿನ ಐಪಿಎಲ್ ವರೆಗೂ ನಿರಂತರ ಪಂದ್ಯ | ಟೆಸ್ಟ್ ಸರಣಿಯ ಮೂಲಕ ಆರಂಭ

ಟೀಮ್ ಇಂಡಿಯಾಕ್ಕೆ ಇನ್ನು ಬಿಡುವಿಲ್ಲದ ವೇಳಾಪಟ್ಟಿ

ದೆಹಲಿ: ಈ ಐಪಿಎಲ್ ಆವೃತ್ತಿ ಯಶಸ್ವಿಯಾಗಿ ಮುಗಿದಿರುವ ಬೆನ್ನಲ್ಲೇ, ಭಾರತ ಕ್ರಿಕೆಟ್ ತಂಡದಲ್ಲೂ ಭಾರೀ ಬದಲಾವಣೆಗಳಾಗುತ್ತಿವೆ. ತಂಡವು ಮೂರು ಮಾದರಿಗಳಲ್ಲಿ ಮೂವರು ನಾಯಕರನ್ನು ಹೊಂದಿರುವ ವಿಶಿಷ್ಟ ಸನ್ನಿವೇಶದಲ್ಲಿ ಮುಂಬರುವ ಟೂರ್ನಿಗಳಿಗೆ ಸಜ್ಜಾಗುತ್ತಿದೆ. ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಟಿ20 ಮತ್ತು ಟೆಸ್ಟ್ ಕ್ರಿಕೆಟ್‌ಗಳಿಗೆ ನಿವೃತ್ತಿ ಘೋಷಿಸಿರುವುದರಿಂದ ಅವರಿಬ್ಬರೂ ಏಕದಿನ ಪಂದ್ಯಗಳಲ್ಲಿ ಮಾತ್ರ ಆಡಲಿದ್ದಾರೆ.

2026ರ ಐಪಿಎಲ್ ಆವೃತ್ತಿಗೂ ಮುನ್ನ, ಭಾರತ ತಂಡವು ಒಂಬತ್ತು ಟೆಸ್ಟ್ ಪಂದ್ಯ, 12 ಏಕದಿನ ಮತ್ತು ಕನಿಷ್ಠ 22ರಿಂದ 27 ಟಿ20 ಪಂದ್ಯಗಳನ್ನು ಆಡಲಿದೆ. ಈ ಮಧ್ಯೆ ಏಷ್ಯಾ ಕಪ್ ಟೂರ್ನಿ ಕೂಡಾ ನಡೆಯಲಿದ್ದು, ಪಾಕ್ ಜೊತೆ ದೇಶದ ಸಂಬಂಧ ಹದಗೆಟ್ಟಿರುವುದರಿಂದ ಅದರ ಬಗ್ಗೆ ಇನ್ನೂ ಖಚಿತ ಮಾಹಿತಿ ಲಭ್ಯವಾಗಿಲ್ಲ.

ಜೂನ್ 20ರಿಂದ ಇಂಗ್ಲೆಂಡ್ ವಿರುದ್ಧದ ಸರಣಿ ಆರಂಭವಾಗಲಿದ್ದು, ಶುಭ್‌ಮನ್ ಗಿಲ್ ಭಾರತ ಟೆಸ್ಟ್ ತಂಡದ ನಾಯಕತ್ವವನ್ನು ಇದೇ ಮೊದಲ ಬಾರಿಗೆ ವಹಿಸಿಕೊಳ್ಳಲಿದ್ದಾರೆ. 2025ರಲ್ಲಿ ಮೊದಲ ಬಾರಿಗೆ ವಿಶ್ವ ಟೆಸ್ಟ್ ಫೈನಲ್ ತಪ್ಪಿಸಿಕೊಂಡ ನಂತರ, 2027ರಲ್ಲಿ ಫೈನಲ್ ತಲುಪಲು ಭಾರತ ತಂಡ ತನ್ನ ಗುರಿ ನೆಟ್ಟು ಕಾರ್ಯೋನ್ಮುಖವಾಗಲಿದೆ.

ಸೂರ್ಯಕುಮಾರ್ ಯಾದವ್ ಕಳೆದ ವರ್ಷ ಭಾರತದ ಟಿ20 ನಾಯಕರಾಗಿ ನೇಮಕಗೊಂಡಿದ್ದು, ಅವರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ತವರಿನಲ್ಲಿ ನಡೆಯುವ 2026ರ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಮುನ್ನಡೆಸುವ ನಿರೀಕ್ಷೆಯಿದೆ. ರೋಹಿತ್ ಶರ್ಮಾ ಅವರು ಏಕದಿನ ತಂಡದ ನಾಯಕರಾಗಿ ಮುಂದುವರಿಯಲಿದ್ದಾರೆ.

ಭಾರತ ಟೆಸ್ಟ್ ತಂಡವು ಇಂಗ್ಲೆಂಡ್‌ನಲ್ಲಿ 5 ಪಂದ್ಯಗಳನ್ನು

ಆಡಲಿದ್ದು, ಅದು ಜೂನ್ 20ರಿಂದ ಆಗಸ್ಟ್ 4ರವರೆಗೆ ನಡೆಯಲಿದೆ. ನಂತರ, ಬಳಿಕ ಭಾರತ ತಂಡವು ಬಾಂಗ್ಲಾದೇಶಕ್ಕೆ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ 3 ಏಕದಿನ ಮತ್ತು 3 ಟಿ20 ಪಂದ್ಯಗಳನ್ನು ಆಡಲಿದೆ. ಆ ಪಂದ್ಯಗಳು ಆಗಸ್ಟ್ 17ರಿಂದ 31ರವರೆಗೆ ನಡೆಯಲಿದೆ.

ಈ ವರ್ಷದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸ್ಥಳ ಮತ್ತು ದಿನಾಂಕವನ್ನು ಇನ್ನೂ ನಿರ್ಧರಿಸಲಾಗಿಲ್ಲ. ಭಾರತವು ಅಕ್ಟೋಬರ್ 2ರಿಂದ 14ರವರೆಗೆ ಪ್ರವಾಸಿ ವೆಸ್ಟ್ ಇಂಡೀಸ್ ವಿರುದ್ಧ 2 ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಆ ಪೈಕಿ ಕೋಲ್ಕತ್ತಾದಲ್ಲಿ ನಡೆಯಬೇಕಿದ್ದ ಟೆಸ್ಟ್ ಪಂದ್ಯವನ್ನು ದೆಹಲಿಗೆ ಸ್ಥಳಾಂತರಿಸಲಾಗಿದೆ.

ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತ ಕ್ರಿಕೆಟ್ ತಂಡವು 3 ಏಕದಿನ ಮತ್ತು 5 ಟಿ20 ಪಂದ್ಯಗಳನ್ನು ಆಡಲಿದೆ, ಅದು ಅಕ್ಟೋಬರ್ 19ರಿಂದ ನವೆಂಬರ್ 8ರ ವರೆಗೆ ನಡೆಯಲಿದೆ.

ನವೆಂಬರ್ 14ರಿಂದ ಡಿಸೆಂಬರ್ 19ರವರೆಗೆ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ಕ್ರಿಕೆಟ್ ತಂಡ 2 ಟೆಸ್ಟ್, 3 ಏಕದಿನ ಮತ್ತು 5 ಟಿ20 ಪಂದ್ಯಗಳನ್ನು ಆಡಲಿದೆ. ನವೆಂಬರ್ 14ರಿಂದ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಿಗಧಿಯಾಗಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯವೊಂದನ್ನು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ಗೆ ಬದಲಾಯಿಸಲಾಗಿದೆ.

ನ್ಯೂಜಿಲೆಂಡ್ ತಂಡವು ಮುಂದಿನ ಜನವರಿಯಲ್ಲಿ

ತಂಡಕ್ಕೆ ನಿರಂತರ ಪಂದ್ಯಗಳು

ಇದೀಗ 2026ರ ಟಿ20 ವಿಶ್ವಕಪ್ ವರೆಗೂ ಭಾರತ ತಂಡದ ವೇಳಾಪಟ್ಟಿ ಬಿಡುಗಡೆಯಾಗಿದ್ದು, ಬಿಡುವಿಲ್ಲದೆ ಕ್ರಿಕೆಟ್‌ನಲ್ಲಿ ತಂಡವು ತೊಡಗಿಕೊಳ್ಳಲಿದೆ ಎಂಬುದು ಖಾತ್ರಿಯಾಗಿದೆ. ಭಾರತ ಟೆಸ್ಟ್ ತಂಡವು 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನವನ್ನು ಇಂಗ್ಲೆಂಡ್ ವಿರುದ್ಧದ ಸರಣಿಯ ಮೂಲಕ ಮುಂದಿನ ವಾರ ಆರಂಭಿಸಲಿದೆ. ಬಳಿಕ ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ವಿರುದ್ಧವೂ ಟೆಸ್ಟ್ ಆಡಲಿದೆ, ಜೊತೆಗೆ 2026ರ ಟಿ20 ವಿಶ್ವಕಪ್‌ಗೂ ತಯಾರಿ ನಡೆಸಬೇಕಿದೆ.

ಭಾರತಕ್ಕೆ ಪ್ರವಾಸ ಕೈಗೊಳ್ಳಲಿದ್ದು, 3 ಏಕದಿನ ಮತ್ತು 5 ಟಿ20 ಪಂದ್ಯಗಳನ್ನು ಆಡಲಿದೆ. ಬಳಿಕ ಟಿ20 ವಿಶ್ವಕಪ್ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿದ್ದು, 2026 ಫೆಬ್ರವರಿ-ಮಾರ್ಚ್‌ನಲ್ಲಿ ಆ ಪಂದ್ಯಗಳು ನಡೆಯುವ ನಿರೀಕ್ಷೆ ಇದೆ.

ಪಂದ್ಯಾವಳಿ ನಡೆಸಲು ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಉತ್ಸುಕ

ಚಾಂಪಿಯನ್ಸ್ ಲೀಗ್ ಆಯೋಜನೆಗೆ ಸಿದ್ಧತೆ

ಲಂಡನ್: ಚಾಂಪಿಯನ್ಸ್ ಲೀಗ್ ಟಿ20 ಟೂರ್ನಿಯನ್ನು ಮತ್ತೆ ಆಯೋಜಿಸಲು ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ (ಇಸಿಬಿ) ಸಿದ್ಧತೆಯನ್ನು ಆರಂಭಿಸಿದೆ. ವಿಶ್ವ ಕ್ಲಬ್ ಚಾಂಪಿಯನ್‌ಶಿಪ್ ಎಂಬ ಹೆಸರಿನಲ್ಲಿ ಅದನ್ನು ಆಯೋಜಿಸಬೇಕೆನ್ನುವುದು ಇಸಿಬಿಯ ಯೋಚನೆಯಾಗಿದೆ. ಇದಕ್ಕೂ ಮುನ್ನ 2009ರಲ್ಲಿ ಚಾಂಪಿಯನ್ಸ್ ಲೀಗ್ ಟಿ20 ಟೂರ್ನಿಗೆ ಬಿಸಿಸಿಐ ಚಾಲನೆ ನೀಡಿತ್ತು, ಆದರೆ 2014ರ ಬಳಿಕ ಈ ಟೂರ್ನಿಯನ್ನು ಸ್ಥಗಿತಗೊಳಿಸಲಾಯಿತು.

ಇದೀಗ 10 ವರ್ಷಗಳ ಬಳಿಕ ಮತ್ತೊಮ್ಮೆ ಚಾಂಪಿಯನ್ಸ್ ಲೀಗ್ ಟಿ20 ಟೂರ್ನಿ ಆಯೋಜಿಸಲು ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಮುಂದಾಗಿದೆ. 'ವಿಶ್ವ ಕ್ಲಬ್ ಚಾಂಪಿಯನ್‌ಶಿಪ್ ಟಿ20 ಟೂರ್ನಿಯನ್ನು ಆಯೋಜಿಸಲು ನಾವು ಆಸಕ್ತಿ ಹೊಂದಿದ್ದೇವೆ. ಈ ಬಗ್ಗೆ ಮಾತುಕತೆ ಆರಂಭಿಕ ಹಂತದಲ್ಲಿದ್ದು, ಈ ಮಾತುಕತೆಯು ಯಶಸ್ವಿಯಾದರೆ ಚಾಂಪಿಯನ್ಸ್ ತಂಡಗಳ ಟೂರ್ನಿ ನಡೆಯಲಿದೆ' ಎಂದು ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಚರ್ಡ್ ಗೌಲ್ಡ್ ತಿಳಿಸಿದ್ದಾರೆ.

ಚಾಂಪಿಯನ್ಸ್ ಲೀಗ್ ಟಿ20 ಟೂರ್ನಿಯಲ್ಲಿ ವಿಶ್ವದ ಪ್ರಮುಖ ಲೀಗ್‌ನಲ್ಲಿನ ತಂಡಗಳು ಕಣಕ್ಕಿಳಿಯಲಿದೆ. ಈ ಹಿಂದಿನ ಆವೃತ್ತಿಗಳಲ್ಲಿ ಐಪಿಎಲ್‌ನ ಮೂರು ತಂಡಗಳು, ಆಸ್ಟ್ರೇಲಿಯಾ ಮತ್ತು ಸೌತ್ ಆಫ್ರಿಕಾ ಲೀಗ್‌ನಿಂದ ತಲಾ ಎರಡು ತಂಡಗಳು ಹಾಗೂ ಪಾಕಿಸ್ತಾನ, ವೆಸ್ಟ್ ಇಂಡೀಸ್ ಮತ್ತು ನ್ಯೂಜಿಲೆಂಡ್‌ನ ಟಿ20 ಲೀಗ್‌ನಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ತಂಡಗಳು ಕಣಕ್ಕಿಳಿದಿದ್ದವು.

ಇದೀಗ ಮತ್ತೊಮ್ಮೆ ಫ್ರಾಂಚೈಸಿ ಲೀಗ್‌ನ ಚಾಂಪಿಯನ್ಸ್ ತಂಡಗಳನ್ನು ಒಂದುಗೂಡಿಸಿ ವಿಶ್ವ ಕ್ಲಬ್ ಚಾಂಪಿಯನ್ಸ್ ಟಿ20 ಟೂರ್ನಿ ಆಯೋಜಿಸಲು ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಯೋಜನೆ ರೂಪಿಸುತ್ತಿದೆ. ಆದರೆ ಪ್ರಸ್ತುತ ಭಾರತವೂ ಸೇರಿದಂತೆ ಬಹುತೇಕ ದೇಶಗಳ ಕ್ರಿಕೆಟ್ ವೇಳಾಪಟ್ಟಿಯಲ್ಲಿ ಬಿಡುವಿಲ್ಲದ ಕಾರಣ ಆ ಟೂರ್ನಿಗಾಗಿ ಸ ವ ಂ ಯ ಂ ವ ಕಾ ಶ ವ ನ ಂ ಕಂಡುಕೊಳ್ಳಬೇಕಿರುವುದು ಇಸಿಬಿ ಮುಂದಿರುವ ದೊಡ್ಡ ಸವಾಲಾಗಿದೆ.

ಹೀಗಾಗಿ ಬಿಸಿಸಿಐ, ಆಸ್ಟ್ರೇಲಿಯಾ ಕ್ರಿಕೆಟ್ ಬೋರ್ಡ್ ಜೊತೆ ಇಸಿಬಿ ಚರ್ಚೆ ನಡೆಸಲಿದ್ದು, ಈ ಎರಡು ಕ್ರಿಕೆಟ್ ಮಂಡಳಿ ತಮ್ಮ ರಾಷ್ಟ್ರೀಯ ಪಂದ್ಯಗಳ ವೇಳಾಪಟ್ಟಿಯನ್ನು ಬದಲಿಸಿದರೆ, ವಿಶ್ವ ಕ್ಲಬ್ ಚಾಂಪಿಯನ್ಸ್ ಟಿ20 ಲೀಗ್ ನಡೆಸಲು ಅವಕಾಶ ಸಿಗಲಿದೆ. ಮುಂಬರುವ ದಿನಗಳಲ್ಲಿ ಮಾತುಕತೆ ಯಶಸ್ವಿಯಾದರೆ, ನವೆಂಬರ್-ಡಿಸೆಂಬರ್ ವೇಳೆ ಚಾಂಪಿಯನ್ ತಂಡಗಳ ಚಾಂಪಿಯನ್ಸ್ ಟಿ20 ಲೀಗ್ ಆಯೋಜನೆಗೊಳ್ಳುವ ಸಾಧ್ಯತೆಯಿದೆ.

2009-10ರಿಂದ 2014-15 ರ ನಡುವೆ 6 ಬಾರಿ ಚಾಂಪಿಯನ್ಸ್ ಟಿ20 ಟೂರ್ನಿಯನ್ನು ಆಯೋಜಿಸಲಾಗಿತ್ತು. ನಾಲ್ಕು ಬಾರಿ ಭಾರತದಲ್ಲಿ ಟೂರ್ನಿ ನಡೆದರೆ, 2 ಬಾರಿ ದಕ್ಷಿಣ ಆಫ್ರಿಕಾದಲ್ಲಿ ಟೂರ್ನಿಯನ್ನು ಆಡಲಾಗಿತ್ತು. ಈ ವೇಳೆ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಲಾ ಎರಡು ಬಾರಿ ಗೆದ್ದರೆ, ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ಮತ್ತು ಸಿಡ್ನಿ ಸಿಕ್ಸರ್ಸ್ ತಲಾ ಒಂದು ಬಾರಿ ಚಾಂಪಿಯನ್ ಪಟ್ಟವನ್ನು ಅಲಂಕರಿಸಿತ್ತು.

ರೋಹಿತ್, ಕೊಹ್ಲಿಗೆ ಆಸೀಸ್‌ನಲ್ಲಿ ವಿಶೇಷ ವಿದಾಯ

ಸಿಡ್ನಿ: ಇತ್ತೀಚೆಗಷ್ಟೇ ಅಂತಾರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿದ್ದ ಭಾರತ ತಂಡ ಸ್ಟಾರ್ ಆಟಗಾರರಾದ ರೋಹಿತ್ ಶರ್ಮ ಮತ್ತು ವಿರಾಟ್ ಕೊಹ್ಲಿಗೆ ಕ್ರಿಕೆಟ್ ಆಸ್ಟ್ರೇಲಿಯಾ ವಿಶೇಷ ರೀತಿಯ ವಿದಾಯ ನೀಡಲು ಯೋಜನೆ ರೂಪಿಸಿದೆ. ಭಾರತ ತಂಡ ಮುಂದಿನ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ಪ್ರವಾಸ ತೆರಳಲಿದ್ದು, 3 ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದೆ. ಇದು ಕೊಹ್ಲಿ ಮತ್ತು ರೋಹಿತ್ ಶರ್ಮಗೆ ಆಸ್ಟ್ರೇಲಿಯಾ ನೆಲದಲ್ಲಿ ಬಹುತೇಕ ಕೊನೆಯ ಕ್ರಿಕೆಟ್ ಸರಣಿ ಆಗುವ ಸಾಧ್ಯತೆ ಇದೆ. ಹೀಗಾಗಿ ಈ ವೇಳೆ ಇವರಿಬ್ಬರು ಕ್ರಿಕೆಟಿಗರಿಗೆ ವಿಶೇಷ ರೀತಿಯಲ್ಲಿ ವಿದಾಯ ನೀಡಲು ಯೋಚಿಸಿದ್ದೇವೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾದ ಸಿಇಒ ಟಾಡ್ ಗ್ರೀನ್‌ಬರ್ಗ್ ತಿಳಿಸಿದ್ದಾರೆ.

ರೋಹಿತ್ ಮತ್ತು ಕೊಹ್ಲಿ ಇಬ್ಬರೂ 2027ರ ಏಕದಿನ ವಿಶ್ವಕಪ್ ವರೆಗೆ 50 ಓವರ್‌ಗಳ ಸ್ವರೂಪದಲ್ಲಿ

ಮುಂದುವರಿಯುವ ನಿರೀಕ್ಷೆಯಿದೆ. ರೋಹಿತ್ ಇತ್ತೀಚೆಗೆ ಮಾರ್ಕ್ಯೂ ಈವೆಂಟ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದರು. ಏಕದಿನ ಕ್ರಿಕೆಟ್‌ನಲ್ಲಿ ಅದ್ಭುತ ಸರಾಸರಿ 57.88 ಹೊಂದಿರುವ ಕೊಹ್ಲಿ ಕೂಡ ಅದೇ ಹಾದಿಯಲ್ಲಿ ಸಾಗುವ ನಿರೀಕ್ಷೆಯಿದೆ. ಆದರೆ ಟಾಡ್ ಗ್ರೀನ್‌ಬರ್ಗ್ ಅವರು ಕೊಹ್ಲಿ ಮತ್ತು ರೋಹಿತ್ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ಕೊನೆಯ ಬಾರಿಗೆ ಏಕದಿನ ಸರಣಿಯನ್ನಾಡಲಿದ್ದಾರೆ ಎಂದು ಹೇಳಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಮಾತನಾಡಿದ ಟಾಡ್ ಗ್ರೀನ್‌ಬರ್ಗ್, ನಮ್ಮ ದೇಶದಲ್ಲಿ ವಿರಾಟ್ ಕೊಹ್ಲಿ ಅಥವಾ ರೋಹಿತ್ ಶರ್ಮಾ ಆಡುವುದನ್ನು ನಾವು ನೋಡುವುದು ಇದೇ ಕೊನೆಯ ಬಾರಿಯಾಗಿರಬಹುದು. ಹಾಗಿದ್ದಲ್ಲಿ ನಾವು ಅವರಿಗೆ ಉತ್ತಮ ವಿದಾಯ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಅವರು ನೀಡಿದ ಅದ್ಭುತ ಕೊಡುಗೆಯನ್ನು ಗೌರವಿಸುವ ಯೋಜನೆ ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಟಿ20 ಮತ್ತು ಟೆಸ್ಟ್‌ನಿಂದ ನಿವೃತ್ತಿ ಹೊಂದಿರುವ ರೋಹಿತ್ ಮತ್ತು ಕೊಹ್ಲಿ ಏಕದಿನ ಮತ್ತು ಐಪಿಎಲ್ ಟೂರ್ನಿಯಲ್ಲಿ ಮಾತ್ರ ಆಟ ಮುಂದುವರಿಸಿದ್ದಾರೆ.

ಮೆಚ್ಚುಗೆ ಪಡೆದ ಶರ್ಮಿಳಾ ಮಾಂಡ್ರೆ

ನವಗ್ರಹ ಚಿತ್ರದಲ್ಲಿ ಕಣ್ ಕಣ್ಣ ಸಲಿಗೇ..ಎಂಬ ಹಾಡಿನಲ್ಲಿ ಕಾಣಿಸಿಕೊಂಡು ಮನಗೆದ್ದ ನಟಿ ಶರ್ಮಿಳಾ ಮಾಂಡ್ರೆ ಕನ್ನಡ ಚಿತ್ರರಂಗದ ಬೇಡಿಕೆಯ ನಟಿಯರಲ್ಲಿ ಒಬ್ಬರಾಗಿದ್ದಾರೆ. ನವಗ್ರಹ ಚಿತ್ರದ ಬಳಿಕ ಮತ್ತೆ ದರ್ಶನ್ ಅಭಿನಯದ ಡೆವಿಲ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅಭಿನಯದಲ್ಲಿಯೇ ಅಭಿಮಾನಿಗಳ ಮನಗೆದ್ದ ಶರ್ಮಿಳಾ, ಚಿತ್ತಾರ ರೀಡರ್ಸ್ ಚಾಯ್ಸ್ ಅವಾರ್ಡ್ ಮುಡಿಗೇರಿಸಿ ಕೊಂಡಿದ್ದಾರೆ.

2007ರಲ್ಲಿ ತೆರೆಕಂಡ ಸಜನಿ ಮೂಲಕ ಚಿತ್ರರಂಗಕ್ಕೆ ಪರಿಚಯವಾದ ಶರ್ಮಿಳಾ, ಚೊಚ್ಚಲ ಚಿತ್ರದಲ್ಲಿಯೇ ಪ್ರಸಿದ್ಧಿ ಪಡೆದರು. ನಟ ರಮೇಶ್ ಅರವಿಂದ್ ನಿರ್ದೇಶಿಸಿ ನಟಿಸಿದ್ದ ವೆಂಕಟ ಇನ್ ಸಂಕಟ ಚಿತ್ರದಲ್ಲಿಯೂ ಅಭಿನಯಿಸಿ, ತಮ್ಮ ಅಭಿನಯದಿಂದಲೂ ವ್ಯಾಪಕ ಮೆಚ್ಚುಗೆ ಪಡೆದರು. ಕನ್ನಡದ ಬಳಿಕ ತಮಿಳು, ತೆಲುಗು ಚಿತ್ರರಂಗಕ್ಕೂ ಕಾಲಿಟ್ಟರು. ಸೆಂಚುರಿ ಸ್ಟಾರ್ ಶಿವರಾಜ್ ಕುಮಾರ್ ನಟನೆಯ ಮಾಸ್ ಲೀಡರ್ ಚಿತ್ರದಲ್ಲಿ ನಟಿಸಿದ ಶರ್ಮಿಳಾ ಪತ್ರಕರ್ತೆಯ ಪಾತ್ರಕ್ಕೆ ಜೀವ ತುಂಬಿ ನಟಿಸಿದರು.

ನಟನೆಯ ಜತೆಗೆ ನಿರ್ಮಾಣದತ್ತಲೂ ಒಲವು ತಾಳಿ, ಇವನಕ್ಕು ಎಂಗಯೋ ಮಚ್ಚಂ ಇರುಕ್ಕ್ ಮತ್ತು ನಾನುಂ ಸಿಂಗಲ್ ತಾನ್ ಸಿನಿಮಾಗಳನ್ನು ನಿರ್ಮಿಸಿದರು. ಹೀಗೆ ಚಿತ್ರ ನಿರ್ಮಾಣ ಸಮಯದಲ್ಲಿ ನಟನೆಯಿಂದ ಬ್ರೇಕ್ ತೆಗೆದುಕೊಂಡ ಶರ್ಮಿಳಾ ನಾಲ್ಕು ವರ್ಷಗಳ ಬಳಿಕ 2022ರಲ್ಲಿ ತೆರೆಗೆ ಬಂದ ಗಾಳಿಪಟ 2 ಚಿತ್ರದ ಮೂಲಕ ಮತ್ತೆ ನಾಯಕಿಯಾಗಿ ಕಾಣಿಸಿಕೊಂಡರು. ಈಗ ನಟನೆಯ ಜತೆಗೆ ನಿರ್ಮಾಣದತ್ತಲೂ ಗಮನಹರಿಸಿದ್ದು, ಒಳ್ಳೆಯ ಕಥೆ ಹಿಡಿದು ತೆರೆಗೆ ಬರಲಿದ್ದಾರೆ.

ಬೆಳ್ಳಿತೆರೆಯಲ್ಲಿ ವೃಕ್ಷಮಾತೆಯ ಚರಿತ್ರೆ

ವೃಕ್ಷಗಳನ್ನೇ ಮಕ್ಕಳಾನ್ನಾಗಿ ಕಂಡು ಲೆಕ್ಕವಿಲ್ಲದಷ್ಟು ಮರಗಳನ್ನು ಬೆಳೆಸಿ ಪೋಷಿಸಿ ಇಡೀ ಜಗತ್ತಿಗೆ ಮಾದರಿಯಾಗಿರುವ ವೃಕ್ಷಮಾತೆ ಪದ್ಮಶ್ರೀ ಸಾಲುಮರದ ತಿಮ್ಮಕ್ಕ ಅವರ ಜೀವನ ಚರಿತ್ರೆ ಸಿನಿಮಾ ರೂಪದಲ್ಲಿ ಬೆಳ್ಳಿತೆರೆಗೆ ಬರಲಿದೆ. ಡಾ.ನೆಲ್ಲಿಕಟ್ಟೆ.ಎಸ್.ಸಿದ್ದೇಶ್ ವಿರಚಿತ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಕೃತಿ ಆಧರಿಸಿ ಈ ಸಿನಿಮಾ ಸಿದ್ಧವಾಗುತ್ತಿದೆ. ವೃಕ್ಷಮಾತೆ ಶೀರ್ಷಿಕೆಯಲ್ಲಿಯೇ ಚಿತ್ರ ಸೆಟ್ಟೇರಿದ್ದು, ಚಿತ್ರೀಕರಣವೂ ಭರದಿಂದ ಸಾಗಿದೆ.

ಶ್ರೀಲಕ್ಷ್ಮಿ ವೆಂಕಟೇಶ್ವರ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿರುವ ಈ ಸಿನಿಮಾವನ್ನು ಒರಟ ಶ್ರೀ ನಿರ್ದೇಶಿಸುತ್ತಿದ್ದಾರೆ. ನಟಿ ಸೌಜನ್ಯಾ, ತಿಮ್ಮಕ್ಕನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನೀನಾಸಂ ಅಶ್ವಥ್ ತಿಮ್ಮಕ್ಕನ ಗಂಡನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಎಂ.ಕೆ.ಮಠ, ಗಣೇಶ್.ಕೆ.ಸರ್ಕಾರ್, ದೀಪಾ, ಅಂಜನಮ್ಮಾ, ಭೂಮಿಕಾ, ಪ್ರಕಾಶ್ ಶೆಟ್ಟಿ, ಮನು ಮುಂತಾದವರು ತಾರಾಬಳಗದಲ್ಲಿದ್ದಾರೆ. ಮೊದಲ ಹಂತದಲ್ಲಿ ತುಮಕೂರು ಜಿಲ್ಲೆಯ ಹುಲಿಕಲ್ ಹಾಗೂ ಮಧುಗಿರಿಯ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಶ್ರೀಮುತ್ತು ಶಿವಣ್ಣನ ಬಯೋಪಿಕ್?

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಸ್ಯಾಂಡಲ್‌ವುಡ್‌ನ ಬಹು ಬೇಡಿಕೆಯ ನಟರು, ಮಾತ್ರವಲ್ಲ ಚಂದನವನದ ಶ್ರೀಮುತ್ತು. ಈಗ ಶಿವಣ್ಣ ಅವರ ಜೀವನ ಚರಿತ್ರೆಯ ಪುಸ್ತಕ ಶ್ರೀಮುತ್ತು ರಿಲೀಸ್ ಆಗಿದೆ. ದೂರದ ಅಮೇರಿಕಾದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮುತ್ತು ಅನಾವರಣವಾಗಿದೆ. ಶಿವರಾಜ್ ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್ ಇಬ್ಬರು ಶ್ರೀಮುತ್ತು ಜೀವನ ಚರಿತ್ರೆ ಅನಾವರಣ ಮಾಡಿದರು. ಶಿವಣ್ಣ ಅವರ ಜೀವನದ ವಿಚಾರಗಳನ್ನು ಈ ಪುಸ್ತಕದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ. ಶಿವರಾಜ್ ಕುಮಾರ್ ಅವರು ಚಿತ್ರರಂಗದಲ್ಲಿ ನಲವತ್ತು ವರ್ಷ ಪೂರೈಸಿದ್ದಾರೆ. ಈ ಸಂದರ್ಭದಲ್ಲಿಯೇ ಶ್ರೀಮುತ್ತು ಬಯೋಪಿಕ್ ರಿಲೀಸ್ ಆಗಿರುವುದು ಸಂತಸದ ಸಂಗತಿಯಾಗಿದೆ. ಈ ಪುಸ್ತಕವನ್ನು ಆಧರಿಸಿ ಮುಂದೆ ಚಿತ್ರವೂ ಮೂಡಿಬ ರಲಿದೆ ಎಂದು ಹೇಳಲಾ ಗುತ್ತಿದೆ.



ಪುಸ್ತಕ ಅನಾವರಣ ಮಾಡಿದ ಶಿವಣ್ಣ ಈ ಪುಸ್ತಕ್ಕೆ ನಾನು ಅರ್ಹನೋ ಅಲ್ವೋ ಗೊತ್ತಿಲ್ಲ, ನಾನು ಪ್ರಾಕ್ಟಿಕಲ್ ಅಲ್ಲ, ಬದಲಾಗಿ ಮನಸಿಗೆ ಬಂದಿದ್ದನ್ನು ನೇರವಾಗಿ ಹೇಳುತ್ತೇನೆ ಎಂದು ಶಿವಣ್ಣ ಹೇಳಿದರು. ಕಾರ್ಯಕ್ರಮದಲ್ಲಿ ಶಿವಣ್ಣ ಇದ್ದಾರೆ ಎಂದರೆ ಅಲ್ಲಿ ಖಂಡಿತಾ ಮನರಂಜನೆ ಇದ್ದೇ ಇರುತ್ತದೆ. ಅಂತೆಯೇ ಶಿವಣ್ಣ, ಈ ಕಾರ್ಯಕ್ರಮದಲ್ಲಿಯೂ ಹಾಡಿ ಕುಣಿದು, ಅಭಿಮಾನಿಗಳನ್ನು ರಂಜಿಸಿದ್ದಾರೆ.

ವಿಜಯ್ ಜತೆಗೆ ಶಿವಣ್ಣ ಸಿನಿಮಾ

ಶಿವಣ್ಣ ಅವರೊಂದಿಗೆ ಒಂದಾದರು ಸಿನಿಮಾ ಮಾಡಬೇಕು ಎಂಬುದು ಎಲ್ಲಾ ಕಲಾವಿದರ ಆಸೆ. ಅಂತೆಯೇ ಸ್ಯಾಂಡಲ್‌ವುಡ್ ಸಲಗ, ದುನಿಯಾ ವಿಜಯ್ ಅವರಿಗೆ ಹಿಂದಿನಿಂದಲೂ ಶಿವರಾಜ್ ಕುಮಾರ್ ಅವರೊಂದಿಗೆ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆಯಿದೆಯಂತೆ, ಅದನ್ನು ಶಿವಣ್ಣ ಅವರೊಂದಿಗೆ ಹಂಚಿಕೊಂಡಿದ್ದಾರೆ. ಇದಕ್ಕೆ ಶಿವಣ್ಣ ಕೂಡ ಪೂರಕವಾಗಿ ಸ್ಪಂದಿಸಿದ್ದು, ಆದಷ್ಟು ಬೇಗ ಇಬ್ಬರು ಒಂದೇ ಚಿತ್ರದಲ್ಲಿ ನಟಿಸುವುದಾಗಿ ಹೇಳಿದ್ದಾರೆ. ಇನ್ನೂ ಈ ಇಬ್ಬರು ದಿಗ್ಗಜರ ಸಿನಿಮಾವನ್ನು ಯಾರು ನಿರ್ದೇಶನ ಮಾಡಬಹುದು ಎಂಬ ಕುತೂಹಲವೂ ಇದೆ. ಈ ಸಿನಿಮಾವನ್ನು ದುನಿಯಾ ವಿಜಯ್ ಅವರೇ ನಿರ್ದೇಶನ ಮಾಡಲಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಆದರೆ ಈ ಬಗ್ಗೆ ವಿಜಯ್ ಯಾವುದನ್ನು ಬಹಿರಂಗ ಪಡಿಸಲಿಲ್ಲ.

ಸದ್ಯ ದುನಿಯಾ ವಿಜಯ್ ಲ್ಯಾಂಡ್ ಲಾರ್ಡ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅದರ ಜತೆಗೆ ಸಿಟಿ ಲೈಟ್ಸ್ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಇನ್ನು ಶಿವಣ್ಣ 45 ಚಿತ್ರದಲ್ಲಿ ನಟಿಸಿದ್ದು ಈ ಚಿತ್ರದ ಬಿಡುಗಡೆಗೆ ಕಾಯುತ್ತಿದ್ದಾರೆ. ಅದರ ಜತೆಗೆ ಕನ್ನಡ , ತೆಲುಗು ಚಿತ್ರಗಳಲ್ಲಿಯೂ ಬ್ಯುಸಿಯಾಗಿದ್ದಾರೆ.

ಮಾಸ್ ಅವತಾರದಲ್ಲಿ ಬಾಲಯ್ಯ

ಟಾಲಿವುಡ್ ಖ್ಯಾತ ನಟ ಬಾಲಯ್ಯ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅವರ ಬರ್ತ್‌ಡೇ ಪ್ರಯುಕ್ತ ಬಾಲಯ್ಯ ಅಭಿನಯದ ಅಖಂಡ 2 ಚಿತ್ರದ ಟೀಸರ್ ರಿಲೀಸ್ ಆಗಿದೆ. ಅಖಂಡನಾಗಿ ಮಾಸ್ ಅವತಾರ ತಾಳಿರುವ ಬಾಲಯ್ಯ ಆ್ಯಕ್ಷನ್‌ನಲ್ಲಿ ಅಬ್ಬರಿಸಿದ್ದಾರೆ. ಸಾಧು ವೇಷದಲ್ಲಿ ಕಾಣಿಸಿಕೊಂಡಿರುವ ಬಾಲಯ್ಯ, ತ್ರಿಶೂಲ ಹಿಡಿದು ದುರುಳರನ್ನು ಮಟ್ಟ ಹಾಕುತ್ತಾರೆ. ಇದನ್ನು ನೋಡಿ ಅಭಿಮಾನಿಗಳು ಫುಲ್ ಥ್ರಿಲ್ ಆಗಿದ್ದು, ಸಿನಿಮಾ ನೋಡಲು ಕಾತರರಾಗಿದ್ದಾರೆ. ಈ ಹಿಂದೆ ತೆರೆಗೆ ಬಂದ ಅಖಂಡ ಚಿತ್ರವೂ ಸೂಪರ್ ಹಿಟ್ ಆಗಿತ್ತು. ಆ ಯಶಸ್ಸಿ ಖುಷಿಯಲ್ಲಿ ಅಖಂಡ 2 ಮೂಡಿಬರುತ್ತಿದೆ. ಬೋಯಪಾಟಿ ಶ್ರೀನು ಈ ಚಿತ್ರವನ್ನು ನಿರ್ದೇಶಿಸಿದ್ದರು. ಅಖಂಡ 2 ಚಿತ್ರಕ್ಕೂ ಇವರೇ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅಖಂಡ 2 ಮೊದಲ ಭಾಗಕ್ಕಿಂತಲೂ ಅದ್ಭುತವಾಗಿ, ಅದ್ದೂರಿಯಾಗಿ ಮೂಡಿಬಂದಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಸಂಯುಕ್ತಾ, ಪ್ರಗ್ಯಾ ಜೈಸ್ವಾಲ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಎಸ್.ತಮನ್ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ಚಿತ್ರದ ಬಿಡುಗಡೆಯ ದಿನಾಂಕವೂ ಘೋಷಣೆಯಾಗಿದ್ದು, ಅಖಂಡ 2 ಸೆಪ್ಟೆಂಬರ್ 25 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಕಮಲ್ ಕಥೆ ಹೊತ್ತುಬಂದ ರಾಜವರ್ಧನ

ನಟ ಕಮಲ್ ಹಾಸನ್ ಬಗ್ಗೆ ಕರುನಾಡಿನಲ್ಲಿ ವಿರೋಧದ ಅಲೆ ಎದ್ದಿದೆ. ಈ ನಡುವೇ ಕಮಲ್ ಶ್ರೀದೇವಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಇದು ಕುತೂಹಲಕ್ಕೂ ಕಾರಣವಾಗಿದೆ. ಹಾಗಂತ ಇದು ಕಮಲ್ ಹಾಸನ್ ಅಥವಾ ಶ್ರೀದೇವಿಯ ಕುರಿತ ಸಿನಿಮಾವಲ್ಲ. ಬದಲಾಗಿ ಈ ಕಥೆಗೆ ಹೊಂದುತ್ತದೆ ಎನ್ನುವ ನಿಟ್ಟಿನಲ್ಲಿ ಈ ಶೀರ್ಷಿಕೆ ಇಡಲಾಗಿದೆ. ನಟ ರಾಜ್‌ವರ್ಧನ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ : ಕಮಲ್ ಶ್ರೀದೇವಿ ಶೀರ್ಷಿಕೆಯೇ ವಿಶೇಷವಾಗಿದೆಯಲ್ಲ ?

ರಾಜ್‌ವರ್ಧನ್: ಇದು ಕುತೂಹಲದಾಯಕ ಕಥೆ, ಹಾಗಾಗಿ ಈ ಕಥೆಗೆ ಹೊಂದುತ್ತದೆ ಎಂಬ ನಿಟ್ಟಿನಲ್ಲಿ ಈ ಟೈಟಲ್ ಇಟ್ಟಿದ್ದೇವೆ. ಹಾಗಂತ ಇದು ಕಮಲ್ ಹಾಸನ್ ಅಥವಾ ಶ್ರೀದೇವಿಗೆ ಸಂಬಂಧಿಸಿದ ಸಿನಿಮಾ ಅಲ್ಲ, ಒಂದು ಕಾಲದಲ್ಲಿ ಕಮಲ್ ಹಾಗೂ ಶ್ರೀದೇವಿ ಅವರದ್ದು ಹಿಟ್ ಜೋಡಿಯಾಗಿತ್ತು. ಅಂತಹದ್ದೇ ಕಥೆ ಇಲ್ಲಿಯೂ ಇದೆ. ಅದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ. ಇದು ಒಂದು ವರ್ಷದ ಹಿಂದೆಯೇ ಆರಂಭವಾದ ಸಿನಿಮಾ.

ವಿ.ಸಿ : ಇದು ಮಹಿಳಾ ಪ್ರಧಾನ ಕಥೆಯೇ?

ರಾಜ್‌ವರ್ಧನ್ : ಪೋಸ್ಟರ್‌ನಲ್ಲಿ ಕ್ಯೂರಿಯಾಸಿಟಿ ಇದೆ. ಅದು ವ್ಯಕ್ತಿ ಮತ್ತು ವ್ಯಕ್ತಿತ್ವವನ್ನು ಸೂಚಿಸುತ್ತದೆ. ಪೋಸ್ಟರ್‌ನಲ್ಲಿ ಕಾಣುವ ಏಳು ಜೀವಿಗಳು ಏಳು ಪಾತ್ರಗಳನ್ನು ಸೂಚಿಸುತ್ತವೆ. ಪ್ರತಿ ಪ್ರಾಣಿಯೂ ಆ ಪಾತ್ರದ ಗುಣವನ್ನು ಹೇಳುತ್ತದೆ. ಒಳ್ಳೆಯ ಕಂಟೆಂಟ್ ಈ ಸಿನಿಮಾದಲ್ಲಿದೆ.

ವಿ.ಸಿ : ಈ ವರ್ಷವೇ ಚಿತ್ರವನ್ನು ಕಣ್ತುಂಬಿಕೊಳ್ಳಬಹುದೆ?

ರಾಜ್‌ವರ್ಧನ್: ಕಮಲ್ ಶ್ರೀದೇವಿ ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದೆ. ಈ ತಿಂಗಳಾಂತ್ಯಕ್ಕೆ ಶೂಟಿಂಗ್ ಪೂರ್ಣಗೊಳ್ಳಲಿದೆ. ಆ ಬಳಿಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಆರಂಭಿಸಿ, ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರಲು ಪ್ಲಾನ್ ಮಾಡುತ್ತಿದ್ದೇವೆ.

ವಿ.ಸಿ : ಮೂರು ಭಾಷೆಯಲ್ಲಿ ಮಾತ್ರ ನಿರ್ಮಾಣ ಮಾಡಲು ಕಾರಣ ?

ರಾಜ್‌ವರ್ಧನ್ : ಈ ಕಥೆ ಯಾವ ಭಾಷೆಗೆ ನೇಟಿವಿಟಿಗೆ ಹೊಂದುತ್ತದೆಯೋ, ಆ ಭಾಷೆಯಲ್ಲಿ ಮಾತ್ರ ನಿರ್ಮಾಣ ಮಾಡಿದ್ದೇವೆ. ಈ ಚಿತ್ರದಲ್ಲಿ ಹೊಸ ಪ್ರತಿಭೆಗಳಿಗೆ ಆದ್ಯತೆ ನೀಡಿದ್ದೇವೆ. ನಾನು ನಟಿಸಿದ ಗಜರಾಮ ಚಿತ್ರವನ್ನು ನಿರ್ದೇಶನ ಮಾಡಿದ್ದ ಸುನೀಲ್ ಕುಮಾರ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ನನ್ನ ಈ ಹಿಂದಿನ ಚಿತ್ರಗಳಲ್ಲಿ ಕಾರ್ಯನಿರ್ವಹಿಸಿದ ತಾಂತ್ರಿಕ ತಂಡವೇ ಇಲ್ಲಿಯೂ ಕಾರ್ಯನಿರ್ವಹಿಸುತ್ತಿದೆ.

ಸಿನಿಮಾದ ಪ್ರತಿ ದೃಶ್ಯಗಳು ಪ್ರೇಕ್ಷಕರ ಮನಕ್ಕೆ ಮುಟ್ಟಬೇಕು ಎಂಬ ನಿಟ್ಟಿನಲ್ಲಿ ಮೈಸೂರು, ಬೆಂಗಳೂರು ಸುತ್ತಮುತ್ತ ಸೆಟ್ ಹಾಕಿ ಚಿತ್ರೀಕರಣ ನಡೆಸಿದ್ದೇವೆ.